ಹುಬ್ಬಳ್ಳಿ
ಬುಧವಾರ, 3 ಜೂನ್ 2026
ಸಂಪುಟ 16, ಸಂಚಿಕೆ 70, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಕಾಶ್ಮೀರ ಕುರಿತ ಪಾಕ್, ಇಯು ಹೇಳಿಕೆಗೆ ಕಿಡಿ | ೦೭
ಪರಿಷ್ಕೃತ ವಲಸೆ ನೀತಿ ಜಾರಿಗೆ ಅಧಿಸೂಚನೆ | ೦೭
ಸೇನೆಗೆ ದೇಸಿ ದಿವ್ಯಾಸ್ತ್ರದ ದಿವ್ಯಶಕ್ತಿ | ೦೭

ಲೋಕಭವನದಲ್ಲಿಂದು ಸಂಜೆ 4ಕ್ಕೆ ಸಮಾರಂಭ | 25ನೇ ಮುಖ್ಯಮಂತ್ರಿಯಾಗಿ ಡಿಕೆಶಿ ಪ್ರಮಾಣವಚನ | ರಾಹುಲ್ ಸೇರಿ ಹಲವು ಸಿಎಂ, ಸ್ವಾಮೀಜಿಗಳು ಭಾಗಿ

ಶಿವಕುಮಾರ್ ಎಂಬ ನಾನು...

ಬೆಂಗಳೂರು: ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ನಾಯಕ ಡಿ.ಕೆ. ಶಿವಕುಮಾರ್ ಅವರು ಬುಧವಾರ (ಜೂ.3) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಈ ಮೂಲಕ ಡಿಕೆಶಿ ತಮ್ಮ ದಶಕಗಳ ಕನಸನ್ನು ನನಸಾಗಿಸಿಕೊಳ್ಳಲಿದ್ದಾರೆ.

ಸಂಜೆ 4.05ಕ್ಕೆ ಲೋಕಭವನದ ಗಾಜಿನ ಮನೆಯಲ್ಲಿ ನಡೆಯುವ ಈ ಪದಗ್ರಹಣ ಸಮಾರಂಭವು ಸರಳವಾಗಿರಲಿದೆ. ಈ ಬಾರಿ ಯಾವುದೇ ಆಡಂಬರವಿಲ್ಲದೆ, ಸರಳತೆಗೆ ಒತ್ತು ನೀಡಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಅತಿಥಿಗಳಿಗೆ ಮೂರು ಬಗೆಯ ಪಾಸ್‌ಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗಿದೆ. ಅತಿ ಗಣ್ಯರು, ಗಣ್ಯರು ಮತ್ತು ಸಾಮಾನ್ಯ ಅತಿಥಿಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ ರೂಪಿಸಲಾಗಿದೆ. ಅತಿಥಿಗಳು ಮಧ್ಯಾಹ್ನ 2 ಗಂಟೆ ಒಳಗಾಗಿ ಲೋಕಭವನಕ್ಕೆ ಆಗಮಿಸುವಂತೆ ಸೂಚಿಸಲಾಗಿದೆ.



ಪ್ರಮಾಣವಚನಕ್ಕೆ ಗಣ್ಯರ ದಂಡು: ಪ್ರಮಾಣವಚನ ಸ್ವೀಕಾರ ಸಮಾರಂಭದ ಸಿದ್ಧತೆ ಪೂರ್ಣಗೊಂಡಿದ್ದು, ಸರಳವಾಗಿ ನಡೆಯುವ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಹಂಗಾಮಿ ಸಿಎಂ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ತೆಲಂಗಾಣ ಸಿಎಂ ರೇವಂತ ರೆಡ್ಡಿ ಸೇರಿದಂತೆ ಕಾಂಗ್ರೆಸ್ ಅಧಿಕಾರದಲ್ಲಿ ಇರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಇಂಡಿಯಾ ಒಕ್ಕೂಟದ ನಾಯಕರು ಭಾಗವಹಿಸಲಿದ್ದು ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.

ಸ್ವಾಮೀಜಿಗಳು ಭಾಗಿ: ಸಮಾರಂಭದಲ್ಲಿ ಸ್ವಾಮೀಜಿಗಳು, ಸಿನಿಮಾ ತಾರೆಯರು, ಶಾಸಕರು, ಮಾಜಿ ಸಚಿವರು, ಹಿರಿಯ ರಾಜಕೀಯ ನಾಯಕರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಅವರು ಕಾರ್ಯಕ್ರಮದ ಸಿದ್ಧತೆಗಳನ್ನು ವೀಕ್ಷಿಸಿದ್ದಾರೆ. ➡ಪುಟ ೪



ಸಿಎಂ ಕಚೇರಿ ವಾಸ್ತು ಪರಿಶೀಲನೆ

ಡಿ.ಕೆ ಶಿವಕುಮಾರ್ ಅವರ ಜ್ಯೋತಿಷಿ ಹಾಗೂ ವಾಸ್ತು ತಜ್ಞ ವಿ.ವಿ.ಆರಾಧ್ಯ ಗುರೂಜಿ ಅವರು ಮಂಗಳವಾರ ವಿಧಾನಸೌಧದ ಮುಖ್ಯಮಂತ್ರಿ ಕಚೇರಿಗೆ ಭೇಟಿ ನೀಡಿ ಸುಮಾರು ಅರ್ಧ ಗಂಟೆ ಕಾಲ ವಾಸ್ತು ಪರಿಶೀಲನೆ ನಡೆಸಿದರು. ಆಸನ ವ್ಯವಸ್ಥೆ, ಸಿಎಂ ಕೊಠಡಿಯ ಉಪ ಕೋಣೆ, ಶೌಚಗೃಹ ಹಾಗೂ ವಿಶ್ರಾಂತಿ ಕೋಣೆ ದಿಕ್ಕು ಹಾಗೂ ಸ್ಥಳ ಬದಲಾವಣೆಯ ಬಗ್ಗೆ ವಾಸ್ತುಶಾಸ್ತ್ರಜ್ಞರು ಪರಿಶೀಲಿಸಿದರು. ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಕುರ್ಚಿ, ಟೇಬಲ್ ಪೂರ್ವ ದಿಕ್ಕಿಗೆ ಇತ್ತು. ಅದನ್ನು ಬದಲಾಯಿಸುವ ಬಗ್ಗೆ ಪರಿಶೀಲನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಬಗ್ಗೆ ಮಾಧ್ಯಮಗಳ ಜತೆ ಮಾತನಾಡಿದ ಜ್ಯೋತಿಷಿ ಆರಾಧ್ಯ ಅವರು, ಸಿಎಂ ಕಚೇರಿಯಲ್ಲಿ ಕೆಲವು ವಾಸ್ತು ಪ್ರಕಾರ ಬದಲಾವಣೆ ಮಾಡಲು ಹೇಳಿದ್ದೇನೆ ಎಂದು ತಿಳಿಸಿದರು.

ಕಾಂಗ್ರೆಸ್ ಕಚೇರಿ ಮರು ನಿರ್ಮಾಣಕ್ಕೆ ಶಂಕು

ಬುಧವಾರ ಸಂಜೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಡಿ.ಕೆ. ಶಿವಕುಮಾರ್ ಅವರು ನಂತರ ರೇಸ್ ಕೋರ್ಸ್ ರಸ್ತೆಯಲ್ಲಿ ಕಾಂಗ್ರೆಸ್ ಹಳೇ ಕಟ್ಟಡದ ಜಾಗದಲ್ಲಿ ಮರುನಿರ್ಮಾಣ ಆಗಲಿರುವ ಕಾಂಗ್ರೆಸ್ ಭವನದ ಶಂಕುಸ್ಥಾಪನೆ ನರವೇರಿಸಲಿದ್ದಾರೆ.

ಅಧಿಕಾರಿ, ಸಿಬ್ಬಂದಿಗೆ ಮಧ್ಯಾಹ್ನ ರಜೆ

ಸಂಜೆ 4.05 ಗಂಟೆಗೆ ಕರ್ನಾಟಕ ಲೋಕಭವನದಲ್ಲಿ ಪ್ರಮಾಣ ವಚನ ಸಮಾರಂಭ ನಡೆಯಲಿರುವ ಹಿನ್ನಲೆಯಲ್ಲಿ ಲೋಕಭವನ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಜನಸಂದಣಿ ಸೇರುವ ಹಾಗೂ ವಾಹನ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇರುವುದರಿಂದ ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ವಿಧಾನಸೌಧ, ವಿಕಾಸಸೌಧ ಹಾಗೂ ಬಹುಮಹಡಿಗಳ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಗೆ ಬುಧವಾರ ಮಧ್ಯಾಹ್ನದ ಬಳಿಕ ರಜೆ ಘೋಷಿಸಲಾಗಿದೆ.

ಸಂಪುಟ ರಚನೆಗೆ ಕಸರತ್ತು



ಹೊಸದಿಲ್ಲಿ: ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಮೊದಲ ಹಂತದ ಸಂಪುಟದಲ್ಲಿ 10 ರಿಂದ 12 ಮಂದಿಗೆ ಅವಕಾಶ ಸಿಗುವುದು ಖಾತ್ರಿಯಾಗಿದ್ದು, ಸೋಮವಾರ ತಡರಾತ್ರಿಯಿಂದ ಮಂಗಳವಾರ ಇಡೀ ದಿನದ ಮಾತುಕತೆ, ಚರ್ಚೆಯಿಂದ ಮೊದಲ ಪಟ್ಟಿ ಅಂತಿಮಗೊಂಡಿದೆ. ಬಹುತೇಕ ಹಿರಿಯ ನಾಯಕರಿಗೆ ಸಂಪುಟದಲ್ಲಿ ಅವಕಾಶ ಸಿಕ್ಕಿದೆ.ದಿಲ್ಲಿಯಿಂದ ಸಿದ್ದರಾಮಯ್ಯ ಅವರು ಬೆಂಗಳೂರಿಗೆ ಆಗಮಿಸಿದ್ದು, ಬುಧವಾರ ಬೆಳಗ್ಗೆಯೇ ರಾಹುಲ್ ಗಾಂಧಿ ಜತೆಗೆ ಡಿ.ಕೆ. ಶಿವಕುಮಾರ್ ಆಗಮಿಸಲಿದ್ದಾರೆ. ಪ್ರಮಾಣವಚನ ಸ್ವೀಕರಿಸಲಿರುವ ಸದಸ್ಯರಿಗೆ ಹೈಕಮಾಂಡ್‌ನಿಂದ ಮಾಹಿತಿ ನೀಡಲಾಗಿದ್ದು, ಬುಧವಾರ ಬೆಳಗ್ಗೆ ಅಧಿಕೃತ ಪಟ್ಟಿ ಹೊರಬೀಳಲಿದೆ. ಮೊದಲ ಹಂತದಲ್ಲಿ ಹಿರಿಯರಿಗೆ ಹೈಕಮಾಂಡ್ ಮಣೆ ಹಾಕಿದೆ ಎಂದು ತಿಳಿದುಬಂದಿದೆ. ➡ಪುಟ ೪

ನನಗೆ ಸಚಿವ ಸ್ಥಾನದ ಅಧಿಕೃತ ಮಾಹಿತಿ ಇನ್ನೂ ಬಂದಿಲ್ಲ. ಸದ್ಯಕ್ಕೆ ನಾನು ಸ್ಪೀಕರ್ ಆಗಿದ್ದೇನೆ. ಸಂದೇಶ ಬಂದ ತಕ್ಷಣ ಮಾಹಿತಿ ಕೊಡುತ್ತೇನೆ.
■ **ಯು.ಟಿ. ಖಾದರ್, ಸ್ಪೀಕರ್**

ಎಐಸಿಸಿಗೆ ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಿಂದ ಬಿಡುಗಡೆಗೊಂಡ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಪಕ್ಷ ಹೊಸ ಜವಾಬ್ದಾರಿ ನೀಡಿದ್ದು, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸೂಚನೆ ಮೇರೆಗೆ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಆದೇಶ ಹೊರಡಿಸಿದ್ದು, ತಕ್ಷಣವೇ ಜಾರಿಗೆ ಬರುವಂತೆ ಹೊಸ ಜವಾಬ್ದಾರಿ ವಹಿಸಲಾಗಿದೆ, ಈ ಹಿಂದೆ ರಾಷ್ಟ್ರ ರಾಜಕಾರಣಕ್ಕೆ ಹೋಗುವುದಿಲ್ಲ ಎಂದಿದ್ದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಪಕ್ಷವು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ಮಾಡುವ ಮೂಲಕ ಪಕ್ಷದಲ್ಲಿ ಹೊಸ ಹುದ್ದೆ ನೀಡಲಾಗಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ದಾನವಿತ್ತವನ ಪುಣ್ಯಶರೀರವೂ, ಐಶ್ವರ್ಯವೂ ಹಾಳಾಗುವುದಿಲ್ಲ.
▲ ಲೋಕೋಕ್ತಿ

ದೇಹ ದಹನದವರೆಗಿನ ಕ್ರಿಯೆಗಳು ಮತ್ತು ಅವುಗಳ ವೈಶಿಷ್ಟ್ಯ

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
• ಪುಟ ೬

ಕಿರುಸುದ್ದಿ

ಮಹಾರಾಷ್ಟ್ರದಲ್ಲಿ ರೈತರ ₹2 ಲಕ್ಷ ಸಾಲ ಮನ್ನಾ

ಮುಂಬೈ: ರೈತರ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಇದರಿಂದ ಸುಮಾರು 56 ಲಕ್ಷ ರೈತರಿಗೆ ಲಾಭವಾಗಲಿದೆ. ರೈತರಿಗೆ ಮಹತ್ವದ ನೆರವು ನೀಡುವ ಉದ್ದೇಶದಿಂದ ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಕರ್ಜಮುಕ್ತಿ ಯೋಜನೆಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.
• ಪುಟ 2

ನಾಯಕರ ವಾಗ್ವಾದ: ದಾಳಿ ಪುನರಾರಂಭ!

ವಾಷಿಂಗ್ಟನ್: ಇಸ್ರೇಲ್ ಪ್ರಧಾನಿಯೊಂದಿಗೆ ಅಮೆರಿಕ ಅಧ್ಯಕ್ಷರ ದೂರವಾಣಿ ಕರೆ ವಾಗ್ವಾದದ ಬಳಿಕ ದಕ್ಷಿಣ ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಮಂಗಳವಾರ ಪುನರಾರಂಭಿಸಿದೆ. ದಕ್ಷಿಣ ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದ ಅಮೆರಿಕ ಜತೆಗಿನ ಶಾಂತಿ ಮಾತುಕತೆಯನ್ನು ಇರಾನ್ ಸ್ಥಗಿತಗೊಳಿಸಿದ ಹಿನ್ನೆಲೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಧ್ಯಕ್ಷ ಟ್ರಂಪ್ ಕರೆ ಮಾಡಿದ್ದರು.
• ಪುಟ 2

ಮನೆ ಖರೀದಿದಾರರಿಗೆ ವಂಚನೆ; ನಾಲ್ವರ ಸೆರೆ

• ಪುಟ 2

ಕಾಂಗೋದಲ್ಲಿ 321 ಇಬೋಲಾ ಕೇಸ್ ದೃಢ

• ಪುಟ 2

3 ಮದರಸಾಗಳಿಗೆ ಬೀಗ, ಸಂತ್ರಸ್ತ ಕುಟುಂಬಕ್ಕೆ ನೆರವು

• ಪುಟ 2



ರೈತರ ಹಿತಕ್ಕಾಗಿ ಸಮಗ್ರ ರಾಷ್ಟ್ರೀಯ ಅಭಿಯಾನ

• ಪುಟ ೭

ಸುದ್ದಿ ಸಮಗ್ರ

ಸಿಬಿಎಸ್‌ಇ ಆನ್‌ಸ್ಕ್ರೀನ್ ಮೌಲ್ಯಮಾಪನ ವ್ಯವಸ್ಥೆ ವಿವಾದ ಹಿನ್ನೆಲೆ

ಸಿಬಿಎಸ್‌ಇಗೆ ನೂತನ ಅಧ್ಯಕ್ಷರು

ಹೊಸದಿಲ್ಲಿ : ಹೊಸ ಆನ್ ಸ್ಕ್ರೀನ್ ಮಾರ್ಕಿಂಗ್(ಒಎಸ್‌ಎಂ) ವ್ಯವಸ್ಥೆ ಬಗ್ಗೆ ವಿವಾದ ಸೃಷ್ಟಿಸಲಾಗಿರುವಂತೆಯೇ, ಕೇಂದ್ರ ಸರಕಾರವು ಹಿರಿಯ ಐಎಎಸ್ ಅಧಿಕಾರಿ ಲೊಖಂಡೆ ಪ್ರಶಾಂತ್ ಸೀತಾರಾಮ್ ಅವರನ್ನು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್‌ನ(ಸಿಬಿಎಸ್‌ಇ) ನೂತನ ಅಧ್ಯಕ್ಷರನ್ನಾಗಿ ಮಂಗಳವಾರ ನೇಮಿಸಿದೆ.



ಲೊಖಂಡೆ ಅವರು ಇದಕ್ಕೂ ಮುನ್ನ ಗೃಹಸಚಿವಾಲಯದಲ್ಲಿ ಅಡಿಶನಲ್ ಸೆಕ್ರೇಟರಿ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಹಾಲಿ ಅಧ್ಯಕ್ಷ ರಾಹುಲ್ ಸಿಂಗ್ ಅವರ ಉತ್ತರಾಧಿಕಾರಿಯಾಗಿರುತ್ತಾರೆ. ಇದಕ್ಕೂ ಮುನ್ನ ರಾಹುಲ್ ಸಿಂಗ್ ಮತ್ತು ಸಿಬಿಎಸ್‌ಇಯ ಕಾರ್ಯದರ್ಶಿ ಹಿಮಾಂಶು ಗುಪ್ತಾ ಅವರನ್ನು ಸರ್ಕಾರ ವರ್ಗಾವಣೆಗೊಳಿಸಿತ್ತು. ➡ಪುಟ ೪

15 ಲಕ್ಷ ಸೈಬರ್ ದಾಳಿ!

ಸಿಬಿಎಸ್‌ಇ ಹೇಳುವ ಪ್ರಕಾರ, ಒಂದು ಹಂತದಲ್ಲಿ ಆದರ ಪೋರ್ಟಲ್ ಮೇಲೆ ಕೇವಲ 2 ನಿಮಿಷಗಳಲ್ಲಿ ದೊಡ್ಡ ಮಟ್ಟದ 15 ಲಕ್ಷ ಸೈಬರ್ ದಾಳಿ ನಡೆದಿದೆ. ವಿದ್ಯಾರ್ಥಿಗಳು ಸಿಬಿಎಸ್‌ಇ ಪೋರ್ಟಲ್ ಬಳಸುವುದನ್ನು ತಡೆಯಬೇಕೆಂಬ ಉದ್ದೇಶದಿಂದ ಸೈಬರ್ ದಾಳಿ ನಡೆಸಲಾಗಿದೆ ಎಂದು ಆರೋಪಿಸಿದೆ. 1 ಲಕ್ಷಕ್ಕೂ ಹೆಚ್ಚು ಬಾರಿ ಪೋರ್ಟಲ್‌ನಿಂದ ದಾಖಲೆ(ಫೈಲ್)ಗಳನ್ನು ಕದಿಯುವ ಅನಧಿಕೃತ ಪ್ರಯತ್ನಗಳು ನಡೆದಿವೆ. ಸುಮಾರು 8,000 ಬಳಕೆದಾರರಿಗೆ ನಮ್ಮ ಮರುಮೌಲ್ಯಮಾಪನ ಪೋರ್ಟಲ್ ಲಭ್ಯವಿದ್ದು, 16000 ವಿದ್ಯಾರ್ಥಿಗಳು ತಮ್ಮ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ ಎಂದಿದೆ.

ಆಳಂದ ಚೈತನ್ಯ ಮಂದಿರ ದಾಳಿ ಪ್ರಕರಣ | ರಾಜ್ಯಪಾಲರ ಭೇಟಿ

ದಾಳಿಕೋರರ ರಕ್ಷಣೆಗೆ ಬಿಜೆಪಿ ಕಿಡಿ

ಬೆಂಗಳೂರು: ವೋಟ್ ಬ್ಯಾಂಕ್ ರಾಜಕಾರಣ ಮತ್ತು ಅಲ್ಪಸಂಖ್ಯಾತರನ್ನು ಓಲೈಸಲು ಆಳಂದದ ರಾಘವ ಚೈತನ್ಯ ಮಂದಿರದ ಮೇಲೆ ದಾಳಿ ಮಾಡಿದವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಸರ್ಕಾರ ವಾಪಸ್ ಪಡೆದಿದೆ ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ಆಳಂದ ರಾಘವ ಚೈತನ್ಯ ಮಂದಿರ ದಾಳಿ ಪ್ರಕರಣ ವಾಪಸ್ ಪಡೆಯದಂತೆ ಮಂಗಳವಾರ ಬಿಜೆಪಿ ನಿಯೋಗದ ಜತೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಘಟನೆಯ ವಿಚಾರಣೆ ಕೋರ್ಟ್‌ನಲ್ಲಿ ಬಾಕಿ ಇರುವಾಗಲೇ ಸರ್ಕಾರ ದಾಳಿಕೋರರ ಮೇಲಿನ ಪ್ರಕರಣವನ್ನು ವಾಪಸ್ ಪಡೆದಿದೆ. ಇದನ್ನು ವಾಪಸ್ ಪಡೆಯಬಾರದು ಎಂದು ಆಗ್ರಹಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದರು. ➡ಪುಟ ೪



ಅಣ್ಣಾಮಲೈ ರಾಜೀನಾಮೆ!



ನಿತಿನ್ ನವೀನ್, ಬಿ.ಎಲ್. ಸಂತೋಷ್‌ಗೆ ಪತ್ರ ಸಲ್ಲಿಕೆ

ಹೊಸದಿಲ್ಲಿ/ಚೆನ್ನೈ: ತಮಿಳುನಾಡಿನ ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ ಅವರು ಮಂಗಳವಾರ ದಿಲ್ಲಿಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಭೇಟಿಯಾಗಿ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಈ ಮೂಲಕ ಅಣ್ಣಾಮಲೈ ಅವರ ರಾಜಕೀಯ ಭವಿಷ್ಯದ ಬಗ್ಗೆ ಇದ್ದಂತಹ ತೀವ್ರ ಊಹಾಪೋಹಗಳಿಗೆ ತೆರೆಬಿದ್ದಿದೆ. ತಮ್ಮ ರಾಜೀನಾಮೆ ಪತ್ರದ ಜತೆಗೆ ಅಣ್ಣಾಮಲೈ ಅವರು, ಇತ್ತೀಚಿನ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಸಾಧನೆ ವಿವರಿಸುವ 5 ಪುಟಗಳ ಟಿಪ್ಪಣಿಯನ್ನೂ ಕೇಂದ್ರ ನಾಯಕರಿಗೆ ಹಸ್ತಾಂತರಿಸಿದ್ದಾರೆ. ➡ಪುಟ ೪

ಕನ್ನಡ ಬೋಧನೆಗೆ ಮಹತ್ವ | ವಿದೇಶಿ ಭಾಷೆಗೆ ಅಭದ್ರತೆ

ಸಿಬಿಎಸ್‌ಇ ತ್ರಿಭಾಷಾ ನೀತಿ ಕನ್ನಡ ಶಿಕ್ಷಕರಿಗೆ ಬಲು ಬೇಡಿಕೆ

▸ ನಂದಿನಿ ಎನ್.

ಬೆಂಗಳೂರು: ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಜಾರಿಗೆ ತರಲಿರುವ ತ್ರಿಭಾಷಾ ನೀತಿಯುವಿದೇಶಿಭಾಷಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದ್ದರೆ, ಮತ್ತೊಂದೆಡೆ ಕನ್ನಡ ಸೇರಿದಂತೆ ಭಾರತೀಯ ಭಾಷಾ ಶಿಕ್ಷಕರಿಗೆ ಹೊಸ ಅವಕಾಶಗಳ ಬಾಗಿಲು ತೆರೆದಿದೆ. ವಿಶೇಷವಾಗಿ ಕರ್ನಾಟಕದ ಸಿಬಿಎಸ್‌ಇ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಬೇಡಿಕೆ ಗಮನಾರ್ಹವಾಗಿ ಹೆಚ್ಚತೊಡಗಿದೆ.



ಹೊಸ ನಿಯಮದ ಪ್ರಕಾರ, ವಿದ್ಯಾರ್ಥಿಗಳು ಮೂರು ಭಾಷೆಗಳಲ್ಲಿ ಕನಿಷ್ಠ ಎರಡು ಭಾರತೀಯ ಭಾಷೆಗಳನ್ನು ಕಡ್ಡಾಯವಾಗಿ ಕಲಿಯಬೇಕು. ಇದುವರೆಗೆ ಮೂರನೇ ಭಾಷೆಯಾಗಿ ವಿದೇಶಿ ಭಾಷೆಗಳಾದ ಫ್ರೆಂಚ್, ಜರ್ಮನ್ ಅಥವಾ ಸ್ಪ್ಯಾನಿಷ್ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ವಿದ್ಯಾರ್ಥಿಗಳು ಈಗ ಕನ್ನಡ, ಹಿಂದಿ, ಸಂಸ್ಕೃತ ಅಥವಾ ಇತರೆ ಭಾರತೀಯ ಭಾಷೆಗಳನ್ನೂ ಕಲಿಯಬೇಕಾಗಿದೆ. ➡ಪುಟ ೪

ಕನ್ನಡ ಶಿಕ್ಷಕರ ನೇಮಕಾತಿಗೆ ಕ್ರಮ

ಬೆಂಗಳೂರು ಸೇರಿದಂತೆ ರಾಜ್ಯದ ಅನೇಕ ಸಿಬಿಎಸ್ ಶಾಲೆಗಳು ಈಗಾಗಲೇ ಹೆಚ್ಚುವರಿ ಕನ್ನಡ ಶಿಕ್ಷಕರ ನೇಮಕಾತಿಗೆ ಮುಂದಾಗಿವೆ. 9ನೇ ತರಗತಿಯಿಂದ ಜು.1 ರಿಂದ ಹೊಸ ನಿಯಮ ಜಾರಿಯಾಗಲಿರುವ ಹಿನ್ನೆಲೆ ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಕನ್ನಡ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ. ಅಲ್ಲದೆ, ಶಾಲಾ ಆಡಳಿತ ಮಂಡಳಿಗಳ ಪ್ರಕಾರ, ಇದುವರೆಗೆ ಸೀಮಿತ ಸಂಖ್ಯೆಯಲ್ಲಿ ಕನ್ನಡ ಬೋಧನೆ ನಡೆಯುತ್ತಿದ್ದರೆ, ಈಗ ಹೆಚ್ಚಿನ ವಿಭಾಗಗಳು ಮತ್ತು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಅಗತ್ಯ ಉಂಟಾಗಿದೆ. ಇದರಿಂದ ಅರ್ಹ ಕನ್ನಡ ಶಿಕ್ಷಕರಿಗೆ ಬೇಡಿಕೆ ಹೆಚ್ಚುತ್ತಿದೆ.

ಕೊಡಗಿಗೆ ರೈಲು ಸಂಪರ್ಕ: ಯಾವುದೇ ಪ್ರಸ್ತಾವನೆ ಇಲ್ಲ

ಮಡಿಕೇರಿ: ಕೊಡಗು ಜಿಲ್ಲೆಯ ಮೂಲಕ ಹಾದುಹೋಗುವ ಯಾವುದೇ ರೈಲು ಮಾರ್ಗದ ಪ್ರಸ್ತಾವನೆ ರೈಲ್ವೆ ಸಚಿವಾಲಯದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ರೈಲ್ವೆ ಮೂಲಸೌಕರ್ಯ ಮತ್ತು ಸಂಪರ್ಕ ವ್ಯವಸ್ಥೆಗಳ ಕುರಿತು ಚರ್ಚೆ ನಡೆಸಿದ ಬಳಿಕ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸ್ಪಷ್ಟಪಡಿಸಿದ್ದಾರೆ. ಕೊಡಗಿನ ವಿಶಿಷ್ಟ ಪರಿಸರ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ತನ್ನ ಬದ್ಧತೆಯನ್ನು ಯದುವೀರ್ ಅವರು ಪುನರುಚ್ಚರಿಸಿದ್ದಾರೆ. ➡ಪುಟ ೪

ಸಚಿವ ಅಶ್ವಿನಿ ವೈಷ್ಣವ್ ಭೇಟಿ ಬಳಿಕ ಸಂಸದ ಯದುವೀರ್ ಹೇಳಿಕೆ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,90,000**(2,90,000) ಅಪರಂಜಿ ಚಿನ್ನ: **1,51,520**(1,51,520) ಆಭರಣ ಚಿನ್ನ: **1,44,300**(1,44,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **74,649** (382↑) ಎನ್‌ಎಸ್‌ಇ **24,483** (100↑)

$1 = ₹95.37

ಕಿರುಸುದ್ದಿ

ಜೂ.7ಕ್ಕೆ ಬೃಹತ್ ಸಮಾವೇಶ

ಹುಬ್ಬಳ್ಳಿ: ಆನಂದ ಅಸೋಸಿಯೇಟ್ಸ್ ಸರ್ವಧರ್ಮ ವಧು-ವರರ ಮಾಹಿತಿ ಸೇವಾ ಕೇಂದ್ರದ ವತಿಯಿಂದ ಜೂ.7 ರಂದು ಬೆಳಗ್ಗೆ 10ಕ್ಕೆ ಧಾರವಾಡದ ಸರಸ್ವತಿ ನಿಕೇತನ ಸಭಾಂಗಣದಲ್ಲಿ ರಾಜ್ಯ ಮಟ್ಟದ ಸರ್ವ ಧರ್ಮಗಳ ಎಲ್ಲ ವರ್ಗಗಳ ವಧು-ವರರ ಮತ್ತು ಪಾಲಕರ ಪರಸ್ಪರ ಪರಿಚಯ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಟ್ಸ್ ವ್ಯವಸ್ಥಾಪಕ ನಿರ್ದೇಶಕ ಸುರೇಶ ಕುಪ್ಪಸಗೌಡರ ಹೇಳಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದಲ್ಲಿ ಉನ್ನತ ವ್ಯಾಸಂಗ ಹೊಂದಿರುವ ಜಂಗಮ, ಲಿಂಗಾಯತ, ಪಂಚಮಸಾಲಿ, ಬಣಜಿಗ, ಶಿವಶಿಂಪಿ, ನೇಕಾರ, ಕುರುಹಿನ ಶೆಟ್ಟಿ, ಕೂಡುವಕ್ಕಲಿಗ, ಸಾಧರ, ಗಾಣಿಗೇರ, ಪಾಕನಾಕರೆಡ್ಡಿ, ಲಿಂಗಾಯತ ರೆಡ್ಡಿ, ನಾಮದ ರೆಡ್ಡಿ, ಹಡಪದ, ಮರಾಠಾ, ಬ್ರಾಹ್ಮಣ, ಜೈನ ಸೇರಿದಂತೆ ವಿವಿಧ ಒಳಪಂಗಡದವರು ಪಾಲ್ಗೊಳ್ಳುವರು ಎಂದರು. ಅಂತರ್ ಜಾತಿ ವಿವಾಹ ಅಪೇಕ್ಷಿತರು ಹಾಗೂ ಮರುವಿವಾಹ ಬಯಸುವ ವಿಚ್ಛೇದಿತ ಪತಿ, ಪತ್ನಿ, ವಿಧು-ವಿಧವೆಯರು ಸಹ ಭಾಗವಹಿಸಬಹುದಾಗಿದೆ ಎಂದರು.

ಜೂ.6ರಿಂದ ಟೂರ್ನಮೆಂಟ್

ಹುಬ್ಬಳ್ಳಿ: ನಗರದ ರೋಟರಿ ಕ್ಲಬ್ ಆಫ್ ಹುಬ್ಬಳ್ಳಿ ಮಿಡ್ ಟೌನ್ ಹಾಗೂ ಮಹಾರಾಷ್ಟ್ರ ಮಂಡಳ ಟೇಬಲ್ ಟೆನಿಸ್ ಅಕಾಡೆಮಿ ಸಹಯೋಗದಲ್ಲಿ ಜೂ.6 ಹಾಗೂ 7 ರಂದು ಆರ್‌ಐಡಿ 3170 ಜಿಲ್ಲಾ ಓಪನ್ ಟೇಬಲ್ ಟೆನ್ನಿಸ್ ಟೂರ್ನಾಮೆಂಟ್ ಮಹಾರಾಷ್ಟ್ರ ಮಂಡಳ ಟೇಬಲ್ ಟೆನಿಸ್ ಅಕಾಡೆಮಿ, ಎನ್‌ಎಂ ಆರ್ ಸ್ಕ್ಯಾನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ ಎಂದು ಕ್ಲಬ್ ಕಾರ್ಯದರ್ಶಿ ವಿಶ್ವನಾಥ ಅಂಗಡಿಕಿ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಡರ್ 13, ಅಂಡರ್ 15, ಅಂಡರ್ 19 ಬಾಲಕ ಹಾಗೂ ಬಾಲಕಿಯರಿಗೆ, ಓಪನ್ ಪುರುಷ ಹಾಗೂ ಮಹಿಳಾ ವಿಭಾಗ ಹಾಗೂ ವೇಟರನ್ ವಿಭಾಗ(40 ವರ್ಷ ಮೇಲ್ಪಟ್ಟವರಿಗೆ) ಆಯೋಜಿಸಲಾಗಿದೆ. ಜಿಲ್ಲಾ ಗವರ್ನರ್ ಅರುಣ್ ಭಂಡಾರೆ, ಜಿಲ್ಲಾ ಕಾರ್ಯದರ್ಶಿ ಸುಮೇರ್ಮಲ ಓಸ್ವಾಲ್, ಅಧ್ಯಕ್ಷ ಗುಲ್ಜಾರ್ ಎ.ಎಂ., ಕಾರ್ಯಕ್ರಮ ಅಧ್ಯಕ್ಷ ರಾಜು ದೊಡ್ಡಮನಿ, ಡಿಡಿಟಿಟಿಎ ಅಧ್ಯಕ್ಷ ವಿಜಯ ಪೈ, ರೆಫರಿ ಅಭಿಷೇಕ ಕಠಾರೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ರೆಫರಿ ಅಭಿಷೇಕ ಕಠಾರೆ, ರಾಜು ದೊಡ್ಡಮನಿ ಇದ್ದರು.

ಉದ್ಯೋಗ ಶಿಬಿರ

ಹುಬ್ಬಳ್ಳಿ: ನವಶ್ರೀ ಕಲಾಚೇತನ ಹಾಗೂ ದ ಎಲಿಗಂಟ್ ಇನ್‌ಸ್ಟಿಟ್ಯೂಟ್ ಸಹಯೋಗದಲ್ಲಿ ಉದ್ಯೋಗ ಶಿಬಿರವನ್ನು ನಗರದ ಗೋಕುಲ್ ರಸ್ತೆಯ ಹೊಸ ಬಸ್ ನಿಲ್ದಾಣ ಬಳಿಯ ಫ್ರೈಡ್ ಐಕಾನ್ ಬಿಲ್ಡಿಂಗ್ ನಲ್ಲಿ ಜೂನ್ 8, 9 ಹಾಗೂ 10 ರಂದು ಹಮ್ಮಿಕೊಳ್ಳಲಾಗಿದೆ ಎಂದು ನವಶ್ರೀ ಕಲಾಚೇತನ ಸಂಸ್ಥೆ ಅಧ್ಯಕ್ಷೆ ಸಂಗೀತಾ ದೇವದಾಸ್ ಹೇಳಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಜೀವನೋಪಾಯಕ್ಕಾಗಿ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ವಿವಿಧ ತರಹದ ಗೃಹ ಉಪಯೋಗಿ ವಸ್ತುಗಳ ತಯಾರಿಕೆ ಬಗ್ಗೆ ಶಿಬಿರದಲ್ಲಿ ತರಬೇತಿ ನೀಡಲಾಗುವುದು ಎಂದರು. ನಿರ್ಮಲಾ ಪೂಜಾರ, ಸುಧಾ ಮಲ್ಲಾಪುರ, ಲಕ್ಷ್ಮೀ, ಶಾರದಾ ಇದ್ದರು.

ಅರ್ಜಿ ಆಹ್ವಾನ

ನವಲಗುಂದ: ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ತಾಲೂಕು ಹಾಗೂ ನಗರ ಘಟಕ ನವಲಗುಂದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭ ಜರುಗುವುದು. ಜೂ.11ರಂದು ಶ್ರೀ ವೀರಶೈವ-ಲಿಂಗಾಯತ ಸಮುದಾಯ ಭವನ, ಬಸ್ ಡಿಪೋ ಹತ್ತಿರ, ನವಲಗುಂದದಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕೋರಲಾಗಿದ್ದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜೂ.8. ಅರ್ಜಿಯ ಜೊತೆ ಲಗತ್ತು ದೃಢೀಕೃತ ಅಂಕಪಟ್ಟಿ (ನಕಲು ಪ್ರತಿ) ಭಾವಚಿತ್ರ ಆಧಾರ್‌ಕಾರ್ಡ್ (ನಕಲು ಪ್ರತಿ)ಸಲ್ಲಿಸಬೇಕು.

ವಿವಿಧ ಕಾರ್ಯಕ್ರಮ

ಹುಬ್ಬಳ್ಳಿ: ನಗರದ ಡಿಎಲ್‌ಆರ್‌ಎಂ ಜೈ ಹನುಮಾನ ಫೌಂಡೇಶನ್ ಹಾಗೂ ಡಾ. ರಮೇಶ ಅಣ್ಣ ಗೆಳೆಯರ ಬಳಗದಿಂದ ಡಾ. ರಮೇಶ ಮಾಹದೇವಪ್ಪನವರ ಜನ್ಮದಿನ ಅಂಗವಾಗಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಗೆಳೆಯ ಬಳಗದ ಸದಸ್ಯ ಅಶೋಕ ವಾಲ್ಮೀಕಿ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾನಗರದ ಪ್ರೇಮ ಬಿಂದು ರಕ್ತ ನಿಧಿ ಕೇಂದ್ರ ಸಹಯೋಗದಲ್ಲಿ ರಕ್ತದಾನ ಶಿಬಿರ, ಚಿಟಗುಪ್ಪಿ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ಸಂಗೊಳ್ಳಿ ರಾಯಣ್ಣ ವೃತ್ತದ ಹತ್ತಿರ ಬೀದಿ ಬದಿ ವ್ಯಾಪರಸ್ಥರಿಗೆ ಛತ್ರಿ ವಿತರಣೆ, ಸಿದ್ಧಾರೂಢ ಮಠ ಹಾಗೂ ಹಳೇ ಹುಬ್ಬಳ್ಳಿ ಪತೇಶಾ ದರ್ಗಾ ಸುತ್ತಮುತ್ತಲಿನ ಬಡ ಜನರಿಗೆ ಪಲಾವ ಹಾಗೂ ನೀರು ವಿತರಿಸಲಾಗುವುದು. ರೈಲ್ವೆ ಸ್ಟೇಶನ್ ಹತ್ತಿರದ ಸರ್ಕಾರಿ ಶಾಲೆ ಮಕ್ಕಳಿಗೆ ಪುಸ್ತಕ ಹಾಗೂ ಕಲಿಕಾ ಸಾಮಗ್ರಿ ವಿತರಣೆ, ಇಂದಿರಾ ಗಾಜಿನ ಮನೆಯಲ್ಲಿ ಪೌರ ಕಾರ್ಮಿಕರಿಗೆ ಸನ್ಮಾನ ಹಾಗೂ ಉಡುಗರೆ ವಿತರಣೆ, ಉಣಕಲ್ ಮಂದಮತಿ ಮಕ್ಕಳ ಮಾಧ್ಯಮ ಶಾಲೆಯಲ್ಲಿ ಅಲ್ಪೋಪಹಾರ ವಿತರಣೆ, ರೈಲ್ವೆ ನಿಲ್ದಾಣ ಹಾಗೂ ಬಸ್ ನಿಲ್ದಾಣ ಸುತ್ತಮುತ್ತಲಿನ ಜನರಿಗೆ ಬೆಡ್‌ಶೀಟ್ ವಿತರಣೆ, ಕೇಶ್ವಾಪುರ ಬಾರಕೊಟ್ರಿ ಹತ್ತಿರದ ವೃದ್ಧಾಶ್ರಮದವರಿಗೆ ಹಣ್ಣು ಹಂಪಲ ವಿತರಣೆ ಮಾಡಲಾಗುವುದು.

ಸಂಜೆ ಉಣಕಲ್ ವೃತ್ತದಿಂದ ಡಾ. ರಮೇಶ ಮಹಾದೇವಪ್ಪನವರನ್ನು ಬೈಕ್ ರ್‍ಯಾಲಿ ಮೂಲಕ ಬೆಂಗೇರಿ ಖಾದಿ ಗ್ರಾಮೊದ್ಯೋಗ ವೃತ್ತದ ವರೆಗೂ ಮೆರವಣಿಗೆ ನಡೆಸಲಾಗುವುದು. ಎಂದರು. ಗೆಳೆಯರ ಬಳಗದ ರಾಜು ಕಾಳೆ, ಕಾಶಿಮ್ ಕೊಡಲಗಿ, ಗುರುರಾಜ ಹೊರಟ್ಟಿ, ಶಕೀಲ್ ಹಾಗೂ ಕೆಂಚಪ್ಪ ಇದ್ದರು.



ಧಾರವಾಡ: ಜಿಲ್ಲೆಯಾದ್ಯಂತ ಶಾಲಾ ಪ್ರಾರಂಭೋತ್ಸವ ಹಬ್ಬದ ವಾತಾವರಣದಲ್ಲಿ ನೆರವೇರಿತು. ಮಕ್ಕಳಿಗೆ ಶಿಕ್ಷಕರು ಮತ್ತು ಪೋಷಕರು ಅತ್ಯಂತ ಪ್ರೀತಿಯಿಂದ ಬರಮಾಡಿಕೊಂಡರು. ಜಿಲ್ಲೆಯ ಬಹುತೇಕ ಶಾಲೆಗಳ ಮುಂಭಾಗ ರಂಗೋಲಿ ಬಿಡಿಸಿ, ತಳಿರು ತೋರಣಗಳಿಂದ ಆವರಣ ಸಿಂಗರಿಸಲಾಗಿತ್ತು. ಶಾಲೆಗೆ ಬಂದ ಮಕ್ಕಳಿಗೆ ಆರತಿ ಬೆಳಗುವ ಜೊತೆ ಹೂವು ನೀಡಿ, ಅವರ ಮೇಲೆ ಹೂಮಳೆ ಸುರಿಸಿ ಸ್ವಾಗತ ಕೋರಲಾಯಿತು. ತಾಲೂಕಿನ ನಿಗದಿತ ಸರ್ಕಾರಿ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಚಾಲನೆ ನೀಡಿದರು.

ನೂತನ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಿ

ಹುಬ್ಬಳ್ಳಿ: ಅಹಿಂದ ಸಮುದಾಯಗಳ ಜನಪ್ರತಿನಿಧಿಗಳಿಗೆ ರಾಜ್ಯ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂದು ಅಹಿಂದ ಕರ್ನಾಟಕ ರಾಜ್ಯ ಒಕ್ಕೂಟದ ಅಧ್ಯಕ್ಷ ಸಿದ್ದಣ್ಣ ತೇಜಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವನ್ನು ಶೇ.80ರಷ್ಟು ಅಹಿಂದ ವರ್ಗ ಪಕ್ಷಾತೀತವಾಗಿ ಬೆಂಬಲಿಸಿದೆ. ಹೀಗಾಗಿ ಮುಸ್ಲಿಂ, ಕುರುಬ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ತಲಾ ಒಂದೊಂದು ಉಪಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂದರು. ಕುರುಬ ಸಮಾಜದ ರಾಘವೇಂದ್ರ ಹಿಟ್ನಾಳ ಅಥವಾ ಬಸವರಾಜ ಶಿವಣ್ಣವರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಸಿದ್ದರಾಮಯ್ಯ ಅವರ ಪುತ್ರನಿಗೆ ಉಪಮುಖ್ಯ ಮಂತ್ರಿ ಸ್ಥಾನ ನೀಡಿದರೆ ಅದು ಕುಟುಂಬ ರಾಜಕಾರಣವಾಗಲಿದೆ. ಇದಕ್ಕೆ ಕಾಂಗ್ರೆಸ್ ಪಕ್ಷ ಆಸ್ಪದಾ ನೀಡಬಾರದು. ಅಹಿಂದ ಸಮುದಾಯಗಳಿಗೆ 20ರಿಂದ 22 ಸಚಿವ ಸ್ಥಾನ ನೀಡಬೇಕು. ಈ ಬಗ್ಗೆ ಕಾಂಗ್ರೆಸ್ ವರಿಷ್ಠರಿಗೆ ಪತ್ರ ಬರೆದು ಒತ್ತಾಯಿಸಲಾಗಿದೆ. ಅಹಿಂದ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡದಿದ್ದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗುತ್ತದೆ. ಸಚಿವ ಸಂಪುಟ ರಚನೆ ಸಂದರ್ಭದಲ್ಲಿ ಹೆಚ್ಚಿನ ಆದ್ಯತೆ ನೀಡದಿದ್ದರೆ ಜೂನ್ 7ರಂದು ಬೆಂಗಳೂರಿನಲ್ಲಿ ಅಹಿಂದ ಸಂಘಟನೆಗಳ ಸಭೆ ನಡೆಸಿ, ಮುಂದಿನ ಹೋರಾಟದ ಕುರಿತು ಚರ್ಚಿಸಲಾಗುವುದು ಎಂದರು. ಸುಜಾತಾ ಸನದಿ, ಕೆ.ಎಫ್.ಇಬ್ರಾಹಿಂಪುರ, ಹನುಮಂತಪ್ಪ ಕೌಜಗೇರಿ ಇದ್ದರು.



ಹುಬ್ಬಳ್ಳಿ: ಶಾಸಕ ಪ್ರಸಾದ ಅಬ್ಬಯ್ಯ ಅವರಿಗೆ ಡಿ.ಕೆ.ಶಿವಕುಮಾರ ಅವರ ನೇತೃತ್ವದ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳ ಸದಸ್ಯರು ಇಲ್ಲಿಯ ಸ್ಟೇಶನ್ ರಸ್ತೆ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಮಹಾಮಂಡಳದ ಗುರುನಾಥ ಉಳ್ಳಿಕಾಶಿ, ಶ್ರೀನಿವಾಸ ಬೆಳದಡಿ, ದೊರೆರಾಜ ಮಣಿಕುಂಟ್ಲ,ಸುಧಾ ಮಣಿಕುಂಟ್ಲ,ಇಮ್ತಿಯಾರು ಬಿಜಾಪುರ ಗುರಪ್ಪ ಚಲವಾದಿ, ಲೋಹಿತ ಗಾಮನಗಟ್ಟಿ,ಪರಶುರಾಮ ನಂದ್ಯಾಳ, ಫಕ್ಕಣ್ಣ ದೊಡ್ಡಮನಿ, ಮಂಜುನಾಥ ಉಳ್ಳಿಕಾಶಿ, ಅಲ್ತಾಫ ಮುಲ್ಲಾ ಇದ್ದರು.

ಮುಂದುವರಿದ ಹೋರಾಟ | ಎಂಜಿನಿಯರ್ಸ್ ಸಂಘಟನೆ ಬೆಂಬಲ

ಪಾಲಿಕೆ ಅಧಿಸೂಚನೆ ಹೊರಡಿಸಲಿ



ಧಾರವಾಡ: ಪ್ರತ್ಯೇಕ ಪಾಲಿಕೆ ರಚನೆಗೆ ಆಗ್ರಹಿಸಿ ಸ್ವಾಭಿಮಾನಿ ಹೋರಾಟ ಸಮಿತಿ ಹಮ್ಮಿಕೊಂಡಿರುವ ಸತ್ಯಪ್ರತಿಪಾದನೆ ಸತ್ಯಾಗ್ರಹ ಈಗ 19ನೇ ದಿನಕ್ಕೆ ಕಾಲಿಟ್ಟಿದ್ದು, ಮಂಗಳವಾರ ಫೋರಂ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜನಿಯರ್ಸ್ ಸಂಘಟನೆ ಬೆಂಬಲಿಸಿದೆ.

ದಿನದಿಂದ ದಿನಕ್ಕೆ ಈ ಹೋರಾಟ ಸಾರ್ವಜನಿಕ ವಲಯುದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದು, ಮಂಗಳವಾರ ವಿವಿಧ ಸಂಘ-ಸಂಸ್ಥೆಗಳು ಬೆಂಬಲಿಸುವ ಜತೆಗೆ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳುಕೂಗುವುದರಮೂಲಕಆಕ್ರೋಶವೂ ವ್ಯಕ್ತಪಡಿಸಿದರು. ದೇಹಕ್ಕೆ ನೋವಾಗಿದ್ದರೂ ಸಹ ಸ್ವಾಭಿಮಾನಿ ಹೋರಾಟಕ್ಕೆ ಧಕ್ಕೆ ಬರಬಾರದು ಎಂಬ ಛಲದೊಂದಿಗೆ, ನೋವನೆಲ್ಲ ನುಂಗಿ ಛಲದಂಕ ಮಲ್ಲನಂತೆ ಬಿ.ಡಿ.ಹಿರೇಮಠ ಅವರು ಹೋರಾಟದಲ್ಲಿ ಪಾಲ್ಗೊಂಡು, ಹೋರಾಟಗಾರರಲ್ಲಿ ಹೊಸ ಚೈತನ್ಯವೂ ತುಂಬಿದರು.

ಸಂಘಟನೆ ಕಾರ್ಯದರ್ಶಿ ಮಲ್ಲಿಕಾರ್ಜುನ ಮುತ್ತಾಳ ಮಾತನಾಡಿ, ಹು-ಧಾ ಜಂಟಿ ಪಾಲಿಕೆಯಿಂದ ಧಾರವಾಡಕ್ಕೆ ಸೂಕ್ತ ಅನುದಾನದ ಜೊತೆಗೆ ಆಡಳಿತಾತ್ಮಕವಾಗಿ ಆದ್ಯತೆ ಸಿಕ್ಕಿಲ್ಲ, ಹೀಗಾಗಿ ಪ್ರತ್ಯೇಕ ಪಾಲಿಕೆ ರಚನೆ ಇದಕ್ಕೆಲ್ಲ ಪರಿಹಾರ ಎಂದು ಹೇಳಿದರು. ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ರಾಜ್ಯ ಸರ್ಕಾರದ ನೂತನ ಸಿಎಂ ಪ್ರಮಾಣ ವಚನ ಹಾಗೂ ಸಂಪುಟ ರಚನೆಯಲ್ಲಿ ತೊಡಗಿದೆ. ಹೀಗಾಗಿ ಪ್ರತ್ಯೇಕ ಪಾಲಿಕೆ ವಿಳಂಬವಾಗುತ್ತಿದೆ. ಇದು ಒಳ್ಳೆಯ ನಡೆಯಲ್ಲ ಎಂದು ಆಕ್ರೋಶವನ್ನು ವ್ಯಕ್ತಪಡಿಸಿದರು. ಜನಪ್ರತಿನಿಧಿಗಳು ರಾಜಕೀಯ ಬದಿಟ್ಟು, ಜನಹಿತದತ್ತ ಗಮನ ಹರಿಸಬೇಕಾಗಿದೆ. ರಾಜ್ಯಪಾಲರು ಅಂಕಿತ ಹಾಕಿದ ಕಡತಕ್ಕೆ ರಾಜ್ಯ ಸರ್ಕಾರ ತಕ್ಷಣ ಅಧಿಸೂಚನೆ ಹೊರಡಿಸಬೇಕು. ಇಲ್ಲವಾದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ನೇತೃತ್ವ ವಹಿಸಿದ್ದ ಮುಂಚೂಣಿಯ ಹೋರಾಟಗಾರ ಬಿ.ಡಿ.ಹಿರೇಮಠ ಅವರಿಗೆ ಹೋರಾಟದ ವೇಳೆ ಹೊಟ್ಟೆ ಹಾಗೂ ಕಾಲಿಗೆ ಪೆಟ್ಟಾದರೂ ಅವರು ತಮ್ಮ ಹಠ ಬಿಟ್ಟಿಲ್ಲ. ನೋವು ನುಂಗಿ ಛಲದಂಕ ಮಲ್ಲನಂತೆ ಹಿರೇಮಠ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಂಡಿಲ್ಲ. ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ವಿಠ್ಠಲ ಕಮ್ಮಾರ, ವಸಂತ ಅರ್ಕಚಾರ, ಎಚ್.ಸಿ.ನೀರಾವರಿ, ರಾಜಶೇಖರ ಕಮತಿ, ಶಿವಾಜಿ ರಾಣೋಜಿ, ಗುರುರಾಜ ಹುಣಸಿಮರದ, ಶಿವಶಂಕರ ಹಂಪಣ್ಣವರ, ಮೋಹನ ರಾಮದುರ್ಗ ಇದ್ದರು.

ಧರಣಿಗೆ ವೈದ್ಯರ ಸಂಘ ಬೆಂಬಲ

ಧಾರವಾಡ: ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಸತ್ಯಪ್ರತಿಪಾದನೆ ಸತ್ಯಾಗ್ರಹದ 18ನೇ ದಿನ ವೈದ್ಯರ ಸಂಘ ಬೆಂಬಲಿಸಿದೆ.

ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ನಿರ್ಣಾಯಕ ಹಂತ ತಲುಪಿದೆ. ರಾಜ್ಯಪಾಲರು ಅಂಕಿತ ಹಾಕಿದ ಕಡತಕ್ಕೆ ರಾಜ್ಯ ಸರ್ಕಾರ ತಕ್ಷಣವೇ ಅಧಿಸೂಚನೆ ಹೊರಡಿಸಬೇಕೆಂದು ಆಗ್ರಹಿಸಿ ಘೋಷಣೆ ಕೂಗಿದರು. ಧಾರವಾಡ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹೀಗಾಗಿ ಧಾರವಾಡ ಅಭಿವೃದ್ಧಿ, ರಸ್ತೆಗಳು, ನೈರ್ಮಲ್ಯ, ಆರೋಗ್ಯ ರಕ್ಷಣೆ ದೃಷ್ಟಿಯಿಂದ ಪ್ರತ್ಯೇಕ ಪಾಲಿಕೆ ರಚನೆ ಬೇಡಿಕೆ ಸೂಕ್ತವಾಗಿದೆ ಎಂದು ಸಂಘ ಅಭಿಪ್ರಾಯಪಟ್ಟಿದೆ.

ಈ ವೇಳೆ ವೈದ್ಯರ ಸಂಘದ ಅಧ್ಯಕ್ಷ ಡಾ.ಜಗದೀಶ ನಿರಾಡಿ, ಕಾರ್ಯದರ್ಶಿ ಡಾ. ರಾಜೀವ ಗೋಥೆ, ಬಿ.ಡಿ.ಹಿರೇಮಠ, ಡಾ.ಸುಧೀರ ಜಂಬಗಿ, ಡಾ.ಜ್ಯೋತಿ ಪ್ರಕಾಶ, ಡಾ.ನವೀನ ಮಂಕಣಿ, ಡಾ.ಉದಯ ಸಾಂಬ್ರಾಣಿ ಅನೇಕರು ಇದ್ದರು.



ಮಕ್ಕಳ ಸಮಗ್ರ ಅಭಿವೃದ್ಧಿಗೆ ಶಿಕ್ಷಕರು ಕೈಜೋಡಿಸಲಿ



ನವಲಗುಂದ: ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರಾವೀಣ್ಯತೆ ಬರುವಲ್ಲಿ ದ್ವಿಭಾಷಾ ಮಾಧ್ಯಮ ಹೆಚ್ಚು ಪರಿಣಾಮಕಾರಿಯಾಗಲಿದೆ. ಪಾಲಕರು ಕೂಡ ಶಿಕ್ಷಕರೊಂದಿಗೆ ಸಹಕಾರದಿಂದ ವರ್ತಿಸಿ ಮಕ್ಕಳ ಸಮಗ್ರ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಅರ್ಜುನ ಕಂಬೋಗಿ ಹೇಳಿದರು.

ಅವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ವ್ಯಾಪ್ತಿಯ ಶಲವಡಿಯ ಕರ್ನಾಟಕ ಪಬ್ಲಿಕ್ ಮಾದರಿ ಕೇಂದ್ರ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ, ಪಠ್ಯಪುಸ್ತಕ ವಿತರಣೆ, ಪಾಲಕ ಪೋಷಕ ಮಹಾಸಭೆ ಹಾಗೂ ಮೊಬೈಲ್ ಬಿಡಿ ಪುಸ್ತಕ ಹಿಡಿ ಆಂದೋಲನವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಎಸ್.ಡಿ. ಎಂ.ಸಿ ಕಾರ್ಯಾಧ್ಯಕ್ಷ ಉಮೇಶ ಶಿರೋಳ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ರೇಣುಕಾ ಮುರನಾಳ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕಿ ರಾಧಾ ಕುಲಕರ್ಣಿ, ಎಸ್‌ಡಿಎಂಸಿ ಸದಸ್ಯರಾದ ಶ್ರೀಶೈಲ ತೋಟರ, ಶರಣಬಸಯ್ಯ ಮೂಲಿಮನಿ, ಶಿವರೆಡ್ಡಿ ಮರಡ್ಡಿ, ಶ್ರೀದೇವಿ ಗುಳೇದ ಇತರರಿದ್ದರು. ಸಿ.ಆರ್.ಪಿ ಬಸವರಾಜ ಯಲಿಗಾರ ಸ್ವಾಗತಿಸಿದರು. ಪ್ರಧಾನ ಗುರು ಡಾ. ಸಿದ್ದಲಿಂಗೇಶ ಹಂಡಿಗಿ ಪ್ರಾಸ್ತಾವಿಸಿದರು, ಐ. ಸಿ. ಗೌಡರ ವಂದಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಎನ್.ಎಚ್.ಕೋನರೆಡ್ಡಿ ಅವರು ಹೊಸ ದಿಲ್ಲಿಯಿಂದ ಮೊಬೈಲ್ ಮೂಲಕ ವಿದ್ಯಾರ್ಥಿಗಳಿಗೆ ಸಂದೇಶ ನೀಡಿ, ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಪಡೆದುಕೊಳ್ಳಲು ಶಿಕ್ಷಕರು ಶ್ರಮಿಸಬೇಕು ಎಂದರು.




ನವಲಗುಂದ: ಶೈಕ್ಷಣಿಕ ವರ್ಷದ ದಾಖಲಾತಿ ಅಂಗವಾಗಿ ಪಟ್ಟಣದ ಪಿ.ಎಂ.ಶ್ರೀ ಸರ್ಕಾರಿ ಉರ್ದು ಆಂಗ್ಲ ಮಾಧ್ಯಮ ಶಾಲೆ ನಂ-2 ಶಾಲೆಯವರು ಉಚಿತ ದಾಖಲಾತಿ ರ್‍ಯಾಲಿ ಹಮ್ಮಿಕೊಂಡಿದ್ದರು. ಎಸ್.ಡಿ.ಎಂ.ಸಿ ಅಧ್ಯಕ್ಷ ಶರೀಪಸಾಬ ಕಲಬುರ್ಗಿ, ಸಹ ಶಿಕ್ಷಕರಾದ ಎಫ್. ಎನ್ ಬೋಲಾಬಾಯಿ, ಎಂ. ಎಂ ಹಲವಾಯಿ, ಎಸ್. ಡಿ ಬಾಳಿಕುಂದ್ರಿ, ಎಚ್. ಎ ಬಾದಾಮಿ, ಟಿ.ಎಂ ಮುಲ್ಲಾ ಇದ್ದರು.

ಜೆಇಇ ಅಡ್ವಾನ್ಸಡ್‌ನಲ್ಲಿ ವಿದ್ಯಾನಿಕೇತನ ಸಾಧನೆ

ಹುಬ್ಬಳ್ಳಿ: ಚೌಗಲಾ ಶಿಕ್ಷಣ ಸಂಸ್ಥೆಯ ವಿದ್ಯಾನಿಕೇತನ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸಡ್ ಪರೀಕ್ಷೆಯಲಿ ಅಪ್ರತಿಮ ಸಾಧನೆ ಮಾಡಿದ್ದಾರೆ. 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಐಐಟಿ (ಭಾರತೀಯ ತಂತ್ರಜ್ಞಾನ ಸಂಸ್ಥೆ) ಪ್ರವೇಶಕ್ಕೆ ಅರ್ಹತೆ ಗಳಿಸಿದ್ದಾರೆ.

ಮುತ್ತುರಾಜ ಶಿರಹಟ್ಟಿ (685), ಪ್ರೀತಮ್ ಬಿ ವಡ್ಡರ (872), ಜೆ ಪ್ರಸನ್ನಕುಮಾರ (3003), ನಿತೀನ್ ನೀಲಕಂಠ ಭಂಡಾರಕವಟೆ (3782), ಅಭಿಷೇಕ ಶರಣಪ್ಪ ಟಕ್ಕಳಕಿ (3927), ಅಂಕಿತ ಬಸವರಾಜ ಕೊಡಾಲವಲ (4846), ಜಯಂತಎಸ್ (7727), ಪ್ರಜ್ವಲ್ ಅಂಬಿಗೇರ (8467), ಅನೂಪ ಕಟಾವಕರ (9361), ಸಾಯಿ ನಾಗೇಶಾ (10638), ಚೇತನ ವ್ಹಿ ಶೆಟ್ಟಿ (11355), ಅಭಿಷೇಕ ಮಹಾತೇಶ ಚೆನ್ನಗೊಂಡ (13596), ಸ್ಥವನ ಇನಾಮದಾರ (14192), ನಂದೀಶ ಶಂಕರ ದ್ಯಾಮನ್ನವರ (15829), ಹೃದಯ ಅಮೀತ ಮಹಾಜನ (16627), ಸ್ವರೂಪ ಮಲ್ಲನಗೌಡ ಪಾಟೀಲ (16702), ಅಮೋಘ ಬಿ ಮೊಟಗಿ (17523), ಪಾರ್ಥ ಪಾಟೀಲ (27159), ಗೌತಮ ನವಲಗುಂದ (29188), ಅಮೃತಾ ಉಮಚಗಿ (29859) ಇವರುಗಳು ಅತ್ಯುತ್ತಮ ರ್‍ಯಾಂಕ್‌ಗಳನ್ನು ಪಡೆದಿದ್ದಾರೆ.

ಈ ವಿದ್ಯಾರ್ಥಿಗಳ ಮಹತ್ಸಾಧನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿ ಹಾಗೂ ಪ್ರಾಧ್ಯಾಪಕ - ಪ್ರಾಧ್ಯಾಪಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.



ನಾಲ್ಕು ಪುಸ್ತಕಗಳ ಲೋಕಾರ್ಪಣೆ ಸಮಾರಂಭ



ಧಾರವಾಡ: ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗದೆ. ಸಾಹಿತ್ಯ ಮತ್ತು ಸಾಮಾಜಿಕ ಸೇವೆಯ ಮೂಲಕ ಡಾ.ರಾಜನ್ ದೇಶಪಾಂಡೆ ಅವರು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಅಪಾರ ಎಂದು ಪದ್ಮಶ್ರೀ ಡಾ.ಗಣೇಶ ದೇವಿ ಹೇಳಿದರು.

ಮಕ್ಕಳ ಅಕಾಡೆಮಿ, ಆರ್.ಕೆ ಫೌಂಡೇಶನ್ ನಗರದ ಆಲೂರು ವೆಂಕಟರಾವ್ ಸಭಾಭವನದಲ್ಲಿ ನಡೆದ ಡಾ.ರಾಜನ್ ದೇಶಪಾಂಡೆ ವಿರಚಿತ ನಾಲ್ಕು ಪುಸ್ತಕಗಳ ಲೋಕಾರ್ಪಣೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಾಹಿತಿ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ, ಪ್ರೊ.ರಾಘವೇಂದ್ರ ಪಾಟೀಲ, ಲೇಖಕಿ ಡಾ.ಜಯಾ ಕುರೇಕರ್, ಸಾಹಿತ್ಯ ಪ್ರಕಾಶನದ ಸುಬ್ರಹ್ಮಣ್ಯ ಎಂ.ಕೆ ಮಾತನಾಡಿದರು. ವಿಶ್ರಾಂತ ಕುಲಪತಿ ಡಾ. ಜೆ.ಎಚ್. ಕುಲಕರ್ಣಿ, ಡಾ. ಎಂ.ಎಸ್. ಸುಭಾಷ್,ನಿವೃತ್ತನ್ಯಾಯಾಧೀಶ ಬಳ್ಳೊಳ್ಳಿ, ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಅಧ್ಯಕ್ಷ ಡಾ.ರವಿಶಂಕರ್, ಡಾ.ಕೃಷ್ಣೇಗೌಡ ಇತರರಿದ್ದರು. ಚಂದನಾ ಶಿಂದೆ ಪ್ರಾರ್ಥಿಸಿದರು. ಕವಿತಾ ದೇಶಪಾಂಡೆ ಸ್ವಾಗತಿಸಿದರು. ಡಾ. ಪಲ್ಲವಿ ದೇಶಪಾಂಡೆ ಮತ್ತು ಡಾ. ಸ್ನೇಹ ಜೋಶಿ ನಿರೂಪಿಸಿದರು. ಮಕ್ಕಳ ಅಕಾಡೆಮಿ ಕಾರ್ಯದರ್ಶಿ ಡಾ. ಎಂ.ವೈ.ಸಾವಂತ ವಂದಿಸಿದರು.

ಭ್ರಷ್ಟಾಚಾರಕ್ಕೆ ನಲುಗಿದ ಭಾರತ: ಎಸ್.ಎಸ್.ಪಾಟೀಲ



ಧಾರವಾಡ: ಜಾತೀಯತೆ ಮತ್ತು ಭ್ರಷ್ಟಾಚಾರ ಸಾಮಾಜಿಕ ಪಿಡುಗು. ಬಸವಣ್ಣವರ ಕಾಲದ ಶರಣರ ಕಾಯಕಗಳೇ ಜಾತಿಗಳಾಗಿ ರೂಪಗೊಂಡಿವೆ. ಅಧಿಕಾರಿ ವರ್ಗ ಮತ್ತು ರಾಜಕಾರಣಿಗಳ ಭ್ರಷ್ಟಾಚಾರದಿಂದ ದೇಶ ನಲುಗಿದೆ ಎಂದು ಮಾಜಿ ಸಚಿವ ಎಸ್.ಎಸ್.ಪಾಟೀಲ ವಿಷಾದಿಸಿದರು.

ಧಾರವಾಡ ಗಣಕರಂಗ, ವಚನ ಸಾಹಿತ್ಯ ಮಂದಾರ ಫೌಂಡೇಶನ್, ಕಲ್ಪತರು ಮಹಿಳಾ ಸಂಘ ಬುದ್ಧ, ಬಸವಣ್ಣ, ಡಾ.ಅಂಬೇಡ್ಕರ್ ಜಯಂತಿಗಳ ಅಂಗವಾಗಿ ಏರ್ಪಡಿಸಿದ ಕವನ ಮತ್ತು ಲೇಖನ ಸ್ಪರ್ಧೆ ವಿಜೇತರಿಗೆ ಬಹುಮಾನ, ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು. ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಜಾತೀಯತೆ ತೀವ್ರ ತೊಂದರೆ ಮಾಡಲಿದೆ ಎಂದರು.

ಕಲ್ಪತರು ಮಹಿಳಾ ಸಂಘದ ಅಧ್ಯಕ್ಷೆ ಆರತಿ ಪಾಟೀಲ ಉದ್ಘಾಟಿಸಿದರು. ಡಾ.ಚಂದ್ರಶೇಖರ ರೊಟ್ಟಿಗವಾಡ, ಡಾ.ಪುಷ್ಪಾವತಿ ಶಲವಡಿಮಠ, ವೈ.ಜಿ.ಭಗವತಿ, ಡಾ.ವಿಜಯಕುಮಾರ ಕಮ್ಮಾರ, ಡಾ.ಪ್ರಭಾಕರ ಕಾಂಬಳೆ, ಸಿದ್ದರಾಮ ಹಿಪ್ಪರಗಿ, ಗಣಪತಿ ಚಲವಾದಿ ಇತರರಿದ್ದರು. ಸುಧಾ ಕಬ್ಬೂರ ನಿರೂಪಿಸಿದರು. ಸವಿತಾ ಕುಸುಗಲ್ಲ ವಂದಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹ



ಧಾರವಾಡ: ಬಹುತೇಕ ಇಲಾಖೆಗಳಲ್ಲಿ ದಿವ್ಯಾಂಗ ನೌಕರರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ನಮ್ಮ ಸರಕಾರಗಳು ಗಮನ ನೀಡುತ್ತಿಲ್ಲ. ಆದಷ್ಟೂ ಬೇಗ ದಿವ್ಯಾಂಗ ನೌಕರರ ಬೇಡಿಕೆಗಳನ್ನು ಅನುಕಂಪದ ನೆಲೆಯಲ್ಲಿ ತಕ್ಷಣ ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ. ಶಿವಾನಂದ ಖಿವಟಕೊಪ್ಪ ಆಗ್ರಹಿಸಿದ್ದಾರೆ.

ಅವರು ನಗರದಲ್ಲಿ ಜರುಗಿದ ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಜಿಲ್ಲಾ ಮತ್ತು ತಾಲೂಕು ಘಟಕಗಳ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಸಂಘದ ಗೌರವಾಧ್ಯಕ್ಷ ಎಚ್.ಪಿ.ಕಡ್ಲಿಮಟ್ಟಿ ಮಾತನಾಡಿ, ರಾಜ್ಯ ಸರ್ಕಾರ ದಿವ್ಯಾಂಗ ನೌಕರರಿಗೆ ನೀಡುತ್ತಿರುವ ಸಂಚಾರಿ ಭತ್ಯೆಯನ್ನು ಶಿಕ್ಷಕ ವೃಂದದವರಿಗೆ ನೀಡುತ್ತಿಲ್ಲ. ಸಂಚಾರಿ ಭತ್ಯೆ ಪಡೆಯುತ್ತಿರುವ ದಿವ್ಯಾಂಗ ನೌಕರರ ನಗರ ಭತ್ಯೆಯನ್ನು ಕಡಿತಗೊಳಿಸಲಾಗುತ್ತಿದೆ. ಆದರೆ ಇತರೆ ನೌಕರರಿಗೆ ಎಲ್ಲಾ ಭತ್ತೆಗಳ ಜೊತೆಗೇ ನಗರಭತ್ತೆಯನ್ನೂ ಸೇರಿಸಿ ವೇತನ ನೀಡಲಾಗುತ್ತಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್. ಆರ್. ತಳವಾರ ಹಾಗೂ ಸಹ ಕಾರ್ಯದರ್ಶಿ ಶಿವಾನಂದ ಸವಸುದ್ದಿ ಮಾತನಾಡಿದರು.ದಿವ್ಯಾಂಗ ನೌಕರರ ಬೇಡಿಕೆಗಳ ಈಡೇರಿಕೆಗೆ ಶ್ರಮಿಸುತ್ತಿರುವ ಸಂಘದ ಜಿಲ್ಲಾಧ್ಯಕ್ಷ ಡಾ. ಶಿವಾನಂದ ಖಿವಟಕೊಪ್ಪ ಅವರನ್ನು ಗೌರವಿಸಲಾಯಿತು. ಸಂಘದ ಜಿಲ್ಲಾ ಕೋಶಾಧ್ಯಕ್ಷ ಸಂತೋಷ ಕರಮಳ್ಳವರ, ಎನ್.ಎಸ್.ಕಾಳಿಕೋಟಿಮಠ, ಅಶೋಕ ಕೋಟಳ್ಳಿ, ಶೀತಲ ಸಮಾಜೆ ಇದ್ದರು.

ಈಶ್ವರ ಖಂಡ್ರೆಗೆ ಡಿಸಿಎಂ ಸ್ಥಾನ ನೀಡಿ



ಹುಬ್ಬಳ್ಳಿ: ಕಾಂಗ್ರೆಸ್ ನಾಯಕ ಹಾಗೂ ಭಾರತೀಯ ವೀರಶೈವ ಲಿಂಗಾಯತ ಮಹಾ ಸಭಾದ ಅಧ್ಯಕ್ಷ ಈಶ್ವರ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಜಗದ್ಗುರು ಶ್ರೀ ಸಿದ್ಧಾರೂಢರ ಹಾಗೂ ಸಮಕಾಲಿನ ಮಹಾತ್ಮರ ಅಂಬಾರಿ ಉತ್ಸವ ಸೇವಾ ಟ್ರಸ್ಟ್ ಕಮಿಟಿ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಈಶ್ವರ ಖಂಡ್ರೆ ಅವರು ಕಾಂಗ್ರೆಸ್‌ನಲ್ಲಿ ಸುಮಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಪಕ್ಷ ನೀಡಿದ ಎಲ್ಲ ಜವಾಬ್ದಾರಿಗಳನ್ನು ಸೂಕ್ತವಾಗಿ ನಿಭಾಯಿಸಿದ್ದಾರೆ. ತಮ್ಮ ಮನೆಗೆ ಹೋದಾಗ ಸಾರ್ವಜನಿಕರಿಗೆ ಉತ್ತಮವಾಗಿ ಸ್ಪಂದಿಸುವುದಲ್ಲದೇ ಬೇಕಾದ ಸಹಾಯ ಹಾಗೂ ಸಹಕಾರ ನೀಡುವಂತ ನಾಯಕರಾಗಿದ್ದಾರೆ. ಆದ್ದರಿಂದ ಕಾಂಗ್ರೆಸ್ ಪಕ್ಷ ಅವರಿಗೆ ಉಪಮುಖ್ಯ ಸ್ಥಾನ ನೀಡುವ ಮೂಲಕ ಅವರ ಇನ್ನೂ ಹೆಚ್ಚಿನ ಜನ ಸೇವೆ ಮಾಡಲು ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಸಿಎಲ್‌ಪಿ ನಾಯಕ ಡಿ.ಕೆ. ಶಿವಕುಮಾರ ಅವರು ಈಶ್ವರ ಖಂಡ್ರೆ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು. ಒಂದು ವೇಳೆ ನೀಡದಿದ್ದರೇ ಬೆಂಗಳೂರಿಗೆ ಹೋಗಿ ಟ್ರಸ್ಟ್ ಕಮಿಟಿ ವತಿಯಿಂದ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು. ಕಮಿಟಿ ಸಂಸ್ಥಾಪಕ ಅಧ್ಯಕ್ಷ ಮನೋಜಕುಮಾರ ಗದಗಿನ, ಬಸವರಾಜ ಕೆ., ಕಲ್ಲನಗೌಡ ಪಾಟೀಲ, ಸಿದ್ದು ವಾಲೇಕರ, ಪ್ರಭಾಕರ ಕಸ್ತೂರಿ ಇದ್ದರು.

ಎನ್.ಎಚ್.ಕೋನರಡ್ಡಿಗೆ ಸಚಿವ ಸ್ಥಾನ ಸಿಗಲಿ

ಅಣ್ಣಿಗೇರಿ: ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎಚ್.ಕೋನರಡ್ಡಿ ಅವರಿಗೆ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಅಣ್ಣಿಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮಾಯಣ್ಣವರ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಧ್ಯಕ್ಷತೆಯಲ್ಲಿ ಪತ್ರಿಕಾಗೋಷ್ಠಿ ಮಾತನಾಡಿ, ರಾಜ್ಯದ 224 ಕ್ಷೇತ್ರಗಳಲ್ಲಿ ಶಾಸಕರಲ್ಲಿ ಹೆಚ್ಚು ನಮ್ಮ ಕ್ಷೇತ್ರಕ್ಕೆ 400 ಕೋಟಿ ರೂ. ಅನುದಾನ ತಂದು ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕಳೆದ 3 ವರ್ಷಗಳಲ್ಲಿ ಮಾಡಿದ್ದಾರೆ. ಜಾತಿ ಮತ ಪಂಥವೆನ್ನದೇ ಸರ್ವ ಜನಾಂಗದ ಜನರ ಜೊತೆ ನಿಕಟ ಸಂಪರ್ಕವಿಟ್ಟುಕೊಂಡು ಸರ್ವ ಜನಾಂಗದ ಬೇಡಿಕೆಗಳನ್ನು ಪೂರೈಸುವಲ್ಲಿ ಜನನಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರತಿ ಗ್ರಾಮದಲ್ಲಿರುವ ಹೊಲಕ್ಕೆ ತೆರಳಲು 1000 ಕಿ.ಮೀ ಚಕ್ಕಡಿ ರಸ್ತೆ ನಿರ್ಮಾಣ ಮಾಡಿದ್ದಾರ. ರೈತರಿಗೆ ಸಕಾಲಕ್ಕೆ ಬೀಜ, ಗೊಬ್ಬರ, ಹತ್ತು ಹಲವಾರು ಸಮಸ್ಯೆಗಳಿಗೆ ಸ್ಪಂದಿಸಿ ರೈತ ಹೋರಾಟದಲ್ಲಿ ಕಳಸಾ ಬಂಡೂರಿ ಮಹದಾಯಿ ಯೋಜನೆ ಅನುಷ್ಠಾನಕ್ಕೆ ಕಳೆದ 20-30 ವರ್ಷಗಳಿಂದ ನೇತೃತ್ವವಹಿಸಿ ಸರ್ಕಾರದ ಗಮನ ಸೆಳೆದು ಕಾರ್ಯ ರೂಪಕ್ಕೆ ತರುವಲ್ಲಿ ಪ್ರಯತ್ನಪಟ್ಟಿದ್ದಾರೆ ಎಂದರು.

ಪುರಸಭೆ ಉಪಾಧ್ಯಕ್ಷ ನಾಗಪ್ಪ ದಳವಾಯಿ, ವೀರನಾರಾಯಣ ಬೆಂತೂರ, ಹಸನಸಾಬ ರೊಕ್ಕದಕಟ್ಟಿ, ಅಮೃತ ಮಿಸಿ, ಇಮಾಮಸಾಬ ದರವಾನಿ ಇತರರಿದ್ದರು.



ಸಂತೋಷ್ ಲಾಡ್‌ಗೆ ಡಿಸಿಎಂ ಸ್ಥಾನ ನೀಡಿ



ಕಲಘಟಗಿ: ಕ್ಷೇತ್ರದ ಶಾಸಕ ಸಂತೋಷ್ ಲಾಡ್ ಅವರು ಕಾರ್ಮಿಕ ಸಚಿವರಾಗಿ ವಿವಿಧ ಕಾರ್ಮಿಕರ ಏಳಿಗೆಗಾಗಿ ಹೊಸ ಕ್ರಾಂತಿಕಾರಿ ಕೆಲಸಗಳನ್ನು ಮಾಡಿದ್ದಾರೆ. ಅವರಿಗೆ ಡಿಸಿಎಂ ಹುದ್ದೆ ನೀಡಬೇಕೆಂದು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ ಆಗ್ರಹಿಸಿದರು.


ಅವರು ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯಾವುದೇ ಜವಾಬ್ದಾರಿ ಕೆಲಸ ಕೊಟ್ಟರೂ ನಿಭಾಯಿಸುವ ಶಕ್ತಿ ಲಾಡ್ ಅವರಿಗಿದೆ. ಸಾವಿರಾರು ಬಡವರ ಕಣ್ಣೀರು ಒರೆಸಿದ್ದಾರೆ, ರೈತರ ಪರವಾಗಿ ಶ್ರಮಿಸಿದ್ದಾರೆ. ಆದ್ದರಿಂದ ಲಾಡ್ ಅವರಿಗೆ ಡಿಸಿಎಂ ಸ್ಥಾನ ನೀಡಬೇಕೆಂದರು.

ಈ ಸಂದರ್ಭದಲ್ಲಿ ಬಾಬಣ್ಣ ಅಂಚಟಗೇರಿ, ಎಸ್.ವಿ. ತಡಸಮಠ, ಸೋಮಣ್ಣ ಬೆನ್ನೂರು, ವಿ.ಪಿ. ಪಟ್ಟಣಶೆಟ್ಟಿ, ಬಾಳು ಖಾನಾಪುರ, ಗುರು ಕಂಪ್ಲಿ, ಸಿದ್ದಣ್ಣ ತಲಬಾಗಿಲ, ರಫೀಕ್ ಸುಂಕದ, ಬಸವರಾಜ ದಾಸನಕೊಪ್ಪ, ಮಂಜುನಾಥ ದನಿಗೊಂಡ, ನಿಂಗಪ್ಪ ಬೆಳ್ಳುವಾಲೆ, ಹನುಮಂತ ಕಾಳೆ, ಶಾಂತಲಿಂಗ ಬೇರುಡಗಿ, ಗುರು ಕಂಪ್ಲಿ, ಪ್ರಭಂಜನ್ ಹುಲಿಕಟ್ಟಿ, ಶಿವಪುತ್ರ ಆಲದಕಟ್ಟಿ, ಪ್ರಭು ರಾಮನಾಳ, ಗಿರೀಶ ಸೂರ್ಯವಂಶಿ, ಸಿ ಜಿ ಹುಬ್ಬಳ್ಳಿಮಠ, ಲಕ್ಷ್ಮಣ ಲಮಾಣಿ, ಅರ್ಜುನ ಅಂಗಡಿ, ಬಸವರಾಜ ಭಾವಕರ, ಹನುಮಂತಪ್ಪ ಹರಿಜನ, ಹನುಮಂತ ಚವರಗುಡ್ಡ, ವಿಜಯ ಮುರಾರಿ, ಶಕುಂತಲಾ ಬೋಳಾರ್, ಮಾಲಾ ತುರಿಹಾಳ ಸೇರಿದಂತೆ ಪದಾಧಿಕಾರಿಗಳು ಇದ್ದರು.

ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ಸಿಗಲಿ

ಹುಬ್ಬಳ್ಳಿ: ಶಾಸಕ ರುದ್ರಪ್ಪ ಲಮಾಣಿ ಅವರಿಗೆ ಪ್ರಸ್ತುತ ಸಚಿವ ಸಂಪುಟದಲ್ಲಿ ಸೇರಿಸಿಕೊಳ್ಳಬೇಕು. ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಬಂಜಾರ ಸಮಾಜದ ಯುವ ಮುಖಂಡ ಡಾ. ಲಾಲು ಲಮಾಣಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಈ ಬಾರಿಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕಾದರೆ ಬಂಜಾರ ಸಮಾಜ ಮತದಾರರು ಬಹುಮುಖ್ಯ ಪಾತ್ರವನ್ನು ವಹಿಸಿದ್ದಾರೆ. ರಾಜ್ಯ ಕಾಂಗ್ರೆಸ್ ರಾಜಕಾರಣದಲ್ಲಿ ಅಪಾರವಾದ ಅನುಭವವನ್ನು ಹೊಂದಿರುವ ರುದ್ರಪ್ಪ ಲಮಾಣಿ ಅವರು ರಾಜಕೀಯ ಕ್ಷೇತ್ರದಲ್ಲಿ ಅಜಾತಶತ್ರುವಾಗಿ ಸೌಮ್ಯ ಹಾಗೂ ದಕ್ಷ ನಾಯಕರಾಗಿ ಸರ್ಕಾರದ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದಾರೆ. ಅಲ್ಲದೇ ಸಂಪೂರ್ಣ ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪರ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಹಾವೇರಿ ಮತಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಪರವಾಗಿ ಗೆದ್ದು ಬಂದಿರುವ ಬಂಜಾರ ಸಮುದಾಯದ ಏಕೈಕ ಶಾಸಕರಾಗಿದ್ದು, ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.



ಹುಬ್ಬಳ್ಳಿ: ಮಾದಿಗ ಸಮಾಜದ ಎಲ್ಲ ಶಾಸಕರು ಸಮಾಜಕ್ಕೆ ಉತ್ತಮ ಕೊಡುಗೆ ಹಾಗೂ ಸೇವೆ ಸಲ್ಲಿಸುತ್ತಿದ್ದು, ಅವರಿಗೆ ಉಪಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನ ನೀಡಬೇಕು ಎಂದು ಕರ್ನಾಟಕ ಮಾದಿಗ ದಂಡೋರ ಹಾಗೂ ಮಾದಿಗ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಟಿಬಿ ಡ್ಯಾಂ ಹೂಳೆತ್ತಲು ನೂರಾರು ಟ್ರ್ಯಾಕ್ಟರ್‌ಗಳೊಂದಿಗೆ ಕಣಕ್ಕಿಳಿದ ರೈತರು

ಸರ್ಕಾರದ ನಿರ್ಲಕ್ಷ್ಯಕ್ಕೆ ಅನ್ನದಾತರ ಸೆಡ್ಡು



ವಿಜಯನಗರ: ತುಂಗಭದ್ರಾ ರೈತ ಸಂಘದ ನೇತೃತ್ವದಲ್ಲಿ ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಹೊಸಪೇಟೆ ಸಮೀಪದ ತುಂಗಭದ್ರ ಅಣೆಕಟ್ಟೆಯ ಹೂಳು ಹೊರಸಾಗಿಸುವ ಮೂಲಕ ಸರ್ಕಾರಕ್ಕೆ ಸೆಡ್ಡು ಹೊಡೆದಿದ್ದಾರೆ. ಜೊತೆಗೆ ಪರೋಕ್ಷವಾಗಿ ಸರ್ಕಾರದಿಂದ ಆಗದ ಕೆಲಸವನ್ನು ನಾವು ಮಾಡಬಲ್ಲೆವು ಎಂಬ ಸಂದೇಶ ಸಾರಿದ್ದಾರೆ!

ಹೊಸಪೇಟೆ ಹೊರವಲಯದಲ್ಲಿರುವ ತುಂಗಭದ್ರಾ ಜಲಾಶಯದ ಹೂಳು ತೆಗೆಯಲು ಸ್ವತಃ ರೈತರೇ ನೂರಾರು ಟ್ರ್ಯಾಕ್ಟರ್‌ಗಳೊಂದಿಗೆ ಅಣೆಕಟ್ಟೆಯ ಅಂಗಳಕ್ಕಿಳಿದರು. ಜೆಸಿಬಿಗಳ ನೆರವಿನೊಂದಿಗೆ ಜಲಾಶಯದ ಅಂಗಳದಲ್ಲಿದ್ದ ಹೂಳನ್ನು ಟ್ರ್ಯಾಕ್ಟರ್‌ಗಳಲ್ಲಿ ತುಂಬಿಸಿಕೊಂಡು, ತಮ್ಮ ಹೊಲಗಳಿಗೆ ಸಾಗಿಸಿದರು. ಜಲಾಶಯದಲ್ಲಿನ ಹೂಳೆತ್ತಲೆಂದೇ ಬಳ್ಳಾರಿ ಹಾಗೂ ವಿಜಯನಗ ಜಿಲ್ಲೆಯ ಮೂಲೆ ಮೂಲೆಗಳಿಂದ ಆಗಮಿಸಿದ್ದ ರೈತರು ತಮ್ಮ ಟ್ರ್ಯಾಕ್ಟರ್‌ಗಳೊಂದಿಗೆ ಸಾಲುಗಟ್ಟಿದ್ದರು.

ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಜ.ಬಸವಲಿಂಗಸ್ವಾಮೀಜಿ, ನಂದಿಪುರದ ಮಹೇಶ್ವರ ಸ್ವಾಮೀಜಿ, ತುಂಗಭದ್ರಾ ರೈತ ಸಂಘದ ಅಧ್ಯಕ್ಷ ಪುರುಷೋತ್ತಮ ಗೌಡ, ಕೊಟ್ಟೂರು ಸಂಸ್ಥಾನ ಮಠದ ಶಾಖಾ ಮಠಗಳಾದ ಗರಗದ ಪ್ರಭು ಮಹಾಸ್ವಾಮೀಜಿ, ಸೋಮಸಮುದ್ರದ ಸಿದ್ದಲಿಂಗ ಮಹಾಸ್ವಾಮೀಜಿ, ಶ್ರೀಧರಗಡ್ ಅವರು ಭೂಮಿ ಪೂಜೆ ನೆರವೇರಿಸಿ, ಹೂಳೆತ್ತುವ ಕಾರ್ಯಕ್ಕೆ ಹಸಿರು ನಿಶಾನೆ ತೋರಿಸಿದರು.

ಜೆಸಿಬಿ ಬಕೆಟ್‌ಗಳಿಂದ ಹೂಳೆತ್ತಿ ಟ್ರ್ಯಾಕ್ಟರ್‌ಗೆ ತುಂಬಿಸುತ್ತಿದ್ದಂತೆ ಸಂಭ್ರಮದೊಂದಿಗೆ ಸಿಳ್ಳೆ, ಕೇಕೆ ಹಾಕುತ್ತಾ ಟ್ರ್ಯಾಕ್ಟರ್‌ಗಳನ್ನು ಮುನ್ನಡೆಸಿಕೊಂಡು ಹೋಗುವ ದೃಶ್ಯ ಅಣೆಕಟ್ಟೆಯ ಅಂಗಳದಲ್ಲಿ ಹಬ್ಬದ ವಾತಾವರಣ ಮೂಡಿಸಿತ್ತು.

ಕುಸಿಯುತ್ತಿರುವ ಜಲಾಶಯದ ಶಕ್ತಿ: ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಸೇರಿದಂತೆ ಆಂಧ್ರ ಪ್ರದೇಶದ ಲಕ್ಷಾಂತರ ಹೆಕ್ಟೇರ್ ಪ್ರದೇಶಕ್ಕೆನೀರುಣಿಸುವತುಂಗಭದ್ರಾ ಜಲಾಶಯದ ಒಟ್ಟು ಸಂಗ್ರಹ ಸಾಮರ್ಥ್ಯ 135 ಟಿಎಂಸಿ. ಆದರೆ, ದುರದೃಷ್ಟವಶಾತ್ ವರ್ಷದಿಂದ ವರ್ಷಕ್ಕೆ ನದಿ ಪಾತ್ರದಿಂದ ಹರಿದುಬರುತ್ತಿರುವುದರಿಂದ ಜಲಾಶಯದಲ್ಲಿ ಬರೋಬ್ಬರಿ 35 ಟಿಎಂಸಿ ಹೂಳು ತುಂಬಿಕೊಂಡಿದೆ. ಜಲಾಶಯದ ಕಾಲು ಭಾಗದಷ್ಟು ನೀರು ಸಂಗ್ರಹಣಾ ಸಾಮರ್ಥ್ಯ ಕುಸಿದಿದೆ.

ಮಳೆಗಾಲದಲ್ಲಿಬೇಗನೆ ಜಲಾಶಯ ಭರ್ತಿಯಾಗಿ ಲಕ್ಷಾಂತರ ಕ್ಯೂಸೆಕ್ ನೀರನ್ನು ನದಿಗೆ ಹರಿಸಬೇಕಾದ ಅನಿವಾರ್ಯತೆ ಎದುರಾಗುತ್ತಿದೆ. ಪರಿಣಾಮವಾಗಿ ಬೇಸಿಗೆಯಲ್ಲಿ ರೈತರಿಗೆ ಬೆಳೆ ಬೆಳೆಯಲು ನೀರು ಸಿಗದೆ ಪ್ರತಿವರ್ಷ ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸುತ್ತಿದ್ದಾರೆ.

> **ಇದು ಕೇವಲ ಸಾಂಕೇತಿಕ ಪ್ರತಿಭಟನೆಯಲ್ಲ, ಇದು ನಮ್ಮ ಬದುಕಿನ ಹೋರಾಟ. ನಮ್ಮ ಹೊಲಗಳಿಗೆ ನೀರು ಬೇಕು ಎಂದರೆ ನಾವು ಜಲಾಶಯವನ್ನು ಉಳಿಸಿಕೊಳ್ಳಬೇಕು. ಸರ್ಕಾರಕ್ಕೆ ಕಣ್ಣಿದ್ದೂ ಕುರುಡಾಗಿದೆ. ಈಗಲಾದರೂ ಈ ಮೂಕ ಸರ್ಕಾರ ಎಚ್ಚೆತ್ತುಕೊಳ್ಳಲಿ.**
>
> ■ **ಪುರುಷೋತ್ತಮ ಗೌಡ,**
> **ತುಂಗಭದ್ರಾ, ರೈತ ಸಂಘದ ಅಧ್ಯಕ್ಷ**

ನಮ್ಮಿಂದ ಸಾಧ್ಯವಾಗುವುದು ಸರ್ಕಾರಕ್ಕೇಕೆ ಸಾಧ್ಯವಿಲ್ಲ? ಹೂಳು ತೆಗೆಯುವಂತೆ ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳಿಗೆ ರೈತರು ಕಳೆದ ಹಲವು ದಶಕಗಳಿಂದ ಮನವಿ, ಪ್ರತಿಭಟನೆಗಳನ್ನು ನಡೆಸುತ್ತಲೇ ಬಂದಿದ್ದಾರೆ. ಆದರೆ, ಸರ್ಕಾರಗಳು ಕೇವಲ ಉಪ ಜಲಾಶಯ ನಿರ್ಮಾಣದ ಭರವಸೆ ನೀಡುತ್ತಾ ಕಾಲಹರಣ ಮಾಡುತ್ತಿವೆಯೇ ವಿನಃ ಜಲಾಶಯದ ಹೂಳೆತ್ತಲು ಯಾವುದೇ ಕಾಂಕ್ರೀಟ್ ಯೋಜನೆ ರೂಪಿಸಿಲ್ಲ. ಇದರಿಂದ ಆಕ್ರೋಶಗೊಂಡ ರೈತರು, ಕೋಟ್ಯಂತರ ರೂಪಾಯಿ ಬಜೆಟ್ ಮಂಡಿಸುವ ಬೃಹತ್ ಯಂತ್ರೋಪಕರಣಗಳನ್ನು ಹೊಂದಿರುವ ಸರ್ಕಾರಕ್ಕೆ ಸಾಧ್ಯವಾಗದ ಕೆಲಸವನ್ನು, ನಮ್ಮ ಶ್ರಮ ಮತ್ತು ಟ್ರ್ಯಾಕ್ಟರ್‌ಗಳ ಮೂಲಕ ನಾವು ಮಾಡಿ ತೋರಿಸುತ್ತೇವೆ ಎಂದು ಸೆಡ್ಡು ಹೊಡೆದಿದ್ದಾರೆ.

ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠದ ಜ.ಬಸವಲಿಂಗಸ್ವಾಮೀಜಿ, ನಂದಿಪುರದ ಮಹೇಶ್ವರ ಸ್ವಾಮೀಜಿ ಸೇರಿದಂತೆ ಮಾತನಾಡಿದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹ । ನೂರಾರು ರೈತರು ಭಾಗಿ

ಎತ್ತಿನ ಬಂಡಿ, ಟ್ರ್ಯಾಕ್ಟರ್‌ಗಳ ಮೂಲಕ ಪ್ರತಿಭಟನೆ



ಹುಬ್ಬಳ್ಳಿ: ಸಮರ್ಪಕ ವಿದ್ಯುತ್ ಪೂರೈಕೆ ಹಾಗೂ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ನೂರಾರು ರೈತರು ನಗರದ ಹೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಇಲ್ಲಿಯ ಮಂಟೂರ ರಸ್ತೆ ವೃತ್ತದಿಂದ ಹೆಸ್ಕಾಂ ಕಚೇರಿ ವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಇಪ್ಪತ್ತಕ್ಕೂ ಹೆಚ್ಚು ಎತ್ತಿನ ಬಂಡಿ, ಟ್ರ್ಯಾಕ್ಟರ್‌ಗಳ ಮೂಲಕ ಪ್ರತಿಭಟನಾ ಮೆರವಣಿಗೆ ಮೂಲಕ ಹೆಸ್ಕಾಂ ಕಚೇರಿಗೆ ಆಗಮಿಸಿದ್ದ ಆಕ್ರೋಶಭರಿತ ರೈತರು ಹೆಸ್ಕಾಂ ಆವರಣಕ್ಕೆ ಮುತ್ತಿಗೆ ಹಾಕಿದರು.

ಹುಬ್ಬಳ್ಳಿ ತಾಲೂಕಿನ ಹಳೆ ಹುಬ್ಬಳ್ಳಿ, ಮಾವನೂರ, ಕಟ್ನೂರ, ಗಿರಿಯಾಲ, ಗುಡಿಸಾಗರ, ಇನಾಂವೀರಾಪುರ, ಜಂಗ್ಲಿಪೇಟ, ಬೆಳಗಲಿ, ಚವರಗುಡ್ಡ, ರಾಮಾಪುರ, ಕಂಪ್ಲಿಕೊಪ್ಪ, ಕರಡಿಕೊಪ್ಪ, ಚನ್ನಾಪುರ, ಬಮ್ಮಸಮುದ್ರ, ಬುಡರಸಿಂಗಿ ವಿವಿಧ ಭಾಗದ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಧಿಕಾರಿಗಳಿಂದ ಸರಿಯಾಗಿ ಸ್ಪಂದನೆ ಸಿಗದಿದ್ದರಿಂದ ಆಕ್ರೋಶಗೊಂಡ ರೈತರ ಕಚೇರಿ ಆವರಣದಲ್ಲಿ ಸಂಜೆವರೆಗೂ ಧರಣಿ ಕುಳಿತು ಆಕ್ರೋಶ ವ್ಯಕ್ತಪಡಿಸಿದರು. ಹೆಸ್ಕಾಂ ಎಂಡಿ ಮತ್ತು ನಂತರ ಉನ್ನತ ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಬರುವರೆಗೂ ಕದಲುವುದಿಲ್ಲ ಪಟ್ಟು ಹಿಡಿದು ಕುಳಿತರು.

ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ಹಾಗೂ ಸಮಯಕ್ಕೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಸರಿಯಾಗಿ ವಿದ್ಯುತ್ ಸರಬರಾಜು ಮಾಡಲು ಖಚಿತ ಭರವಸೆ ನೀಡಬೇಕು. ಇಲ್ಲವಾದರೆ ಪ್ರತಿಭಟನೆ ಮುಂದುವರಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಿರಂತರವಾಗಿ ಕನಿಷ್ಠ 7 ಗಂಟೆಗಳ ಕಾಲವೂ ತ್ರೀಫೇಸ್ ವಿದ್ಯುತ್ ದೊರೆಯದೇ ಬೆಳೆಗಳು ನೀರಿಲ್ಲದೆ ಕಣ್ಣೆದುರೆ ಒಣಗಿ ಹೋಗುತ್ತಿರುವುದನ್ನು ಕಂಡು ಮರಗುವಂತಾಗಿದೆ. ನಿತ್ಯ ಅಘೋಷಿತ ವಿದ್ಯುತ್ ಕಡಿತವಾಗುತ್ತಿದೆ. ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ ಎಂದು ದೂರಿದರು.

ಬಿಜೆಪಿ ಮುಖಂಡ ಈರಣ್ಣ ಜಡಿ ಮಾತನಾಡಿ, ವಿದ್ಯುತ್ ಟಿಸಿ ಅಳವಡಿಸುವುದು ಹಾಗೂ ಕಡಿತದ ಬಗ್ಗೆ ಹೆಸ್ಕಾ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಲಾಗಿದ್ದು, ಸ್ಪಂದಿಸುತ್ತಿಲ್ಲ. ರೈತರಿಂದ ಟಿಸಿ ಅಳವಡಿಕೆಗೆ ಹೆಚ್ಚು ಹಣ ವಸೂಲಿ ಮಾಡುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ತಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

2022ರಿಂದಲೂ ಹೋರಾಟ ಮಾಡುತ್ತಿದ್ದೇವೆ. ರೈತರು ಎಂದರೆ ಕುರಿ ಎಂದುಕೊಂಡಿದ್ದಾರೆ. ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ ಅವರಿಗೂ ವಿಷಯ ತಿಳಿಸಿದ್ದೇವೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ ಎಂದು ಆಪಾದಿಸಿದರು.

ಪ್ರತಿಭಟನೆಯಲ್ಲಿ ಶಿವಾನಂದ ಹೊಸೂರ, ಮುದರಡ್ಡಿ ರಡ್ಡೇರ, ಅಶೋಕ ಹೊಸೂರ, ಸಹದೇವಪ್ಪ ಸುಡಕೇನವರ,ರುದ್ರಯ್ಯ ಕರ್ಯಾನಮಠ, ಚಿನ್ನಪ್ಪ ಕಾಡಪ್ಪನವರ, ಜಾನಕಪ್ಪ ಬಂಕಾಪುರ, ವೀರಭದ್ರಪ್ಪ ರಾಯನಾಳ, ಉಳವಪ್ಪ ಯಂಟ್ರಾವಿ, ಮಂಜುನಾಥ ಕಟಗಿ, ರಮೇಶ ಕೊಪ್ಪದ, ಹನುಮಂತ ಉಗ್ನಿಕೇರಿ, ನಾಗರಾಜ ಕಮಡೊಳ್ಳಿ ಇದ್ದರು.

ರೈತರ ಪ್ರಮುಖ ಬೇಡಿಕೆಗಳು

ಪಂಪ್‌ಸೆಟ್‌ಗಳಿಗೆ ನಿತ್ಯ ಕನಿಷ್ಠ 14 ಗಂಟೆ ನಿರಂತರ ಹಾಗೂ ಗುಣಮಟ್ಟದ ತ್ರೀಫೇಸ್ ವಿದ್ಯುತ್ ಪೂರೈಸಬೇಕು. ರಾತ್ರಿ ಹೊತ್ತು ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಬೇಕು. ಮುನ್ಸೂಚನೆ ನೀಡದೇ ಅಘೋಷಿತ ವಿದ್ಯುತ್ ಕಡಿತ ನಿಲ್ಲಿಸಬೇಕು. ಸುಟ್ಟು ಹೋದ ಮತ್ತು ಸುಟ್ಟು ಹೋಗುವ ಟ್ರಾನ್ಸಫಾರ್ಮರ್‌ಗಳನ್ನು (ಟಿ.ಸಿ) ತ್ವರಿತವಾಗಿ ಬದಲಾಯಿಸಬೇಕು. ಹೊಲದಲ್ಲಿ ಎಲ್.ಟಿ ಲೈನ್‌ಗಳನ್ನು ದುರಸ್ತಿಗೊಳಿಸಿ ಲೇವೆಲ್ ಮಾಡಬೇಕು. ಟಿ.ಸಿಯಲ್ಲಿ ಹಳೇ ವಾಯರ್ ಮತ್ತು ಹಳೇ ಫ್ಯುಸ್ ತೆಗೆದು ಹೊಸದಾಗಿ ಹಾಕಬೇಕು. ಹೊಲದಲ್ಲಿ ಬಾಗಿದ ಮತ್ತು ಡ್ಯಾಮೇಜ್ ವಿದ್ಯುತ್ ಕಂಬಗಳನ್ನು ತೆಗೆದು ಹೊಸದಾಗಿ ಅಳವಡಿಸಬೇಕು.

ಕಿರುಸುದ್ದಿ

ನಾಲ್ವರಿಗೆ ಚಿನ್ನದ ಪದಕ





ಹುಬ್ಬಳ್ಳಿ: ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಶಿಯೇಶನ್ ಆಫ್ ಧಾರವಾಡ ಜಿಲ್ಲಾ ವತಿಯಿಂದ ಗೋವಾ ಬಾಂಬೋಲಿಯಂ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ 3ನೇ ರಾಷ್ಟ್ರ ಮಟ್ಟದ ಮಹಿಳೆಯರ ಮಾಸ್ಟರ್ಸ್ ಅಥ್ಲೇಟಿಕ್ಸ್ ಅಸೋಸಿಯೇಶನ್ ಚಾಂಪಿಯನ್ಸ್ ಕ್ರೀಡಾ ಕೂಟದಲ್ಲಿ ಧಾರವಾಡ ಜಿಲ್ಲೆ ನಾಲ್ವರು ಪದಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಖೈರುನ್ನಿಸಾ ಖಾಜಿ 60 ವರ್ಷ ಮೇಲ್ಪಟ್ಟ ಜಾವೆವಿನ್ ಥ್ರೋ ನಲ್ಲಿ ಚಿನ್ನ, 1500 ಮೀಟರ್ ಓಟದಲ್ಲಿ ಬೆಳ್ಳಿ ಹಾಗೂ 800 ಮೀಟರ್‌ನಲ್ಲಿ ಕಂಚು ಪದಕ ಪಡೆದಿದ್ದಾರೆ. ರೇಣುಕಾ ಅಲ್ಲಾಪುರ 35 ವರ್ಷ ಮೇಲ್ಪಟ್ಟವರ 400 ಮೀಟರ್ ರೀಲೆಯಲ್ಲಿ ಚಿನ್ನ, ಶಶಿಕಲಾ ನಾಯ್ಡು 55 ವರ್ಷ ವಯೋಮಿತಿಯಲ್ಲಿ ಜಾವಲಿನ್ ಥ್ರೋ ನಲ್ಲಿ ಬೆಳ್ಳಿ ಹಾಗೂ ಅಲಿತಾ ಬೆಳವಿ 40 ವರ್ಷ ವಯೋಮಿತಿ ಶಾಟಪೂಟ್ ಹಾಗೂ ಹ್ಯಾಮರ್ ನಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಜಿಲ್ಲೆಯಿಂದ ಒಟ್ಟು 14 ಜನ ಮಹಿಳೆಯರು ಭಾಗವಹಿಸಿದ್ದರು. ಅಧ್ಯಕ್ಷ ವಿ.ಆರ್. ಕಿರೇಸೂರ, ಉಪಾಧ್ಯಕ್ಷ ಡಿ.ಬಿ. ಕೋಟಕರ, ಖಜಾಂಚಿ ಎ.ಎಫ್. ರೇಶ್ಮಿ, ಕಾರ್ಯದರ್ಶಿ ಐ.ಎಸ್. ಪೂಜಾರಿ ವಿಜೇತರಿಗೆ ಅಭಿನಂದನೆ ತಿಳಿಸಿದ್ದಾರೆ.

ಡೆತ್‌ನೋಟ್ ಬರೆದಿಟ್ಟು ವ್ಯಕ್ತಿ ಆತ್ಮಹತ್ಯೆ



ಬೆಳಗಾವಿ: ಜಿಲ್ಲೆಯ ಗೋಕಾಕ ತಾಲೂಕಿನ ಬೆಂಡಿಗೇರಿ ಗ್ರಾಮದಲ್ಲಿ ವ್ಯಕ್ತಿಯೋರ್ವ ಡಿವೈಎಸ್ಪಿ, ಪಿಎಸ್‌ಐ ಹಾಗೂ ಇತರರ ವ್ಯಕ್ತಿಗಳ ಹೆಸರು ಪತ್ರದಲ್ಲಿ ಬರೆದಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆಯೊಂದು ನಡೆದಿದೆ. ಮೃತರನ್ನು ರವೀಂದ್ರ ದಾನವ್ವಗೋಳ ಎಂದು ತಿಳಿದುಬಂದಿದೆ. ಆತ್ಮಹತ್ಯೆಗೂ ಮುನ್ನ ಬರೆದಿಟ್ಟಿರುವ ಪತ್ರದಲ್ಲಿ ತಾನು ಜೀವ ಬೆದರಿಕೆಗೆ ಒಳಗಾಗಿರುವುದರಿಂದ ಈ ಕಠಿಣ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಲಾಗಿದೆ.

ಪತ್ರದಲ್ಲಿ ಲಕ್ಷ್ಮಣ್ ಚಂದರಗಿ ಹಾಗೂ ಭರಮಪ್ಪ ಪೂಜಾರಿ ಎಂಬುವರಿಂದ ಎಂಟು ಲಕ್ಷ ರೂ. ಸಾಲ ಪಡೆದಿದ್ದಾಗಿ ಉಲ್ಲೇಖಿಸಿದ್ದು, ಸಾಲದ ಹಣ ವಾಪಸ್ ಕೇಳಿದಾಗ ತನ್ನ ಮೇಲೆ ಜೀವ ಬೆದರಿಕೆ ಹಾಕಲಾಗುತ್ತಿತ್ತು ಎಂದು ಆರೋಪಿಸಿದ್ದಾರೆ. ಅಲ್ಲದೆ, ಈ ಕುರಿತು ಪೊಲೀಸರಿಗೆ ದೂರು ನೀಡಿದ ನಂತರವೂ ತನಗೆ ನ್ಯಾಯ ಸಿಗಲಿಲ್ಲ ಎಂದು ಪತ್ರದಲ್ಲಿ ಬರೆದಿದ್ದಾನೆ.ಇದಲ್ಲದೆ, ಪಿಎಸ್‌ಐ ಆನಂದ ಹಾಗೂ ಹಿಂದಿನ ಡಿವೈಎಸ್ಪಿ ಮುಲ್ಲಾ ಅವರಿಂದಲೂ ತನಗೆ ಅನ್ಯಾಯವಾಗಿದೆ ಎಂದು ಪತ್ರದಲ್ಲಿ ಆರೋಪಿಸಿರುವುದಾಗಿ ತಿಳಿದುಬಂದಿದೆ.

ರವೀಂದ್ರ ಅವರು ತಮ್ಮ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಘಟನೆ ತಿಳಿಯುತ್ತಿದ್ದಂತೆಯೇ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು. ಮೂಡಲಗಿ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೃತರ ಪತ್ನಿ ನೀಡಿದ ದೂರಿನ ಆಧಾರದ ಮೇಲೆ ಮೂಡಲಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಮಂದುವರಿಸಿದ್ದಾರೆ.

ಗೋವುಗಳ ರುಂಡ ಎಸೆತ ಪ್ರಕರಣ

ಪೊಲೀಸ್ ಇಲಾಖೆ ಕಾಂಗ್ರೆಸ್ ಕೈಗೊಂಬೆ: ಆರೋಪ



ಬಳ್ಳಾರಿ: ನಗರದಲ್ಲಿ ಗೋವುಗಳ ಎರಡು ರುಂಡಗಳನ್ನು ಬಿಸಾಡಿದ ಅಮಾನವೀಯ ಘಟನೆ ಖಂಡಿಸಿ, ಸಾರ್ವಜನಿಕರು, ಬಿಜೆಪಿ ಕಾರ್ಯಕರ್ತರು, ಹಿಂದೂಪರ ಸಂಘಟನೆಯವರು ಪ್ರತಿಭಟನೆ ನಡೆಸಿದ್ದು, ಜಿಲ್ಲಾ ಪೊಲೀಸ್ ಇಲಾಖೆ 11 ಜನರ ವಿರುದ್ಧ ಪ್ರಕರಣ ದಾಖಲಿಸಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವುದು ತಪ್ಪಾ, ಗೋಮಾತೆಯನ್ನು ಕತ್ತರಿಸಿ, ರುಂಡಗಳನ್ನು ಬಿಸಾಡಿದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಿ ಎಂದು ಒತ್ತಾಯಿಸಿದರೆ ನಮ್ಮ ಮೇಲೆ ಕೇಸ್ ಹಾಕ್ತಾರೆ. ಜಿಲ್ಲಾ ಪೊಲೀಸ್ ಇಲಾಖೆ ಸಂಪೂರ್ಣ ಕಾಂಗ್ರೆಸ್ ಕೈಗೊಂಬೆಯಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 3-4 ದಿನಗಳಲ್ಲಿ 500ಕ್ಕೂ ಹೆಚ್ಚು ಹಸುಗಳ ಮಾರಣಹೋಮ ನಡೆದಿದೆ. ಬಳ್ಳಾರಿಯಲ್ಲಿ 152ಕ್ಕೂ ಹೆಚ್ಚು ಹಸುಗಳನ್ನು ಕೂಡಿ ಹಾಕಿ ಹತ್ಯೆ ಮಾಡಲು ಸಜ್ಜಾಗಿರುವ ಫೋಟೋಗಳನ್ನು ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ವಾಟ್ಸ್‌ಆ್ಯಪ್ ಮೂಲಕ ಕಳಿಸಿದರೆ, ಯಾವುದೇ ಕ್ರಮಕ್ಕೆ ಮುಂದಾಗಲಿಲ್ಲ.

ಕಸಾಯಿ ಖಾನೆಯಲ್ಲಿ ಹಸುಗಳನ್ನು ಹಾಕಲಾಗಿದೆ ಎಂದು ಕೌಲ್ ಬಜಾರ ಠಾಣೆ ಅಧಿಕಾರಿಗಳಿಗೆ ಹಿಂದೂಪರ ಕಾರ್ಯಕರ್ತರು ಮಾಹಿತಿ ನೀಡಿದರೆ, ಬ್ರೂಸ್ ಪೇಟೆ ಠಾಣೆ ಪೊಲೀಸರು ನಮ್ಮ ಮೇಲೆ ಕೇಸ್ ಹಾಕ್ತಾರೆ ಅಂದ್ರೆ ಏನರ್ಥ. ನಗರ ಸೇರಿದಂತೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದರು.

ಗೋವುಗಳನ್ನು ಯಾರು, ಎಲ್ಲಿ ಕಡಿದಿದ್ದು ಎನ್ನುವ ಸಂಪೂರ್ಣ ಮಾಹಿತಿ ಪೊಲೀಸರಿಗೆ ಗೊತ್ತಿದ್ದರೂ ಕ್ರಮಕ್ಕೆ ಮುಂದಾಗಲಿಲ್ಲ, ನಾವು ಮಾಹಿತಿ ನೀಡಿದ್ರೆ, ರಾತ್ರಿ ಹಿಡಿಟಿವಿ, ಬೆಳಗ್ಗೆ ಹಿಡಿತಿವಿ ಅಂದ್ರೂ, ಪೊಲೀಸರು ಅವರನ್ನು ಹಿಡಿಯಲಿಲ್ಲ, ಪ್ರಶ್ನೆ ಮಾಡುವರನ್ನು, ಮಾಹಿತಿ ನೀಡಿದವರ ಮೇಲೆ ಕೇಸ್ ಹಾಕಿದ್ದಾರೆ. ಕೂಡಲೇ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಅಧಿಕಾರಿಗಳು ಗೋವುಗಳ, ಪ್ರಾಣಿ ಹತ್ಯೆಗೆ ಕಡಿವಾಣ ಹಾಕಬೇಕು, ಗೋವುಗಳ ರುಂಡ ಬಿಸಾಡಿದ ದುಷ್ಕರ್ಮಿಗಳನ್ನು ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದರು.

ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಬಿಜೆಪಿ ನಗರ ಅಧ್ಯಕ್ಷ ಜಿ.ವೆಂಕಟರಮಣ, ಜಿಲ್ಲಾ ವಕ್ತಾರರು ಡಾ.ಬಿ.ಕೆ.ಸುಂದರ್, ಪಾಲಿಕೆ ಸದಸ್ಯರಾದ ಕೆ.ಎಸ್. ಅಶೋಕ್ ಕುಮಾರ್, ಕೆ.ಹನುಮಂತು, ಗುಡಿಗಂಟೆ ಹನುಮಂತಪ್ಪ, ಸುರೇಖಾ ಮಲ್ಲನಗೌಡ, ಚೇತನಾ ವೇಮಣ್ಣ, ಮಾರುತಿ ಪ್ರಸಾದ್, ಸುಗುಣ, ಅಡವಿಸ್ವಾಮಿ, ಸೇರಿದಂತೆ ಇತರರಿದ್ದರು.

11 ಜನರ ವಿರುದ್ಧ ಪ್ರಕರಣ ದಾಖಲು

ಬಳ್ಳಾರಿಯಲ್ಲಿ ಗೋವುಗಳ ರುಂಡಗಳನ್ನೂ ಬಿಸಾಡಿದ ಕ್ರಮ ಖಂಡಿಸಿ ಇಲ್ಲಿನ ಬಿಜೆಪಿ, ಹಿಂದೂಪರ ಸಂಘಟನೆ ಪದಾಧಿಕಾರಿಗಳು, ನಾಗರಿಕರು ನಡೆಸಿದ ಪ್ರತಿಭಟನೆ ಹಿನ್ನೆಲೆ ನಗರದಲ್ಲಿ ಶಾಂತಿ ಬಂಗವಾಗಿದೆ ಎಂದು ಇಲ್ಲಿನ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್, ಪಾಲಿಕೆ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ನಗರ ಬಿಜೆಪಿ ಅಧ್ಯಕ್ಷ ಜಿ.ವೆಂಕಟರಮಣ, ಹಿಂದೂಪರ ಸಂಘಟನೆ ಕಾರ್ಯಕರ್ತ ಅರ್ಜುನ್ ಸಿಂಗ್, ದಾಸರಿ ಗೋವಿಂದ, ಮಂಜು, ಕೇಶವ, ಸುಗುಣ, ಭಾಗ್ಯಲಕ್ಷ್ಮೀ, ಸೋಮೂ ಸೇರಿದಂತೆ 11 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಹಂಪಿ ಐತಿಹಾಸಿಕ ಕಂಬಗಳ ಮಂಟಪದ ಆಧುನಿಕ ಗೋಡೆಗಳ ತೆರವು



ವಿಜಯನಗರ: ವಿಶ್ವವಿಖ್ಯಾತ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಪೂರ್ವದಲ್ಲಿರುವ ಮುಖ್ಯಧ್ವಾರ ರಾಜಗೋಪುರದ ಒಳಭಾಗದ ಕಂಬ ಮಂಟಪದಲ್ಲಿದ್ದ ಆಧುನಿಕ ಕಚೇರಿಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅಧಿಕಾರಿಗಳು ಮಂಗಳವಾರ ತೆರವುಗೊಳಿಸಿದ್ದಾರೆ.

ರಾಜಗೋಪುರದ ಪ್ರವೇಶ ಧ್ವಾರದಲ್ಲಿ ಎಡಭಾಗಕ್ಕೆ ಹೊಂದಿಕೊಂಡಿರುವ ಕಂಬಗಳ ಮಂಟಪವನ್ನು ಕಲ್ಲು, ಇಟ್ಟಿಗೆ ಹಾಗೂ ಸಿಮೆಂಟ್ ಬಳಕೆ ಮಾಡಿ ಕೊಠಡಿ ನಿರ್ಮಿಸಲಾಗಿತ್ತು. ಅದರಲ್ಲಿ ಮುಜರಾಯಿ ಇಲಾಖೆಯ ಅಧಿಕಾರಿಯ ಕೊಠಡಿ ಬಳಕೆ ಮಾಡಲಾಗುತ್ತಿತ್ತು. ಈ ಬಗ್ಗೆ ಗಮನ ಹರಿಸಿದ ಎಎಸ್‌ಐ ಅಧಿಕಾರಿಗಳು ಆಧುನಿಕ ಶೈಲಿಯ ಗೋಡೆಗಳು, ಕಿಟಕಿಗಳನ್ನು ತೆರವುಗೊಳಿಸುವ ಮೂಲಕ ಮೂಲ ವಿನ್ಯಾಸವನ್ನು ರಕ್ಷಿಸಲಾಗಿದೆ.

ಆಧುನಿಕ ಗೋಡೆಗಳನ್ನು ತೆರವುಗೊಳಿಸಿ, ಪುರಾತನ ಕಾಲದ ಮೇಲ್ಚಾವಣಿ ಸಹಿತ ಕಂಬಗಳ ಮಂಟಪವನ್ನು ಸಂರಕ್ಷಿಸಲಾಗಿದೆ. ದೇವಸ್ಥಾನದ ಒಳಭಾಗದಲ್ಲಿನ ಕಂಬಗಳ ಮಂಟಪವನ್ನು ಶತಮಾನಗಳ ಹಿಂದೆ ವಿಜಯನಗರ ಕಾಲದಲ್ಲಿ ನಿರ್ಮಿಸಲಾಗಿತ್ತು. ಅಧಿಕಾರಿಗಳ ಈ ಕ್ರಮಕ್ಕೆ ಪ್ರವಾಸಿಗರು, ಸಾರ್ವಜನಿಕರಿಂದ ಮೆಚ್ಚುಗೆಯ ಮಾತುಗಳು ವ್ಯಕ್ತವಾಗುತ್ತಿವೆ.

ಸ್ಯಾಟಲೈಟ್ ಡಿವೈಸ್ ಅಳವಡಿಸಿ ಸಮುದ್ರಕ್ಕೆ ಬಿಟ್ಟಿದ್ದ ಆಮೆ ಸಂಚಾರ



ಕಾರವಾರ: ಕಡಲಿನಲ್ಲಿ ಆಮೆ ಸಂಚಾರದ ಅಧ್ಯಯನಕ್ಕಾಗಿ ಮ್ಯಾಂಗ್ರೊವ್ ಫೌಂಡೇಶನ್ ತಂತ್ರಜ್ಞರು ಸ್ಯಾಟಲೈಟ್ ಡಿವೈಸ್ ಅಳವಡಿಸಿ ಸಮುದ್ರಕ್ಕೆ ಬಿಟ್ಟಿದ್ದ ಆಮೆ ಯೊಂದು ಕಾರವಾರದ ಸುತ್ತಲೂ ಕಡಲತೀರದಲ್ಲಿ ಸಂಚರಿಸುತ್ತಿದೆ.

ಆಮೆ ಓಡಾಟದ ಸಂಚಾರ ಮಾರ್ಗ ಹಾಗೂ ಅದಕ್ಕೆ ತಗಲುವ ದಿನಗಳು ಇತ್ಯಾದಿ ಮಾಹಿತಿಗಾಗಿ ಮ್ಯಾಂಗ್ರೋವ್ ಫೌಂಡೇಶನ್ ಆಫ್ ಮಹಾರಾಷ್ಟ್ರ ಸಂಸ್ಥೆಯವರು ಅಧ್ಯಯನವನ್ನು ನಡೆಸುತ್ತಿದ್ದು, ಅದಕ್ಕಾಗಿ ಈ ಆಮೆಯನ್ನು ಬಳಸಿಕೊಂಡು ನಿರಂತರವಾಗಿ ಅದರ ಓಡಾಟದ ವರದಿಯನ್ನು ಸಂಗ್ರಹಿಸುತ್ತಿದೆ. 2025ರನವೆಂಬರ್‌ನಲ್ಲಿ ಮಹಾರಾಷ್ಟ್ರದ ದಹಾನು ಕರಾವಳಿಯಲ್ಲಿ ಆಮೆಯೊಂದು ಮೀನುಗಾರರ ಬಲೆಗೆ ಬಿದ್ದಿತ್ತು. ಆಲಿವ್ ರೆಡ್ಲಿ ಪ್ರಭೇದಕ್ಕೆಸೇರಿದ ಹೆಣ್ಣು ಆಮೆಯನ್ನು ಮಹಾರಾಷ್ಟ್ರದ ಮ್ಯಾಂಗ್ರೋವ್ ಫೌಂಡೇಶನ್ ದವರು ಅದನ್ನು ರಕ್ಷಿಸಿ ಅದಕ್ಕೆ 'ಧವಳ ಲಕ್ಷ್ಮೀ' ಎಂದು ಹೆಸರಿಟ್ಟಿದ್ದರು. ಆ ಆಮೆಗೆ ವೈಲ್ಡ್‌ಲೈಫ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದ ವಿಜ್ಞಾನಿ ಸುರೇಶ ಹಾಗೂ ಮಹಾರಾಷ್ಟ್ರ ಮ್ಯಾಂಗ್ರೋವ್ ಫೌಂಡೇಶನ್ ತಂತ್ರಜ್ಞರು ಸ್ಯಾಟಲೈಟ್ ಡಿವೈಸ್ ಅಳವಡಿಸಿ ಸಂಚಾರ ಅಧ್ಯಯನಕ್ಕಾಗಿ ಅರಬ್ಬಿ ಸಮುದ್ರಕ್ಕೆ ಬಿಟ್ಟಿದ್ದರು. ಮಹಾರಾಷ್ಟ್ರದ ಕಡಲ ತೀರದಿಂದ ಹೊರಟ ಆಮೆಯೊಂದು 3500ಕಿಮೀ ಕ್ರಮಿಸಿ ಕಾರವಾರ ತಲುಪಿದೆ. ಕಳೆದ 12 ದಿನಗಳಿಂದ ಈ ಆಮೆ ಕಾರವಾರ ಕಡಲತೀರದ ಹೊರ ವಲಯದಲ್ಲಿ ಓಡಾಡುತ್ತಿದೆ.

ತಾಂತ್ರಿಕ ಡಿವೈಸ್ ಹೊಂದಿದ ಆಮೆ 'ಧವಳ ಲಕ್ಷ್ಮೀ' ಮಹಾರಾಷ್ಟ್ರ ಕರಾವಳಿಯಿಂದ ಪಶ್ಚಿಮಕ್ಕೆ ಆಳ ಸಮುದ್ರ ದಾಟಿ ಓಮನ್ ಸಮೀಪದ ಮಸೀರಾ ದ್ವೀಪದವರೆಗೂ ತಲುಪಿತ್ತು. ನಂತರ ವಾಪಸ್ ಬಂದಿದ್ದು, ಈಗ ಕಾರವಾರ ಕಾಂಟಿನೆಂಟ್ ಶೆಲ್ ಬ್ರೇಕರ್ ಪ್ರದೇಶದಲ್ಲಿ ಓಡಾಡುತ್ತಿದೆ. ಇದೇ ಆಮೆ ಕೇರಳ, ಮುರುಡೇಶ್ವರ ಸೇರಿ ವಿವಿಧ ಪ್ರದೇಶಗಳಿಗೂ ಓಡಾಟ ನಡೆಸಿದೆ.

'ಆಮೆಗಳು ಆಹಾರವನ್ನು ಹುಡುಕಿ ಕಡಲಿನಲ್ಲಿ ಓಡಾಟ ನಡೆಸುತ್ತವೆ. ಕೆಲ ಆಮೆಗಳು ಒಂದೇ ವರ್ಷದಲ್ಲಿ ಸಾವಿರಾರು ಕಿಮೀ ಸಂಚರಿಸಿದ ಉದಾಹರಣೆಗಳಿವೆ. ಎಲ್ಲಿಯೇ ಹೋದರೂ ಆ ಆಮೆಗಳು ಮತ್ತೆ ತಾವು ಹೊರಟ ಮೂಲ ಸ್ಥಾನಕ್ಕೆ ಬಂದು ತಲುಪುತ್ತದೆ.

ಮ್ಯಾಂಗ್ರೋವ ಫೌಂಡೇಶನದವರು ಈ ಆಮೆಯ ಪ್ರತಿನಿತ್ಯದ ಸಂಚಾರದ ಬಗ್ಗೆ ನಿಗಾ ಇರಿಸಿ ಅದರ ವರದಿಯನ್ನು ಸಿದ್ಧಪಡಿಸಲಿದ್ದಾರೆ. ಕಡಲಿನಲ್ಲಿ ಆಮೆಗಳ ಸಂಚಾರ ಮತ್ತು ದಿನಚರಿಯ ಬಗ್ಗೆ ಎಂಬುದು ಇಲ್ಲಿಯ ಮರಿನ ಬಯಾಲಜಿ ಅಧ್ಯಯನ ಕೇಂದ್ರದ ವಿಜ್ಞಾನಿ ಡಾ.ಶಿವಕುಮಾರ ಹರಗಿ ಅಭಿಪ್ರಾಯಿಸುತ್ತಾರೆ.

ಗೋ ಹತ್ಯೆ ನಿಷೇಧಕ್ಕೆ ವಿಶ್ವ ಹಿಂದೂ ಪರಿಷತ್ ಆಗ್ರಹ



ಚನ್ನಮ್ಮನಕಿತ್ತೂರು: ಭಾರತದೇಶದ 140 ಕೋಟಿ ಜನಸಂಖ್ಯೆಯ ಒಳಿತಿಗೆ ಗೋ ಹತ್ಯೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಹಾಗೂ ಗೋ ರಕ್ಷಕರಿಗೆ ರಕ್ಷಣೆ ಸಿಗಬೇಕೆಂದು ವಿಶ್ವ ಹಿಂದೂ ಪರಿಷತ್ ಕ್ಷೇತ್ರ ಸಾಮಾಜಿಕ ಸಾಮರಸ್ಯ ಪ್ರಮುಖ ಕೃಷ್ಣಾಜಿ ಭಟ್ ಹೇಳಿದರು.

ಕೋಟೆ ಮುಂಭಾಗದಲ್ಲಿ ವಿಶ್ವ ಹಿಂದೂ ಪರಿಷತ್ ಬಜರಂಗದಳದ ಸಹಯೋಗದಲ್ಲಿ ನಡೆದ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ಗೋ ಸಾಗಾಟ, ಗೋ ಹತ್ಯೆ ಖಂಡಿಸಿ ಬೃಹತ್ ಪ್ರತಿಭಟನೆ ಹಾಗೂ ಸ್ವಯಂ ಪ್ರೇರಿತ ಕಿತ್ತೂರ ಬಂದ್ ಸಂದರ್ಭದಲ್ಲಿ ಮಾತನಾಡಿದ ಅವರು, ಗೋರಕ್ಷಣೆ ಮಾಡುವಲ್ಲಿ ಬಜರಂಗದಳದ ಕಾರ್ಯಕರ್ತರ ಮೇಲೆ ಕಾನೂನು ಕ್ರಮ ಅಥವಾ ಕೇಸ್ ದಾಖಲಿಸಿದರೆ ಎಲ್ಲ ಹಿಂದೂಗಳು ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಲಿದ್ದಾರೆ. ಹಿಂದೂ ಸಮಾಜದ ಏಳಿಗೆಯಲ್ಲಿ ಗೋವಿನ ಪಾತ್ರ ದೊಡ್ಡದಿದೆ. ಗೋಸಂಪತ್ತನ್ನು ಬಳಸಿಕೊಂಡು ಕೃಷಿ ಮತ್ತು ದೇಶದ ಆರ್ಥಿಕತೆಯನ್ನು ಸುಧಾರಿಸಲು ಗಮನ ಹರಿಸಬೇಕೆಂದು ಪ್ರಧಾನಿಗಳಲ್ಲಿ ವಿನಂತಿಸಿಕೊಂಡರು.

ವಿಶ್ವಹಿಂದೂ ಪರಿಷತ್ ಪ್ರಾಂತ ಕಾರ್ಯದರ್ಶಿ ಪುಂಡಲಿಕ ದಳವಾಯಿ ಮಾತನಾಡಿ, ಪೋಲಿಸರು ನಮ್ಮ ಪ್ರತಿಭಟನೆಯನ್ನು ಹತ್ತಿಕ್ಕಲು ನಮ್ಮ ಕಾರ್ಯಕರ್ತರ ಮನೆ ಮನೆಗೆ ನೋಟಿಸ್ ನೀಡಿದರು. ನಾವು ರ‍್ಯಾಲಿಯನ್ನು ನಿಲ್ಲಿಸಿದ್ದು ನಿಮ್ಮ ನೋಟಿಸಿಗೆ ಅಲ್ಲ ನಮ್ಮ ಹಿರಿಯರ ವಿನಂತಿ ಮೇರೆಗೆ ಎಂದರು.

ಹಿಂದೂ ಕಾರ್ಯಕರ್ತ ಪುನೀತ ಕೇರಿಹಳ್ಳಿ ಮಾತನಾಡಿ, ನಾವೆಲ್ಲ ಗೋ ರಕ್ಷಕರು ಗೋವಿಲ್ಲದಿದ್ದರೆ ಮನುಕುಲದ ಅಸ್ತಿತ್ವವೇ ಇಲ್ಲ ಅದನ್ನು ಎಲ್ಲರೂ ಅರಿತುಕೊಳ್ಳಬೇಕು. ಹಿಂದೂ ಸಮಾಜವು ಸೌಹಾರ್ದತೆಗಾಗಿ ಚರ್ಚ್, ದರ್ಗಾ ಮತ್ತು ಮಸೀದಿಗಳನ್ನು ಒಪ್ಪಿಕೊಂಡಿದೆ. ಆದರೆ, ಗೋಹತ್ಯೆ ನಿಲ್ಲಿಸುವ ವಿಷಯದಲ್ಲಿ ಇತರರು ಏಕೆ ಮೌನವಾಗಿದ್ದಾರೆ? ಗೋಹತ್ಯೆ ನಿಲ್ಲದ ಹೊರತು ನಿಜಹಿವಾದ ಶಾಂತಿ ಸೌಹಾರ್ದತೆ ಸಾಧ್ಯವಿಲ್ಲ. ಕಾನೂನು ರಕ್ಷಣೆ ಮಾಡಬೇಕಾದ ಇಲಾಖೆಗಳು ಗೋರಕ್ಷಣೆ ಮಾಡುವ ಕಾರ್ಯಕರ್ತರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡುವುದನ್ನು ನಿಲ್ಲಿಸಬೇಕೆಂದರು. ಕಲ್ಮಠದ ಮಡಿವಾಳರಾಜಯೋಗಿಂದ್ರ ಸ್ವಾಮೀಜಿ, ಭಜರಂಗದಳದ ಬಸವರಾಜ ಸೂಗೂರ, ಜಿಲ್ಲಾಧ್ಯಕ್ಷ ಪ್ರಮೋದಕುಮಾರ ಒಕ್ಕುಂದಮಠ ಮಾತನಾಡಿದರು.

ಪಂಚಾಕ್ಷರಿ ಸ್ವಾಮೀಜಿ, ವೀರೇಶ್ವರ ಸ್ವಾಮೀಜಿ, ಮಲ್ಲಸರ್ಜ ರೆಡ್ಡಿ, ಮಡಿವಾಳಪ್ಪ ಮುರಗೋಡ ಸೇರಿದಂತೆ ವಿಶ್ವ ಹಿಂದೂ ಪರಿಷತ್ ಬಜರಂಗದಳದ ಕಾರ್ಯಕರ್ತರು ಉಪಸ್ಥಿತರಿದ್ದರು. ಸಿಪಿಐ ಶಿವಾನಂದ ಗುಡಗನಟ್ಟಿ ನೇತೃತ್ವದಲ್ಲಿ ಪೋಲಿಸರು ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

ಕೇಸ್ ವಾಪಸ್ ಭರವಸೆ

ಪ್ರತಿಭಟನೆಗೆ ಸೇರಿದ ಸ್ವಾಮೀಜಿಗಳು, ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ, ವಿಶ್ವ ಹಿಂದೂ ಪರಿಷತ್ ಭಜರಂಗದಳದ ಪ್ರಮುಖರೆಲ್ಲರೂ ಸೇರಿ ನಮ್ಮ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಿರುವುದನ್ನು ಹಿಂಪಡೆಯಬೇಕು ಇಲ್ಲದಿದ್ದರೆ ನಾವು ಇಲ್ಲಿಯೇ ಪ್ರತಿಭಟನೆ ಮಾಡುತ್ತೇವೆಂದು ಡಿವೈಎಸ್‌ಪಿ ಡಾ.ವೀರಯ್ಯ ಹಿರೇಮಠ ಇವರನ್ನು ಆಗ್ರಹ ಪಡಿಸಿದರು. ನಂತರ ತಹಶೀಲ್ದಾರ್ ಕಲಗೌಡ ಪಾಟೀಲ ಇವರು ಮುಂಜಾಗೃತೆ ಕೈಗೊಳ್ಳುವ ಉದ್ದೇಶದಿಂದ ಹಾಕಿರುವ ಪ್ರಕರಣ ಹಿಂಪಡೆಯುತ್ತೇವೆಂದು ಹೇಳಿದ ನಂತರ ಪ್ರತಿಭಟನೆಯನ್ನು ಕೈಬಿಟ್ಟರು.

ಬಂದೋಬಸ್ತ್ ಒದಗಿಸಲು ಡಿಸಿಗೆ ಮನವಿ



ಧಾರವಾಡ: ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಜೂ.9ರಂದು ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಶಾಂತಿಯುತ, ಅಹಿಂಸಾತ್ಮಕ, ಪ್ರಜಾಪ್ರಭುತ್ವದಡಿ ಸತ್ಯಪ್ರತಿಪಾದನಾ ಸತ್ಯಾಗ್ರಹ ಹಮ್ಮಿಕೊಂಡಿದ್ದು, ಪೊಲೀಸ್ ಬಂದೋಬಸ್ತ್ ನೀಡುವಂತೆ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಅಕ್ಸಾ ಸಂಘಟನೆ ರಾಜ್ಯಾಧ್ಯಕ್ಷ ಕಾಂತಕುಮಾರ್ ಸೇರಿದಂತೆ ಅನೇಕರಿದ್ದರು.

ಬಿಜೆಪಿ ರಾಷ್ಟ್ರೀಯ ಸಂಘಟಕರಾಗಿ ನಾಗೇಂದ್ರ ನಾಥ್ ತ್ರಿಪಾಠಿ ನೇಮಕ

• **ಹೊಸದಿಲ್ಲಿ:** ಬಿಜೆಪಿಯ ಹಿರಿಯ ನಾಯಕರಾದ ನಾಗೇಂದ್ರ ನಾಥ್ ತ್ರಿಪಾಠಿ ಅವರನ್ನು ಬಿಜೆಪಿಯ ರಾಷ್ಟ್ರೀಯ ಸಂಘಟಕರನ್ನಾಗಿ (ವರಿಷ್ಠ ಕಾರ್ಯಕರ್ತ ಸಂಪರ್ಕ) ನೇಮಿಸಲಾಗಿದೆ. ಪಕ್ಷದ ಹಿರಿಯ ಕಾರ್ಯಕರ್ತರನ್ನು ಮತ್ತೊಮ್ಮೆ ಪಕ್ಷದ ಮುಖ್ಯವಾಹಿನಿಯಲ್ಲಿ ಜೋಡಿಸುವ ನಿಟ್ಟಿನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಈ ನೇಮಕ ಮಾಡಿದ್ದಾರೆ.


ಬಿಹಾರ, ಜಾರ್ಖಂಡ್ ಒಳಗೊಂಡತೆ ಬಿಜೆಪಿಯ ವಲಯ ಪ್ರಧಾನ ಕಾರ್ಯದರ್ಶಿಯಾಗಿ 2021ರಿಂದ ಸೇವೆ ಸಲ್ಲಿಸುತ್ತಿರುವ ನಾಗೇಂದ್ರ ತ್ರಿಪಾಠಿಯವರನ್ನು, ನಿತಿನ್ ನವೀನ್ ಅವರೀಗ ಬಿಜೆಪಿಯ ರಾಷ್ಟ್ರೀಯ ಸಂಘಟಕರನ್ನಾಗಿ (ವರಿಷ್ಠ ಕಾರ್ಯಕರ್ತ ಸಂಪರ್ಕ) ನೇಮಿಸಿರುವುದಾಗಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ. ರಾಜಧಾನಿ ದಿಲ್ಲಿ ಅವರ ಕೇಂದ್ರವಾಗಿರಲಿದೆ.

ರಾಜಕೀಯ ವಲಯದಲ್ಲಿ ''ನಾಗೇಂದ್ರಜೀ''ಎಂದೇ ಗೌರವಾನ್ವಿತರಾಗಿರುವ ತ್ರಿಪಾಠಿಯವರು ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಬಿಜೆಪಿ ನಡುವಣ ಸಂಪರ್ಕ ಸೇತುವಾಗಿದ್ದು, ಬಿಹಾರದಲ್ಲಿ 2011ರಿಂದ 2021ರವರೆಗೆ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ ಬಿಜೆಪಿಯನ್ನು ಬಲಿಷ್ಠವಾಗಿ ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ.

ತ್ರಿಪಾಠಿಯವರು ಬಿಹಾರ, ಜಾರ್ಖಂಡ್, ಉ.ಪ್ರದೇಶಗಳಲ್ಲಿಹಳೆಯ, ಹೊಸಕಾರ್ಯಕರ್ತರೆಲ್ಲರ ನೆಚ್ಚಿನ ನಾಯಕರಲ್ಲೊಬ್ಬರಾಗಿದ್ದಾರೆ. ಬಿಜೆಪಿ ಕಾರ್ಯಕರ್ತ ಪಾಲಿಗೆ ಅವರೊಬ್ಬ ಪ್ರೋತ್ಸಾಹಕರಂತೆ ಕಾರ್ಯನಿರ್ವಹಿಸಿದವರು ಇದೀಗ ರಾಷ್ಟ್ರೀಯ ಮಟ್ಟದಲ್ಲಿ ಅವರ ಸೇವೆ ಸಲ್ಲಲಿದೆ ಎಂದು ಬಿಜೆಪಿ ಹಿರಿಯ ನಾಯಕ ನಿಖಿಲ್ ಆನಂದ್ ತಿಳಿಸಿದ್ದಾರೆ. 2003–2011ರವರೆಗೆ ಅವರು ಉತ್ತರಪ್ರದೇಶದಲ್ಲೂ ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ಅನೇಕ ವರ್ಷಗಳ ಕಾಲ ಎಬಿವಿಪಿ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಇವರು ಮೂಲತಃ ಉತ್ತರಪ್ರದೇಶದ ಸಂತ ಕಬೀರ್ ನಗರದ ಬೆಳೌಳಿ ಗ್ರಾಮದ ರೈತ ಕುಟುಂಬದಿಂದ ಬಂದಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪೂರ್ಣಾವಧಿ ಪ್ರಚಾರಕರಾಗಿ, ಸಮುದಾಯ ಅಭಿವೃದ್ಧಿ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ರಾಮ ಬಾಣ



₹2 ಕೋಟಿ ಹಣಕ್ಕಾಗಿ ಒತ್ತೆ

• **ಆನೇಕಲ್:** ತಾಲೂಕಿನ ಹೀಲಲಿಗೆ ಬಳಿಯ ಗೋಲ್ಡ್ ಕಾಯಿನ್ ಕ್ಲಬ್ ಬಳಿ ಮಾಜಿ ಎಪಿಎಂಸಿ ದಯಾನಂದರೆಡ್ಡಿ ಅವರಿಗೆ ಸೋಮವಾರ ರಾತ್ರಿ 12 ಗಂಟೆ ಸಮಯದಲ್ಲಿ ನಾಲ್ವರು ಗನ್ ತೋರಿಸಿ ದಯಾನಂದರೆಡ್ಡಿ ಅವರನ್ನು ಕಾರಿನಲ್ಲಿ ಕಿಡ್ನಾಪ್ ಮಾಡಿ 2 ಕೋಟಿ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿರುವ ಪ್ರಕರಣ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾಜಿ ಎಪಿಎಂಸಿ ದಯಾನಂದ ರೆಡ್ಡಿ ಅಪಹರಣ

ಕಳೆದ ಸೋಮವಾರ ರಾತ್ರಿ, ಗೋಲ್ಡ್ ಕಾಯಿನ್ ಕ್ಲಬ್‌ನಿಂದ ದಯಾನಂದರೆಡ್ಡಿ ಹೊರಬರುತ್ತಿದ್ದರು. ಈ ವೇಳೆ ಬೈಕ್ ನಲ್ಲಿ ಬಂದ ಅಪಹರಣಕಾರರು ದಯಾನಂದರೆಡ್ಡಿ ಕಾರು ಅಡ್ಡಗಟ್ಟಿದ್ದ ದುಷ್ಕರ್ಮಿಗಳು ನಿಮಗೆ ಗಿಫ್ಟ್ ಬಂದಿದೆ ಎಂದು ಕಾಟನ್ ಬಾಕ್ಸ್ ತೋರಿಸಿದ್ದಾರೆ. ಡೋರ್ ಲಾಕ್ ಓಪನ್ ಮಾಡುತ್ತಿದ್ದಂತೆ ಕಾರಿಗೆ ನುಗ್ಗಿರುವ ಒರ್ವ ಗನ್ ತೋರಿಸಿ ತಾನು ಹೇಳಿದ ಕಡೆ ಕಾರು ಚಲಾಯಿಸಲು ಸೂಚನೆ ನೀಡಿದ್ದಾನೆ. ಬಳಿಕ ಕೆಂಪು ಬಣ್ಣದ ಕಾರಿನಲ್ಲಿ ಮತ್ತಿಬ್ಬರು ಇವರನ್ನು ಹಿಂಬಾಲಿಸಿದ್ದಾರೆ. ಅತ್ತಿಬೆಲೆ ಕೆಐಡಿಬಿ ಬಡಾವಣೆ ಬಳಿ ಕರೆದೊಯ್ದು ಕೊಲೆ ಬೆದರಿಕೆ ಹಾಕಲಾಗಿದೆ. ನಿನ್ನ ಹತ್ಯೆಗೆ 10 ಕೋಟಿ ರೂ. ಸುಪಾರಿ ಕೊಟ್ಟಿದ್ದಾರೆ ಎಂದರು. ಈ ವೇಳೆ ಆ ಹಣವನ್ನು ತಾನೇ ಕೊಡುತ್ತೇನೆ ಕೊಲ್ಲಬೇಡಿ ಎಂದು ದಯಾನಂದರೆಡ್ಡಿ ಅವರು ಮನವಿ ಮಾಡಿದ್ದಾರೆ. ಮೊದಲು 3ಕೋಟಿ ಹಣ ಬೇಡಿಕೆ ಇಟ್ಟಿದ್ದ ಅಪಹರಣಕಾರರ ಗುಂಪು ಅಂತಿಮವಾಗಿ 2 ಕೋಟಿಗೆ ಒಪ್ಪಿಕೊಂಡಿದ್ದಾರೆ. ಈಗ ಹಣ ಇಲ್ಲ ಬೆಳಗ್ಗೆ ಬ್ಯಾಂಕ್ ಟೈಮ್‌ಗೆ ನೀಡುವುದಾಗಿ ದಯಾನಂದರೆಡ್ಡಿ ಕೇಳಿಕೊಂಡಿದ್ದಾರೆ. ಹಣ ಡ್ರಾ ಮಾಡಿದ ಬಳಿಕ ಕರೆ ಮಾಡುವಂತೆ ತಿಳಿಸಿ ಅಪಹರಣಕಾರರು ದಯಾನಂದರೆಡ್ಡಿ ಅವರನ್ನು ಬಿಟ್ಟು ಕಳುಹಿಸಿದ್ದಾರೆ ಎನ್ನಲಾಗಿದೆ. ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಅಪಹರಣಕಾರರ ಬಂಧಕ್ಕಾಗಿ ಶೋಧ ನಡೆಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಕೇಂದ್ರ ಸರಕಾರದ ಒಂದು ದೇಶ ಒಂದು ಚುನಾವಣೆ ಪ್ರಸ್ತಾವನೆಯು ರಾಜಕೀಯ ಪ್ರೇರಿತ – ಡಿಕೆಶಿ

– ರಾಜಕೀಯದವರು ರಾಜಕೀಯ ಮಾಡುವುದು ತಪ್ಪಲ್ಲ, ಸಾಕ್ಷಾತ್ ಶ್ರೀಕೃಷ್ಣನೂ ದುಷ್ಟಸಂಹಾರಕ್ಕಾಗಿ ಸಜ್ಜನರ ಸಂರಕ್ಷಣೆಗಾಗಿ ರಾಜಕೀಯ ಮಾಡಿದ್ದ. ದೇಶಕ್ಕೆ ಅನುಕೂಲವಾಗುವ ರಾಜಕೀಯ ಮಾಡಿದಾಗ ತಪ್ಪು ಅಂತ ಹೇಳುವುದು ಮಹಾ ತಪ್ಪು!

ದಿನ ಭವಿಷ್ಯ

ಮೇಷ ವೃತ್ತಿ ಸಮಸ್ಯೆ ಇತ್ಯರ್ಥ. ನವ ವಿವಾಹಿತರಿಗೆ ಹರ್ಷದ ಸುದ್ದಿ. ಉನ್ನತ ಶಿಕ್ಷಣ ಬಯಸುವ ವಿದ್ಯಾರ್ಥಿಗಳಿಗೆ ಶುಭ ದಿನ.

ವೃಷಭ ನಿಮ್ಮನ್ನು ಉತ್ತೇಜಿಸುವ ವ್ಯಕ್ತಿ ಸಿಗುವರು. ಪರಿಸ್ಥಿತಿಗೆ ಹೊಂದಿಕೊಂಡು ಬಾಳಿ, ಅದನ್ನು ಬದಲಿಸಲು ಹೋಗಬೇಡಿ.

ಮಿಥುನ ವೃತ್ತಿಕ್ಷೇತ್ರದಲ್ಲಿ ಅಧಿಕಾರ ಪೈಪೋಟಿ ನಡೆದೀತು. ಸಹನೆಯಿಂದ ನಿಭಾಯಿಸಿ. ಹಳೆಯ ತಪ್ಪು ನಿಮ್ಮನ್ನು ಕಾಡಲು ಅವಕಾಶ ನೀಡಬೇಡಿ.

ಕಟಕ ಮನಸ್ಸು ಪ್ರಕ್ಷುಬ್ಧ. ಧ್ಯಾನ ನಿಮಗೆ ಸಹಕಾರಿ. ಆರೋಗ್ಯದ ಕಡೆ ಗಮನ ಕೊಡಿ. ವಿದ್ಯಾರ್ಥಿಗಳಿಗೆ ಗ್ರಹಗತಿ ಅನುಕೂಲಕರ. ಉನ್ನತ ಶಿಕ್ಷಣ ಪ್ರಾಪ್ತಿ.

ಸಿಂಹ ಹೆತ್ತವರು ಮಕ್ಕಳ ಕಡೆ ಹೆಚ್ಚು ಗಮನ ಕೊಡಿ. ಋತುಮಾನ ಸಂಬಂಧಿ ಅನಾರೋಗ್ಯ ಸಂಭವ. ನಿಮ್ಮ ವ್ಯವಹಾರ ಸಕಾಲದಲ್ಲಿ ಮುಗಿಸಿ.

ಕನ್ಯಾ ಜಡ ಸ್ವಭಾವ ಬಿಡಿ. ಉತ್ಸಾಹ ತುಂಬಿಕೊಳ್ಳಿ. ಆಪ್ತರ ಸಂಗದಲ್ಲಿ ಖುಷಿ ಪಡುವ ಬೆಳವಣಿಗೆ. ಆರ್ಥಿಕ ಬಿಕ್ಕಟ್ಟು ಇತ್ಯರ್ಥ. ಕೌಟುಂಬಿಕ ಸಾಮರಸ್ಯ.

ತುಲಾ ನಿಮ್ಮ ಜತೆ ಇರುವವರೆಲ್ಲ ನಿಮ್ಮ ಹಿತೈಷಿಗಳಲ್ಲ, ಅರಿಯಿರಿ. ಹಿರಿಯರ ಜತೆ ತುಸು ಕಾಲ ಕಳೆಯಿರಿ. ಆರ್ಥಿಕ ವ್ಯವಹಾರ ಸುಗಮ.

ವೃಶ್ಚಿಕ ಇಂದು ಹೆಚ್ಚು ಉತ್ಸಾಹ, ಕ್ರಿಯಾಶೀಲತೆ. ಅದನ್ನು ಸದುಪಯೋಗ ಮಾಡಿಕೊಳ್ಳಿ. ವೃತ್ತಿಯಲ್ಲಿ ಮೂಡಿದ್ದ ಬಿಕ್ಕಟ್ಟು ಪರಿಹಾರ ಸನ್ನಿಹಿತ.

ಧನು ಕಾರ್ಯಕ್ಷಮತೆ ಎಲ್ಲರ ಮೆಚ್ಚುಗೆ ಪಡೆಯಲಿದೆ. ನಿಮ್ಮಿಂದ ಕೆಲವರು ಹೆಚ್ಚು ಹಣ ಖರ್ಚು ಮಾಡಿಸುವರು. ಆ ಬಗ್ಗೆ ಎಚ್ಚರದಿಂದಿರಿ.

ಮಕರ ಕೆಲ ಸಮಯದಿಂದ ಕಾಡುತ್ತಿದ್ದ ಸಂಧಿ ನೋವು ನಿವಾರಣೆ. ಆರ್ಥಿಕ ಯೋಜನೆಗೆ ಉತ್ತೇಜನ ಸಿಗಲಿದೆ. ಪ್ರಮುಖ ಗುರಿ ಈಡೇರುವ ಸಾಧ್ಯತೆ.

ಕುಂಭ ಕನಸು ಕಂಡರಷ್ಟೆ ಸಾಲದು. ಅದಕ್ಕೆ ತಕ್ಕ ಶ್ರಮವೂ ಬೇಕು. ಕೌಟುಂಬಿಕ ಪರಿಸರ ಉಲ್ಲಾಸದಾಯಕ. ವೃತ್ತಿಯಲ್ಲಿ ಯಶಸ್ಸು.

ಮೀನ ಗ್ರಹಗತಿ ನಿಮಗೆ ಪೂರಕ. ಸಂಬಂಧದಲ್ಲಿ ಸುಧಾರಣೆ. ಮಾನಸಿಕ ಶಾಂತಿ. ಆರ್ಥಿಕ ಸಂಕಷ್ಟ ಪರಿಹಾರ. ಉದ್ದೇಶವೊಂದು ಈಡೇರಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,9,6,3

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೊ ಪೋಸ್ಟ್

ಸೋನಿಯಾ ಕುಟುಂಬಕ್ಕೆ ಶಿವಕುಮಾರ್ ಕೃತಜ್ಞತೆ

• **ಬೆಂಗಳೂರು:** ತಮ್ಮ ರಾಜಕೀಯ ಪಯಣದಲ್ಲಿ ಇಲ್ಲಿಯವರೆಗೆ ತಲುಪಲು ಸಹಾಯ ಮಾಡಿದ ಗಾಂಧಿ ಕುಟುಂಬಕ್ಕೆ ಕರ್ನಾಟಕದ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ವಿಡಿಯೊ ಪೋಸ್ಟ್ ಹಂಚಿಕೊಂಡಿರುವ ಅವರು, ತಮ್ಮ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ನನ್ನ ಸಾಮರ್ಥ್ಯದ ಬಗ್ಗೆ ನನಗೆ ಅರಿವಾಗುವ ಮುನ್ನವೇ, ಅದನ್ನು ಗುರುತಿಸಿದವರು ದಿ.ರಾಜೀವ್ ಗಾಂಧಿ. ಅವರನ್ನು ಆಗಾಗ್ಗೆ ನೆನಪಿಸಿಕೊಳ್ಳುತ್ತೇನೆ. ಅವರ ಪ್ರೋತ್ಸಾಹವು ನನಗೆ ದೊಡ್ಡದಾಗಿ ಯೋಚಿಸಲು ಮತ್ತು ನನ್ನನ್ನು ಸಾರ್ವಜನಿಕ ಸೇವೆಗೆ ಮುಡಿಪಾಗಿಟ್ಟುಕೊಳ್ಳಲು ಆತ್ಮವಿಶ್ವಾಸವನ್ನು ನೀಡಿತ್ತು' ಎಂದು ಹೇಳಿದ್ದಾರೆ.

ಸೋನಿಯಾ ಗಾಂಧಿ ಅವರು ನಾಯಕತ್ವದ ಮತ್ತೊಂದು ಪ್ರಮುಖ ಪಾಠವನ್ನು ನನಗೆ ಕಲಿಸಿದವರು. ನಿಜವಾದ ನಾಯಕ ನಿಮ್ಮ ಯಶಸ್ವಿನ ಸಮಯದಲ್ಲಿ ಮಾತ್ರ ಜೊತೆಗೆ ನಿಲ್ಲುವುದಿಲ್ಲ, ಅವರು ನಿಮ್ಮ ಕಷ್ಟದ ಸಮಯದಲ್ಲಿಯೂ ಜೊತೆಗೆ ನಿಲ್ಲುತ್ತಾರೆ ಎಂದು ಹೇಳಿಕೊಟ್ಟವರು. ನನ್ನ ಜೀವನದ ಅತ್ಯಂತ ಸವಾಲಿನ ಸಮಯದಲ್ಲಿ ಅವರು ನನ್ನ ಮೇಲಿಟ್ಟ ನಂಬಿಕೆಯನ್ನು ನಾನು ಯಾವಾಗಲೂ ಗೌರವಿಸುತ್ತೇನೆ ಎಂದು ಶಿವಕುಮಾರ್ ಹೇಳಿದ್ದಾರೆ.

ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ಅವರಿಗಿರುವ ದೃಢ ನಂಬಿಕೆ, ಭಾರತದ ಕುರಿತಾದ ಅವರ ದೃಷ್ಟಿಕೋನವು ನನ್ನಂತಹ ಅನೇಕ ನಾಯಕರಿಗೆ ನಿರಂತರವಾಗಿ ಪ್ರೇರಣೆ ನೀಡುತ್ತಲೇ ಇವೆ. ನನ್ನ ಸಾರ್ವಜನಿಕ ಜೀವನದುದ್ದಕ್ಕೂ ಅವರು ನೀಡಿದ ಬೆಂಬಲವನ್ನು ಮರೆಯುವುದಿಲ್ಲ ಎಂದು ಡಿಕೆಶಿ ಹೇಳಿದ್ದಾರೆ. ಪ್ರಿಯಾಂಕಾ ಗಾಂಧಿ ಅವರು ಆತ್ಮೀಯ ವ್ಯಕ್ತಿಯಾಗಿದ್ದಾರೆ. ಪ್ರತಿಯೊಬ್ಬ ಕಾರ್ಯಕರ್ತರನ್ನು ಗೌರವ ಮತ್ತು ಘನತೆಯಿಂದ ನಡೆಸಿಕೊಳ್ಳುತ್ತಾರೆ. ರಾಜಕೀಯ ಎಂದರೆ ಅಂತಿಮವಾಗಿ ಜನರೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಅವರ ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು ಎಂಬುದನ್ನು ನಮಗೆ ನೆನಪಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸೇವೆಯ ಮೂಲಕ ಇತರರಿಗೆ ಸ್ಫೂರ್ತಿ



ಒಬ್ಬರ ಸಾಮರ್ಥ್ಯವನ್ನು ಗುರುತಿಸುವುದು, ಕಷ್ಟದ ಸಮಯದಲ್ಲಿ ಜೊತೆಗೆ ನಿಲ್ಲುವುದು, ಸಹಾನುಭೂತಿಯಿಂದ ಆಲಿಸುವುದು ಮತ್ತು ಸೇವೆಯ ಮೂಲಕ ಇತರರಿಗೆ ಸ್ಫೂರ್ತಿ ನೀಡುವುದು ಗಾಂಧಿ ಕುಟುಂಬ ನನಗೆ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರಿಗೆ ಕಲಿಸಿದ ಪಾಠಗಳು ಎಂದಿದ್ದಾರೆ.ನಾನೊಬ್ಬ ತಳಮಟ್ಟದ ಕಾರ್ಯಕರ್ತನಾಗಿ ಇದೀಗ ಕರ್ನಾಟಕವನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತಿರುವ ನಾನು, ಗಾಂಧಿ ಟುಂಬ ನನ್ನ ಮೇಲೆ ಇಟ್ಟಿರುವ ನಂಬಿಕೆಗೆ ಕೃತಜ್ಞನಾಗಿದ್ದೇನೆ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ರಾಜ್ಯದಲ್ಲಿ ಯುವ ಯುಗಾರಂಭ: ಡಿಕೆಶಿ

• **ಹೊಸದಿಲ್ಲಿ:** ಕರ್ನಾಟಕದ ಜನರು ನನ್ನ ಮೇಲೆ ವಿಶ್ವಾಸ ಹೊಂದಿದ್ದಾರೆ. ರೈತರು, ಮಹಿಳೆಯರು ಹಾಗೂ ಯುವ ಪೀಳಿಗೆಯನ್ನು ಸೇರಿ ನಾನು ಸಮಾಜದ ಪ್ರತಿಯೊಂದು ವರ್ಗವನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತೇನೆ. ಕರ್ನಾಟಕದಲ್ಲಿ ಹೊಸ ಯುವ ಯುಗ ಪ್ರಾರಂಭವಾಗಲಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಡಿ.ಕೆ ಶಿವಕುಮಾರ್ ಹೇಳಿದರು.

ದಿಲ್ಲಿಯಲ್ಲಿ ಸುದ್ದಿ ಸಂಸ್ಥೆಯೊಂದಕ್ಕೆ ಮಂಗಳವಾರ ಪ್ರತಿಕ್ರಿಯೆನೀಡಿದಅವರು, ನಾನುಯಾವುದನ್ನೂಕನಸು ಎಂದು ಹೇಳುವುದಿಲ್ಲ, ಕಠಿಣ ಪರಿಶ್ರಮದ ಜೊತೆಗೆ ಸಮರ್ಪಣೆ ಎಂದು ಕರೆಯುತ್ತೇನೆ. ಇದು ಕಠಿಣ ಸಮಯ, ವಿಳಂಬವಾಗಿರಬಹುದು ಆದರೆ ನಿರಾಕರಣೆಗೆ ಒಳಗಾಗಿಲ್ಲ ಎಂದರು.

ಇಲ್ಲಿ ಶಿವಕುಮಾರ್ ಒಬ್ಬನ ವಿಚಾರವಲ್ಲ, ಕಾಂಗ್ರೆಸ್ ಪಕ್ಷದ ಇತಿಹಾಸದೊಂದಿಗೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಂಬಿಕೆಯಿಟ್ಟಿರುವ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರ ಪರಿಶ್ರಮದ ಫಲವಾಗಿದೆ. ಗಾಂಧಿ ಕುಟುಂಬ ನನ್ನ ಮೇಲೆ ನಂಬಿಕೆಯನ್ನಿಟ್ಟಿತ್ತು. ಅವರು ನನಗೆ ವಿವಿಧ ಅವಕಾಶಗಳನ್ನು ನೀಡಿದರು. ರಾಜೀವ್ ಗಾಂಧಿ ಅವರಿಂದ ಹಿಡಿದು ಇಲ್ಲಿಯವರೆಗೆ ಕುಟುಂಬಕ್ಕೆ ತುಂಬಾ ನಿಷ್ಠನಾಗಿದ್ದೇನೆ ಎಂದರು.

ನಂಬಿಕೆಗೆ ಬದ್ಧ: ನನ್ನ ಮೇಲೆ ಇಟ್ಟಿರವ ನಂಬಿಕೆ ಮತ್ತು ವಿಶ್ವಾಸಕ್ಕೆ ನಾನು ತುಂಬಾ ಬದ್ಧನಾಗಿದ್ದೇನೆ ಮತ್ತು ನಾನು ಬಹಳಷ್ಟು ಕಷ್ಟಪಟ್ಟು ಕೆಲಸ ಮಾಡಿ ಎಲ್ಲರ ಆಶೋತ್ತರಗಳನ್ನು ಈಡೇರಿಸುತ್ತೇನೆ. ದಾರಿ ಅಷ್ಟು ಸುಲಭವಾಗಿಲ್ಲ. ಆದರೂ ಇದನ್ನು ನಿರ್ವಹಿಸಬೇಕು. ನಾನು ನನ್ನ ಕೆಲಸವನ್ನು ತುಂಬಾ ಪ್ರಾಮಾಣಿಕವಾಗಿ, ಸಮರ್ಪಣಾಭಾವದಿಂದ ಮಾಡುತ್ತೇನೆ ಎಂದರು. ನನ್ನ ಕೆಲಸಗಳ ಮೂಲಕ ನಾನು ಏನು ಎಂಬುದನ್ನು ಮರು ನಿರೂಪಿಸಬೇಕಿದೆ. ಏಕೆಂದರೆ ಜಗತ್ತು ಬೆಂಗಳೂರು ಮತ್ತು ಕರ್ನಾಟಕದ ಮೂಲಕ ಭಾರತವನ್ನು ನೋಡುತ್ತದೆ. ಕರ್ನಾಟಕ ಸುಂದರ ರಾಜ್ಯ. ನಾನು ಯಾರನ್ನು ಭೇಟಿಯಾದರೂ, ಅವರು ಕರ್ನಾಟಕ ದೇಶದ ಪ್ರಮುಖ ರಾಜ್ಯ ಎಂದು ಹೇಳುತ್ತಾರೆ. ಆದ್ದರಿಂದ ಜವಾಬ್ದಾರಿ ಹೆಚ್ಚಿದೆ ಎಂದರು.

ಇಂದಿನಿಂದ ಹೆಚ್ಚುವರಿ ರೈಲುಗಳ ಸೇರ್ಪಡೆ

• **ಬೆಂಗಳೂರು:** ನಮ್ಮ ಮೆಟ್ರೊ ಹಳದಿಬಣ್ಣದ ಮಾರ್ಗಕ್ಕೆ ಜೂ.3ರಿಂದ ಹೆಚ್ಚುವರಿ ರೈಲುಗಳ ಸೇರ್ಪಡೆಯಾಗಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಹಳದಿ ಮಾರ್ಗದಲ್ಲಿ ಆರ್‌ವಿ ರಸ್ತೆ – ಬೊಮ್ಮಸಂದ್ರ ವರೆಗೆ ಬುಧವಾರದಿಂದ ಎರಡು ಹೆಚ್ಚುವರಿ ರೈಲುಗಳನ್ನು ಪ್ರಯಾಣಿಕರ ಸೇವೆಗೆ ಸೇರ್ಪಡೆಗೊಳಿಸಲಾಗುತ್ತಿದೆ. ಈ ಹೆಚ್ಚುವರಿ ರೈಲುಗಳ ಸೇರ್ಪಡೆಯೊಂದಿಗೆ, ಪ್ರತಿದಿನ ಒಟ್ಟು 10 ರೈಲುಗಳು ಕಾರ್ಯನಿರ್ವಹಿಸಲಿದ್ದು, ಇದರಿಂದ ಸೇವಾ ಆವರ್ತನೆಯನ್ನು ಹೆಚ್ಚಿಸಲು ಹಾಗೂ ನಿರೀಕ್ಷಾ ಸಮಯವನ್ನು ಕಡಿಮೆ ಮಾಡಲು ಸಾಧ್ಯವಾಗಲಿದೆ. ಸೋಮವಾರದಿಂದ ಶುಕ್ರವಾರದವರೆಗೆ ಗರಿಷ್ಠ ದಟ್ಟಣೆಯ ಸಮಯದಲ್ಲಿ ಪ್ರಸ್ತುತ 9 ನಿಮಿಷಗಳಿಗೊಮ್ಮೆ ಸಂಚರಿಸುತ್ತಿರುವ ರೈಲುಗಳು ಇನ್ನು ಮುಂದೆ 7 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. 14 ನಿಮಿಷಗಳಿಗೊಮ್ಮೆ ಸಂಚರಿಸುತ್ತಿರುವ ರೈಲುಗಳು ಇನ್ನು ಮುಂದೆ 10 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. ದಿನವಿಡೀ 10 ನಿಮಿಷಗಳ ಅಂತರದಲ್ಲಿ ಸಂಚರಿಸಲಿವೆ. ವಾರದ ಯಾವುದೇ ದಿನದಲ್ಲಿಯೂ ಆರ್‌ವಿ ರಸ್ತೆ, ಬೊಮ್ಮಸಂದ್ರ ಟರ್ಮಿನಲ್ ನಿಲ್ದಾಣಗಳಿಂದ ಹೊರಡುವ ಮೊದಲ ಹಾಗೂ ಕೊನೆಯ ರೈಲುಗಳ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಿಬಿಎಸ್‌ಇ ತ್ರಿಭಾಷಾ ನೀತಿ: ಕನ್ನಡ ಶಿಕ್ಷಕರಿಗೆ ಬಲು ಬೇಡಿಕೆ

ಪುಟ ೧➡ ಇನ್ನೊಂದೆಡೆ ಫ್ರೆಂಚ್, ಜರ್ಮನ್ ಹಾಗೂ ಸ್ಪ್ಯಾನಿಷ್ ಭಾಷೆಗಳನ್ನು ಬೋಧಿಸುತ್ತಿದ್ದ ಶಿಕ್ಷಕರು ಉದ್ಯೋಗ ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಗುವ ಸಾಧ್ಯತೆ ಇರುವುದರಿಂದ ಕೆಲವು ಶಾಲೆಗಳು ವಿದೇಶಿ ಭಾಷಾ ವಿಭಾಗಗಳನ್ನು ಮರುಸಂರಚಿಸುತ್ತಿವೆ. ಆದರೆ, ಹಲವಾರು ಶಾಲೆಗಳು ಈ ಶಿಕ್ಷಕರನ್ನು ವಾರಾಂತ್ಯದ ತರಗತಿಗಳು, ಭಾಷಾ ಕ್ಲಬ್‌ಗಳು ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ಉಳಿಸಿಕೊಳ್ಳುವ ಪ್ರಯುತ್ನ ನಡೆಸುತ್ತಿವೆ.

ಕನ್ನಡ ಭಾಷೆಗೆ ಹೊಸ ಉತ್ತೇಜನ: ತ್ರಿಭಾಷಾ ನೀತಿಯ ಪರಿಣಾಮವಾಗಿ ಕನ್ನಡ ಭಾಷಾ ಕಲಿಕೆಗೆ ಹೊಸ ಉತ್ತೇಜನ ದೊರೆಯಲಿದೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಸಿಬಿಎಸ್‌ಇ ಶಾಲೆಗಳಲ್ಲೂ ಕನ್ನಡದ ಬಳಕೆ ಮತ್ತು ಅಧ್ಯಯನ ವ್ಯಾಪ್ತಿಯು ವಿಸ್ತಾರಗೊಳ್ಳುವ ಸಾಧ್ಯತೆ ಇದೆ. ಇದುವರೆಗೆ ಕೆಲವು ಶಾಲೆಗಳಲ್ಲಿ ಕನ್ನಡವನ್ನು ಕೇವಲ ಔಪಚಾರಿಕ ವಿಷಯವಾಗಿ ಪರಿಗಣಿಸಲಾಗುತ್ತಿತ್ತು. ಆದರೆ, ಹೊಸ ನಿಯಮದಿಂದ ಭಾಷಾ ಬೋಧನೆಗೆ ಹೆಚ್ಚಿನ ಮಹತ್ವ ಸಿಗಲಿದ್ದು, ಕನ್ನಡ ಶಿಕ್ಷಕರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಲಿವೆ ಎಂದು ಶಿಕ್ಷಣ ವಲಯದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

> **ನಮ್ಮ ಶಾಲೆಯಲ್ಲಿ ವಿದೇಶಿ ಭಾಷಾ ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕುವ ಪ್ರಶ್ನೆಯೇ ಇಲ್ಲ. ವಾರಾಂತ್ಯದ ಕೋರ್ಸ್‌ಗಳು, ಕೌಶಲಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಅವರಿಗೆ ಅವಕಾಶ ಕಲ್ಪಿಸಲಾಗುತ್ತದೆ. ಹಲವರು ಇತರೆ ವಿಷಯಗಳನ್ನೂ ಬೋಧಿಸುತ್ತಿರುವುದರಿಂದ ಅವರ ಸೇವೆಯನ್ನು ವಿವಿಧ ರೀತಿಯಲ್ಲಿ ಬಳಸಿಕೊಳ್ಳಬಹುದು.**
> ■ **ಶೆಫಾಲಿ ತ್ಯಾಗಿ, ಪ್ರಾಂಶುಪಾಲೆ, ಎಚ್‌ಎಸ್‌ಆರ್ ಲೇಔಟ್‌ನ ಖಾಸಗಿ ಶಾಲೆ (ಸಿಬಿಎಸ್‌ಇ)**

ದಾಳಿಕೋರರ ರಕ್ಷಣೆಗೆ ಬಿಜೆಪಿ ಕಿಡಿ

ಪುಟ ೧➡ ಶಿವಲಿಂಗದ ಮೇಲೆ ಮಲಮೂತ್ರ ಮಾಡಿದ್ದನ್ನು ಸ್ವಚ್ಛಗೊಳಿಸುತ್ತಿದ್ದವರ ಮೇಲೆ, ಪೂಜೆ ಮಾಡಲು ಸೇರಿದ್ದ ಹಿಂದುಗಳ ಮೇಲೆ ಸಾವಿರಾರು ಸಂಖ್ಯೆಯಲ್ಲಿ ಜನರು ತಲವಾರು ಮಚ್ಚಿನಿಂದ ದಾಳಿ ಮಾಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರಿಗೂ ರಕ್ತ ಬರುವಂತೆ ಹಲ್ಲೆ ಮಾಡಿದ್ದಾರೆ. ಡಿಸಿ ಮೇಲೂ ದಾಳಿ ನಡೆದಿದೆ. ಆದರೆ ರಾಜ್ಯ ಸರ್ಕಾರ ಇಷ್ಟೆಲ್ಲ ಆದರೂ ಏನೂ ಆಗಿಲ್ಲ ವೆಂಬಂತೆ ಪ್ರಕರಣವನ್ನು ಹಿಂದಕ್ಕೆ ಪಡೆದಿದೆ ಎಂದು ದೂರಿದರು.

ದಾಳಿಕೋರರಿಗೆ ಶಿಕ್ಷೆ ಕೊಡಿಸುವ ಬದಲು ಸರ್ಕಾರ ಪ್ರೋತ್ಸಾಹ ನೀಡಿದೆ. ಇದು ಜನರಿಗೆ ಮತ್ತು ಹಿಂದುತ್ವಕ್ಕೆ ಮಾಡಿದ ಅವಮಾನ. ಹಿಂದು, ಮುಸ್ಲಿಂ ಎನ್ನುವುದಕ್ಕಿಂತ ಜನರು ನೆಮ್ಮದಿಯಿಂದ ಬದುಕಬೇಕು. ಎಲ್ಲರಿಗೂ ನ್ಯಾಯಕೊಡುವ ಬದಲು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮೂಲಕ ಪತ್ರ ಕೊಡಿಸಿ ಪ್ರಕರಣ ವಾಪಸ್ ಪಡೆದಿದ್ದಾರೆ. ಇದು ಖಂಡನೀಯ ಕ್ರಮ ಎಂದರು. ಇಂತಹ ಸಮಾಜ ವಿರೋಧಿ ಹಾಗೂ ಕ್ರಿಮಿನಲ್ ತತ್ವಗಳ ಬೆನ್ನಿಗೆ ನಿಲ್ಲುವ ಮೂಲಕ ಸರ್ಕಾರ ತಾನು ಜನವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನವಿರೋಧಿ ಹಾಗೂ ಜನವಿರೋಧಿಯಾದ ಈ ಆದೇಶವನ್ನು ತಕ್ಷಣವೇ ರದ್ದುಪಡಿಸುವಂತೆ ಗೌರವಾನ್ವಿತ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ಸಿಬಿಎಸ್‌ಇಗೆ ನೂತನ ಅಧ್ಯಕ್ಷರು

ಪುಟ ೧➡ ಸಿಬಿಎಸ್‌ಇಯ ನೂತನ ಕಾರ್ಯದರ್ಶಿಯಾಗಿ ಕೇಂದ್ರ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ವರುಣ್ ಭಾರದ್ವಾಜ್ ಅವರನ್ನು ನೇಮಿಸಲಾಗಿದೆ. ರಾಹುಲ್ ಸಿಂಗ್ ಅವರನ್ನು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದಲ್ಲಿ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ಅಡಿಶನಲ್ ಸೆಕ್ರೇಟರಿಯಾಗಿ ನೇಮಿಸಲಾಗಿದೆ.

ಅಧ್ಯಕ್ಷ, ಕಾರ್ಯದರ್ಶಿ ಎತ್ತಂಗಡಿ, ತನಿಖೆಗೆ ಸಮಿತಿ

• **ಹೊಸದಿಲ್ಲಿ:** ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ(ಸಿಬಿಎಸ್‌ಇ) ಆನ್‌ಸ್ಕ್ರೀನ್ ಮೌಲ್ಯಮಾಪನ ವ್ಯವಸ್ಥೆ ವಿವಾದ ಬೆನ್ನಲ್ಲೇ ಸಿಬಿಎಸ್‌ಇ ಅಧ್ಯಕ್ಷ ರಾಹುಲ್ ಸಿಂಗ್ ಮತ್ತು ಕಾರ್ಯದರ್ಶಿ ಹಿಮಾಂಶು ಗುಪ್ತಾರನ್ನು ವರ್ಗಾವಣೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಇದರೊಂದಿಗೆ ಸಿಬಿಎಸ್‌ಇ ತನ್ನ ಆನ್‌ಸ್ಕ್ರೀನ್ ಮೌಲ್ಯಮಾಪನ ಸೇವೆಗಳ ಖರೀದಿ ಪ್ರಕ್ರಿಯೆ ಕುರಿತು ತನಿಖೆ ನಡೆಸಲು ಕೇಂದ್ರ ಸರ್ಕಾರ ವಿಶೇಷ ಸಮಿತಿಯನ್ನು ರಚಿಸುತ್ತಿದೆ. ಸಾಮರ್ಥ್ಯ ನಿರ್ಮಾಣ ಆಯೋಗ (ಸಿಬಿಸಿ) ಅಧ್ಯಕ್ಷ ಎಸ್.ರಾಧಾ ಚೌಹಾಣ್‌ರನ್ನು ತನಿಖಾ ಸಮಿತಿಯ ಏಕ ಸದಸ್ಯೆಯನ್ನಾಗಿ ನೇಮಿಸಲಾಗಿದೆ. ಆದರೆ, ರಾಧಾ ಚೌಹಾಣ್ ಇತರ ಅಧಿಕಾರಿಗಳ ನೆರವು ಪಡೆಯಬಹುದು. ಏಕ ಸದಸ್ಯೆ ಇರುವ ಸಮಿತಿ ತಿಂಗಳೊಳಗೆ ತನಿಖಾ ವರದಿಯನ್ನು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಸಲ್ಲಿಸಬೇಕಿದೆ. ಸಿಬಿಎಸ್‌ಇ ಮರುಮೌಲ್ಯಮಾಪನ ಪೋರ್ಟಲ್ ಮತ್ತೆ ಸಕ್ರಿಯಗೊಂಡ ತಕ್ಷಣವೇ ಕೇಂದ್ರ ಸರ್ಕಾರ ಇಬ್ಬರು ಪ್ರಮುಖ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ.

ಕೆಪೆಕ್ ಸಂಸ್ಥೆ ಸ್ವಾಧೀನಕ್ಕೆ ಶೀತಲ ಘಟಕ

• **ಬೆಂಗಳೂರು:** ಪೂಜೇನಹಳ್ಳಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್ ಸಂಸ್ಥೆಯ ಸ್ವಾಧೀನಕ್ಕೆ ಪಡೆದಿದುಕೊಂಡಿದೆ. ಪೂಜೇನಹಳ್ಳಿ, ತೋಟಗಾರಿಕಾ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯು ಸಮಗ್ರ ಶೀತಲ ಸರಪಳಿ ಘಟಕವನ್ನು ಸ್ಥಾಪಿಸಿದ್ದು, ಸದರಿ ಘಟಕವು ಮಾವು, ಬಾಳೆ, ದಾಳಿಂಬೆ, ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ರಫ್ತಿಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಅನುಸಾರ ಮೆ. ಫಿಜಾ ಗ್ಲೋಬಲ್ ಆಗ್ರೋವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ವಹಿಸಲಾಗಿತ್ತು.

ಸದರಿ ಸಂಸ್ಥೆಯು ಸಮಗ್ರ ಶೀತಲ ಸರಪಳಿ ಘಟಕದ ಒಡಂಬಡಿಕೆ ಅನುಸಾರ ಕಾಲಕಾಲಕ್ಕೆ ಬಾಡಿಗೆ ಪಾವತಿಸಿರುವುದಿಲ್ಲ ಮತ್ತು ಘಟಕವನ್ನು ಒಪ್ಪಂದದ ಹೊರತಾಗಿ ಅನ್ಯ ಉದ್ದೇಶಕ್ಕೆ ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಹಲವು ನೋಟೀಸ್ ನೀಡಿದ ನಂತರ ಸದರಿ ಸಮಗ್ರ ಶೀತಲ ಸರಪಳಿ ಘಟಕವನ್ನು ಕೆಪೆಕ್ ಸಂಸ್ಥೆಗೆ ಹಿಂದಿರುಗಿಸಲು ಸೂಚಿಸಲಾಗಿತ್ತು. ಆದರೆ ಸದರಿ ಸಂಸ್ಥೆಯು ಘಟಕವನ್ನು ಕೆಪೆಕ್ ಸಂಸ್ಥೆಗೆ ಹಸ್ತಾಂತರಿಸಿರುವುದಿಲ್ಲ.

ಇದಾದ ಬಳಿಕ ಸಾರ್ವಜನಿಕ ಆವರಣಗಳಿಂದ ಅನಧಿಕೃತ ನಿವೇಶನಗಳ ತೆರವು ಕಾಯ್ದೆ, 1974ರ ಸೆಕ್ಷನ್ 5(1)ರ ಅಡಿಯಲ್ಲಿ ಏ.10, 2026ರಂದು ಹೊರಡಿಸಲಾದ ಭೂಮಿ ತೆರವು ಆದೇಶದ ಅನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ. ಆದರಂತೆ ಜೂ.2ರಂದು ಕೆಪೆಕ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ಪಡೆಯುವ ಕಾರ್ಯಾಚರಣೆ ಆರಂಭಿಸಿದ್ದಾರೆ.

ಶಿವಕುಮಾರ್ ಎಂಬ ನಾನು...

ಪುಟ ೧➡ ಈ ಸಮಾರಂಭವು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮತ್ತೊಂದು ಮೈಲುಗಲ್ಲಾಗಲಿದೆ ಎಂದು ರಾಜಕೀಯ ವಲಯಗಳಲ್ಲಿ ಚರ್ಚೆ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಹೊಸ ಜವಾಬ್ದಾರಿ ಸ್ವೀಕರಿಸುತ್ತಿರುವುದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರವಲ್ಲದೆ ರಾಜ್ಯದ ರಾಜಕೀಯದಲ್ಲಿ ದೊಡ್ಡ ಬದಲಾವಣೆಯ ಸಂಕೇತವಾಗಿದೆ.

ಸರಳತೆ ಮತ್ತು ಜನಸ್ನೇಹಿ ಆಡಳಿತವನ್ನು ಮುಂದುವರಿಸುವ ನಿರೀಕ್ಷೆಯನ್ನು ಜನರು ಹೊಂದಿದ್ದಾರೆ. ಈ ಸಮಾರಂಭವು ಕರ್ನಾಟಕ ರಾಜಕೀಯಕ್ಕೆ ಹೊಸ ದಿಕ್ಕು ನೀಡುವ ಸಾಧ್ಯತೆಯಿದೆ. ಒಟ್ಟಾರೆಯಾಗಿ, ಡಿ.ಕೆ. ಶಿವಕುಮಾರ್ ಅವರ ಪದಗ್ರಹಣ ಸಮಾರಂಭವು ಸರಳತೆಯ ಮಾದರಿಯನ್ನು ಪ್ರದರ್ಶಿಸುವ ಮೂಲಕ ಜನಸಾಮಾನ್ಯರಿಗೆ ಹತ್ತಿರವಾಗುವ ನಿರೀಕ್ಷೆಯನ್ನು ಮೂಡಿಸಿದೆ. ಈ ಕಾರ್ಯಕ್ರಮವನ್ನು ರಾಜ್ಯದ ಜನರು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದಾರೆ.

ಸಂಪುಟ ರಚನೆಗೆ ಕಸರತ್ತು

ಪುಟ ೧➡ ಪ್ರತ್ಯೇಕ ಪಟ್ಟಿಯನ್ನು ತಗೆದುಕೊಂಡು ಸೋಮವಾರ ದಿಲ್ಲಿಗೆ ತೆರಳಿದ್ದ ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರಿಗೆ ಪಕ್ಷದ ವರಿಷ್ಠರು ಸಿಗದ ಕಾರಣ ಮಂಗಳವಾರ ಸಭೆ ನಡೆಸಲಾಯಿತು. ಸಂಪುಟ ಸೇರ್ಪಡೆ ಬಗ್ಗೆ ಸಂಜೆವರೆಗೆ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಅವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ ಕೆ.ಸಿ ವೇಣುಗೋಪಾಲ್ ಅವರು, ವಿವಿಧ ಮಾನದಂಡಗಳ ಅನ್ವಯ ರಾಹುಲ್ ಗಾಂಧಿ ಜತೆ ಮಾತುಕತೆ ನಡೆಸಿ ಮೊದಲ ಹಂತದ ಪಟ್ಟಿ ಸಿದ್ಧಪಡಿಸಿದ್ದಾರೆ ಎಂದು ದಿಲ್ಲಿ ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಕುರಿತು ಚರ್ಚೆ

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದ ನಂತರ ಖಾಲಿಯಾಗಲಿರುವ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಹಲವರ ಹೆಸರುಗಳು ಕೇಳಿಬಂದಿದ್ದು, ಮುಂಬರುವ ಚುನಾವಣೆಗಳ ದೃಷ್ಟಿಯಿಂದ ಯಾರಿಗೆ ಸಾರಥ್ಯ ವಹಿಸಬೇಕೆಂಬುದರ ಕುರಿತು ಪ್ರಮುಖವಾಗಿ ದಿಲ್ಲಿ ವರಿಷ್ಠರು ಚರ್ಚೆ ನಡೆಸಿದ್ದಾರೆ. ಈ ಹಿಂದೆ ಸತೀಶ್ ಜಾರಕಿಹೊಳಿ ಅವರು ಪ್ರಬಲ ಆಕಾಂಕ್ಷಿಯಾಗಿದ್ದರು. ಇದೀಗ ಬಿ.ಕೆ ಹರಿಪ್ರಸಾದ್ ಅವರ ಹೆಸರು ಕೇಳಿಬಂದಿದ್ದು, ಅಧ್ಯಕ್ಷ ಆಯ್ಕೆ ಕುರಿತಂತೆ ಶೀಘ್ರದಲ್ಲೇ ನಿರ್ಧಾರಕ್ಕೆ ಬರಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಇಬ್ಬರು ಹೊಸಬರಿಗೆ ಅವಕಾಶ?

ಸಭೆಯಲ್ಲಿ ರಾಜ್ಯದಲ್ಲಿನ ಹೊಸ ಸಂಪುಟ ರಚನೆ ಕುರಿತು ರೂಪುರೇಷೆಗಳ ಕುರಿತು ಪ್ರಮುಖವಾಗಿ ಚರ್ಚಿಸಲಾಗಿದೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರಾಗಿದ್ದವರು ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಉಳಿಯಲು ಕಸರತ್ತು ನಡೆಸಿದ್ದಾರೆ. ಕಳೆದ ಬಾರಿ ಅವಕಾಶ ವಂಚಿತರು ಈ ಬಾರಿ ಅವಕಾಶ ಕಲ್ಪಿಸುವಂತೆ ಬೇಡಿಕೆ ಸಲ್ಲಿಸಿದ್ದು, ಮೊದಲ ಹಂತದ ಸಂಪುಟದಲ್ಲಿ ಇಬ್ಬರು ಹೊಸಬರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ಅಣ್ಣಾಮಲೈ ರಾಜೀನಾಮೆ!

ಪುಟ ೧➡ ತಮಿಳುನಾಡು ವಿಧಾನಸಭಾ ಚುನಾವಣೆ ನಡೆದ ಒಂದು ತಿಂಗಳೊಳಗೆ ಈ ಬೆಳವಣಿಗೆಗಳು ನಡೆದಿವೆ. ರಾಜ್ಯದಲ್ಲಿ 234 ಸದಸ್ಯರ ಸದನದಲ್ಲಿ ಬಿಜೆಪಿ ಕೇವಲ ಒಂದು ಸ್ಥಾನವನ್ನು ಗಳಿಸಿತ್ತು. ಈ ಮಧ್ಯೆ ಸೆಕ್ಯುಲರ್ (ಜಾತ್ಯತೀತ) ಮತ್ತು ತಮಿಳು–ಫಸ್ಟ್(ತಮಿಳು–ಮೊದಲು) ಧ್ಯೇಯದೊಂದಿಗೆ ಹೊಸ ಪ್ರಾದೇಶಿಕ ರಾಜಕೀಯ ಪಕ್ಷ ಪ್ರಾರಂಭಿಸಲು ಯೋಜಿಸುತ್ತಿದ್ದಾರೆ ಎಂಬ ವಿಚಾರ ಕೂಡ ಎಲ್ಲೆಡೆ ಹರಿದಾಡುತ್ತಿದೆ. ಇನ್ನೂ ಈ ಬಗ್ಗೆ ಎಲ್ಲೂ ಸ್ಪಷ್ಟ ಮಾಹಿತಿ ಬಹಿರಂಗಗೊಂಡಿಲ್ಲ.

ಇಂದು ಘೋಷಣೆ ಸಾಧ್ಯತೆ: ಅಣ್ಣಾಮಲೈ ಅವರನ್ನು ಬಿಜೆಪಿಯಲ್ಲಿ ಉಳಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ವರದಿಯಾಗಿದೆ. ಮುಂದಿನ ಯಾವುದೇ ಸೂಚನೆಗಳಿಲ್ಲದೆ ದಿಲ್ಲಿ ತೊರೆಯದಂತೆ ಅಣ್ಣಾಮಲೈ ಅವರಿಗೆ ತಿಳಿಸಲಾಗಿದೆ ಎಂದು ಕೆಲವು ಮೂಲಗಳು ತಿಳಿಸಿದ್ದರೆ, ಬಿಜೆಪಿ ಹೈಕಮಾಂಡ್ ಅಣ್ಣಾಮಲೈ ಅವರ ನಿರ್ಧಾರ ಒಪ್ಪಿಕೊಂಡಿದೆ. ಅವರು ಬುಧವಾರ ಅಧಿಕೃತ ಘೋಷಣೆ ಮಾಡುವ ಸಾಧ್ಯತೆಯಿದೆ ಎಂದೂ ಹೇಳಲಾಗಿದೆ.

ಅಮಿತ್ ಶಾ ಭೇಟಿಯಾಗಿ ಚರ್ಚೆ: ಈ ಮಧ್ಯೆ ಅಣ್ಣಾಮಲೈ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದಿಲ್ಲಿಯ ಅವರ ನಿವಾಸದಲ್ಲಿ ಭೇಟಿಯಾಗಿದ್ದಾರೆ. ಮೂಲಗಳ ಪ್ರಕಾರ, ಶಾ ಅವರೊಂದಿಗಿನ ಅಣ್ಣಾಮಲೈ ಅವರ ಭೇಟಿಯು ಸುಮಾರು 30 ನಿಮಿಷಗಳ ಕಾಲ ನಡೆಯಿತು. ಆದರೆ ಸಭೆಯಲ್ಲಿ ಏನೆಲ್ಲಾ ಚರ್ಚೆಯಾಯಿತು ಎಂಬುದರ ಮಾಹಿತಿ ಬಹಿರಂಗಗೊಂಡಿಲ್ಲ.

ಕೊಡಗಿಗೆ ರೈಲು ಸಂಪರ್ಕ: ಯಾವುದೇ ಪ್ರಸ್ತಾವನೆ ಇಲ್ಲ

ಪುಟ ೧➡ ಅಲ್ಲದೆ, ಪ್ರದೇಶದ ಹಿತಕ್ಕಾಗಿ ಉತ್ತಮ ಸಂಪರ್ಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ರೈಲ್ವೆ ಸಚಿವಾಲಯದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುವುದಾಗಿ ಕ್ಷೇತ್ರದ ಜನತೆಗೆ ಭರವಸೆ ನೀಡಿದ್ದಾರೆ. ಕಾಣಿಯೂರು, ಸುಳ್ಯ ಮತ್ತು ಕೊಡಗಿನ ನಾಪೋಕ್ಲು ಮೂಲಕ ಮೈಸೂರನ್ನು ಸಂಪರ್ಕಿಸುವ ಹೊಸ ರೈಲು ಮಾರ್ಗವನ್ನು ನಿರ್ಮಿಸುವಂತೆ ಕೋರಿ ಸುಳ್ಯ ಶಾಸಕ ಭಾಗೀರಥಿ ಮುರುಳ್ಯ ಮತ್ತು ದಕ್ಷಿಣ ಕನ್ನಡದ ಸಂಸದ ಬ್ರಿಜೇಶ್ ಚೌಟ ಅವರು ಇತ್ತೀಚೆಗೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಜ್ಞಾಪಕ ಪತ್ರವನ್ನು ಸಲ್ಲಿಸಿದ್ದರು.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುತ್ತಿದ್ದಂತೆ ಕೊಡಗು ಜಿಲ್ಲೆಯ ಪರಿಸರವಾದಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಲಭ್ಯವಿಲ್ಲದ ಪುಸ್ತಕ ಮರು ಮುದ್ರಣ

• **ಬೆಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ಹಲವಾರು ವರ್ಷಗಳಿಂದ ಪ್ರಕಟಿಸಿರುವ ಅತ್ಯುತ್ತಮ ಮತ್ತು ಅಮೂಲ್ಯ ಕೃತಿಗಳ ಪೈಕಿ, ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿಲ್ಲದ ಪುಸ್ತಕಗಳನ್ನು ಮರು ಮುದ್ರಣ ಮಾಡಲು ಇಲಾಖೆ ನಿರ್ಧರಿಸಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸಿರುವ ಅನೇಕ ಜನಪ್ರಿಯ ಪುಸ್ತಕಗಳ ಪ್ರತಿಗಳು ಸದ್ಯ ಮುಕ್ತಾಯಗೊಂಡಿದ್ದು, ಅವುಗಳಿಗಾಗಿ ಸಾಹಿತ್ಯಾಸಕ್ತರು ನಿರಂತರವಾಗಿ ಇಲಾಖೆಗೆ ಭೇಟಿ ನೀಡಿ ಕೋರಿಕೆ ಸಲ್ಲಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಬೇಡಿಕೆಯನ್ನು ಪುರಸ್ಕರಿಸಿರುವ ಇಲಾಖೆಯು, ಪ್ರಸ್ತುತ ಸಾಲಿನಲ್ಲಿ ಈ ಹಿಂದೆ ಮುದ್ರಿತವಾಗಿ ಈಗ ಲಭ್ಯವಿಲ್ಲದಿರುವ ಪ್ರಮುಖ ಕೃತಿಗಳನ್ನು ಮರು ಮುದ್ರಣ ಮಾಡುವ ಮಹತ್ವಾಕಾಂಕ್ಷಿ ಯೋಜನೆಯೊಂದನ್ನು ಸಿದ್ಧಪಡಿಸಿದೆ.

ನಿಮ್ಮ ನೆಚ್ಚಿನ ಪುಸ್ತಕದ ಮರು ಮುದ್ರಣಕ್ಕೆ ಯಾವ ಕೃತಿಗಳನ್ನು ಮೊದಲು ಮರು ಮುದ್ರಣ ಮಾಡಬೇಕು ಎಂಬುದರ ಕುರಿತು ಸಾರ್ವಜನಿಕರಿಂದ ಹಾಗೂ ಸಾಹಿತ್ಯಾಸಕ್ತರಿಂದ ನೇರ ಅಭಿಪ್ರಾಯ ಮತ್ತು ಕೋರಿಕೆಗಳನ್ನು ಪಡೆಯಲು ಇಲಾಖೆ ನಿರ್ಧರಿಸಿದೆ. ಇದಕ್ಕಾಗಿ ಸಾಹಿತ್ಯಾಸಕ್ತರು ಇಲಾಖೆಯ ಅಧಿಕೃತ ವೆಬ್‌ಸೈಟ್ https://kannadasiri.kamataka.gov.in ಗೆ ಭೇಟಿ ನೀಡಿ, ಅಲ್ಲಿರುವ ಪಟ್ಟಿಯನ್ನು ಪರಿಶೀಲಿಸಬಹುದು.

ಆರೋಗ್ಯಕರ ಪರಿಸರ ಅತ್ಯಗತ್ಯ: ಶಾಲಿನಿ



• **ಬೆಂಗಳೂರು:** ವಿಶ್ವಪರಿಸರ ದಿನಾಚರಣೆಯು ಕೇವಲ ಒಂದು ದಿನದ ಆಚರಣೆಯಾಗಬಾರದು. ನಮ್ಮ ಜಂಟಿ ಜವಾಬ್ದಾರಿಯನ್ನು ನೆನಪಿಸುವ ಮತ್ತು ವರ್ಷಪೂರ್ತಿ ಕಾರ್ಯನಿರ್ವಹಿಸುವ ಯೋಜನೆಯಾಗಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ತಿಳಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ದಿವೇಕಾ ಹವಾಮಾನ ಬದಲಾವಣೆ ಕೇಂದ್ರದ ವತಿಯಿಂದ ಜೂನ್ 2, 3 ರಂದು ಆಯೋಜಿಸಲಾಗಿರುವ ಹವಾಮಾನ, ಮಾಲಿನ್ಯ ಮತ್ತು ಆರೋಗ್ಯ: ಭಾರತದಲ್ಲಿ ಸುಸ್ಥಿರ ಭವಿಷ್ಯದ ಹಾದಿಗಳು ಎಂಬ 2 ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಕಲುಷಿತ ಗಾಳಿ ಮತ್ತು ನೀರು ಸಮಾಜದ ದುರ್ಬಲ ವರ್ಗದವರಾದ ಮಹಿಳೆಯರು, ಮಕ್ಕಳು ಮತ್ತು ರೈತರ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಆದ್ದರಿಂದ, ಭಾರತವು ಅಭಿವೃದ್ಧಿ ಹೊಂದಿದ ಭಾರತ ಆಗಬೇಕಾದರೆ, ಮೊದಲು ವಿಕಸಿತ್ ಪರಿಸರವನ್ನು ನಿರ್ಮಿಸುವುದು ಅನಿವಾರ್ಯವಾಗಿದೆ. ಆರೋಗ್ಯಕರ ರಾಷ್ಟ್ರದ ನಿರ್ಮಾಣಕ್ಕೆ ಆರೋಗ್ಯಕರ ಪರಿಸರ ಅತ್ಯಗತ್ಯ ಎಂದರು.

ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಕೆಲಸವಲ್ಲ. ಇದಕ್ಕಾಗಿ ಜನರು, ಗ್ರಹ ಮತ್ತು ಕಾರ್ಯಕ್ರಮ ಎಂಬ ಸೂತ್ರವನ್ನು ಅಳವಡಿಸಿಕೊಳ್ಳಬೇಕಿದೆ. ಸಾರ್ವಜನಿಕರು ಕೇವಲ ಗ್ರಾಹಕರ ಮನಸ್ಥಿತಿಯಿಂದ ಹೊರಬಂದು ಪರಿಸರದ ರಕ್ಷಕರಾಗಿ ಬದಲಾಗಬೇಕು. ತ್ಯಾಜ್ಯ ವಿಂಗಡಣೆ, ನೀರಿನ ಸಂರಕ್ಷಣೆ, ಸುಸ್ಥಿರ ಜೀವನಶೈಲಿಯನ್ನು ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಸರ್ಕಾರ, ವಿಜ್ಞಾನ, ಸಮಾಜ ಒಟ್ಟಾಗಿ ಸಾಗಬೇಕಿದೆ

ಜನಸಂಖ್ಯೆಯ ಒತ್ತಡ, ಮಿತಿಮೀರಿದ ಬಳಕೆ, ಮಾಲಿನ್ಯ ಮತ್ತು ವಿಜ್ಞಾನ-ನೀತಿಗಳ ನಡುವಿನ ಕೊಂಡಿಯ ಕೊರತೆಯಿಂದಾಗಿ ಇಂದು ಪರಿಸರ ಹಾಳಾಗುತ್ತಿದೆ. ಇದಕ್ಕೆ ಪರಿಹಾರವಾಗಿ ಹಸಿರು ತಂತ್ರಜ್ಞಾನ, ಸುಸ್ಥಿರ ನಗರೀಕರಣ ಮತ್ತು ಪರಿಸರ ಶಿಕ್ಷಣವನ್ನು ಬಲಪಡಿಸಬೇಕಾಗಿದೆ. ಪರಿಸರ ರಕ್ಷಣೆ ಎನ್ನುವುದು ಪ್ರಗತಿಗೆ ಅಡ್ಡಿಯಲ್ಲ, ಬದಲಿಗೆ ಅದು ದೀರ್ಘಕಾಲದ ಸಮೃದ್ಧಿಗೆ ಅಡಿಪಾಯವಾಗಿದೆ. ಭಾರತವು ಸುಸ್ಥಿರ ಅಭಿವೃದ್ಧಿಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಲು ಸರ್ಕಾರ, ವಿಜ್ಞಾನ ಮತ್ತು ಸಮಾಜ ಒಟ್ಟಾಗಿ ಸಾಗಬೇಕಿದೆ ಎಂದು ಶಾಲಿನಿ ರಜನೀಶ್ ಹೇಳಿದರು.

ಶೃಂಗಸಭೆ



ಕಿರ್ಗಿಜ್ ಗಣರಾಜ್ಯದಲ್ಲಿ (ಕಿರ್ಗಿಸ್ತಾನ್) ಬುಧವಾರದಿಂದ ಆರಂಭವಾಗಲಿರುವ ನಾಲ್ಕು ದಿನಗಳ ಶಾಂಘೈ ಸಹಕಾರ ಸಂಸ್ಥೆಯ ವಿವಿಧ ರಾಷ್ಟ್ರಗಳ ಕೈಗಾರಿಕಾ ಸಚಿವರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ರಾಜಧಾನಿ ಬಿಷ್ಕೇಕ್ ನಗರದಲ್ಲಿ ಭಾರತ ಮತ್ತು ಕಿರ್ಗಿಸ್ತಾನದ ರಾಜತಾಂತ್ರಿಕ ಅಧಿಕಾರಿಗಳು ಬರಮಾಡಿಕೊಂಡರು.

ಕಾಶಪ್ಪನವರ್ ಮಂತ್ರಿಯಾಗಲಿ

• **ಬೆಂಗಳೂರು:** ಹುನಗುಂದ ವಿಧಾನಸಭಾ ಕ್ಷೇತ್ರದ ಶಾಸಕ ವಿಜಯಾನಂದ್ ಎಸ್.ಕಾಶಪ್ಪನವರ್ ಅವರಿಗೆ ನೂತನ ಮಂತ್ರಿ ಮಂಡಲದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಇಲಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ಒತ್ತಾಯಿಸಿದೆ.



ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಇಲಕಲ್, ಹುನಗುಂದ ಮತಕ್ಷೇತ್ರ, ಬಾಗಲಕೋಟೆ ಜಿಲ್ಲೆ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿ ಅಧ್ಯಕ್ಷ ಅಬ್ದುಲ್ ರಜಾಕ್ ತಟಗಾರ ಮಾತನಾಡಿ, ವಿಜಯಾನಂದ್ ಎಸ್ ಕಾಶಪ್ಪನವರ್ ಅವರು ಕೃಷ್ಣ ನದೀ ನೀರು ಯೋಜನೆ ಜಾರಿಗೆ ತಂದಿದ್ದು, 60 ಸಾವಿರ ಎಕರೆ ಇಸ್ರೇಲ್ ಮಾದರಿ ನೀರಾವರಿ ಯೋಜನೆ, ಶಿಕ್ಷಣಕ್ಕೆ ಒತ್ತು ಸ್ಮಾರ್ಟ್ ಕ್ಲಾಸ್ ಬೋರ್ಡ್ ಒದಗಿಸಿ ದರು. ಸರ್ಕಾರಿ ಶಾಲೆಗಳನ್ನು ಉನ್ನತಿಕರಿಸಿದರು. ಹುನಗುಂದ್-ಇಲಕಲ್ ಅವಳಿ ನಗರದಲ್ಲಿ ನೂರು ಹಾಸಿಗೆ ಆಸ್ಪತ್ರೆ ನಿರ್ಮಾಣ, ಸಮುದಾಯ ಭವನ ಹಾಗೂ ಉತ್ತಮ ರಸ್ತೆಗಳ ನಿರ್ಮಾಣ, ಮರೋಳ್‌ನಲ್ಲಿ ಏತ ನೀರಾವರಿ, ನಂದವಾಡಗಿ ಏತ ನೀರಾವರಿ, ಹನಿ ನೀರಾವರಿಗೆ ಒತ್ತು ನೀಡಿ ರೈತರ ಬಾಳಿಗೆ ಬೆಳಕಾದರು. ಯುವ ನಾಯಕ, ಕ್ರಿಯಾಶೀಲರಾಗಿರುವ ಮತ್ತು ಕಾಂಗ್ರೆಸ್ ಪಕ್ಷ ಉತ್ತಮ ಸಂಘಟಕರಾಗಿರುವ ವಿಜಯಾನಂದ್ ಕಾಶಪ್ಪನವರ್ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ವಿಶ್ವನಾಥಪಾಟೀಲ್, ಮಲ್ಲಣ್ಣ ಎಲೆಗಾರ , ಅಮರೇಶ್ ನಾಗೂರ್, ಮುತ್ತಣ್ಣ ಕಲಗುಡಿ, ಮಹಾಂತೇಶ್ ನರಗುಂದ, ರವಿ ಹುಚ್ಚನೂರು, ಶಾಂತಣ್ಣ ರಾಘವೇಂದ್ರ ಧಾರವಾಡ, ಮೌನೇಶ್ ಬಂಡಿವಡ್ಡರ್, ನೀಲಪ್ಪ ಅಸೋಲಿ, ವಿಠ್ಠಲ್ ಜಕ್ಕ, ಸಿದ್ಧ ಭದ್ರಶೆಟ್ಟಿ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಜೂ.28ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ

• **ಬೆಂಗಳೂರು:** ರಾಜ್ಯದಲ್ಲಿ ಜೂ.28 ರಂದು ನಡೆಯಲಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಎಲ್ಲಾ ಶಾಲೆಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಸೂಚನೆ ನೀಡಿದ್ದಾರೆ. ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಎಲ್ಲಾ ಶಾಲೆಗಳು ಜೂ. 25ರಂದು ಜಾಥಾವನ್ನು ನಡೆಸಬೇಕು. ಜೂ. 28 ರಂದು ಬೆಳಗ್ಗೆ 8 ಗಂಟೆಗೆ ಲಸಿಕಾ ಕಾರ್ಯಕ್ರಮವನ್ನು ನಡೆಸಲು ಅನುಕೂಲವಾಗುವಂತೆ ಖಾಸಗಿ ಶಾಲೆಗಳು ಸೇರಿದಂತೆ ಎಲ್ಲಾ ಶಾಲೆಗಳನ್ನು ತೆರೆದಿಟ್ಟು, ಸಜ್ಜುಗೊಳಿಸಬೇಕು ಎಂದು ಸೂಚಿಸಲಾಗಿದೆ. ಪ್ರೌಢಶಾಲೆ, ಪದವಿಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಎನ್‌ಎಸ್‌ಎಸ್, ಎನ್‌ಸಿಸಿ ವಿದ್ಯಾರ್ಥಿಗಳನ್ನು ಆರೋಗ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಕಾರ್ಯಕ್ರಮದ ಅನುಷ್ಠಾನಕ್ಕೆ ನಿಯೋಜಿಸಬೇಕು. ಶಾಲಾ ವಿದ್ಯಾರ್ಥಿಗಳ ಮೂಲಕ 5 ವರ್ಷದೊಳಗಿನ ಮಕ್ಕಳ ಪೋಷಕರನ್ನು ಲಸಿಕೆ ಹಾಕಿಸಲು ಪ್ರೇರೇಪಿಸಬೇಕು. ಖಾಸಗಿ ಶಾಲೆಗಳಲ್ಲಿರುವ (ಪ್ಲೇ ಸ್ಕೂಲ್, ಎಲ್‌ಕೆಜಿ, ಯುಕೆಜಿ) ಮಕ್ಕಳ ಪೋಷಕರಿಗೂ ಈ ಕುರಿತು ಮಾಹಿತಿ ನೀಡಿ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಪುಸ್ತಕ ಖರೀದಿಗೆ ಅರ್ಜಿ

• **ಬೆಂಗಳೂರು:** ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಚಿತ್ರಕಲಾ ಲೇಖಕರಿಂದ ಪ್ರಕಟಿತ ಪುಸ್ತಕ ಖರೀದಿಗೆ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಲಲಿತ ಕಲಾ ಅಕಾಡೆಮಿಯ ವತಿಯಿಂದ ದೃಶ್ಯಕಲಾ ಲೇಖಕರಿಗೆ ಪ್ರೋತ್ಸಾಹ ನೀಡಲು ಪುಸ್ತಕಗಳ ಖರೀದಿಯನ್ನು ಅಕಾಡೆಮಿಯು ಮಾಡುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ಜನವರಿ 2024 ರಿಂದ ಡಿಸೆಂಬರ್ 2024 ವರೆಗೆ ಪ್ರಕಟವಾದ ಪುಸ್ತಕಗಳನ್ನು ಒಂದು ಶೀರ್ಷಿಕೆಗೆ ಐದು ಸಾವಿರ ರೂ. ಮಿತಿಯಲ್ಲಿ ಖರೀದಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಒಬ್ಬ ಲೇಖಕರಿಂದ ಗರಿಷ್ಠ ರೂ.5,000 ಮೌಲ್ಯದ ಪುಸ್ತಕಗಳನ್ನು ಖರೀದಿಸಲಾಗುವುದು, ಪುಸ್ತಕಗಳು ಜನವರಿ 2024 ರಿಂದ ಡಿಸೆಂಬರ್ 2024ರ ಅವಧಿಯಲ್ಲಿ ಪ್ರಕಟಣೆಯಾಗಿರಬೇಕು, ಇಲ್ಲವೇ ಆ ಅವಧಿಯಲ್ಲಿ ಮರು ಮುದ್ರಣಗೊಂಡಿರಬೇಕು, ಕಲಾ ಬರಹಗಾರರು ಎಷ್ಟು ಪುಸ್ತಕಗಳನ್ನು ಬೇಕಿದ್ದರೂ ಆಯ್ಕೆ ಕೋರಿ ಅರ್ಜಿ ಸಲ್ಲಿಸಬಹುದು, ಅಕಾಡೆಮಿ ಖರೀದಿಸಬಹುದಾದ ಪುಸ್ತಕಗಳನ್ನು ಆಯ್ಕೆ ಸಮಿತಿಯವರು ಆಯ್ಕೆ ಮಾಡಿ ಅಕಾಡೆಮಿಗೆ ಶಿಫಾರಸು ಮಾಡುತ್ತಾರೆ. ಅಂತಿಮ ನಿರ್ಧಾರ ಅಕಾಡೆಮಿಯದ್ದಾಗಿರುತ್ತದೆ. ಕನಿಷ್ಠ 2 ಪುಸ್ತಕಗಳನ್ನು ಮಾತ್ರ ಖರೀದಿಗೆ ಪರಿಗಣಿಸಲಾಗುವುದು. ಕಲಾ ಲೇಖಕರು ಜೂ.25 ಒಳಗಾಗಿ ಅರ್ಜಿಯೊಂದಿಗೆ ಪ್ರಕಟವಾದ ಪುಸ್ತಕಗಳ ತಲಾ 3 ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-580 002 ಇವರಿಗೆ ಕಳುಹಿಸಿ ಕೊಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಜಮೀರ್ ಆಡಿಯೋ ವೈರಲ್: ದೂರು ದಾಖಲು

• **ದಾವಣಗೆರೆ:** ಮಾಜಿ ಸಚಿವ ಜಮೀರ್ ಅಹಮ್ಮದ್ ಜೊತೆಗಿನ ತಮ್ಮ ಆಡಿಯೋ ವೈರಲ್‌ಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಮಹಮ್ಮದ್ ಸಿರಾಜ್ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆ ಕಟ್ಟಡದಲ್ಲಿರುವ ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ಸೋಮವಾರ ರಾತ್ರಿ ತೆರಳಿದ ಮಹಮ್ಮದ್ ಸಿರಾಜ್, ಅದು ತಮ್ಮ ಹಾಗೂ ಜಮೀರ್ ಅಹಮ್ಮದ್ ಆಡಿಯೋ ಅಲ್ಲವೆಂದು ಸ್ಪಷ್ಟಪಡಿಸಿದ್ದು, ವೈರಲ್ ಆದ ಆಡಿಯೋ ವಿಚಾರಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸಿ ತನಿಖೆಗೆ ಒತ್ತಾಯಿಸಿದ್ದಾರೆ.

ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶ: ಆಯುಕ್ತ ಸೀಮಂತ್ ಕುಮಾರ್ ಸಿಂಗ್

ಡಿಕೆಶಿ ಪದಗ್ರಹಣಕ್ಕೆ ಬಂದೋಬಸ್ತ್

• **ಬೆಂಗಳೂರು:** ಲೋಕಭವನದಲ್ಲಿ (ಜೂ.3) ರಂದು ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಹಾಗೂ ಕೆಲ ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಮಂಗಳವಾರ ಅಧಿಕಾರಿಗಳ ಜತೆ ಸಭೆ ನಡೆಸಿ ಸೂಕ್ತ ಬಂದೋಬಸ್ತ್ ಬಗ್ಗೆ ಸೂಚನೆ ನೀಡಿದ್ದಾರೆ.

ಈ ಸಭೆ ಬಳಿಕ ಮಾಹಿತಿ ನೀಡಿದ ಅವರು, ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಪ್ರವೇಶವಿರಲಿದೆ. ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವಕಾಶವಿರುವುದಿಲ್ಲ. ಡಿ.ಕೆ.ಶಿವಕುಮಾರ್ ಅವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಸಣ್ಣ ಅಹಿತಕರ ಘಟನೆಗಳು ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ವಿಧಾನಸೌಧ ಹಾಗೂ ಲೋಕಭವನ ಸುತ್ತ ಯಾವುದೇ ರೀತಿ ಸಂಚಾರ ದಟ್ಟಣೆಯಾಗದಂತೆ ಕರ್ತವ್ಯ ನಿರ್ವಹಿಸುವಂತೆ ಸಂಚಾರ ವಿಭಾಗದ ಅಧಿಕಾರಿಗಳಿಗೆ ಹೇಳಿದ್ದೇನೆ ಎಂದು ತಿಳಿಸಿದರು.

ವಿವಿಧ ವಿಭಾಗಗಳಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ಪಾಸ್ ಹಂಚಿಕೆ ಮಾಡಲಾಗಿದ್ದು, ಆ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದೇವೆ. ಸಂಚಾರ ಮಾರ್ಗದಲ್ಲಿ ಕೆಲವೊಂದು ಬದಲಾವಣೆ ಮಾಡಿದ್ದು, ರೋಡ್ ಶೋ ನಡೆಸುವುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೊರ ರಾಜ್ಯದಿಂದಲೂ ಗಣ್ಯರು ಕಾರ್ಯಕ್ರಮಕ್ಕೆ ಬರುತ್ತಿರುವ ಹಿನ್ನೆಲೆ ಗಣ್ಯರ ಭದ್ರತೆಗೂ ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿದೆ ಎಂದು ಹೇಳಿದರು.

ರಾಹುಲ್ ಗಾಂಧಿ ಭಾಗಿ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಲೋಕಭವನದಲ್ಲಿ ನಡೆಯಲಿರುವ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಭಾಗವಹಿಸಲಿದ್ದಾರೆ. ಅವರ ಭದ್ರತೆ ದೃಷ್ಟಿಯಿಂದ ರಾಹುಲ್ ಗಾಂಧಿ ಅವರು ನೆಲೆಸಲಿರುವ ಶಾಂಗ್ರಿಲಾ ಹೋಟೆಲ್‌ನ 1 ಕಿ.ಮೀ.ವ್ಯಾಪ್ತಿಯಲ್ಲಿ ತಾತ್ಕಲಿಕವಾಗಿ ನೋ ಫ್ಲೈ ವಲಯ ಎಂದು ಘೋಷಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.



ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ

ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅವರು ಲೋಕಭವನದ ಗಾಜಿನ ಮನೆಯಲ್ಲಿ ಜೂ.3ರಂದು ಸಂಜೆ ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಹಾಗೂ ರೇಸ್‌ಕೋರ್ಸ್ ರಸ್ತೆ ಬಳಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಜೂ.3 ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ರ ವರೆಗೆ ಕೆಲ ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರಿನ ಸಂಚಾರ ಪೊಲೀಸರು ತಿಳಿಸಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ದೇಶ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಇನ್ನು ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಕಾರ್ಯಕ್ರಮಕ್ಕೆ ಭಾಗವಹಿಸಬಹುದಾಗಿದೆ. ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.



ಹಲವೆಡೆ ಸಂಚಾರ ಮಾರ್ಪಾಡು

• **ಬೆಂಗಳೂರು:** ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಲೋಕಭವನದ ಗಾಜಿನ ಮನೆಯಲ್ಲಿ ಜೂ.3ರಂದು ಸಂಜೆ ನಾಲ್ಕು ಗಂಟೆಗೆ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮ ಹಾಗೂ ರೇಸ್‌ಕೋರ್ಸ್ ರಸ್ತೆ ಬಳಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಜೂ.3 ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ರ ವರೆಗೆ ಕೆಲ ರಸ್ತೆಗಳಲ್ಲಿ ಸಂಚಾರ ಮಾರ್ಪಾಡು ಮಾಡಲಾಗಿದೆ ಎಂದು ಬೆಂಗಳೂರಿನ ಸಂಚಾರ ಪೊಲೀಸರು ತಿಳಿಸಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮಕ್ಕೆ ದೇಶ ಹಾಗೂ ರಾಜ್ಯದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಇನ್ನು ಲೋಕಭವನಕ್ಕೆ ಆಹ್ವಾನಿತರಿಗೆ ಮಾತ್ರ ಕಾರ್ಯಕ್ರಮಕ್ಕೆ ಭಾಗವಹಿಸಬಹುದಾಗಿದೆ, ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ.

ಸಂಚಾರ ನಿರ್ಬಂಧ

ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಓ. ಜಂಕ್ಷನ್‌ವರೆಗೆ, ಸಿ.ಟಿ.ಓ. ವೃತ್ತದಿಂದ ಲೋಕಭವನದವರೆಗೆ, ಬಾಳೇಕುಂದ್ರಿ ಜಂಕ್ಷನ್‌ನಿಂದ ಅಂಬೇಡ್ಕರ್ ರಸ್ತೆ ಕಡೆಗೆ, ಕೆ.ಆರ್.ಸರ್ಕಲ್ ಕಡೆಯಿಂದ ಕಾಫಿಬೋರ್ಡ್ ಜಂಕ್ಷನ್‌ವರೆಗೆ, ರೇಸ್ ಕೋರ್ಸ್ ರಸ್ತೆಯ ಟ್ರಿಲೈಟ್ ಜಂಕ್ಷನ್‌ನಿಂದ ಸುಬ್ಬಣ್ಣ ಜಂಕ್ಷನ್‌ವರೆಗೆ, ಕ್ವೀನ್ಸ್ ಜಂಕ್ಷನ್ ಕಡೆಯಿಂದ ಸಿ.ಟಿ.ಓ ಕಡೆಗೆ. ಈ ಮಾರ್ಗಗಳ ಪೈಕಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿರುವ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ

ಕಬ್ಬನ್ ರಸ್ತೆಯ ಬಿ.ಆರ್.ವಿ ಜಂಕ್ಷನ್‌ನಿಂದ ಸಿ.ಟಿ.ಓ.ಜಂಕ್ಷನ್ ವರೆಗೆ ಹಾಗೂ ಸಿ.ಟಿ.ಓ. ವೃತ್ತದಿಂದ ಲೋಕಭವನದವರೆಗೆ ಸಂಚರಿಸುವ ವಾಹನಗಳು, ಬಿ.ಆರ್.ವಿ. ಜಂಕ್ಷನ್ ಬಳಿ ಶಿವಾಜಿನಗರ ಕಡೆಗೆ ಬಲತಿರುವು ಹಾಗೂ ಅನಿಲ್ ಕುಂಬ್ಳೆ ಜಂಕ್ಷನ್ ಕಡೆಗೆ ಎಡತಿರುವು ಪಡೆದು ಸಂಚರಿಸಬಹುದಾಗಿದೆ. ಕ್ವೀನ್ಸ್ ರಸ್ತೆ ಹಾಗೂ ಶಿವಾಜಿನಗರ ಕಡೆಯಿಂದ ಬರುವ ವಾಹನಗಳು ಬಾಳೇಕುಂದ್ರಿ ಜಂಕ್ಷನ್ ಬಳಿ ಕನ್ನಿಂಗ್ ಹ್ಯಾಮ್ ರಸ್ತೆಯ ಮುಖಾಂತರ ಸಂಚರಿಸಬಹುದಾಗಿದೆ. ಕೆ.ಆರ್.ಸರ್ಕಲ್ ಕಡೆಯಿಂದ ಕಾಫಿಬೋರ್ಡ್ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ನೃಪತುಂಗ ರಸ್ತೆಯ ಮುಖಾಂತರ ಸಂಚರಿಸಬಹುದಾಗಿದೆ.

ಎಲ್ಲೆಲ್ಲಿ ವಾಹನಗಳ ನಿಲುಗಡೆ ನಿಷೇಧ

ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಬಾಳೇಕುಂದ್ರಿ ವೃತ್ತದಿಂದ ಕೆ.ಆರ್. ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ, ಲೋಕಭವನ ರಸ್ತೆ ಬಿ.ಆರ್.ವಿ.ವೃತ್ತದಿಂದ - ಲೋಕಭವನ ಜಂಕ್ಷನ್‌ವರೆಗೆ, ಎಲ್.ಎಚ್. ರಸ್ತೆ, ಲೋಕಭವನ ಜಂಕ್ಷನ್‌ನಿಂದ - ಚಾಲುಕ್ಯ ವೃತ್ತದವರೆಗೆ, ಕ್ವೀನ್ಸ್ ರಸ್ತೆ, ಬಾಳೇಕುಂದ್ರಿ ಜಂಕ್ಷನ್‌ನಿಂದ - ಕ್ವೀನ್ಸ್ ವೃತ್ತದವರೆಗೆ, ಪ್ಯಾಲೇಸ್ ರಸ್ತೆ, ಮೈಸೂರು ಬ್ಯಾಂಕ್ ವೃತ್ತದಿಂದ - ವಸಂತನಗರ ಕೆಳಸೇತುವೆ ವರೆಗೆ ಮುಂತಾದ ಕಡೆಗಳಲ್ಲಿ ವಾಹನ ನಿಲ್ಲಿಸುವುದು ನಿಷೇಧಿಸಲಾಗಿದೆ.

ಬ್ಯಾನರ್ ತೆರವು



ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಹಿನ್ನೆಲೆ ಡಿಕೆಶಿಗೆ ಶುಭಕೋರಿ ನಗರದಲ್ಲಿ ಹಾಕಲಾಗಿದ್ದ ಅನಧಿಕೃತ ಹಾಕಲಾಗಿದ್ದ ಫ್ಲೆಕ್ಸ್,ಬ್ಯಾನರ್‌ಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮೂಲಾಜಿಲ್ಲದೆ ತೆರವುಗೊಳಿಸಿದೆ. ಜಿಬಿಎಯಿಂದ ಅನುಮತಿ ಪಡೆದು ಹಾಕಲಾದ ಫ್ಲೆಕ್ಸ್, ಬ್ಯಾನರ್‌ಗಳನ್ನು ಮಾತ್ರ ಉಳಿಸಿದೆ. ವಿಧಾನಸೌಧ, ಹೈಕೋರ್ಟ್ ಮುಂಭಾಗ, ಲೋಕಭವನ ಸೇರಿದಂತೆ ನಗರದ ವಿವಿಧೆಡೆ ಅನಧಿಕೃತವಾಗಿ ಅಳವಡಿಸಿದ್ದ ಡಿ.ಕೆ.ಶಿವಕುಮಾರ್‌ಗೆ ಶುಭಕೋರುವ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ ಜೊತೆಗೆ ಒತ್ತುವರಿಯಾಗಿದ್ದ ಪಾದಚಾರಿ ಮಾರ್ಗವನ್ನು ಅಧಿಕಾರಿ ಹಾಗೂ ಸಿಬ್ಬಂದಿ ಕಾರ್ಯಾಚರಣೆ ಮೂಲಕ ತೆರವುಗೊಳಿಸಿದ್ದಾರೆ.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

• **ಬೆಂಗಳೂರು:** ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸಂಬಂಧ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.



ಮೇಲುಕೋಟೆ ನಿವಾಸಿ, ದೇವಸ್ಥಾನದ ಭಕ್ತರಾದ ವಿದ್ವಾನ್ ಡಾ.ಎಂ.ಪಿ. ನರ ಸಿಂಹನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ವಾದ ಆಲಿಸಿದ ಪೀಠವು ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿತು. ಅಲ್ಲದೇ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ನಿರ್ದೇಶನ ನೀಡಿ ವಿಚಾರಣೆಯನ್ನು ಸೆ.2ಕ್ಕೆ ಮುಂದೂಡಿತು.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳ ಕಾಯಿದೆ-1977ರ ಪ್ರಕಾರ ಚೆಲುವ ನಾರಾಯಣಸ್ವಾಮಿ ದೇವಸ್ಥಾನ ಎ ದರ್ಜೆ ದೇವಸ್ಥಾನವಾಗಿದ್ದು, ವಾರ್ಷಿಕ 25 ಲಕ್ಷ ರೂ.ಆದಾಯ ಹೊಂದಿದೆ. ಕಾಯಿದೆಯ ಸೆಕ್ಷನ್ 25ರ ಪ್ರಕಾರ ದೇವಸ್ಥಾನಕ್ಕೆ ವ್ಯವಸ್ಥಾಪನಾ ಸಮಿತಿ ರಚಿಸಬೇಕು. ಕೊನೆಯ ಬಾರಿಗೆ ರಚಿಸಲಾಗಿದ್ದ ಸಮಿತಿಯ ಅವಧಿಯು 2013-14ನೇ ಸಾಲಿಗೆ ಮುಗಿದಿದೆ. ಕಳೆದ 12-13 ವರ್ಷಗಳಿಂದ ಆಡಳಿತಾಧಿಕಾರಿಯೇ ದೇವಸ್ಥಾನದ ನಿರ್ವಹಣೆ ಮಾಡುತ್ತಿದ್ದಾರೆ. 2023ರಲ್ಲಿ ವ್ಯವಸ್ಥಾಪನಾ ಸಮಿತಿ ರಚನೆಗೆ ಅಧಿಸೂಚನೆ ಹೊರಡಿಸಲಾಗಿದ್ದರೂ, ಈವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಕಾರ್ಮಿಕರ ಕನಿಷ್ಠ ವೇತನ: ಹೈ ನಿರ್ದೇಶನ

• **ಬೆಂಗಳೂರು:** ಕಾರ್ಮಿಕರ ಕನಿಷ್ಠ ವೇತನ ಹೆಚ್ಚಿಸಿರುವ ಸರ್ಕಾರದ ಆದೇಶ ಪ್ರಶ್ನಿಸಿ ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್ ಸಲ್ಲಿಸಿರುವ ಅರ್ಜಿಯಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿಸುವಂತೆ ಹೈಕೋರ್ಟ್ ನಿರ್ದೇಶಿಸಿದೆ.

ರಾಜ್ಯ ಕಾರ್ಮಿಕ ಇಲಾಖೆಯು ಮೇ 22ರಂದು ಕನಿಷ್ಠ ವೇತನ ಪರಿಷ್ಕರಿಸಿ ಹೊರಡಿಸಿರುವ ಅಧಿಸೂಚನೆ ಪ್ರಶ್ನಿಸಿ ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಶನ್ ಮತ್ತು ಎತಿರಿಯಲ್ ಮಷೀನ್ಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ ಜ್ಯೋತಿ ಮೂಲಿಮನಿ ಅವರ ಏಕಸದಸ್ಯ ಪೀಠ ನಡೆಸಿತು.

ಅರ್ಜಿದಾರರು ಕೇಂದ್ರ ಸರ್ಕಾರದ ಕಾಯಿದೆಯನ್ನು ಉಲ್ಲೇಖಿಸುತ್ತಿರುವುದರಿಂದ ಕೇಂದ್ರ ಸರ್ಕಾರವನ್ನು ಪಕ್ಷಕಾರರನ್ನಾಗಿ ಮಾಡಬೇಕು. ಕೇಂದ್ರ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ನೋಡಬೇಕಿದೆ ಎಂದು ಪೀಠ ಹೇಳಿತು. ಅರ್ಜಿದಾರರ ಪರ ಹಿರಿಯ ವಕೀಲ ಎಸ್‌ಎಸ್ ನಾಗಾನಂದ್ ಅವರ ವಾದ ಆಲಿಸಿದ ಪೀಠವು ಕೇಂದ್ರ ಸರ್ಕಾರವನ್ನು ಪ್ರತಿವಾದಿಯನ್ನಾಗಿಸಲು ನಿರ್ದೇಶಿಸಿ, ವಿಚಾರಣೆಯನ್ನು ಜೂ.9ಕ್ಕೆ ಮುಂದೂಡಿತು.

ನಾಗಾನಂದ್ ಅವರು ಶೇ.60ರಷ್ಟು ವೇತನ ಹೆಚ್ಚಳ ಮಾಡಲಾಗಿದೆ. ಇದರಿಂದಾಗಿ ನರ್ಸಿಂಗ್ ಹೋಮ್, ಕಾಲೇಜುಗಳು ಮುಚ್ಚುತ್ತವೆ. ಅಷ್ಟು ಸಂಬಳವನ್ನು ಅವರು ಪಾವತಿಸಲಾಗದು. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟದಲ್ಲಿ ಅತ್ಯಂತ ಹೆಚ್ಚು ಕನಿಷ್ಠ ವೇತನ ನಿಗದಿಯಾಗಿದೆ. ಮಧ್ಯಂತರ ಆದೇಶ ಮಾಡದೇ ಇದ್ದರೆ ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆಗಳು, ಸಾವಿರಾರು ಕೈಗಾರಿಕೆಗಳು ಲಕ್ಷಾಂತರ ಕಾರ್ಮಿಕರಿಗೆ ಹೊಸ ಆದೇಶದ ಅನ್ವಯ ವೇತನ ಪಾವತಿಸಬೇಕಾಗುತ್ತದೆ. ಮುಂದುವರಿದು, ಹಿಂಪಡೆಯಲಾಗಿರುವ ಕಾಯಿದೆಯನ್ನು ಆಧರಿಸಿ ವೇತನ ಹೆಚ್ಚಿಸಲು ಅಧಿಸೂಚನೆ ಹೊರಡಿಸಬಹುದೇ? ಎಂದು ಪ್ರಶ್ನಿಸಿದರು. ಅಖಿಲಭಾರತ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಒಕ್ಕೂಟ ಪ್ರತಿನಿಧಿಸಿದ್ದ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು, 2017ರಲ್ಲಿ ಕೊನೆಯ ಬಾರಿಗೆ ವೇತನ ಪರಿಷ್ಕರಣೆ ಮಾಡಲಾಗಿದೆ.

ಉದಯನಿಧಿ ಸ್ಟಾಲಿನ್ ಹೆಸರಿನಲ್ಲಿ ತಾಯಿಯಿಂದ ದೇವಿಗೆ ವಿಶೇಷ ಅರ್ಚನೆ

ಚಾಮುಂಡಿಗೆ ದುರ್ಗಾ ಸ್ಟಾಲಿನ್ ಪೂಜೆ

• **ಮೈಸೂರು:** ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಅವರು ಮೈಸೂರಿನ ಚಾಮುಂಡೇಶ್ವರಿ ಹಾಗೂ ನಿಮಿಷಾಂಬಾ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಸನಾತನ ಧರ್ಮದ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿ ದೇಶಾದ್ಯಂತ ಆಕ್ರೋಶಕ್ಕೆ ಗುರಿ ಯಾಗಿದ್ದ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರ ತಾಯಿಯೇ ಈಗ ಮಗ ಹಾಗೂ ಪತಿಯ ಹೆಸರಿನಲ್ಲಿ ಶಕ್ತಿ ದೇವತೆಗಳಿಗೆ ಅರ್ಚನೆ ಮಾಡಿಸಿರುವುದು ಸಾರ್ವಜನಿಕ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಮೈಸೂರಿನ ಚಾಮುಂಡಿಬೆಟ್ಟ ಹಾಗೂ ಮಂಡ್ಯದ ಗಂಜಾಂನ ನಿಮಿಷಾಂಬಾ ದೇವ ಸ್ಥಾನಕ್ಕೆ ತಮಿಳುನಾಡು ಮಾಜಿ ಸಿಎಂ ಎಂಕೆ ಸ್ಟಾಲಿನ್ ಪತ್ನಿ ದುರ್ಗಾ ಸ್ಟಾಲಿನ್ ಭೇಟಿ ನೀಡಿದರು. ಸನಾತನ ಧರ್ಮ ವಿರೋಧಿಸಿದ್ದ ಪುತ್ರ ಉದಯ ನಿಧಿ ಸ್ಟಾಲಿನ್ ಹೆಸರಿನಲ್ಲಿ ತಾಯಿಯಿಂದ ದೇವಿಗೆ ವಿಶೇಷ ಅರ್ಚನೆ ಮತ್ತು ಮಡಿಲು ತುಂಬಿಸುವ ಉಡಿಸೇವೆ ಸಲ್ಲಿಕೆ ಮಾಡಿ ಪ್ರಾರ್ಥಿಸಿದ್ದಾರೆ. ಇತ್ತೀಚೆಗಷ್ಟೇ ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಪುತ್ರ ಹಾಗೂ ವಿಪಕ್ಷ ನಾಯಕ ಉದಯ ನಿಧಿ ಸ್ಟಾಲಿನ್, 'ಸನಾತನ ಧರ್ಮ ಎಂಬುದು ಸೊಳ್ಳೆ, ಡೆಂಗ್ಯೂ, ಮಲೇರಿಯಾ ಇದ್ದಂತೆ. ಅದನ್ನು ಕೇವಲ ವಿರೋಧಿಸಿದರೆ ಸಾಲದು, ಸಮಾಜದಿಂದ ಸಂಪೂರ್ಣವಾಗಿ ಕಿತ್ತೊಗೆಯಬೇಕು' ಎಂದು ಹೇಳಿಕೆ ನೀಡಿದ್ದರು. ಈ ಹೇಳಿಕೆಯು ದೇಶಾದ್ಯಂತ ಭಾರಿ ವಿವಾದ ಸೃಷ್ಟಿಸಿತ್ತು.



ಮಗ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸನಾತನ ಧರ್ಮವನ್ನು ವಿರೋಧಿಸಿದ್ದರೂ, ತಾಯಿ ದುರ್ಗಾ ಸ್ಟಾಲಿನ್ ಮಾತ್ರ ತಮ್ಮ ಧಾರ್ಮಿಕ ನಂಬಿಕೆ ಯನ್ನು ಮುಂದುವರಿಸಿದ್ದಾರೆ. ಮಗನ ಒಳಿತಿಗಾಗಿ ಹಾಗೂ ಕುಟುಂಬದ ಸುಖ-ಶಾಂತಿಗಾಗಿ ಅವರು ಹಿಂದೂ ಸಂಪ್ರದಾಯದಂತೆ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸುವ ಮೂಲಕ ಮಗನ ಹೇಳಿಕೆಗೆ ತದ್ವಿರುದ್ಧವಾಗಿ ನಡೆದುಕೊಂಡಿದ್ದಾರೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದ ದುರ್ಗಾ ಸ್ಟಾಲಿನ್, ಕುಟುಂಬದ ಒಳಿತಿಗಾಗಿ ಪ್ರಾರ್ಥಿಸಿದರು. ಧಾರ್ಮಿಕ ದರ್ಶನದ ಬಳಿಕ ಮೈಸೂರಿನಲ್ಲಿರುವ ಶಾಸಕ ಜಿ.ಟಿ. ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿದ ಅವರು, ಜಿ.ಟಿ.ಡಿ ಪತ್ನಿ ಲಲಿತಾ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದರು.

ಕೇಂದ್ರ ರಾಜ್ಯ ಖಾತೆ ಸಚಿವ ರಾಮದಾಸ್ ಅಠವಲೆ ಆರೋಪ

ಯುಪಿಎ ಅವಧಿಯಲ್ಲೇ 10 ಬಾರಿ ಬೆಲೆ ಏರಿಕೆ

• **ಕಲಬುರಗಿ:** ಕಳೆದ 12 ವರ್ಷಗಳ ಅವಧಿಯಲ್ಲಿ ಒಂದೇ ಒಂದು ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗಿಲ್ಲ.



ಮಧ್ಯ ಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ ಇರುವುದರಿಂದ ಹಾಗೂ ದೇಶದ ಆರ್ಥಿಕತೆ ಕುಸಿಯಬಾರದು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡುವ ನಿರ್ಧಾರ ಕೈಗೊಂಡಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ ಅಠವಲೆ ಹೇಳಿದರು.

ನಗರದ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಆಡಳಿತದಲ್ಲಿ ಒಂದೇ ವರ್ಷದಲ್ಲಿ ಹತ್ತು ಬಾರಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಲಾಗಿದ್ದು, ಇದೀಗ ಸರ್ಕಾರದ ಮುಂದೆ ಯಾವುದೇ ದಾರಿ ಇಲ್ಲದ ಹಿನ್ನೆಲೆ ಬೆಲೆ ಏರಿಕೆಯಾಗಿದೆ. ಇದರಿಂದ ಸಾಮಾನ್ಯ ನಾಗರೀಕರಿಗೆ ಕಷ್ಟವಾಗಲಿದೆ ಎಂಬ ಅರಿವು ಸರ್ಕಾರಕ್ಕಿದೆ. ಹೀಗಾಗಿ ಏರಿಕೆ ಮಾಡಿರುವ ಪೆಟ್ರೋಲ್ ಡೀಸೆಲ್ ದರವನ್ನು ಕಡಿಮೆ ಮಾಡುವ ಚಿಂತನೆ ಸರ್ಕಾರ ಮಾಡುತ್ತಿದೆ ಎಂದರು.

ಕಳೆದ 12 ವರ್ಷಗಳಲ್ಲಿ ದೇಶದ ಅಭಿವೃದ್ಧಿಗೆ ವೇಗ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದ ರಾಜ್ಯಗಳಿಗೆ ಯಾವುದೇ ತಾರತಮ್ಯವಿಲ್ಲದೆ ಎಲ್ಲ ಯೋಜನೆಗಳ ಲಾಭ ಪಡೆಯಲೆಂದು ಅನುದಾನ ನೀಡುತ್ತಿದೆ. 2026-27ನೇ ಸಾಲಿನ ಬಜೆಟ್ 57 ಲಕ್ಷ ಕೋಟಿ ಇದ್ದು, ದೇಶದ ಸರ್ವ ಸಮುದಾಯಗಳಿಗೆ ಸಮಾನವಾಗಿ ಪರಿಗಣಿಸಿದೆ.

ನನ್ನ ಸಚಿವಾಲಯಕ್ಕೆ ಕಳೆದ ಬಜೆಟ್‌ನಲ್ಲಿ 1,98 ಕೋಟಿ ಹಣ ನೀಡಲಾಗಿದ್ದು, ಇದರಲ್ಲಿ ಎಸ್ಸಿ, ಓಬಿಸಿ, ಹಿರಿಯ ನಾಗರಿಕರು, ಟ್ರಾನ್ಸ‌ಜೆಂಡರ್, ದಿವ್ಯಾಂಗರ ಅಭಿವೃದ್ಧಿಗೆ ಬಳಸಲಾಗುತ್ತಿದೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಮಹಾರಾಷ್ಟ್ರ ಅಧ್ಯಕ್ಷ ಎಂ.ವೆಂಕಟಸಿಂಗ್, ಕಾಕಾಸಾಹೇಬ್ ಕಣದಾಳ, ದೇವಿದಾಸ ಕಾಂಬ್ಳೆ, ಸತೀಶ್ ಹಾಸನ್, ನಾಗೇಶ್ ತಲಕಣಿ, ಶ್ರವಣ,ರಾಜಾ ಸಾರವಾಡೇ, ಎ.ಬಿ.ಹೊಸಮನಿ, ಪ್ರಕಾಶ್ ಮೂಲಭಾರತಿ ಇದ್ದರು.

2029ಕ್ಕೂ ನರೇಂದ್ರ ಮೋದಿ ಸರ್ಕಾರ ಅಧಿಕಾರ

ಕೇಂದ್ರ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ ಎಂಬ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿಕೆಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ರಾಮದಾಸ್ ಅಠವಲೆ, ಖರ್ಗೆ ಅವರಿಗೆ ಮಾತನಾಡಲು ಅಧಿಕಾರ ಇದೆ. ಏಕಂದರೆ ಅವರು ವಿರೋಧ ಪಕ್ಷದಲ್ಲಿದ್ದಾರೆ. ವಿರೋಧ ಪಕ್ಷದಲ್ಲಿದ್ದಾಗ ಟೀಕೆ ಟಿಪ್ಪಣಿ ಮಾಡುವುದು ಅವರ ಕರ್ತವ್ಯವಾಗಿದ್ದು, ಮಾತನಾಡಲಿ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಕರ್ನಾಟಕದ ಹಿರಿಯ ಕಾಂಗ್ರೆಸ್ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ, ಇಡೀ ಜೀವನ ಕಾಂಗ್ರೆಸ್ ಪಕ್ಷದಲ್ಲೇ ಕಳೆದಿದ್ದಾರೆ. ಯಾವಾಗ ಅವಕಾಶ ಇತ್ತು. ಆಗ ಕಾಂಗ್ರೆಸ್ ಅವರನ್ನು ಮುಖ್ಯಮಂತ್ರಿ ಮಾಡಲಿಲ್ಲ. ಬದಲಾಗಿ ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಿದೆ ಎಂದ ಅವರು, ಖರ್ಗೆ ನಮ್ಮ ಒಳ್ಳೆಯ ಮಿತ್ರರು ಸಹ ಇದ್ದಾರೆ ಎಂದು ಹೇಳಿದರು.

ಸಂಪಾದಕೀಯ

ಮುಂದಿರಲಿದೆ ಹೊಸ ಸವಾಲುಗಳು

ಕೆಲವು ತಿಂಗಳಿನಿಂದ ನಡೆಯುತ್ತಿದ್ದ ತೆರೆಮರೆಯ ಕಸರತ್ತು, ಹರಡುತ್ತಿದ್ದ ಗಾಳಿಸುದ್ದಿಗಳಿಗೆಲ್ಲಾ ಇಂದು ಅಂತಿಮ ತೆರೆ ಬೀಳಲಿದೆ. ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಮಂತ್ರಿಮಂಡಲದಲ್ಲಿ ಯಾರಿರುತ್ತಾರೆ ಎಂಬುದು ಕೆಲವು ದಿನಗಳಲ್ಲಿ ತಿಳಿಯಲಿದೆ. ಆದರೆ ಇನ್ನೆರಡು ವರ್ಷಗಳ ಕಾಲ ಹೊಸ ಮುಖ್ಯಮಂತ್ರಿಯ ಆಡಳಿತ ಹೇಗಿರಲಿದೆ ಎಂಬುದರ ಬಗೆಗಿನ ಕುತೂಹಲವಂತೂ ಜನರಿಗಿದೆ. ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ ಇದ್ದಂಥ ವಾತಾವರಣವಂತೂ ಇರಲಾರದು ಎಂಬ ಮಾತನ್ನು ಜನರು ಈಗಾಗಲೇ ಆಡುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಎರಡು ವಿಭಿನ್ನ ವ್ಯಕ್ತಿತ್ವದವರು. ಶಿವಕುಮಾರ್ ಅವರು ಸಿದ್ಧಮಾದರಿಯ ಯಾವ ಸಿದ್ಧಾಂತಗಳಿಗೆ ಕಟ್ಟುಬಿದ್ದವರಲ್ಲವಾದರೂ ಅನೇಕ ಮುತ್ಸದ್ದಿ ರಾಜಕಾರಣಿಗಳನ್ನು ಆದರ್ಶವಾಗಿಟ್ಟುಕೊಂಡವರು. ಅವರೆಲ್ಲರ ರಾಜಕಾರಣದ ಛಾಯೆಯೇ ಶಿವಕುಮಾರರ ಸಿದ್ಧಾಂತ ಎಂದರೂ ತಪ್ಪಿಲ್ಲ.

ಆಡಳಿತಗಳಲ್ಲಿ ಸಿದ್ಧಾಂತಗಳ ನೆರಳುಗಳಿರುತ್ತವೆ ಎಂಬ ಮಾತು ಸತ್ಯವೇ ಇರಬಹುದು. ಆದರೆ ಸಿದ್ಧಾಂತಗಳು ಯಾವತ್ತೂ ಆಡಳಿತಕ್ಕೆ ಸವಾಲಾಗದು. ಕೊನೆಗೆ ನಿಭಾಯಿಸಿಕೊಂಡು ಹೋಗುವ ಚಾಣಾಕ್ಷ್ಯತನವೇ ಆಡಳಿತಗಾರನಿಗೆ ಇರಬೇಕಾದ ಅಂತಿಮ ಅರ್ಹತೆ. ಶಿವಕುಮಾರ್ ಅವರು ಅದರಲ್ಲೂ ಪಳಗಿದವರು. ಬಂಡೆ, ಟ್ರಬಲ್ ಶೂಟರ್ ಇತ್ಯಾದಿ ಬಿರುದಾಂಕಿತ ರಾಜಕಾರಣಿ ಮತ್ತು ನಗರಾಭಿವೃದ್ಧಿಯ ಚಿಂತನೆಯಲ್ಲಿ ಅತ್ಯಂತ ಸ್ಪಷ್ಟತೆ ಇರುವವರು. ಇವೆಲ್ಲಾ ಇದ್ದರೂ ಡಿ.ಕೆ.ಶಿವಕುಮಾರ್ ಅವರಿಗೆ ಬೇರೆಯದ್ದೇ ಆದ ಸವಾಲುಗಳು ಮುಂದೆ ದುರಾಗಲಿವೆ. ಸಿದ್ದರಾಮಯ್ಯ ಅವಧಿಯಲ್ಲಿ ಅವರು ಗ್ಯಾರಂಟಿ ಯೋಜನೆಗಳ ಯಶಸ್ಸುಗಳೆಲ್ಲವನ್ನೂ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಇನ್ನು ಡಿಕೆಶಿ ಹೊಸದಾದ, ಜನಪ್ರಿಯವಾದ ಯಾವುದನ್ನು ರಾಜ್ಯಕ್ಕೆ ನೀಡುವುದಿದೆ? ಅಲ್ಲದೆ ಮೂರು ವರ್ಷಗಳ ಗ್ಯಾರಂಟಿ ಯೋಜನೆಗಳ ಹೊರೆ ಇನ್ನೆರಡು ವರ್ಷಗಳಲ್ಲಿ ಮತ್ತಷ್ಟು ಹೆಚ್ಚಲಿದೆ. ಅದರ ಹೊರೆಯನ್ನು ಹೊಸ ಮುಖ್ಯಮಂತ್ರಿಯವರೇ ಹೊರಬೇಕಿದೆ. ಡಿಕೆಶಿಯವರು ಅನೇಕ ರಾಜಕೀಯ ಗೊಂದಲಗಳನ್ನು ಸುಲಭವಾಗಿ ಪರಿಹರಿಸಿದವರು. ಹೊರರಾಜ್ಯಗಳಲ್ಲಿ ರಾಜಕೀಯ ಗೊಂದಲಗಳುಂಟಾದರೂ ಹೈಕಮಾಂಡಿಗೆ ಮೊದಲು ನೆನಪಾಗುತ್ತಿದ್ದವರು ಶಿವಕುಮಾರ್ ಅವರೇ. ಆದರೆ ಸ್ವತಃ ಅವರಿಗೆ ಎದುರಾಗುವ ಸವಾಲುಗಳನ್ನು ಅಷ್ಟು ಸುಲಭವಾಗಿ ಎದುರಿಸಬಹುದೇ ಎನ್ನುವ ಪ್ರಶ್ನೆಯೂ ಅನೇಕರದ್ದು. ಸದ್ಯಕ್ಕಂತೂ ಯಾವ ರೀತಿಯ ರಾಜಕೀಯ ಸವಾಲುಗಳೂ ಎದುರಾಗಲಾರದು ಅನಿಸುತ್ತದಾದರೂ ರಾಜಕೀಯದಲ್ಲಿ ಯಾವುದೂ, ಯಾವ ಕ್ಷಣದಲ್ಲಾದರೂ ಸಂಭವಿಸಬಹುದು. ಸಿದ್ದರಾಮಯ್ಯನವರು ತನ್ನ ಹೋರಾಟ ನಿರಂತರವಾಗಲಿದೆ ಎಂಬುದರ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದಾರೆ. ಅದು ಯಾವ ರೀತಿಯದ್ದೂ ಆಗಿರಬಹುದು! ಅಲ್ಲದೆ ಇನ್ನೆರಡು ವರ್ಷದ ಆಡಳಿತಾವಧಿಯಲ್ಲಿ ಕೊನೆಯ ಆರು ತಿಂಗಳು ಚುನಾವಣೆಯ ಸಿದ್ಧತೆಗೆ ತೊಡಬೇಕಾಗಿದೆ. ಉಳಿಯುವುದು ಒಂದೂವರೆ ವರ್ಷಗಳು ಮಾತ್ರ. ಅದರ ನಡುವೆ ಜಿಬಿಎ ಚುನಾವಣೆಯೂ ಎದುರಾಗಲಿದೆ. ಅದು ಸ್ವತಃ ಮುಖ್ಯಮಂತ್ರಿಯ ಹೆಗಲಿಗೆ ಬೀಳಲಿದೆ. ಹೀಗೆ ನೂರಾರು ಸವಾಲುಗಳು ನಾನಾ ಆಕಾರವನ್ನು ಹೊತ್ತು ಎದುರಾಗಲಿದೆ. ಸದಾ ಹರ್ಡಲ್ಸ್‌ಗಳನ್ನು ದಾಟಬೇಕಿದೆ. ಅರೆಕ್ಷಣವೂ ನಿಲ್ಲದಂತೆ ಹುಟ್ಟುಹಾಕಬೇಕಿದೆ. ಡಿಕೆಶಿಯವರಿಗೆ ಮುಂಬರುವ ಸವಾಲುಗಳು ತೀರಾ ಹೊಸದು ಎಂಬುದಿಲ್ಲಿ ಗಮನಾರ್ಹ. ಅವರು ಸುಲಭವಾಗಿ ನದಿ ದಾಟಲಿದ್ದಾರೆಯೇ ಎಂಬುದನ್ನು ಕಾಲ ಮಾತ್ರ ಉತ್ತರಿಸಲಿದೆ.

ದೇಹ ದಹನದವರೆಗಿನ ಕ್ರಿಯೆಗಳು ಮತ್ತು ಅವುಗಳ ವೈಶಿಷ್ಟ್ಯ

ಅಗ್ನಿಯು ಹುಟ್ಟಿನಿಂದ ಮರಣದ ಅನಂತರದವರೆಗೂ ನಮ್ಮ ಜೊತೆ ಘನಿಷ್ಠ ಸಂಬಂಧವನ್ನು ಉಳ್ಳವನಾಗಿದ್ದಾನೆ.



ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಇಲ್ಲಿಯವರೆಗೆ ವ್ಯಕ್ತಿಯೊಬ್ಬನ ಮರಣದ ಸಂದರ್ಭದಲ್ಲಿ ಕೂಡಲೇ ಮಾಡಲಾಗುವ ಅಂತ್ಯೇಷ್ಟಿಯ ಅಂಗವಾದ ಕೆಲವು ಕರ್ಮಾಂಗಗಳನ್ನು ತಿಳಿದುಕೊಂಡೆವು. ವ್ಯಕ್ತಿಯ ದೊಡ್ಡ ಉಸಿರು ಹೊರಡುವಾಗ ಆತನ ತಲೆಯನ್ನು ದಕ್ಷಿಣ ದಿಕ್ಕಿಗಿಟ್ಟು ಮಲಗಿಸಬೇಕು. ಅಲ್ಲಿಂದ ಆರಂಭಿಸಿ ಮರಣದ ಅನಂತರ ಮಾಡಲಾಗುವ ಶವಾಭಿಷೇಕದವರೆಗಿನ ವಿಧಾನಗಳ ಮಹತ್ತ್ವವನ್ನು ತಿಳಿದುಕೊಂಡೆವು. ಓಷಧಿಗಳಿಂದ ಕೂಡಿದ ಜಲದಿಂದ ಪಾದದಿಂದ ತಲೆಯವರೆಗೆ ಮೃತಶರೀರದ ಅಭಿಷೇಕವನ್ನು ಮಾಡಿದ ಅನಂತರ ದೇಹವನ್ನು ದಹನಪ್ರದೇಶದವರೆಗೆ ದೇವತಾನಾಮಸ್ಮರಣೆಯ ಸಹಿತವಾಗಿ ಎತ್ತಿಕೊಂಡು ಹೋಗಬೇಕು. ಈ ಸಂದರ್ಭದಲ್ಲಿ ಬರುವ ಮಂತ್ರಗಳಲ್ಲಿ ದೇವತೆಗಳನ್ನು, ಅಗ್ನಿಯನ್ನು ಮತ್ತು ವಾಯುವನ್ನು ಕುರಿತು ಪ್ರಾರ್ಥಿಸಲಾಗುತ್ತದೆ. ಶರೀರವನ್ನು ತ್ಯಜಿಸಿದ ಜೀವನನ್ನು ಇನ್ನು ಮುಂದೆ ಪ್ರೇತ ಎಂದು ಕರೆಯಲಾಗುತ್ತದೆ. ಪ್ರೇತ ಎಂದರೆ ಇಲ್ಲಿಂದ ಹೊರಟವನು ಎಂದರ್ಥ. ಶರೀರವನ್ನು ತ್ಯಜಿಸಿ ಹೊರಟಿರುವುದರಿಂದ ಸೂಕ್ಷ್ಮಶರೀರದಿಂದ ಕೂಡಿದ ಜೀವನನ್ನು ಪ್ರೇತ ಎಂದು ಕರೆಯಲಾಗುತ್ತದೆ. ಹೇ ಪ್ರೇತ, ಸರ್ವಲೋಕರಕ್ಷಕನಾದ ದೇವನು ನಿನ್ನನ್ನು ಇಲ್ಲಿಂದ ತೆಗೆದುಕೊಂಡುಹೋಗಿ ಪಿತೃಗಳಿಗೆ ಸಮರ್ಪಿಸಲಿ. ಯಾವ ಅಗ್ನಿಯು ನಿನ್ನ ದೇಹವನ್ನು ದಹಿಸುತ್ತಾನೋ ಆತನು ನೀನು ಮಾಡಿದ ಕರ್ಮವನ್ನು ಅರಿತ ದೇವತೆಗಳಿಗೆ ನಿನ್ನನ್ನು ತಲುಪಿಸಲಿ ಎಂಬಿತ್ಯಾದಿಯಾಗಿ ಪ್ರಾರ್ಥಿಸಲಾಗುತ್ತದೆ. ಒಟ್ಟಿನಲ್ಲಿ ಜೀವನ ಮುಂದಿನ ಪ್ರಯಾಣ ಸುಗಮವಾಗಿ ನಡೆಯಲಿ ಎಂಬುದಾಗಿ ಈ ಮಂತ್ರಗಳ ಮೂಲಕ ಪ್ರಾರ್ಥಿಸಲಾಗುತ್ತದೆ.

ಹೀಗೆ ಆ ದೇಹವನ್ನು ಹೊತ್ತೊಯ್ಯುವಾಗ, ದಹನಪ್ರದೇಶದ ಮಾರ್ಗದ ಮೂರನೆಯ ಒಂದಂಶದಷ್ಟು ಸಾಗಿದ ಮೇಲೆ ಒಮ್ಮೆ ದೇಹವನ್ನು ಇಟ್ಟು ತಿಲೋದಕಾದಿಗಳನ್ನು ನೀಡಬೇಕು. ಹೀಗೆ ಮೂರು ಬಾರಿ ಮಾಡಿ ದಹನಪ್ರದೇಶವನ್ನು ತಲುಪಿಸಬೇಕು. ಇಲ್ಲಿಯೂ ವಾಯ್ವಾದಿಗಳನ್ನು ಕುರಿತು ಪ್ರಾರ್ಥಿಸಲಾಗುತ್ತದೆ. ಎಲ್ಲಿ ದಹನವನ್ನು ಮಾಡಲಾಗುತ್ತದೆಯೋ ಆ ಭೂಮಿಯಲ್ಲಿ ಈಗಾಗಲೇ ಇರುವ ದೇವತೆಗಳನ್ನು ಪ್ರಾರ್ಥಿಸಲಾಗುತ್ತದೆ. ಅಲ್ಲಿ ಕಲಶವನ್ನಿಟ್ಟು ಈ ಜೀವನನ್ನು ಪುಣ್ಯಲೋಕಕ್ಕೆ ತಲುಪಿಸಿ ಅಲ್ಲಿ ಮಾಡಲಾಗುವ ಪ್ರಾರ್ಥನೆ. ಅನಂತರದ ಮಂತ್ರಗಳಲ್ಲಿ ಪಿತೃಗಳನ್ನು ಕುರಿತು ಪ್ರಾರ್ಥನೆಯನ್ನು ನಡೆಸಲಾಗುತ್ತದೆ.

ಯಥಾ ಪಿತಾ ಪುತ್ರಂ ಪಶ್ಯತಿ ಸಖಾ ವಾ ಸಖಿಮಾಗತಮ್ ।
ಏವಮಿಮಂ ಪೂರ್ವಂ ಸಂಕ್ಲಿನ್ನಾಃ ಪ್ರೇತಾಃ ಪಶ್ಯತ ನಾನ್ಯಥಾ ॥

– ಅರ್ಥಾತ್ ಹೇಗೆ ಮನೆಗೆ ಬಂದ ಪುತ್ರನನ್ನು ತಂದೆಯು ಪ್ರೇಮದಿಂದ ಸ್ವಾಗತಿಸುತ್ತಾನೋ, ಮನೆಗೆ ಬಂದಿರುವ ಮಿತ್ರನನ್ನು ಸ್ನೇಹಿತನು ಸ್ನೇಹಪೂರ್ವಕವಾಗಿ ನೋಡುತ್ತಾನೋ ಹಾಗೆಯೇ ಈ ಜೀವನನ್ನೂ ನೋಡಿರಿ ಎಂಬುದು ಪ್ರಾರ್ಥನೆಯ ಸಾರ. ಹೀಗೆ ಪ್ರಾರ್ಥನೆಯನ್ನು ಮಾಡಿ ಮುಖವೇ ಮೊದಲಾದ ಏಳು ಸ್ಥಾನಗಳಲ್ಲಿ ಆಜ್ಯಬಿಂದುವನ್ನು ಹಾಕಿ ಭೂರಾದಿ ಸಪ್ತಲೋಕಗಳನ್ನು ಆತ ತನ್ನ ಕರ್ಮಕ್ಕನುಸಾರವಾಗಿ ಸಾಗಲಿ ಎಂದು ಆಶಿಸಲಾಗುತ್ತದೆ. ಅನಂತರ ಆದಿತ್ಯನಿಗೆ ಆಹುತಿಯನ್ನು ಕೊಟ್ಟು, ಮೃತಶರೀರದ ಅಂಗುಷ್ಠಬಂಧನವನ್ನು ಬಿಡಿಸಲಾಗುತ್ತದೆ. ಇಲ್ಲಿ ಯಾಕೆ ಮೊದಲು ಅಂಗುಷ್ಠದ ಬಂಧನವನ್ನು ಮಾಡಲಾಗುತ್ತದೆ ಎಂಬ ಬಗ್ಗೆ ಕೆಲವು ಕಡೆ 'ಅಂಗುಷ್ಠವು ಮತ್ತೊಂದು ಜೀವನ ಪ್ರವೇಶಕ್ಕೆ ದಾರಿ. ಹಾಗಾಗಿ ಮೃತಶರೀರದಲ್ಲಿ ಬೇರೆ ಯಾವುದೋ ಜೀವನು ಪ್ರವೇಶಿಸದಿರಲಿ ಎಂಬ ಕಾರಣಕ್ಕೆ ಹೀಗೆ ಮಾಡಲಾಗುತ್ತದೆ' ಎಂದು ತಿಳಿಸಲಾಗಿದೆ. ವ್ಯಕ್ತಿಯ ಮರಣದ ಅನಂತರ ದಹನದವರೆಗೆ ಕಾಲದ ಅಂತರ ಇರುವುದರಿಂದ ಮತ್ತು ಬಹುದೂರದವರೆಗೆ ಶವದ ಯಾತ್ರೆಯು ಸಾಗಿ ಬರುವಾಗ ಆ ದೇಹದಲ್ಲಿ ಮತ್ತೊಂದು ಜೀವವು ಆವಿಷ್ಟವಾಗದಿರಲೆಂಬ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ ಎಂಬುದಾಗಿ ತಿಳಿಸಲಾಗಿದೆ. ದಹನದ ಸಂದರ್ಭದಲ್ಲಿ ಆ ಬಂಧನವನ್ನು ಬಿಡಿಸಲಾಗುತ್ತದೆ.

ಅನಂತರ ಗಡಿಗೆಯಲ್ಲಿ ನೀರನ್ನು ತುಂಬಿಕೊಂಡು ಅದಕ್ಕೊಂದು ಛಿದ್ರವನ್ನು ಮಾಡಿ ಮೂರು ಬಾರಿ ದೇಹದ ಸುತ್ತ ತಿರುಗಲಾಗುತ್ತದೆ. ಆಗ ಘಟದಿಂದ ಸುರಿಯುವ ನೀರು ಜೀವನ ಪರಲೋಕಯಾತ್ರೆಯ ಸಮಯದಲ್ಲಿ ಆತನ ದಾಹವನ್ನು ತಣಿಸಲಿ ಎಂಬುದಾಗಿ ಪ್ರಾರ್ಥಿಸಲಾಗುತ್ತದೆ. ಇಮಾ ಆಪೋ ಮಧುಮತ್ಯಃ ಅಸ್ಮಿಂಸ್ತೇ ಲೋಕ ಉಪದುಹ್ಯತಾಮ್ । ಇಮಾ ಆಪೋ ಮಧುಮತ್ಯಃ ಅಂತರಿಕ್ಷೇ ತೇ ಲೋಕ ಉಪದುಹ್ಯತಾಮ್ । ಇಮಾ ಆಪೋ ಮಧುಮತ್ಯಃ ಸ್ವರ್ಗೇ ತೇ ಲೋಕ ಉಪದುಹ್ಯತಾಮ್ । ಎಂಬುದಾಗಿ ಒಂದೊಂದು ಸುತ್ತಿಗೂ ಒಂದೊಂದು ಬಾರಿ ಪ್ರಾರ್ಥಿಸಲಾಗುತ್ತದೆ. ಅನಂತರ ಅಗ್ನಿಯನ್ನು ಕುರಿತು ಪ್ರಾರ್ಥಿಸುತ್ತಾ, ಈ ಶರೀರವನ್ನು ಸಮಗ್ರವಾಗಿ ದಹಿಸು ಎಂಬುದಾಗಿ ಕೋರಲಾಗುತ್ತದೆ. ಚೆನ್ನಾಗಿ ದಹಿಸಿದ ಅನಂತರ ಜೀವನನ್ನು ದೇವತೆಗಳಿಗೆ ಸಮರ್ಪಿಸು ಎಂಬುದಾಗಿ ಕೇಳಿಕೊಳ್ಳಲಾಗುತ್ತದೆ.

ಅನಂತರ ಪ್ರೇತವನ್ನುದ್ದೇಶಿಸಿ ಆತನ ಇಂದ್ರಿಯಾದಿಗಳು ಆಯಾ ಅಭಿಮಾನಿ ದೇವತೆಯನ್ನು ಸೇರಲಿ, ಅಂತಃಕರಣವು ವಾಯುವನ್ನು (ಹಿರಣ್ಯಗರ್ಭನನ್ನು) ಸೇರಲಿ ಎಂಬಿತ್ಯಾದಿಯಾಗಿ ಪ್ರಾರ್ಥಿಸಿಕೊಳ್ಳಲಾಗುತ್ತದೆ. ವ್ಯಕ್ತಿಯು ಜೀವಂತವಿರುವಾಗ ಆತ ಐದು ಜ್ಞಾನೇಂದ್ರಿಯಗಳ ಮೂಲಕ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ವಿಷಯಗಳನ್ನು ಗ್ರಹಿಸುತ್ತಾನಷ್ಟೆ.

ಈ ಎಲ್ಲ ವಿಷಯಗಳ ಜ್ಞಾನವಾಗಲು ಆತನಿಗೆ ಇಂದ್ರಿಯಾಭಿಮಾನಿ ದೇವತೆಗಳ ಅನುಗ್ರಹ ಬೇಕಾಗುತ್ತದೆ. ಒಂದೊಂದು ಇಂದ್ರಿಯಕ್ಕೂ ಒಂದೊಂದು ಅಭಿಮಾನಿ ದೇವತೆಯಿರುತ್ತದೆ. ಪ್ರಾಣವನ್ನು ತ್ಯಜಿಸುವಾಗ ಆ ಎಲ್ಲ ಇಂದ್ರಿಯಾಭಿಮಾನಿ ದೇವತೆಗಳೂ ಅಂತಃಕರಣದಲ್ಲಿ ಸೇರಿಕೊಳ್ಳುತ್ತವೆ. ಅನಂತರ ಮನಸ್ಸು ಪ್ರಾಣದಲ್ಲಿ ಲೀನವಾಗುತ್ತದೆ ಎಂಬುದಾಗಿ ಉಪನಿಷತ್ತು ತಿಳಿಸುತ್ತದೆ. ಆ ಪ್ರಾಣವು ತೇಜಸ್ಸಿನಲ್ಲಿ ಲಯವಾಗುತ್ತದೆ. ಹೀಗೆ ಆಗುವಾಗ ಎಲ್ಲ ಇಂದ್ರಿಯಗಳ ದೇವತೆಗಳೂ ಈ ಶರೀರದ ಆಯಾ ಸ್ಥಾನವನ್ನು ತ್ಯಜಿಸಿ ಮನಸ್ಸಿನಲ್ಲಿ ತಮ್ಮ ಕಾರ್ಯದ ಉಪಸಂಹಾರವನ್ನು ಮಾಡಿಕೊಂಡು ಮನಸ್ಸಿನ ಜೊತೆಗೆ ಪ್ರಾಣಾದಿಗಳ ಜೊತೆಗೆ ಜೀವನೊಂದಿಗೆ ಈ ದೇಹವನ್ನು ಬಿಡುತ್ತಾರೆ ಎಂಬುದಾಗಿ ಉಪನಿಷತ್ತು ತಿಳಿಸಿದೆ. ಅದನ್ನೇ ಇಲ್ಲಿ ಪ್ರಾರ್ಥಿಸಲಾಗಿದೆ.

ಅನಂತರ ಅಗ್ನಿಯನ್ನು ಸ್ತುತಿಸಿ ಪ್ರೇತ ಮತ್ತು ಅಗ್ನಿಯ ನಡುವೆ ತಂದೆ -ಮಗನ ಸಂಬಂಧವಿರುವುದಾಗಿ ಹೇಳುತ್ತಾ ಸನ್ಮಾರ್ಗದಲ್ಲಿ ನಡೆಸಬೇಕೆಂಬುದಾಗಿ ಪ್ರಾರ್ಥಿಸಲಾಗುತ್ತದೆ. ಇದನ್ನೇ ಉಪನಿಷತ್ತಿನಲ್ಲಿಯೂ ಕೂಡ ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ಇತ್ಯಾದಿ ಮಂತ್ರಗಳಲ್ಲಿ ಸನ್ಮಾರ್ಗದಲ್ಲಿ ನಡೆಸುತ್ತಾ, ಪಾಪಕರ್ಮಗಳಿಂದ ನಮ್ಮನ್ನು ಮುಕ್ತರನ್ನಾಗಿಸಿ ನಮ್ಮನ್ನು ದೇವಯಾನದಲ್ಲಿ ಕರೆದುಕೊಂಡು ಹೋಗು ಎಂಬಿತ್ಯಾದಿ ಪ್ರಾರ್ಥಿಸುವ ಸಂದರ್ಭವಿದೆ.

ಒಟ್ಟಿನಲ್ಲಿ ಅಗ್ನಿಯು ಭಾರತೀಯ ಸಂದರ್ಭದಲ್ಲಿ ಹುಟ್ಟಿನಿಂದ ಮರಣದ ಅನಂತರದವರೆಗೂ ನಮ್ಮ ಜೊತೆ ಘನಿಷ್ಠ ಸಂಬಂಧವನ್ನು ಉಳ್ಳವನಾಗಿದ್ದಾನೆ. ಅಗ್ನಿಯ ಉಪಾಸನೆಯು ನಮ್ಮ ಜೀವಿತದಲ್ಲೂ, ಅನಂತರವೂ ನಡೆಯುತ್ತಲೇ ಇರುತ್ತದೆ. ಈ ಸಂದರ್ಭದಲ್ಲಿ ಅಗ್ನಿಯಲ್ಲಿ ಅನೇಕ ಆಹುತಿಗಳನ್ನು ಕೊಡಲಾಗುತ್ತದೆ. ಪ್ರೇತದ ಮಾರ್ಗದ ದೇವತೆಗಳಿಗೆ ಈ ಆಹುತಿಗಳು ಸಲ್ಲುತ್ತವೆ. ಅದೇ ಸಂದರ್ಭದಲ್ಲಿ ಈ ಪ್ರೇತನನ್ನು ಸ್ವರ್ಗಪ್ರಾಪ್ತಿಗೆ ವಿಘ್ನದಾಯಿಗಳಾದ ರಾಕ್ಷಸರಿಂದ ರಕ್ಷಿಸು ಎಂಬುದಾಗಿ ಅಗ್ನಿಯನ್ನು ಪ್ರಾರ್ಥಿಸಲಾಗುತ್ತದೆ. ಅನಂತರ ಯಮಸೂಕ್ತದ ಮೂಲಕ ಯಮನ ಸ್ತುತಿಯನ್ನು ಮಾಡಲಾಗುತ್ತದೆ. ಅರ್ಥಗರ್ಭಿತವಾದ ಒಂಬತ್ತು ಮಂತ್ರಗಳು ಆ ಸೂಕ್ತದಲ್ಲಿವೆ. ಈ ಮೂಲಕ ಜೀವನೆಂಬ ಜ್ಯೋತಿಯನ್ನು, ಜ್ಯೋತಿರೂಪನಾದ ಅಗ್ನಿಯು ಪರಮಾತ್ಮನೆಂಬ ಜ್ಯೋತಿಯಲ್ಲಿ ಐಕ್ಯಗೊಳಿಸಲೆಂಬುದಾಗಿ ಕೇಳಿಕೊಳ್ಳಲಾಗುತ್ತದೆ. ಅನಂತರ ಧರ್ಮಕಾಷ್ಠವನ್ನು ಹಾಕಲಾಗುತ್ತದೆ. ಅಲ್ಲಿ ಆ ಜೀವನಿಗೆ ಉತ್ತಮಲೋಕಗಳು ಪ್ರಾಪ್ತಿಯಾಗಲೆಂಬುದಾಗಿ ಪ್ರಾರ್ಥಿಸಲಾಗುತ್ತದೆ. ಯುದ್ಧದಲ್ಲಿ ಮಡಿದ ಕ್ಷತ್ರಿಯ ಮತ್ತು ಶಮದಮಾನ್ವಿತನಾದ ಸಂನ್ಯಾಸಿಯು ಸೂರ್ಯಮಂಡಲವನ್ನು ಭೇದಿಸಿ ಉತ್ತಮಲೋಕಗಳನ್ನು ಹೊಂದುತ್ತಾರೆ. ಅಂಥ ಲೋಕಗಳು ಈ ಜೀವನಿಗೆ ಪ್ರಾಪ್ತಿಯಾಗಲೆಂಬುದು ಇಲ್ಲಿನ ಪ್ರಾರ್ಥನೆ.

ಹೀಗೆ ಒಬ್ಬ ವ್ಯಕ್ತಿಯು ಮರಣವನ್ನು ಹೊಂದಿದ ಮೇಲೆ ನಿರ್ಗಮಿಸಿದ ಜೀವನ ತದುತ್ತರ ಪ್ರಯಾಣಕ್ಕೆ ಸಹಕಾರಿಯಾಗಿ ಅನೇಕ ಅರ್ಥಗರ್ಭಿತವಾಅದ ಕ್ರಮಗಳನ್ನು ಆಚರಿಸಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಈ ಜನ್ಮವೇ ಮೊದಲೂ ಅಲ್ಲ ಮತ್ತು ಕೊನೆಯದೂ ಅಲ್ಲ. ಆತ್ಮಜ್ಞಾನದವರೆಗೂ ಇಂಥ ಜನ್ಮ-ಮರಣದ ಚಕ್ರದಿಂದ ಮುಕ್ತಿಯೆಂಬುದಿಲ್ಲ. ಅಲ್ಲಿಯವರೆಗೆ ಹಳೆಯ ಶರೀರವನ್ನು ತ್ಯಜಿಸಿ ಹೊಸ ಹೊಸ ಶರೀರವನ್ನು ಜೀವನು ಪಡೆಯುತ್ತಾ ಹೋಗುತ್ತಾನೆ. ಹಾಗೆ ಹಳೆಯ ಶರೀರವನ್ನು ತ್ಯಜಿಸಿದ ಮೇಲೆ ಆ ಶರೀರಕ್ಕೆ ಸೂಕ್ತ ವಿಧಾನಗಳೊಂದಿಗೆ ಪ್ರಕೃತಿಯಲ್ಲಿ ಲೀನವಾಗಿಸಲಾಗುತ್ತದೆ. ರಾಮಾಯಣದಲ್ಲಿಯೂ ರಾವಣನ ವಧೆಯ ಅನಂತರ ವಿಭೀಷಣನಿಗೆ ರಾವಣನ ಅಂತ್ಯಕ್ರಿಯೆಯನ್ನು ವಿಧಿವತ್ತಾಗಿ ಆಚರಿಸಲು ರಾಮನು ಆದೇಶಿಸುತ್ತಾನೆ.

ಆತ ಜೀವಂತವಿರುವವರೆಗೆ ಆತ ಶತ್ರುವಾಗಿದ್ದ. ಆದರೆ ಮರಣದ ಅನಂತರ ಶತ್ರುತ್ವವೆಂಬುದು ಇರುವುದಿಲ್ಲ ಎಂಬುದಾಗಿ ರಾಮನೇ ವಿಭೀಷಣನಿಗೆ ಹೇಳಿ ಉತ್ತರಕ್ರಿಯೆಗಳನ್ನು ನಡೆಸಲು ಸೂಚಿಸುತ್ತಾನೆ. ಹೀಗೆ ಮರಣದವರೆಗೂ ನಮಗೆ ಆಶ್ರಯವನ್ನಿತ್ತ ಶರೀರಕ್ಕೆ ಗೌರವಯುತವಾಗಿ ಸಂಸ್ಕಾರಕರ್ಮದ ಮೂಲಕ ಮತ್ತೆ ಪ್ರಕೃತಿಯಲ್ಲಿ ಲೀನವಾಗಿಸುವುದಷ್ಟೇ ಅಲ್ಲ, ಆ ಮೂಲಕ ಜೀವನ ಅನಂತರ ಪ್ರಯಾಣವು ಸುಗಮವಾಗಿ ನಡೆಯಲೆಂಬ ಉದ್ದೇಶದಿಂದ ಮಾಡಲಾಗುವ ಈ ಆಚರಣೆಯು ಕೂಡ ಭಾರತೀಯ ಸನಾತನ ಧರ್ಮದ ವೈಶಿಷ್ಟ್ಯವನ್ನು ಎತ್ತಿ ಹಿಡಿಯುತ್ತದೆ.

ಮುದ್ದಿಸುವುದರಿಂದ ದೋಷ

ಸಾಮೃತೈಃ ಪಾಣಿಭಿರ್ಘ್ನಂತಿ ಗುರವೋ ನ ವಿಷೋಕ್ಷಿತೈಃ ।
ಲಾಲನಾಶ್ರಯಿಣೋ ದೋಷಾಃ ತಾಡನಾಶ್ರಯಿಣೋ ಗುಣಾಃ ॥ –ಮಹಾಭಾಷ್ಯ



ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಆಚಾರ್ಯರು (ತಂದೆ,ತಾಯಿ–ಗುರು) ಮಕ್ಕಳನ್ನು ಹಾಗೂ ಶಿಷ್ಯರನ್ನು ಅಮೃತಯುತವಾದ ತಮ್ಮ ಕೈಗಳಿಂದಲೇ ದಂಡಿಸುತ್ತಾರೆ. ವಿಷಯುಕ್ತಗಳಿಂದಲ್ಲ. ಮುದ್ದಿಸುವುದರಿಂದ ದೋಷ, ಶಿಕ್ಷಿಸುವುದರಿಂದ ಗುಣ – ಎಂಬುದು ಶ್ಲೋಕಾರ್ಥ.

ಆಧುನಿಕ ಶಿಕ್ಷಣ ಕ್ರಮದಂತೆ ವಿದ್ಯಾರ್ಥಿಗಳಿಗೆ ಬಯ್ಯಬಾರದು. ಹೊಡೆಯಬಾರದು, ಯಾವುದೇ ವಿಧವಾದ ಶಿಕ್ಷೆಯನ್ನು ನೀಡಬಾರದು. ಒಂದೊಮ್ಮೆ ಶಿಕ್ಷೆ ಕೊಟ್ಟರೆ ಶಿಕ್ಷಕರ ಮೇಲೆ ಕ್ರಮ ಜರುಗಿಸಲಾಗುತ್ತದೆ. 'ನಮ್ಮ ಮಕ್ಕಳಿಗೆ ನಾವು ಬಯ್ಯುವುದಿಲ್ಲ, ಹೊಡೆಯುವುದಿಲ್ಲ. ಅವರಿಗೆ ಶಿಕ್ಷೆ ಕೊಡುವುದಕ್ಕೆ ನಿಮಗೇನು ಅಧಿಕಾರ?' ಎಂದು ಪ್ರಶ್ನಿಸುವ ಹೆತ್ತವರಿದ್ದಾರೆ. ಮನೆಯಲ್ಲಾಗಲೀ, ಶಾಲೆಯಲ್ಲಾಗಲಿ ಶಿಕ್ಷಿಸದೇ ಇರುವುದರಿಂದ ಮಕ್ಕಳು ಹೆಚ್ಚೆಚ್ಚು ಹಟಮಾರಿಗಳಾಗಿದ್ದಾರೆ. ಹೆತ್ತವರನ್ನು ಹೆದರಿಸುವವರಾಗಿದ್ದಾರೆ. ಇನ್ನೂ ಭಯಾನಕ ಸಂಗತಿಯೆಂದರೆ ಮಕ್ಕಳು ಹೆಚ್ಚೆಚ್ಚು ಅಪರಾಧವೆಸಗುತ್ತಿದ್ದಾರೆ.

ಗುರು– ಹಿರಿಯರು ಬಯ್ಯುವುದರಲ್ಲಿ, ಪೆಟ್ಟು ಕೊಡುವುದರ ಹಿನ್ನೆಲೆಯಲ್ಲಿ ಮಕ್ಕಳ ಮೇಲೆ ಪ್ರೀತಿ ಇದೆಯೇ ವಿನಾ ದ್ವೇಷವಿಲ್ಲ. ಮಕ್ಕಳಿಗೆ ಕೆಡುಕುಂಟು ಮಾಡಬೇಕು ಎಂಬ ಭಾವನೆ ಕನಸಿನಲ್ಲಿಯೂ ಇರುವುದಿಲ್ಲ. ನಮ್ಮ ಮಕ್ಕಳಿಗೆ ಒಳ್ಳೆಯದಾಗಬೇಕೆಂಬ ಹಂಬಲವಿದೆ. ಆಚಾರ್ಯರು,ತಂದೆ–ತಾಯಿಗಳು,ಗುರುಗಳು ಹೊಡೆಯುವಾಗ ಅವರ ಕೈ ಅಮೃತಮಯವಾಗಿರುತ್ತದೆಯೋ ವಿನಾ ವಿಷಮಯವಾಗಲಿ, ದ್ವೇಷಯುಕ್ತವಾಗಿರುವುದಿಲ್ಲ. ಅವರು ನೀಡುವ ಒಂದೊಂದು ಪೆಟ್ಟು ಪಡೆದ ವರ ಪಾಲಿಗೆ ಅಮೃತವೇ ಸರಿ.

'ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್' ಅಂದರೆ ಹುಟ್ಟಿ ಐದು ವರ್ಷವಾಗುವವರೆಗೆ ಮಕ್ಕಳನ್ನು ಪ್ರೀತಿಸಬೇಕು. ಮುದ್ದು ಮಾಡಬೇಕು. ಪ್ರೀತಿಯಿಂದ ನಂಬಿಸಿ ತಿದ್ದುವ (ಪ್ರಯತ್ನ) ಮಾಡಬೇಕು. ಪ್ರೀತಿಪೂರ್ವಕವಾಗಿ ಸಣ್ಣ ಸಣ್ಣ ಮೌಲ್ಯಗಳನ್ನು ತುಂಬಬೇಕು. ಮುಂದಿನ ಹತ್ತು ವರ್ಷ ಶಿಕ್ಷಿಸಿ ಶಿಕ್ಷಣ ಕೊಡಬೇಕು. ತಪ್ಪೆಸಗಿದಾಗ ಕಿವಿ ಹಿಂಡಿ ಸರಿ ಮಾರ್ಗಕ್ಕೆ ಹಚ್ಚಬೇಕು. ಇದಾವುದೂ ದ್ವೇಷದ ಕ್ರಿಯೆಯಲ್ಲ, ಒಳಿತಾಗಬೇಕೆಂಬ ಉತ್ಕಟೇಚ್ಛೆಯ ಪ್ರತಿಫಲನ. ಇದನ್ನೆಂದೂ ತಪ್ಪಾಗಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಬಾರದು. ಹೆತ್ತವರ ಕೈ ವಿಷಮಯವಲ್ಲ. ಅಮೃತ ಸಿಂಚನ. ನೀಡುವ ಪೆಟ್ಟು ಅಮೃತವನ್ನು ಉಣಬಡಿಸುತ್ತದೆ. ಅವರದು ಅಮೃತ ದಂಡನೆ. ಮಕ್ಕಳನ್ನು ಅತಿಯಾಗಿ ಮುದ್ದಿಸುವುದು, ಅವರ ಗೃಹಪಾಠವನ್ನು ನಾವೇ ಮಾಡಿ ಕೊಡುವುದು, ಅವರ ಪುಸ್ತಕದ ಚೀಲವನ್ನು ನಾವೇ ಹೊತ್ತುಕೊಂಡು ಹೋಗುವುದು ದೋಷವೇ ಸರಿ. ತಮ್ಮದೇ ಕೆಲಸವನ್ನು ಮಾಡದ ಆಲಸಿಗಳನ್ನಾಗಿಸುವ ಕೆಟ್ಟಕೆಲಸ. ಇದರ ಬದಲಾಗಿ ತಮ್ಮ ಸಣ್ಣ ಸಣ್ಣ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಪ್ರೇರೇಪಿಸಬೇಕು. ಕಲಿಸಿಕೊಡಬೇಕು. ತಪ್ಪೆಸಗಿದಾಗ ಶಿಕ್ಷೆ ಕೊಟ್ಟರೆ ಭವಿಷ್ಯದಲ್ಲಿ ಗುಣವಾಗಿಯೇ ಪರಿಣಮಿಸುತ್ತದೆ. ಕೆಲಸ ಮಾಡಿ ಕೆಟ್ಟವರಿಲ್ಲ. ಶಿಕ್ಷೆ ಪಡೆದು ಕೆಟ್ಟವರಾದವರೂ ಕಡಿಮೆ. ಕೇವಲ ಮುದ್ದು ಮಾಡಿ ಒಳ್ಳೆಯವರಾದವರೂ ಕಡಿಮೆ. ಆದ್ದರಿಂದ ತಿದ್ದುವುದಕ್ಕಾಗಿ ನೀಡುವ ಶಿಕ್ಷೆಯಿಂದ ವ್ಯಥೆ ಪಡಬಾರದು. ಸುಂದರ ಭವಿಷ್ಯಕ್ಕಾಗಿ ಎಂದು ತಿಳಿಯಬೇಕು.

ಕಾರ್ಮಿಕ-ರೈತರಿಗೆ ಕೊಲ್ಲಿಯ ಹೊಸ ದ್ವಾರ ತೆರೆದ ಭಾರತ

▸ ಪಿಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು



ಜೂನ್ 1 ರಿಂದ ಜಾರಿಗೆ ಬರುವ ಭಾರತ-ಒಮಾನ್ ಮುಕ್ತ ವ್ಯಾಪಾರ ಒಪ್ಪಂದವು ಭಾರತದ ವಿದ್ಯಾರ್ಥಿಗಳು, ಕುಶಲಕರ್ಮಿಗಳು, ಮಹಿಳೆಯರು, ರೈತರು, ಮೀನುಗಾರರು ಮತ್ತು ಎಂಎಸ್‌ಎಂಇಗಳಿಗೆ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು) ಜಾಗತಿಕ ಸಮೃದ್ಧಿಯ ಹಾದಿಗಳನ್ನು ಸೃಷ್ಟಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಶಯದಲ್ಲಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಇದು ಹೊಸಮಾರುಕಟ್ಟೆಗಳನ್ನು ತೆರೆಯುವ ಮೂಲಕ ಮತ್ತು ಉದ್ಯೋಗ ಸೃಷ್ಟಿಯನ್ನು ವೇಗಗೊಳಿಸುವ ಮೂಲಕ ನೆರವಾಗಲಿದೆ.

200–300 ವರ್ಷಗಳಷ್ಟು ಹಳೆಯದಾದ ವ್ಯಾಪಾರಿ ಕುಟುಂಬಗಳು ಸೇರಿದಂತೆ ಸುಮಾರು 7 ಲಕ್ಷ ಭಾರತೀಯರಿಗೆ ನೆಲೆಯಾಗಿರುವ ಒಮಾನ್ ಜೊತೆಗೆ ಭಾರತವು ಆಳವಾದ ಆರ್ಥಿಕ ಹಾಗೂ ಜನತಾ ಸಂಪರ್ಕವನ್ನು ಹೊಂದಿದೆ. ಒಮಾನ್‌ನಿಂದ ಭಾರತೀಯರು ವಾರ್ಷಿಕವಾಗಿ ಸುಮಾರು 2 ಶತಕೋಟಿ ಡಾಲರ್ ಹಣವನ್ನು ಭಾರತಕ್ಕೆ ರವಾನಿಸಿಸುತ್ತಾರೆ. ಇದೇ ವೇಳೆ, 6,000ಕ್ಕೂ ಹೆಚ್ಚು ಭಾರತೀಯ ಉದ್ಯಮಗಳು ಅಲ್ಲಿ ಕಾರ್ಯನಿರ್ವಹಿಸುತ್ತಿವೆ.

ಉಭಯ ದೇಶಗಳ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವು (ಸಿಇಪಿಎ) ಆರ್ಥಿಕ ಮತ್ತು ಕಾರ್ಯತಂತ್ರದ ಬಾಂಧವ್ಯವನ್ನು ಗಣನೀಯವಾಗಿ ಬಲಪಡಿಸುತ್ತದೆ. ಇದು ಒಮಾನ್‌ನಲ್ಲಿ ಶೇಕಡಾ 98ರಷ್ಟು ಆಮದು ಸುಂಕದ ವರ್ಗಗಳಿಗೆ (ಟ್ಯಾರಿಫ್ ಲೈನ್) ತಕ್ಷಣದಿಂದಲೇ 100 ಪ್ರತಿಶತ ಸುಂಕ ರಹಿತ ಮಾರುಕಟ್ಟೆ ಪ್ರವೇಶವನ್ನು ನೀಡುತ್ತದೆ. ಇದು ಒಮನ್‌ಗೆ ಭಾರತದ ಒಟ್ಟು ರಫ್ತಿನಲ್ಲಿ ಶೇಕಡಾ 99.38 ರಷ್ಟನ್ನು ಒಳಗೊಂಡಿದೆ. 'ಸಿಇಪಿಎ' ಪೂರ್ವ ವ್ಯವಸ್ಥೆಯಲ್ಲಿ ಭಾರತದ ರಫ್ತಿನ ಕೇವಲ ಶೇ. 15.3ರಷ್ಟನ್ನು ಮಾತ್ರ ಶೂನ್ಯ ಸುಂಕದಲ್ಲಿ ಮಾರುಕಟ್ಟೆ ಪ್ರವೇಶಿಸಲು ಒಮಾನ್ ಅನುಮತಿಸುತ್ತಿತ್ತು. ಅದಕ್ಕೆ ಹೋಲಿಸಿದರೆ ಸಿಇಪಿಎ ಗಮನಾರ್ಹ ಸುಧಾರಣೆಯನ್ನು ಸೂಚಿಸುತ್ತದೆ. ಪ್ರಸ್ತುತ ಒಮಾನ್‌ನಲ್ಲಿ ಶೇಕಡಾ 5ರಷ್ಟು ಆಮದು ಸುಂಕವನ್ನು ಎದುರಿಸುತ್ತಿರುವ ಭಾರತದ ಸರಕುಗಳು, ಸುಮಾರು 3.64 ಶತಕೋಟಿ ಡಾಲರ್ ಮೌಲ್ಯದ ರಫ್ತುಗಳು ಹೆಚ್ಚು ಸ್ಪರ್ಧಾತ್ಮಕವಾಗಲಿವೆ.ಭಾರತದ ಎಂಎಸ್‌ಎಂಇ ಈ ಒಪ್ಪಂದವು ಪರಿವರ್ತನಾತ್ಮಕವಾಗಬಹುದು, ಏಕೆಂದರೆ ಸಿಇಪಿಎಯಿಂದ ಲಾಭಪಡೆಯುವ ಅನೇಕ ವಲಯಗಳಲ್ಲಿ ಸಣ್ಣ ಉದ್ಯಮಗಳ ಪ್ರಾಬಲ್ಯ ಹೆಚ್ಚಾಗಿದೆ. ಎಂಎಸ್‌ಎಂಇಗಳು ದೊಡ್ಡ ಅಂತರರಾಷ್ಟ್ರೀಯ ಕಾರ್ಯಾದೇಶಗಳನ್ನು ಪಡೆಯುವ ನಿರೀಕ್ಷೆಯಿರುವ ಕೆಲವು ಪ್ರಮುಖ ವಲಯಗಳಲ್ಲಿ ಕಬ್ಬಿಣ ಮತ್ತು ಉಕ್ಕು, ಜವಳಿ, ಚರ್ಮ, ವಾಹನ ಬಿಡಿಭಾಗಗಳು ಮತ್ತು ಕೈಗಾರಿಕಾ ಉಪಕರಣ ವಲಯಗಳು ಸೇರಿವೆ. ಇದು ಉತ್ಪಾದನೆ, ಹೂಡಿಕೆ ಮತ್ತು ಉದ್ಯೋಗ ನೇಮಕಾತಿಯನ್ನು ಉತ್ತೇಜಿಸುತ್ತದೆ. ಬೆಳೆಯುತ್ತಿರುವ ಜಾಗತಿಕ ಅಸ್ಥಿರತೆಯ ಯುಗದಲ್ಲಿ, ಸಿಇಪಿಎ ಭಾರತೀಯ ರಫ್ತುದಾರರಿಗೆ ಮಾರುಕಟ್ಟೆಗಳನ್ನು ವೈವಿಧ್ಯಗೊಳಿಸಲು ಮತ್ತು ಆರ್ಥಿಕ ಮಂದಗತಿ ಹಾಗೂ ಹೆಚ್ಚುತ್ತಿರುವ ವ್ಯಾಪಾರ ಅಡೆತಡೆಗಳನ್ನು ಎದುರಿಸುತ್ತಿರುವ ಸಾಂಪ್ರದಾಯಿಕ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಒಂದು ಮಹತ್ತರ ಅವಕಾಶವನ್ನು ನೀಡುತ್ತದೆ. ಉದ್ಯೋಗ ಸೃಷ್ಟಿ–ವ್ಯಾಪಾರ ಒಪ್ಪಂದವು ಜವಳಿ ಮತ್ತು ಉಡುಪುಗಳು, ಚರ್ಮ ಮತ್ತು ಪಾದರಕ್ಷೆಗಳು, ಆಹಾರ ಸಂಸ್ಕರಣೆ, ಸಾಗರ ಉತ್ಪನ್ನಗಳು, ರತ್ನ ಮತ್ತು ಆಭರಣಗಳು ಹಾಗೂ ಆಯ್ದ ಎಂಜಿನಿಯರಿಂಗ್ ವಿಭಾಗಗಳಂತಹ ಅಧಿಕ ಕಾರ್ಮಿಕ ಶಕ್ತಿ ಬಳಕೆಯ ವಲಯಗಳಿಗೆ ಪ್ರಯೋಜನವನ್ನು ನೀಡುತ್ತದೆ. ಒಮನ್‌ಗೆ ಜವಳಿ ರಫ್ತು ಹೆಚ್ಚಳವು, ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ತಿರುಪುರ, ಸೂರತ್, ಲೂಧಿಯಾನ, ಪಾಣಿಪತ್, ಕೊಯಮತ್ತೂರು, ಕರೂರ್, ಭದೋಹಿ, ಮೊರಾದಾಬಾದ್, ಜೈಪುರ ಮತ್ತು ಅಹಮದಾಬಾದ್ ನಂತಹ ಪ್ರಮುಖ ಜವಳಿ ಕ್ಲಸ್ಟರ್‌ಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ. ಭಾರತಾದ್ಯಂತದ ಕುಶಲಕರ್ಮಿಗಳು ಮತ್ತು ನೇಕಾರರು ತಮ್ಮ ಉತ್ಪನ್ನಗಳಿಗೆ ಹೆಚ್ಚಿದ ಅಂತರರಾಷ್ಟ್ರೀಯ ಬೇಡಿಕೆಯಿಂದ ಲಾಭ ಪಡೆಯುತ್ತಾರೆ. ಭಾರತಾದ್ಯಂತದ ಪ್ರಮುಖ ಚರ್ಮ ಮತ್ತು ಪಾದರಕ್ಷೆಗಳ ಕೇಂದ್ರಗಳಲ್ಲಿ, ವಿಶೇಷವಾಗಿ ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರ, ಪಂಜಾಬ್, ಕರ್ನಾಟಕ ಮತ್ತು ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಹಲವಾರು ಉದ್ಯೋಗಗಳು ಸೃಷ್ಟಿಯಾಗಲಿವೆ.

ಉದ್ಯೋಗ ಬೆಳವಣಿಗೆಯನ್ನು ಸಿಇಪಿಎ ಹೇಗೆ ವೇಗಗೊಳಿಸುತ್ತದೆ ಎಂಬುದಕ್ಕೆ ರತ್ನ ಮತ್ತು ಆಭರಣ ವಲಯವು ಮತ್ತೊಂದು ಉದಾಹರಣೆಯಾಗಿದೆ. ಕತ್ತರಿಸಿದ ಮತ್ತು ಹೊಳಪು ನೀಡಿದ ವಜ್ರಗಳು, ಚಿನ್ನ ಮತ್ತು ಬೆಳ್ಳಿ ಆಭರಣಗಳು ಮತ್ತು ಕೈಯಿಂದ ತಯಾರಿಸಿದ ಆಭರಣಗಳ ಉತ್ಪಾದನೆಯಲ್ಲಿ ಭಾರತವು ಈಗಾಗಲೇ ಬಲವಾದ ಸಾಮರ್ಥ್ಯವನ್ನು ಹೊಂದಿದೆ.

ಸುಂಕದ ಅಡೆತಡೆಗಳನ್ನು ತೆಗೆದು ಹಾಕುವುದರೊಂದಿಗೆ, ಭಾರತೀಯ ರಫ್ತುದಾರರು ಯುರೋಪಿಯನ್ ಮತ್ತು ಏಷ್ಯಾದ ಪ್ರತಿಸ್ಪರ್ಧಿಗಳ ಮೇಲೆ ನಿರ್ಣಾಯಕ ಸ್ಪರ್ಧಾತ್ಮಕ ಲಾಭವನ್ನು ಪಡೆಯುತ್ತಾರೆ. ಮುಂದಿನ ಮೂರು ವರ್ಷಗಳಲ್ಲಿ ಒಮಾನ್‌ಗೆ 150 ದಶಲಕ್ಷ ಡಾಲರ್‌ನಷ್ಟು ರಫ್ತು ಬೆಳೆಯಬಹುದು ಎಂದು ಉದ್ಯಮವು ಅಂದಾಜಿಸಿದೆ. ಈ ಒಪ್ಪಂದವು ಭಾರತದ ರಾಷ್ಟ್ರೀಯ ಸಾವಯವ ಉತ್ಪಾದನೆ ಕಾರ್ಯಕ್ರಮ(ಎನ್‌ಪಿಒಪಿ) ಪ್ರಮಾಣೀಕರಣವನ್ನು ಅಂಗೀಕರಿಸಲು ಅವಕಾಶ ನೀಡುತ್ತದೆ. ಇದು ಪ್ರಮುಖ ಆಹಾರ ಆಮದುದಾರ ಒಮಾನ್‌ಗೆ ಸಾವಯವ ಉತ್ಪಾದನೆಯನ್ನು ಮಾರಾಟ ಮಾಡಲು ಭಾರತೀಯ ರೈತರಿಗೆ ಅಗಾಧ ಅವಕಾಶಗಳನ್ನು ತೆರೆಯುತ್ತದೆ. ಸಮುದ್ರ ಉತ್ಪನ್ನಗಳ ವಿಚಾರದಲ್ಲೂ ಭಾರತದ ಅಗಾಧವಾದ ಸಾಮರ್ಥ್ಯವು ಬಳಕೆಯಾಗದೆ ಉಳಿದಿದೆ. 2022 ಮತ್ತು 2024 ರ ನಡುವೆ ಒಮಾನ್‌ನ ಸಮುದ್ರ ಉತ್ಪನ್ನಗಳ ಆಮದು ಸುಮಾರು 119 ದಶಲಕ್ಷ ಡಾಲರ್ ಆಗಿತ್ತು. ಭಾರತದಿಂದ ಆಮದು ಕೇವಲ 7.75 ದಶಲಕ್ಷ ಡಾಲರ್‌ನಷ್ಟಿತ್ತು. ಇದು ಸೀಗಡಿ ಮತ್ತು ಘನೀಕರಿಸಿದ ಕಟಲ್‌ಫಿಶ್‌ನಂತಹ ಭಾರತೀಯ ಸಮುದ್ರಾಹಾರ ರಫ್ತಿಗೆ ಅಗಾಧ ಅವಕಾಶಗಳನ್ನು ನೀಡುತ್ತದೆ. ಅಧಿಕ ಕಾರ್ಮಿಕರ ಶಕ್ತಿ ಬಳಕೆಯಸಮುದ್ರ ಉತ್ಪನ್ನಗಳ ಉದ್ಯಮವು ಮೀನುಗಾರಿಕೆ, ಸಂಸ್ಕರಣೆ, ಪ್ಯಾಕೇಜಿಂಗ್, ಕೋಲ್ಡ್‌-ಚೈನ್ ಸರಕುಸಾಗಣೆ ಮತ್ತು ರಫ್ತುಕಾರ್ಯಾಚರಣೆಗಳಲ್ಲಿ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಔಷಧ ಮತ್ತು ಸಾಂಪ್ರದಾಯಿಕ ಔಷಧದಂತಹ ನಿಯಂತ್ರಕ ಪ್ರಾಧಿಕಾರಗಳು ಅನುಮೋದಿಸಿರುವ ಭಾರತೀಯ ಔಷಧಗಳು 90 ದಿನಗಳಲ್ಲಿ ಒಮಾನ್‌ನಲ್ಲಿ ಸ್ವಯಂಚಾಲಿತ ಮಾರ್ಕೆಟಿಂಗ್ ಅಧಿಕಾರವನ್ನು ಪಡೆಯುತ್ತವೆ. ಇದು ಭಾರತೀಯ ಔಷಧ ರಫ್ತುದಾರರಿಗೆ ದೊಡ್ಡ ಗೆಲುವು. ಗಮನಾರ್ಹ ವಿಷಯವೆಂದರೆ, ಸಿಇಪಿಎ ಭಾರತದ ಸಾಂಪ್ರದಾಯಿಕ ವೈದ್ಯಕೀಯ ಸೇವೆಗಳಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದು ಸಾಂಪ್ರದಾಯಿಕ ಔಷಧದಲ್ಲಿ ಜಂಟಿ ಸಂಶೋಧನೆಗೆ ಅನುವು ಮಾಡಿದೆ. ಸೇವೆಗಳು ಮತ್ತು ಪ್ರಯಾಣ ಒಪ್ಪಂದದ ಮತ್ತೊಂದು ಪ್ರಮುಖ ಆಯಾಮವೆಂದರೆ ವೃತ್ತಿಪರ ಸೇವೆಗಳು, ಕಂಪ್ಯೂಟರ್ ಮತ್ತು ಐಟಿ ಸೇವೆಗಳು, ಶಿಕ್ಷಣ, ಆರೋಗ್ಯ ರಕ್ಷಣೆ, ಪ್ರವಾಸೋದ್ಯಮ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಪರಿಸರ ಸೇವೆಗಳು ಸೇರಿದಂತೆ ಭಾರತಕ್ಕೆ ಪ್ರಮುಖ ರಫ್ತು ಆಸಕ್ತಿಯ ಕ್ಷೇತ್ರಗಳಲ್ಲಿ ಒಮಾನ್ ವಾಣಿಜ್ಯಕವಾಗಿ ಅರ್ಥಪೂರ್ಣ ಬದ್ಧತೆಗಳನ್ನು ಕೈಗೊಂಡಿದೆ. ಅಕೌಂಟಿಂಗ್, ಎಂಜಿನಿಯರಿಂಗ್, ವೈದ್ಯಕೀಯ, ನಿರ್ಮಾಣ, ಶಿಕ್ಷಣ ಮತ್ತು ಸಲಹಾ ಕ್ಷೇತ್ರಗಳಲ್ಲಿನ ಭಾರತೀಯ ವೃತ್ತಿಪರರು ಸುಧಾರಿತ ಮಾರುಕಟ್ಟೆ ಪ್ರವೇಶದಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ.

ನಿರ್ಣಾಯಕವಾಗಿ, ಭಾರತೀಯ ವೃತ್ತಿಪರರು ಮತ್ತು ಕಾರ್ಮಿಕರಿಗೆ ಹೆಚ್ಚಿನ ಪ್ರಯಾಣ ಷರತ್ತುಗಳಿಗೆ ಒಮಾನ್ ಸಮ್ಮತಿಸಿದೆ. ಅಂತರ-ಕಾರ್ಪೊರೇಟ್ ವರ್ಗಾವಣೆಗೆ ಒಳಗಾದ ನೌಕರರು ಮತ್ತು ಗುತ್ತಿಗೆ ಸೇವಾ ಪೂರೈಕೆದಾರರಿಗೆ ನಾಲ್ಕು ವರ್ಷಗಳವರೆಗೆ ವಾಸ್ತವ್ಯವನ್ನು ಅನುಮತಿಸಲಾಗುವುದು.

ಇದೇ ವೇಳೆ, ವ್ಯಾಪಾರ ಸಂದರ್ಶಕರು ಮತ್ತು ಸ್ವತಂತ್ರ ವೃತ್ತಿಪರರು ಸುಲಭವಾದ ತಾತ್ಕಾಲಿಕ ಪ್ರವೇಶ ಅನುಮತಿಗಳನ್ನು ಪಡೆಯಲಿದ್ದಾರೆ. ಇದು ಅಂತರ-ಕಾರ್ಪೊರೇಟ್ ವರ್ಗಾವಣೆದಾರರ ಮಿತಿಯನ್ನು ಶೇಕಡಾ 20 ರಿಂದ 50ಕ್ಕೆ ಹೆಚ್ಚಿಸಿದೆ. ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮೋದಿ ಸರ್ಕಾರದ ಉಪಕ್ರಮಗಳು ಪ್ರತಿಯೊಬ್ಬ ಭಾರತೀಯನ ಜೀವನವನ್ನು ಸುಧಾರಿಸುವ ಪ್ರಧಾನಿಯವರ ಘನ ಉದ್ದೇಶದ ಭಾಗವಾಗಿದೆ. ವ್ಯಾಪಾರವು ಬೆಳವಣಿಗೆ, ಉದ್ಯೋಗ ಸೃಷ್ಟಿ ಮತ್ತು ಹಂಚಿಕೆಯ ಸಮೃದ್ಧಿಯ ಪ್ರಬಲ ಸಾಧನವಾಗಿದೆ ಎಂಬುದನ್ನು ಒಮಾನ್ ಜೊತೆಗಿನ ಒಪ್ಪಂದವು ನೆನಪಿಸುತ್ತದೆ. ಛಿದ್ರಗೊಂಡ ಮತ್ತು ರಕ್ಷಣಾತ್ಮಕ ಜಗತ್ತಿನಲ್ಲಿ ಹೊಸ, ಆತ್ಮವಿಶ್ವಾಸದ ಭಾರತವು ಗೋಡೆಗಳ ಹಿಂದೆ ಅಡಗಿಕೊಳ್ಳುವುದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಪ್ರಧಾನಿ ಮೋದಿ ರವಾನಿಸುತ್ತಿದ್ದಾರೆ. ಇದು ಪಾಲುದಾರಿಕೆ, ಸ್ಪರ್ಧಾತ್ಮಕತೆ ಮತ್ತು ಜಾಗತಿಕ ತೊಡಗಿಸಿಕೊಳ್ಳುವಿಕೆಯ ಮೂಲಕ ಭಾರತ ಮತ್ತಷ್ಟು ಮೇಲೇರುತ್ತಿದೆ.

'ಕೋಟೆ ಕಟ್ಟಿ ಮೆರೆದವರೆಲ್ಲ ಮಣ್ಣಾದರು...'

ಅಭಿಷೇಕ್‌ನ ಮೇಲೆ ಸೋನಾಪುರದಲ್ಲಿ ಯಾವ ಬಗೆಯಲ್ಲಿ ಹಲ್ಲೆ ನಡೆಯಿತೋ ಅದು ಆತನೇ ಪೋಷಿಸಿದ ರಾಜಕೀಯ ವಾತಾವರಣದ ಫಲ.

▸ ಅರವಿಂದ ಶೆಣೈ

ಮಮತಾ ಬ್ಯಾನರ್ಜಿಯ ಸೋದರಳಿಯ ('ಭಾಯಿಪೋ') ಹಾಗೂ ಡೈಮಂಡ್ ಹಾರ್ಬರ್ ಕ್ಷೇತ್ರದ ಲೋಕಸಭಾ ಸದಸ್ಯ ಅಭಿಷೇಕ್ ಬ್ಯಾನರ್ಜಿ ಮೊನ್ನೆ ತಮ್ಮದೇ ಕ್ಷೇತ್ರದ ಸೋನಾಪುರಕ್ಕೆ ಭೇಟಿ ನೀಡಿದಾಗ ಅವರ ಮೇಲೆ ಜನರು ಕಲ್ಲೆಸೆದುದು, ಮೊಟ್ಟೆಯೆಸೆದುದು, ಬಳಿಕ ಹಲ್ಲೆ ನಡೆಸಿದ್ದು, ಕೊನೆಗೆ ಅಭಿಷೇಕ್ ತಲೆಗೆ ಹೆಲ್ಮೆಟ್ ಧರಿಸಿಕೊಂಡು ಭದ್ರತಾ ಸಿಬ್ಬಂದಿಗಳ ರಕ್ಷಣೆಯೊಂದಿಗೆ ಅಲ್ಲಿಂದ ಪಲಾಯನ ಮಾಡಿದ್ದು... ಮುಂತಾದ ದೃಶ್ಯಗಳೆಲ್ಲ ಈಗಾಗಲೆ ಎಲ್ಲೆಡೆ ವೈರಲ್ ಆಗಿವೆ.

ಕೆಲವೇ ತಿಂಗಳ ಹಿಂದೆ ಇದೇ ಅಭಿಷೇಕ್ ಬ್ಯಾನರ್ಜಿ ಅದೇ ಕ್ಷೇತ್ರದಲ್ಲಿ ನಿಂತು ಜನರಿಗೇ ಧಮಕಿ ಹಾಕಿದ್ದ. ತಮ್ಮ ಪಕ್ಷಕ್ಕೆ ಮತ ನೀಡದಿದ್ದರೆ ಮುಂದಿನ ಪರಿಣಾಮ ಎದುರಿಸಬೇಕಾದೀತು ಎಂದು ಜನರನ್ನು ಎಚ್ಚರಿಸಿದ್ದ. ಅಂಥಾ ಅಭಿಷೇಕ್ ತನ್ನದೇ ಕ್ಷೇತ್ರದಲ್ಲಿ ತಲೆಗೆ ಹೆಲ್ಮೆಟ್ ಧರಿಸಿಕೊಂಡು ಅಲ್ಲಿಂದ ಓಡಬೇಕಾಯಿತು ಎಂಬುದು ಎಂತಹಾ ವಿಡಂಬನಾತ್ಮಕ ದೃಶ್ಯ! 'ಕೋಟೆ ಕಟ್ಟಿ ಮೆರೆದವರೆಲ್ಲ ಮಣ್ಣಾದರು...' ಎಂಬ ಅಣ್ಣಾವ್ರ ಹಾಡಿನ ಸಾಲು ನೆನಪಾಗದಿದ್ದೀತೆ?

ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ನಡೆದ ಗಲಭೆಯಲ್ಲಿ ಸಂತ್ರಸ್ತರಾದ ತನ್ನ ಪಕ್ಷದ ಕಾರ್ಯಕರ್ತರನ್ನು ಭೇಟಿಯಾಗುವ ಧೈರ್ಯ ಕೂಡಾ ಅಭಿಷೇಕ್ ತಕ್ಷಣ ಮಾಡಲಿಲ್ಲ. ಜನರ ಆಕ್ರೋಶದ ಕಾವು ಆತನಿಗೆ ಆದಾಗಲೇ ತಟ್ಟಿದ್ದಿರಬೇಕು. ಕೊನೆಗೂ 26 ದಿನಗಳ ಬಳಿಕವಷ್ಟೆ ಆತ ಸೋನಾಪುರಕ್ಕೆ ಭೇಟಿ ನೀಡುವ ಧೈರ್ಯ ತೋರಿದ್ದು. ಆದರೆ ಅಲ್ಲಿ ದೊರಕಿದ ಸ್ವಾಗತ ಆತ ನಿರೀಕ್ಷಿಸದ್ದು.. ಮೊಟ್ಟೆ, ಕಲ್ಲು, ಶೂ... ಜತೆಗೇ ''ಚೋರ್ ಚೋರ್'' ಎಂಬ ಘೋಷಣೆ.

ಬಹುಶಃ ಆತ ಇಂತಹ ಆತಿಥ್ಯವನ್ನು ಮೊಟ್ಟ ಮೊದಲ ಬಾರಿ ಪಡೆಯುತ್ತಿರಬೇಕು... ರಾಜಕೀಯದ ಬೀಳನ್ನು ಆತ ಈವರೆಗೆ ಕಂಡವನಲ್ಲ. ಕೇವಲ ಏರನ್ನಷ್ಟೇ ಕಂಡವನು. ಅಭಿಷೇಕ್ ಕಷ್ಟಪಟ್ಟು ರಾಜಕೀಯದಲ್ಲಿ ಮೇಲೇರಿದವನಲ್ಲ. ಮಮತಾ ಬ್ಯಾನರ್ಜಿ ತರ ರಾಜಕೀಯದ ಸ್ಟ್ರೀಟ್ ಫೈಟರ್ ಕೂಡಾ ಅಲ್ಲ. ಆತನಿಗೆ ರಾಜಕೀಯ ಪಟ್ಟವು ಅನಾಯಾಸವಾಗಿ ಸಿಕ್ಕಿತ್ತು. ಪಕ್ಷದ ನಾಯಕತ್ವವನ್ನು ತಟ್ಟೆಯಲ್ಲಿಟ್ಟು ನೀಡಲಾಗಿತ್ತು. ಸ್ವಜನಪಕ್ಷಪಾತದಿಂದ ದೊರಕಿದ ಅಧಿಕಾರಕ್ಕೆ ಆತ ನಿದರ್ಶನವಾಗಿದ್ದ. ಆತನೊಬ್ಬ ಲಗಾಮಿಲ್ಲದ ಯುವರಾಜನಂತೆ ಕಾರ್ಯಾಚರಿಸುತ್ತಿದ್ದ. ತಾನು ಪ್ರತಿನಿಧಿಸುವ ಡೈಮಂಡ್ ಹಾರ್ಬರ್ ಕ್ಷೇತ್ರವಂತೂ ತನ್ನ ಸ್ವಂತ ರಾಜ್ಯ ಎಂಬಂತಿತ್ತು ಆತನ ವರ್ತನೆ.



ತನ್ನ ಕ್ಷೇತ್ರವು ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಆತ ಮಾಧ್ಯಮಗಳ ಮುಂದೆ ಬಿಂಬಿಸಿಕೊಳ್ಳುತ್ತಿದ್ದ. ಅದಕ್ಕೆ ಬೇಕಾದಂತಹ ನರೇಟಿವ್ ರೂಪಿಸಿದ್ದ. ತನ್ನ ನರೇಟಿವ್ ಬಿಂಬಿಸುವ ಮಾಧ್ಯಮ ಮಂದಿಯನ್ನು ತನ್ನ ಸುತ್ತ ಇಟ್ಟುಕೊಂಡಿದ್ದ. ಅಂತಹ ಕರಾಮತ್ತಿನಲ್ಲಿ ಆತ ಮತ್ತು ಆತನ ಕೂಟ ಪರಿಣತವಾಗಿತ್ತು. ಆದರೆ ಒಳ್ಳೆಯ ಆಡಳಿತ ನೀಡುವ ಪರಿಣತಿ ಮಾತ್ರ ಇರಲಿಲ್ಲ. ಯಾವಾಗ ಅಧಿಕಾರ ಹೋಯಿತೋ ಆತನ ಕ್ಷೇತ್ರದ ನೈಜ ಚಿತ್ರಣ ಬೆಳಕಿಗೆ ಬಂತು. ಟಿಎಂಸಿ ದೌರ್ಜನ್ಯದಿಂದ ಮತ್ತು ದುರಾಡಳಿತದಿಂದ ರೋಸಿದ್ದ ಜನರ ರೋಷ ಸ್ಫೋಟಗೊಂಡಿತು.

ಅಭಿಷೇಕ್ ಈ ಹಿಂದೆ ಜನರಿಗೆ ಧಮಕಿ ಹಾಕಿದ್ದ ಹಳೆಯ ವಿಡಿಯೋಗಳೆಲ್ಲ ಈಗ ವೈರಲ್ ಆಗುತ್ತಿವೆ. ತನ್ನ ಅಧಿಕಾರ ಶಾಶ್ವತ ಎಂಬಂತೆ ಆತ ಆಗ ಜನರಿಗೆ ಬೆದರಿಕೆ ಹಾಕುತ್ತಿದ್ದ. ಜನರಿಂದ ಪಕ್ಷ ನಿಷ್ಠೆಯನ್ನು ಬೆದರಿಸಿ ಪಡೆಯಲಾಗುತ್ತಿತ್ತು. ತುಸುವೇ ಭಿನ್ನಮತ ಕಂಡರೂ ಅದನ್ನು ಬಲಪ್ರಯೋಗದಿಂದ ಅಣಗಿಸಲಾಗುತ್ತಿತ್ತು. ಅಭಿಷೇಕ್ ಯಾವತ್ತೂ ಟಿಎಂಸಿ ಜನಾಂದೋಲನದ ಭಾಗವಾಗಿರಲಿಲ್ಲ. ಆತ ಒಂದು ರೀತಿಯಲ್ಲಿ ಆದೇಶವನ್ನು ಜಾರಿಗೊಳಿಸುವ ಬಲಿಷ್ಠ ಯಂತ್ರದಂತಿದ್ದ. ಯಂತ್ರಕ್ಕೆ ವಿದ್ಯುತ್ ಸಂಪರ್ಕ ನಿಂತಾಗ ಯಂತ್ರ ನಿಷ್ಕ್ರಿಯವಾಗುತ್ತದೆ. ಅಭಿಷೇಕ್‌ನ ಅಧಿಕಾರದ ವಿದ್ಯುತ್ ಕೂಡಾ ಈಗ ಕಡಿತಗೊಂಡಿದೆ...

ಅಭಿಷೇಕ್‌ನ ಮೇಲೆ ಸೋನಾಪುರದಲ್ಲಿ ಯಾವ ಬಗೆಯಲ್ಲಿ ಹಲ್ಲೆ ನಡೆಯಿತೋ ಅದು ಆತನೇ ಬೆಳೆಸಿ, ಪೋಷಿಸಿದ ರಾಜಕೀಯ ವಾತಾವರಣದ ಫಲಶ್ರುತಿ. ದಶಕದಿಂದ ಟಿಎಂಸಿ ಕಾರ್ಯಕರ್ತರು, ಅಭಿಷೇಕ್‌ನ ಗೂಂಡಾಗಳು ಜನರನ್ನು ಜನರನ್ನು ಯಾವ ರೀತಿಯಲ್ಲಿ ಬೆದರಿಸಿ ಸತಾಯಿಸಿದರೋ ಅದನ್ನೇ ಈಗ ಜನರು ತಿರುಗಿಸಿ ನೀಡುತ್ತಿದ್ದಾರೆ. ಪೊಲೀಸರು ಟಿಎಂಸಿಯ ಹಳೆಯ ಗೂಂಡಾಗಳನ್ನು ಚಡ್ಡಿಯಲ್ಲಿ ಮೆರವಣಿಗೆ ಮಾಡಿ ಜೈಲಿಗೆ ಅಟ್ಟುತ್ತಿರುವಂತೆಯೇ ಇತ್ತ ಜನರಿಗೂ ಧೈರ್ಯ ಬರತೊಡಗಿದೆ. ತಮ್ಮನ್ನು ಸತಾಯಿಸಿದ ಮಂದಿಗೆ ಪ್ರತಿಯೇಟು ಬಿಗಿಯುತ್ತಿದ್ದಾರೆ. ತಾವು ಅನುಭವಿಸಿದ ಕೋಟಲೆಗೆ ಬದಲಿ ತೀರಿಸುತ್ತಿದ್ದಾರೆ.

ರಾಜಕೀಯದಲ್ಲಿ ಹಿಂಸೆ ಸಲ್ಲದು. ಅದು ನಿಜ. ಆದರೆ ಅದನ್ನು ಮೊದಲಿಗೆ ಅಭಿಷೇಕ್ ಬ್ಯಾನರ್ಜಿ ಅನುಸರಿಸಬೇಕಾಗಿತ್ತು. ಆತ ರಾಜಕೀಯದಲ್ಲಿ ಏನು ಬಿತ್ತಿದನೋ ಅದನ್ನೇ ಪಡೆಯುತ್ತಿದ್ದಾನೆ.

ಈಗ ಬಹಳಷ್ಟು ಟಿಎಂಸಿ ನಾಯಕರೇ ಅಭಿಷೇಕ್‌ನ ವಿರುದ್ಧ, ಆತನ ಕಾರ್ಯವೈಖರಿಯ ವಿರುದ್ಧ ಮಾತನಾಡತೊಡಗಿದ್ದಾರೆ. ಟಿಎಂಸಿ ಶಾಸಕರೂ 'ಭಾಯಿಪೋ' ಅಭಿಷೇಕ್ ವಿರುದ್ಧ ಮಾತನಾಡುವ ಧೈರ್ಯ ತೋರುತ್ತಿದ್ದಾರೆ. ಎಲ್ಲರ ಆಕ್ರೋಶವು ಮಮತಾ ಬ್ಯಾನರ್ಜಿಗಿಂತ ಹೆಚ್ಚಾಗಿ ಅಭಿಷೇಕ್ ಕುರಿತಾಗಿಯೇ ಇದೆ. ಮಮತಾಗೆ ಕೂಡಾ ತಮ್ಮ ಭಾಯಿಪೋ ನಿರಂಕುಶ ವರ್ತನೆಯ ಕುರಿತು ತಿಳಿಯದ್ದೇನಲ್ಲ. ಆದರೆ ಮಮತಾ 'ಧೃತರಾಷ್ಟ್ರನ ಕುರುಡು ಪ್ರೇಮ' ತೋರಿದರು ಎಂಬುದು ಟಿಎಂಸಿ ಶಾಸಕರ ಆರೋಪವಾಗಿದೆ. ಅಂದು ಕುರುಕುಲ ದುರ್ಯೋಧನನಿಂದಾಗಿ ನಾಶವಾದಂತೆ ಈಗ ಅಭಿಷೇಕ್‌ನಿಂದ ಟಿಎಂಸಿಯೇ ನಾಶದ ಹಾದಿಯಲ್ಲಿ ಸಾಗುತ್ತಿದೆ.

ಲೆಬನಾನ್ ಮೇಲೆ ಮುಂದುವರಿದ ಇಸ್ರೇಲ್ ದಾಳಿ

ನಾಯಕರ ವಾಗ್ವಾದ ದಾಳಿ ಪುನರಾರಂಭ!



ವಾಷಿಂಗ್ಟನ್: ಇಸ್ರೇಲ್ ಪ್ರಧಾನಿಯೊಂದಿಗೆ ಅಮೆರಿಕ ಅಧ್ಯಕ್ಷರ ದೂರವಾಣಿ ಕರೆ ವಾಗ್ವಾದದ ಬಳಿಕ ದಕ್ಷಿಣ ಲೆಬನಾನ್ ಮೇಲಿನ ದಾಳಿಯನ್ನು ಇಸ್ರೇಲ್ ಮಂಗಳವಾರ ಪುನರಾರಂಭಿಸಿದೆ. ದಕ್ಷಿಣ ಲೆಬನಾನ್ ಮೇಲಿನ ಇಸ್ರೇಲ್ ದಾಳಿಯಿಂದ ಅಮೆರಿಕ ಜತೆಗಿನ ಶಾಂತಿ ಮಾತುಕತೆಯನ್ನು ಇರಾನ್ ಸ್ಥಗಿತಗೊಳಿಸಿದ ಹಿನ್ನೆಲೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಧ್ಯಕ್ಷ ಟ್ರಂಪ್ ಕರೆ ಮಾಡಿದ್ದರು. ನೆತನ್ಯಾಹು ಅವರೊಂದಿಗೆ ವಾಗ್ವಾದ ನಡೆಸಿದ ಬಳಿಕ, ಇಸ್ರೇಲ್ ಬೈರೂತ್‌ನತ್ತ ಮುನ್ನುಗ್ಗುವುದಿಲ್ಲ ಮತ್ತು ದಕ್ಷಿಣ ಲೆಬನಾನ್ ಮೇಲಿನ ದಾಳಿ ನಿಲ್ಲಿಸಲಿದೆ ಎಂದು ಟ್ರಂಪ್ ಘೋಷಿಸಿದ್ದರು. ಆದರೆ ಕೆಲವು ಗಂಟೆಗಳಲ್ಲಿ ಇಸ್ರೇಲ್ ದಾಳಿ ಮುಂದುವರಿಸಿದ್ದು, ಟ್ರಂಪ್ ಮತ್ತು ನೆತನ್ಯಾಹು ನಡುವಿನ ಭಿನ್ನಾಭಿಪ್ರಾಯ ಬಹಿರಂಗವಾಗಿದೆ. ಅಮೆರಿಕದ ಪ್ರಸ್ತಾವನೆಗೆ ಲೆಬನಾನ್ ಅಧಿಕಾರಿಗಳು ಮತ್ತು ಇರಾನ್ ಬೆಂಬಲಿತ ಉಗ್ರ ಸಂಘಟನೆ ಹೆಜ್ಬೊಲ್ಲಾ ಒಪ್ಪಿದ್ದವು.

ಟ್ರಂಪ್-ನೆತನ್ಯಾಹು ನಡುವೆ ವಾಗ್ವಾದ!: ದಕ್ಷಿಣ ಲೆಬನಾನ್ ಮೇಲಿನ ದಾಳಿ ನಿಲ್ಲಿಸುವಂತೆ ಹೇಳಲು ನೆತನ್ಯಾಹುರಿಗೆ ಟ್ರಂಪ್ ದೂರವಾಣಿ ಕರೆ ಮಾಡಿದ್ದು, ಇಬ್ಬರ ಮಧ್ಯೆ ಭಾರೀ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ.

ಪರಮಾಣು ಸಭೆ ಇನ್ನಷ್ಟು ವಿಳಂಬ: ಇರಾನ್ ಡ್ರೋನ್ ಉತ್ಪಾದನಾ ಕೇಂದ್ರಗಳ ಮೇಲಿನ ದಾಳಿಗಳು ಅದರ ಡ್ರೋನ್ ನಿರ್ಮಾಣ ಸಾಮರ್ಥ್ಯವನ್ನು ಕುಗ್ಗಿಸಿದೆ ಎಂದು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಮೊಜ್ತಬಾ ಇನ್ನೂ ಜೀವಂತ: ಇರಾನ್‌ನ ನೂತನ ಸರ್ವೋಚ್ಚ ನಾಯಕ ಮಾರ್ಕೊ ರುಬಿಯೊ ಇನ್ನೂ ಜೀವಂತವಾಗಿದ್ದು, ಇರಾನ್ ನಡೆಯಲ್ಲಿ ಸಕ್ರಿಯವಾಗಿದ್ದಾರೆಂದು ರುಬಿಯೊ ಹೇಳಿದ್ದಾರೆ.

ಕಾನೂನುಬಾಹಿರ: ಇರಾನ್ ಮಾಡುತ್ತಿರುವುದು ಸಂಪೂರ್ಣ ಕಾನೂನುಬಾಹಿರ. ಹಾರ್ಮುಜ್ ಜಲಸಂಧಿಯನ್ನು ಇರಾನ್ ಸಂಪೂರ್ಣ ಮುಚ್ಚಿದ್ದು, ಇದನ್ನು ವಿಶ್ವದ ಯಾವುದೇ ರಾಷ್ಟ ಬೆಂಬಲಿಸುವುದಿಲ್ಲ. ಇಡೀ ವಿಶ್ವವೇ ಇರಾನ್ ವಿರುದ್ಧ ನಿಂತಿದೆ. ಹಾರ್ಮುಜ್ ತೆರೆಯಬೇಕೆಂಬುದೇ ನಮ್ಮ ಮೊದಲ ಷರತ್ತು ಎಂದು ರುಬಿಯೊ ತಿಳಿಸಿದ್ದಾರೆ.

ಶಾಂತಿ ಸಭೆಗೆ ಭಾರತ ಕರೆ

ಮಧ್ಯಪ್ರಾಚ್ಯ ಬೆಳವಣಿಗೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ನಾವು ಹಿಂದಿನಿಂದಲೂ ಶಾಂತಿ ಮಾತುಕತೆಯ ಮೂಲಕ ಬಿಕ್ಕಟ್ಟು ಅಂತ್ಯಗೊಳಿಸಲು ಕರೆ ನೀಡಿದ್ದೆವು. ಮಾತುಕತೆಯಿಂದ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆ ಮರಳಲು ಸಾಧ್ಯ ಎಂದು ವಿದೇಶಾಂಗ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಹೈಕೋರ್ಟ್ ಆದೇಶ ರದ್ದುಗೊಳಿಸಿ ಸುಪ್ರೀಂ ತೀರ್ಪು

ಅನುಕಂಪ ಆಧಾರದ ನೇಮಕ: ವಿವಾಹಿತ ಪುತ್ರಿಯರೂ ಅರ್ಹ

ಹೊಸದಿಲ್ಲಿ: ಕುಟುಂಬದ ವ್ಯಾಖ್ಯಾನದಿಂದ ವಿವಾಹಿತ ಪುತ್ರಿಯರನ್ನು ಹೊರಗಿಡುವುದು ಅನಾವಶ್ಯಕ, ಅಸಮರ್ಥನೀಯ ಮತ್ತು ಸಾಂವಿಧಾನಿಕವಾಗಿ ಅಮಾನ್ಯ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ನೀಡಿದೆ. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಅಲೋಕ್ ಅರಾಧೆ ನೇತೃತ್ವದ ಪೀಠ, ತಾಯಿಯ ನಿಧನದ ನಂತರ ನ್ಯಾಯಬೆಲೆ ಅಂಗಡಿ ಡೀಲರ್‌ಶಿಪ್‌ಗಾಗಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ್ದ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ರದ್ದುಗೊಳಿಸಿತು. ವಿವಾಹಿತ ಪುತ್ರಿಯರನ್ನು ಹೊರಗಿಟ್ಟಿದ್ದ 2019ರ ಸರ್ಕಾರದ ಆದೇಶವನ್ನು ಈ ಮಹಿಳೆ ಪ್ರಶ್ನಿಸಿದ್ದರು. ಮದುವೆಯು ಪೋಷಕರೊಂದಿಗಿನ ಸಂಬಂಧವನ್ನು ಕೊನೆಗೊಳಿಸುವುದಿಲ್ಲ ಅಥವಾ ಅವಲಂಬನೆಯಿಲ್ಲದಿರುವುದನ್ನು ಸಾಬೀತುಪಡಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಅವಲಂಬನೆಯೇ ಮಾನದಂಡ: ವಿವಾಹಿತ ಪುತ್ರರನ್ನು ಯೋಜನೆಯಲ್ಲಿ ಸೇರಿಸಿ, ಪುತ್ರಿಯರನ್ನು ಕೇವಲ ವಿವಾಹದ ಕಾರಣಕ್ಕೆ ಲಿಂಗ ತಾರತಮ್ಯದ ಆಧಾರದ ಮೇಲೆ ಹೊರಗಿಡಲಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಅವಲಂಬನೆ ಎಂಬುದು ವೈವಾಹಿಕ ಸ್ಥಿತಿಗಿಂತ ಹೆಚ್ಚಾಗಿ ವಾಸ್ತವದ ಪ್ರಶ್ನೆ. ಈ ಕೋಟಾದ ಉದ್ದೇಶ, ಮೃತ ಡೀಲರ್ ಕುಟುಂಬಕ್ಕೆ ತಕ್ಷಣದ ಆರ್ಥಿಕ ಪರಿಹಾರ ಒದಗಿಸುವುದು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರಂತರತೆಯನ್ನು ಖಚಿತಪಡಿಸುವುದಾಗಿದೆ.

ಸುಪ್ರೀಂ ನಿರ್ದೇಶನ: ಅರ್ಜಿದಾರರು ಮದುವೆಯ ನಂತರವೂ ಅದೇ ಗ್ರಾಮದಲ್ಲಿ ವಾಸಿಸುತ್ತಿದ್ದರು, ಅಂಗಡಿಯನ್ನು ನಡೆಸಲು ಸಹಾಯ ಮಾಡುತ್ತಿದ್ದರು ಮತ್ತು ದೃಷ್ಟಿ ವಿಕಲಚೇತನ ಸಹೋದರಿ ಸೇರಿದಂತೆ ಇತರೆ ಸಹೋದರಿಯರನ್ನು ಸಾಕುವ ಜವಾಬ್ದಾರಿ ಹೊತ್ತಿದ್ದರು ಎಂಬುದು ದಾಖಲೆಗಳಿಂದ ಸಾಬೀತಾಗಿದೆ. ಸ್ಥಳೀಯ ನಿವಾಸದ ಅಗತ್ಯತೆಯ ಕುರಿತಾದ ರಾಜ್ಯ ಸರ್ಕಾರದ ವಾದವನ್ನು ತಿರಸ್ಕರಿಸಿದ ನ್ಯಾಯಾಲಯ, ಅರ್ಜಿಯನ್ನು ತಿರಸ್ಕರಿಸಲು ಇದ್ದ ಏಕೈಕ ಕಾರಣ ಅಮಾನ್ಯವಾಗಿರುವುದರಿಂದ ಮಹಿಳೆಗೆ ಪರಿಹಾರ ನೀಡುವಂತೆ ನಿರ್ದೇಶಿಸಿದೆ.



ರೈತರ ಹಿತಕ್ಕಾಗಿ ಸಮಗ್ರ ರಾಷ್ಟ್ರೀಯ ಅಭಿಯಾನ



ಖೇತ್ ಬಚಾವೋ

ರಾಸಾಯನಿಕ ರಸಗೊಬ್ಬರ ಬಳಕೆ ಕಡಿತ, ಕೃಷಿಭೂಮಿ ಪುನಶ್ಚೇತನದ ಗುರಿ

ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮತ್ತು ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಜಂಟಿಯಾಗಿ ಖೇತ್ ಬಚಾವೋ ಅಭಿಯಾನಕ್ಕೆ ಚಾಲನೆ ನೀಡಿವೆ. ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆಯ ಮೂಲಕ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮತ್ತು ಯೂರಿಯಾದಂತಹ ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಗುರಿಯನ್ನು ಈ ಅಭಿಯಾನ ಹೊಂದಿದೆ. ಆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಏನಿದು ಖೇತ್ ಬಚಾವೋ?

ಖೇತ್ ಬಚಾವೋ ಅಭಿಯಾನವನ್ನು ಜಮೀನುಗಳು, ರೈತರು ಮತ್ತು ಗ್ರಾಮಗಳನ್ನು ಜೋಡಿಸುವ ಒಂದು ಸಮಗ್ರ ರಾಷ್ಟ್ರೀಯ ಅಭಿಯಾನ ಎಂದು ವಿವರಿಸಲಾಗಿದೆ. ಈ ಯೋಜನೆಯನ್ನು ಅತಿಯಾದ ರಾಸಾಯನಿಕ ಗೊಬ್ಬರ ಬಳಕೆ, ಕುಸಿಯುತ್ತಿರುವ ಮಣ್ಣಿನ ಸಾರಾಂಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಸಲಹಾ ಸೇವೆಗಳ ಸೀಮಿತ ಲಭ್ಯತೆ ಎಂಬ ಮೂರು ಪ್ರಮುಖ ಸವಾಲುಗಳನ್ನು ಎದುರಿಸಲು ವಿನ್ಯಾಸಗೊಳಿಸಲಾಗಿದೆ. ಈ ಅಭಿಯಾನ, ಸಾಂಪ್ರದಾಯಿಕ ಭಾರತೀಯ ಕೃಷಿ ಜ್ಞಾನವನ್ನು ಆಧುನಿಕ ಕೃಷಿ ವಿಜ್ಞಾನದೊಂದಿಗೆ ಸಂಯೋಜಿಸುತ್ತದೆ. ಇದರ ಅನುಷ್ಠಾನದಲ್ಲಿ ಪಂಚಾಯತ್‌ಗಳು, ಕೃಷಿ ವಿಜ್ಞಾನ ಕೇಂದ್ರಗಳು(ಕೆವಿಕೆ), ಐಸಿಎಆರ್ ಸಂಸ್ಥೆಗಳು, ರಾಜ್ಯ ಸರ್ಕಾರಗಳು ಮತ್ತು ಕೃಷಿ ಇಲಾಖೆಗಳು ಭಾಗಿಯಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಜಾರಿಯಾಗುತ್ತಿರುವ ಅತ್ಯಂತ ವಿಶಾಲ ಸಾಂಸ್ಥಿಕ ಕೃಷಿ ಸಂಪರ್ಕ ಕಾರ್ಯಕ್ರಮಗಳಲ್ಲಿ ಒಂದು.

ಮಣ್ಣಿನ ಆರೋಗ್ಯಕ್ಕೆ ಪ್ರಯೋಜನಗಳು

ರೈತರ ಒಟ್ಟು ಬೇಸಾಯದ ವೆಚ್ಚದಲ್ಲಿ ರಾಸಾಯನಿಕ ರಸಗೊಬ್ಬರಗಳ ಪಾಲೇ ಹೆಚ್ಚು, ಮಣ್ಣು ಪರೀಕ್ಷೆ ಆಧಾರಿತ ಅನ್ವಯಗಳು ಮತ್ತು ನ್ಯಾನೋ-ರಸಗೊಬ್ಬರಗಳಿಗೆ ಬದಲಾಗುವುದರಿಂದ ರೈತರ ಇಂತಹ ವೆಚ್ಚಗಳು ಕಡಿಮೆಯಾಗಲಿವೆ ಮತ್ತು ನಿವ್ವಳ ಲಾಭದ ಪ್ರಮಾಣ ಸುಧಾರಿಸಲಿದೆ. ಯೂರಿಯಾದ ಮೇಲಿನ ಅತಿಯಾದ ಅವಲಂಬನೆಯಿಂದಾಗಿ ಮಣ್ಣಿನ ನೈಸರ್ಗಿಕ ಸೂಕ್ಷ್ಮಜೀವಿಗಳು ನಾಶವಾಗಿ, ಕಾಲಕ್ರಮೇಣ ಫಲವತ್ತತೆ ಕುಸಿದು ಉಂಟಾಗಿರುವ ದೀರ್ಘಕಾಲೀನ ಮಣ್ಣಿನ ಸವೆತವನ್ನು ತಡೆಯುವುದೂ ಸಹ ಈ ಅಭಿಯಾನದ ಗುರಿಯಾಗಿದೆ. ಪರಿಸರದ ದೃಷ್ಟಿಯಿಂದ, ಅತಿಯಾದ ರಾಸಾಯನಿಕ ಹರಿವು ಸ್ಥಳೀಯ ಜಲಮೂಲಗಳನ್ನು ಮತ್ತು ಅಂತರ್ಜಲವನ್ನು ಕಲುಷಿತಗೊಳಿಸುತ್ತಿದ್ದು, ಪಾದರಸ(ಎಚ್‌ಜಿ), ಕ್ರೋಮಿಯಂ (ಸಿಆರ್) ಮತ್ತು ಕ್ಯಾಡ್ಮಿಯಂ (ಸಿಡಿ) ಸೇರಿದಂತೆ ಹಾನಿಕಾರಕ ಭಾರ ಲೋಹಗಳ ಪ್ರಮಾಣ ಹೆಚ್ಚಿದೆ. ಖೇತ್ ಬಚಾವೋ ಅಭಿಯಾನ, ಕೃಷಿಯಲ್ಲಿ ರಾಸಾಯನಿಕಗಳ ಅತಿಯಾದ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಗ್ರಾಮದ ಜಲ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವ ಉದ್ದೇಶ ಹೊಂದಿದೆ. ರೈತರು ಬಿತ್ತನೆ, ನೀರಾವರಿ ಮತ್ತು ಕೊಯ್ಲು ಕುರಿತು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಕಾಲಿಕ ಡಿಜಿಟಲ್ ಸಲಹೆಗಳನ್ನು ಈ ಮೂಲಕ ಪಡೆಯಲಿದ್ದಾರೆ.

ವ್ಯಾಪಕ ಪ್ರಾಮುಖ್ಯತೆ

ಈ ಅಭಿಯಾನದ ಪಂಚಾಯತ್-ಕೇಂದ್ರಿತ ವಿಧಾನ ಭಾರತದಲ್ಲಿ ಕೃಷಿ ಸಲಹಾ ಸೇವೆಗಳನ್ನು ತಲುಪಿಸುವ ವಿಧಾನದಲ್ಲಿ ಮಹತ್ವದ ಬದಲಾವಣೆಯನ್ನು ಸೂಚಿಸುತ್ತದೆ. ಇದರ ಆವರೋಹಣ ರೂಪದಿಂದ ಗ್ರಾಮಮಟ್ಟದಲ್ಲಿ ಹೆಚ್ಚಿನ ಅಧಿಕಾರ ಸಿಗುತ್ತದೆ ಮತ್ತು ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ. ಕೃಷಿಗೆ ಸಂಬಂಧಿಸಿದ ಹಲವು ಸವಾಲುಗಳಿಗೆ ಒಂದೇ ವೇದಿಕೆಯಲ್ಲಿ ಪರಿಹಾರ ಒದಗಿಸುವ ಪ್ರಯತ್ನ ಇದಾಗಿದೆ.

ಪೂರಕ ಸರ್ಕಾರಿ ಯೋಜನೆಗಳು

ಖೇತ್ ಬಚಾವೋ ಅಭಿಯಾನ, ಹಲವಾರು ಅಸ್ತಿತ್ವದಲ್ಲಿರುವ ಕೇಂದ್ರ ಸರ್ಕಾರದ ಕಾರ್ಯಕ್ರಮಗಳೊಂದಿಗೆ ಒಟ್ಟಾಗಿ ಕಾರ್ಯನಿರ್ವಹಿಸುತ್ತದೆ. ಪಿಎಂ-ಪ್ರಣಾಮ್ ಯೋಜನೆ ಪ್ರೋತ್ಸಾಹಕ ಆಧಾರಿತ ಮಾದರಿಯನ್ನು ಒದಗಿಸುತ್ತದೆ, ಇದರಲ್ಲಿ ಯೂರಿಯಾ ಮತ್ತು ಡಿಎಪಿಯಂತಹ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಯಶಸ್ವಿಯಾಗಿ ಕಡಿಮೆ ಮಾಡುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಅದರಿಂದ ಉಂಟಾಗುವ ಉಳಿತಾಯದ ಶೇ.50ರಷ್ಟನ್ನು ಕೇಂದ್ರ ಸರ್ಕಾರದಿಂದ ಅನುದಾನವಾಗಿ ಮರಳಿ ಪಡೆಯುತ್ತವೆ. ಈ ಅನುದಾನವನ್ನು ಗ್ರಾಮ ಮಟ್ಟದಲ್ಲಿ ಪರ್ಯಾಯ, ಸಾವಯವ ಮತ್ತು ಜೈವಿಕ ಗೊಬ್ಬರ ಉತ್ಪಾದನೆಯ ಮೂಲಸೌಕರ್ಯಗಳನ್ನು ಸ್ಥಾಪಿಸಲು ಬಳಸಲಾಗುತ್ತದೆ. ಸ್ವಸ್ಥ ಧರಾ, ಖೇತ್ ಹರಾ ಎಂಬ ಘೋಷವಾಕ್ಯದಲ್ಲಿ ಪ್ರಾರಂಭಿಸಲಾದ ಮಣ್ಣಿನ ಆರೋಗ್ಯ ಕಾರ್ಡ್(ಎಸ್‌ಎಚ್‌ಸಿ) ಯೋಜನೆ, ಪರಂಪರಾಗತ್ ಕೃಷಿ ವಿಕಾಸ್ ಯೋಜನೆಗೂ(ಪಿಕೆವಿವೈ) ಇದು ಪೂರಕವಾಗಿದೆ

ಯೋಜನೆಯ ಪ್ರಮುಖ ಸ್ತಂಭಗಳು

ಈ ಅಭಿಯಾನ, ಐದು ಪ್ರಮುಖ ಕಾರ್ಯತಂತ್ರಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಮೊದಲನೆಯದಾಗಿ, ಇದು ರೈತರಿಗೆ ಮಣ್ಣು ಪರೀಕ್ಷೆ ನಡೆಸಲು ಮತ್ತು ಅವರ ಭೂಮಿಗೆ ಅಗತ್ಯವಿರುವ ನಿರ್ದಿಷ್ಟ ಪೋಷಕಾಂಶಗಳನ್ನು ಮಾತ್ರ ಬಳಸಲು ತರಬೇತಿ ನೀಡುತ್ತದೆ. ಇದನ್ನು ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶ ನಿರ್ವಹಣೆ ಎನ್ನಲಾಗುತ್ತದೆ. ಎರಡನೆಯದಾಗಿ, ಇದು ಸಾಂಪ್ರದಾಯಿಕ ಯೂರಿಯಾಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಮತ್ತು ಜೈವಿಕ ಗೊಬ್ಬರಗಳನ್ನು ಉತ್ತೇಜಿಸುತ್ತದೆ, ಇವುಗಳು ವೆಚ್ಚ ತಗ್ಗಿಸುವ ಜತೆಗೆ ಪರಿಸರ ಸ್ನೇಹಿ ಎಂದು ಪರಿಗಣಿಸಲಾಗಿದೆ. ಮೂರನೆಯದಾಗಿ, ಸ್ಥಳೀಯ ಪಂಚಾಯತ್‌ಗಳನ್ನು ಮಾಹಿತಿ ಕೇಂದ್ರಗಳಾಗಿ ಸಬಲೀಕರಣಗೊಳಿಸಲಾಗುತ್ತಿದ್ದು, ಇದು ದೂರದ ಪ್ರದೇಶದ ರೈತರಿಗೂ ಕೃಷಿ ಪರಿಣತಿ ಒದಗಿಸುತ್ತದೆ. ನಾಲ್ಕನೆಯದಾಗಿ, ರೈತರು ನೈಜ-ಸಮಯದ, ಸ್ಥಳೀಯ ಹವಾಮಾನ ನವೀಕರಣ ಮತ್ತು ಬೆಳೆ ಸಲಹೆಗಳನ್ನು ಪಡೆಯಲಿದ್ದು, ಇದು ಹವಾಮಾನ ವೈಪರೀತ್ಯದ ಅಪಾಯಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಐದನೆಯದಾಗಿ, ಈ ಅಭಿಯಾನ, ಅಸ್ತಿತ್ವದಲ್ಲಿರುವ ಸರ್ಕಾರಿ ಯೋಜನೆಗಳ ಲಾಭ ಪಡೆಯುವುದನ್ನು ಸುಗಮಗೊಳಿಸುತ್ತದೆ. ಇದರಿಂದಾಗಿ ಸಬ್ಸಿಡಿಗಳು, ಗುಣಮಟ್ಟದ ಬಿತ್ತನೆ ಬೀಜಗಳು ಮತ್ತು ತಂತ್ರಜ್ಞಾನ ಉಪಕರಣಗಳು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಮಗಳನ್ನು ತಲುಪುತ್ತವೆ. ಈ ಅಭಿಯಾನ ಪಿಎಂ-ಕಿಸಾನ್, ಕಿಸಾನ್ ಕ್ರೆಡಿಟ್ ಕಾರ್ಡ್, ಬೇಳೆಕಾಳುಗಳು-ಎಣ್ಣೆಕಾಳುಗಳ ಮಿಷನ್, ಆಯಿಲ್ ಪಾಮ್ ಮಿಷನ್, ಹತ್ತಿ ಮಿಷನ್, ಯಾಂತ್ರೀಕರಣ ಬೆಂಬಲ ಮತ್ತು ಜಲ ಸಂರಕ್ಷಣಾ ಉಪಕ್ರಮಗಳು ಸೇರಿದಂತೆ ಅಸ್ತಿತ್ವದಲ್ಲಿರುವ ಪ್ರಮುಖ ಯೋಜನೆಗಳನ್ನು ಸಂಯೋಜಿಸುತ್ತದೆ.

ಕಿರುಸುದ್ದಿ

ಪರಿಷ್ಕೃತ ವಲಸೆ ನೀತಿ ಜಾರಿಗೆ ಅಧಿಸೂಚನೆ

ಹೊಸದಿಲ್ಲಿ: ಅನುಮತಿಸಲಾದ ವೀಸಾ ಅವಧಿ ಮೀರಿ ಭಾರತದಲ್ಲಿ ವಾಸ್ತವ್ಯ ವಿಸ್ತರಿಸಲು ಬಯಸುವ ವಿದೇಶಿಯರು ಈಗ ಕೇಂದ್ರ ಗೃಹ ಸಚಿವಾಲಯ ಅಧಿಸೂಚಿಸಿದ ಪರಿಷ್ಕೃತ ವಲಸೆ ಮತ್ತು ವಿದೇಶಿಯರ ನಿಯಮಗಳು 2025ರಲ್ಲಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ಈ ಬದಲಾವಣೆಗಳಿಗೆ 180 ದಿನಗಳ ಅಥವಾ ಅದಕ್ಕಿಂತ ಕಡಿಮೆ ಅವಧಿ ವೀಸಾಗಳಲ್ಲಿರುವ ಸಂದರ್ಶಕರು 180 ದಿನಗಳ ಅವಧಿ ಮುಗಿಯುವ ಮೊದಲು ನೋಂದಣಿ ಪೂರ್ಣಗೊಳಿಸಬೇಕಾಗುತ್ತದೆ. ಅಧಿಸೂಚನೆಯ ಪ್ರಕಾರ, ವಲಸೆ ಮತ್ತು ವಿದೇಶಿಯರ ನಿಯಮಗಳು, 2025ರ ನಿಯಮ 12ಅನ್ನು ತಿದ್ದುಪಡಿ ಮಾಡಲಾಗಿದೆ.

ಮನೆ ಖರೀದಿದಾರರಿಗೆ ವಂಚನೆ; ನಾಲ್ವರ ಸೆರೆ

ಹೊಸದಿಲ್ಲಿ: 19,000ಕ್ಕೂ ಹೆಚ್ಚು ಹೂಡಿಕೆದಾರರಿಗೆ ವಂಚಿಸಿರುವ 2,004 ಕೋಟಿ ರೂ. ಮೊತ್ತದ ಮನೆ ಖರೀದಿದಾರರ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ(ಇಡಿ) ಜೂ.1 ರಂದು ಅರ್ಥ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ನ ನಾಲ್ಕು ಪ್ರವರ್ತಕರನ್ನು ಬಂಧಿಸಿದೆ. ಅವಧೇಶ್ ಕುಮಾರ್ ಗೋಯಲ್, ರಜನೀಶ್ ಮಿತ್ತಲ್, ಅತುಲ್ ಗುಪ್ತಾ ಮತ್ತು ವಿಕಾಸ್ ಗುಪ್ತಾ ಅವರನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅನ್ವಯ ಬಂಧಿಸಲಾಗಿದೆ. ದಿಲ್ಲಿ ವಿಶೇಷ ನ್ಯಾಯಾಲಯ ಬಂಧಿತರನ್ನು ವಿಚಾರಣೆಗಾಗಿ ಐದು ದಿನಗಳ ಕಾಲ ಇಡಿ ಕಸ್ಟಡಿಗೆ ಒಪ್ಪಿಸಿದೆ. ಸಕಾಲದಲ್ಲಿ ವಸತಿ ಮತ್ತು ವಾಣಿಜ್ಯ ಯೋಜನೆಗಳನ್ನು ಹಸ್ತಾಂತರಿಸುವ ಭರವಸೆ ನೀಡಿ ಈ ಕಂಪನಿ 19,425 ಮನೆ ಖರೀದಿದಾರರಿಂದ ಸುಮಾರು 2,004 ಕೋಟಿ ರೂ. ಸಂಗ್ರಹಿಸಿತ್ತು. ಆದರೆ, ಯೋಜನೆಗಳು ಅಪೂರ್ಣವಾಗಿಯೇ ಉಳಿದಿದ್ದು, 467 ಕೋಟಿ ರೂ. ಹಣವನ್ನು ಗ್ರೂಪ್ ಸಂಸ್ಥೆಗಳ ಮೂಲಕ ಚರಾಸ್ತಿ ಮತ್ತು ಸ್ಥಿರಾಸ್ತಿಗಳನ್ನು ಖರೀದಿಸಲು ದುರುಪಯೋಗಪಡಿಸಿಕೊಳ್ಳಲಾಗಿದೆ, ಎಂದು ತನಿಖೆಯಿಂದ ತಿಳಿದುಬಂದಿದೆ.

ಕಾಂಗೋದಲ್ಲಿ 321 ಇಬೊಲಾ ಕೇಸ್ ದೃಢ

ಜಿನೀವಾ: ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಇಬೊಲಾದ ಬುಂಡಿಬುಗ್ಯೋ ಪ್ರಭೇದದ 116 ಶಂಕಿತ ಪ್ರಕರಣಗಳು ಪತ್ತೆಯಾಗಿದ್ದು, ಈವರೆಗೆ 321 ಪ್ರಕರಣಗಳು ದೃಢಪಟ್ಟಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಂಗಳವಾರ ತಿಳಿಸಿದೆ. ವೈರಸ್‌ನಿಂದ 41 ಮಂದಿ ಮೃತಪಟ್ಟಿದ್ದು, ಆರು ಜನರು ಚೇತರಿಸಿಕೊಂಡಿದ್ದಾರೆ. ಉಗಾಂಡಾದಲ್ಲಿ 9 ಪ್ರಕರಣಗಳು ದೃಢಪಟ್ಟಿದ್ದು, ಓರ್ವ ಮೃತಪಟ್ಟಿದ್ದಾನೆ. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಅಂತಾರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯೆಂದು ಘೋಷಿಸಿದೆ.

ಬ್ರಿಟನ್‌ನಲ್ಲಿ ಪಾಕಿಸ್ತಾನ ಗ್ಯಾಂಗ್‌ನಿಂದ ದೌರ್ಜನ್ಯ

ಲಂಡನ್: ಬ್ರಿಟನ್‌ನ ಹಲವು ರಾಜ್ಯಗಳಲ್ಲಿ ಸಕ್ರಿಯವಾಗಿರುವ ಮಕ್ಕಳ ಸಂಘಟಿತ ಲೈಂಗಿಕ ಶೋಷಣೆಯ ಪಾಕಿಸ್ತಾನಿ ಮೂಲದ ಗ್ರೂಮಿಂಗ್ ಗ್ಯಾಂಗ್ ಕುರಿತಾದ ಸಂತ್ರಸ್ತರ ಭೀಕರ ಸಾಕ್ಷ್ಯಗಳನ್ನು ಬ್ರಿಟಿಷ್ ಸಂಸದ ರೂಪರ್ಟ್ ಲೋವ್ ಸಂಸತ್ತಿನಲ್ಲಿ ಮಂಡಿಸಿದ್ದಾರೆ. ರೂಪರ್ಟ್ ಲೋವ್, ತಮ್ಮ ಸ್ವತಂತ್ರ ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳನ್ನು ಮಂಡಿಸಿದ್ದು, ಇದರಲ್ಲಿ ಸಾಂಸ್ಥಿಕ ವೈಫಲ್ಯ, ಹಿಂಸಾಚಾರ, ಬಾಲಕಿಯರ ಗರ್ಭಧಾರಣೆ ಮತ್ತು ಬೆದರಿಕೆಗಳ ವಿವರಗಳಿವೆ. ಕೇವಲ 13 ನೇ ವಯಸ್ಸಿನಿಂದಲೇ ಮೂರು ವರ್ಷಗಳ ಅವಧಿಯಲ್ಲಿ ನೂರಾರು ಪುರುಷರಿಂದ ಅತ್ಯಾಚಾರಕ್ಕೊಳಗಾದ ಕರಾಳ ಅನುಭವಗಳನ್ನು ಸಂತ್ರಸ್ತರು ಹಂಚಿಕೊಂಡಿದ್ದಾರೆ. ದೌರ್ಜನ್ಯಕ್ಕೊಳಗಾದವರಲ್ಲಿ ಬಹುತೇಕರು ಬಿಳಿಯರು ಎಂದು ಹೇಳಲಾಗಿದೆ. ಮಕ್ಕಳ ಸಂಘಟಿತ ಲೈಂಗಿಕ ಶೋಷಣೆಯಲ್ಲಿ ತೊಡಗಿರುವ ಅಪರಾಧಿಗಳು ಪ್ರಮುಖವಾಗಿ ಪಾಕಿಸ್ತಾನಿ ಮೂಲದ ಟ್ಯಾಕ್ಸಿ ಚಾಲಕರು ಮತ್ತು ಮಾರುಕಟ್ಟೆ ವ್ಯಾಪಾರಿಗಳು ಎಂದು ಸರ್ಕಾರಿ ತನಿಖೆಗಳು ಕಂಡುಕೊಂಡಿವೆ. ಲೋವ್ ಖಾಸಗಿ ತನಿಖೆ, ಬ್ರಿಟನ್‌ನ ಕನಿಷ್ಠ 85 ಪ್ರದೇಶಗಳಲ್ಲಿ ಇಂತಹ ಜಾಲಗಳು ಹರಡಿರುವುದನ್ನು ಗುರುತಿಸಿದೆ. ಈ ಮಾದರಿಯ ದೌರ್ಜನ್ಯಗಳು ರೋಥರ್ ಹ್ಯಾಮ್, ರಾಚ್‌ಡೇಲ್, ಆಕ್ಸ್‌ಫರ್ಡ್, ಟೆಲ್‌ಫೋರ್ಡ್ ಮತ್ತು ಬ್ರಿಸ್ಟಲ್ ಸೇರಿದಂತೆ ಬ್ರಿಟನ್‌ನ ಸುಮಾರು 50 ನಗರಗಳಲ್ಲಿ ಪುನರಾವರ್ತನೆಯಾಗಿವೆ. 2014ರ ವರದಿಯ ಪ್ರಕಾರ, ರೋಥರ್‌ಹ್ಯಾಮ್ ಒಂದರಲ್ಲೇ 1997ರಿಂದ 2013ರ ನಡುವೆ 1,400ಕ್ಕೂ ಹೆಚ್ಚು ಮಕ್ಕಳು ಶೋಷಣೆಗೆ ಒಳಗಾಗಿದ್ದರು.

ಕಾಶ್ಮೀರ ಕುರಿತ ಪಾಕ್, ಇಯು ಹೇಳಿಕೆಗೆ ಕಿಡಿ

ಹೊಸದಿಲ್ಲಿ: ಪಾಕಿಸ್ತಾನ ಮತ್ತು ಐರೋಪ್ಯ ಒಕ್ಕೂಟಗಳು ಹೊರಡಿಸಿರುವ ಜಂಟಿ ಪತ್ರಿಕಾ ಪ್ರಕಟಣೆಯನ್ನು ಭಾರತ ಆಕ್ರೋಶ ವ್ಯಕ್ತಪಡಿಸಿದ್ದು, ಜಮ್ಮು-ಕಾಶ್ಮೀರದ ಬಗ್ಗೆ ಮಾಡಲಾದ ಉಲ್ಲೇಖಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ಸೋಮವಾರ ನಡೆದ ಪಾಕಿಸ್ತಾನ-ಇಯು ಸಭೆಯಲ್ಲಿ ಪಾಕಿಸ್ತಾನ, ಕಾಶ್ಮೀರ ತನ್ನ ಅವಿಭಾಜ್ಯ ಅಂಗ ಎಂದಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ(ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್, ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗಗಳಾಗಿವೆ ಎಂದಿದ್ದಾರೆ. ಅಂತೆಯೇ, ಭಾರತದ ಸಾರ್ವಭೌಮ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಲು ಯಾವುದೇ ಅಧಿಕಾರವಿಲ್ಲದ ಬಾಹ್ಯ ಘಟಕಗಳಿಗೆ ಎಚ್ಚರಿಕೆ ನೀಡಿದರು. ಇತ್ತೀಚಿನ ದ್ವಿಪಾಕ್ಷಿಕ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ, ಪಾಕಿಸ್ತಾನ ಅಂತಾರಾಷ್ಟ್ರೀಯ ಬೆಂಬಲ ಪಡೆಯಲು ಜಂಟಿ ಹೇಳಿಕೆಗಳಲ್ಲಿ ಜಮ್ಮು -ಕಾಶ್ಮೀರದ ಉಲ್ಲೇಖಗಳನ್ನು ಹೇಳಲು ನಿರಂತರವಾಗಿ ಪ್ರಯತ್ನಿಸಿದೆ. ಆದಾಗ್ಯೂ, ಭಾರತದ ಆಡಳಿತಾತ್ಮಕ ಮತ್ತು ಪ್ರಾದೇಶಿಕ ಸಮಗ್ರತೆ ಬಗ್ಗೆ ಪ್ರತಿಕ್ರಿಯಿಸಲು ಮೂರನೇ ವ್ಯಕ್ತಿಗಳಿಗೆ ಯಾವುದೇ ಪಾತ್ರ ಅಥವಾ ಅಧಿಕಾರವಿಲ್ಲ ಎಂದು ಭಾರತ ದೃಢವಾಗಿ ಹೇಳಿದೆ.

3ನೇ ವ್ಯಕ್ತಿ ಹಸ್ತಕ್ಷೇಪಕ್ಕಿಲ್ಲ ಅವಕಾಶ: ಭಾರತ ಮತ್ತು ನೇಪಾಳದ ನಡುವಿನ ದ್ವಿಪಕ್ಷೀಯ ವಿಷಯದಲ್ಲಿ ಯಾವುದೇ ಮೂರನೇ ವ್ಯಕ್ತಿಗಳ ಪಾತ್ರವಿಲ್ಲ. ಉಭಯ ದೇಶಗಳ ಗಡಿ ವಿಷಯಗಳ ಎಲ್ಲಾ ಅಂಶಗಳನ್ನು ಎದುರಿಸಲು ದ್ವಿಪಕ್ಷೀಯ ಮಾನದಂಡಗಳಿವೆ ಎಂದು ಭಾರತ ಮಂಗಳವಾರ ಹೇಳಿದೆ.

ಮಹಾರಾಷ್ಟ್ರದಲ್ಲಿ ರೈತರ 2 ಲಕ್ಷ ರೂ. ಸಾಲಮನ್ನಾ

ಮುಂಬೈ: ರೈತರ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಇದರಿಂದ ಸುಮಾರು 56 ಲಕ್ಷ ರೈತರಿಗೆ ಲಾಭವಾಗಲಿದೆ. ರೈತರಿಗೆ ಮಹತ್ವದ ನೆರವು ನೀಡುವ ಉದ್ದೇಶದಿಂದ ಪುಣ್ಯಶ್ಲೋಕ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಕರ್ಜಮುಕ್ತಿ ಯೋಜನೆಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಯೋಜನೆಯಲ್ಲಿ 2019ರ ಏ.1ರಿಂದ 2025ರ ಮಾ.31ರ ನಡುವೆ ಪಡೆದ ಅಲ್ಪಾವಧಿಯ ಬೆಳೆಸಾಲಗಳಲ್ಲಿ, 2025ರ ಸೆ.30ರ ವೇಳೆಗೆ ಬಾಕಿ ಉಳಿದು 2026ರ ಮಾ.31ರವರೆಗೆ ಪಾವತಿಯಾಗದ 2 ಲಕ್ಷ ರೂ.ವರೆಗಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಾಗುತ್ತದೆ. 2 ಲಕ್ಷ ರೂ.ಗಿಂತ ಹೆಚ್ಚು ಸಾಲ ಬಾಕಿ ಇರುವ ರೈತರು ಹೆಚ್ಚುವರಿ ಮೊತ್ತವನ್ನು 2027ರ ಮಾ.31ರೊಳಗೆ ಪಾವತಿಸಿದರೆ 2 ಲಕ್ಷ ರೂ.ವರೆಗೆ ಸಾಲಮನ್ನಾ ಸೌಲಭ್ಯ ಪಡೆಯಬಹುದು. ಇದಲ್ಲದೆ, 2022-23ರಿಂದ 2024-25ರ ಅವಧಿಯಲ್ಲಿ ಕನಿಷ್ಠ ಎರಡು ವರ್ಷಗಳ ಕಾಲ ನಿಗದಿತ ಅವಧಿಯೊಳಗೆ ಬೆಳೆಸಾಲ ತೀರಿಸಿದ ರೈತರಿಗೆ ಗರಿಷ್ಠ 50 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ. ಹಿಂದಿನ ಮಹಾತ್ಮ ಜ್ಯೋತಿರಾವ್ ಫುಲೆ ಶೇತ್ಕರಿ ಕರ್ಜಮುಕ್ತಿ ಯೋಜನೆಯ ಫಲಾನುಭವಿಗಳಿಗೂ ಕೆಲವು ಷರತ್ತುಗಳೊಂದಿಗೆ ನೆರವು ಲಭ್ಯವಾಗಲಿದೆ. ಆದರೆ, ರಾಜಕೀಯ ಪಕ್ಷಗಳ ಪದಾಧಿಕಾರಿಗಳು, ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿದಾರರು ಹಾಗೂ ತಿಂಗಳಿಗೆ 25 ಸಾವಿರ ರೂ.ಗಿಂತ ಹೆಚ್ಚು ವೇತನ ಪಡೆಯುವ ಸಹಕಾರಿ ಸಂಸ್ಥೆಗಳ ನೌಕರರನ್ನು ಯೋಜನೆಯಿಂದ ಹೊರಗಿಡಲಾಗಿದೆ.

3 ಮದರಸಾಗಳಿಗೆ ಬೀಗ, ಸಂತ್ರಸ್ತ ಕುಟುಂಬಕ್ಕೆ ನೆರವು

ಗಾಜಿಯಾಬಾದ್: ಉತ್ತರ ಪ್ರದೇಶದ ಗಾಜಿಯಾಬಾದ್‌ನ ಖೋಡಾ ಪ್ರದೇಶದಲ್ಲಿ 17 ವರ್ಷದ ಸೂರ್ಯ ಚೌಹಾಣ್ ಹತ್ಯೆ ಪ್ರಕರಣದ ಬಳಿಕ ಉದ್ವಿಗ್ನಗೊಂಡಿದ್ದ ಪರಿಸ್ಥಿತಿ ಶಾಂತವಾಗಿದೆ. ಆರೋಪಿ ಅಸದ್ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ನಂತರ, ಆಡಳಿತ ಮತ್ತು ಪೊಲೀಸರು ಪರಿಸ್ಥಿತಿ ಬಗ್ಗೆ ಕಟ್ಟೆಚ್ಚರವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯತೆ ಇಲ್ಲದೆ ಕಾರ್ಯನಿರ್ವಹಿಸುತ್ತಿದ್ದ ಮೂರು ಮದರಸಾಗಳನ್ನು ಅಧಿಕಾರಿಗಳು ಬೀಗ ಜಡಿದಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳ ವಿವರ ಸಂಗ್ರಹಿಸಿ, ಅವರನ್ನು ಸಮೀಪದ ಸರ್ಕಾರಿ ಅಥವಾ ಮಾನ್ಯತೆ ಪಡೆದ ಶಾಲೆಗಳಿಗೆ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ. ಸೂರ್ಯನ ಕುಟುಂಬಕ್ಕೆ ನೆರವು ನೀಡುವ ಉದ್ದೇಶದಿಂದ ಸರ್ಕಾರವು ಆತನ ತಾಯಿ ಸರೋಜ್ ಅವರಿಗೆ ಖೋಡಾ ನಗರಸಭೆಯಲ್ಲಿ ಗುತ್ತಿಗೆ ಆಧಾರದ ಸ್ವಚ್ಛತಾ ಮೇಲ್ವಿಚಾರಕ ಹುದ್ದೆಯನ್ನು ನೀಡಿದೆ. ಕುಟುಂಬದ ಯಾವುದೇ ಅರ್ಹ ಸದಸ್ಯರು ಈ ಹುದ್ದೆಯನ್ನು ಸ್ವೀಕರಿಸಬಹುದಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸ್ನೇಹದ ಹೆಸರಿನಲ್ಲಿ ನಡೆದ ಹತ್ಯೆ ಸಂಪೂರ್ಣವಾಗಿ ಖಂಡನೀಯ ಎಂದು ಹೇಳಿದ್ದು, ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡದ ಪೋಷಕರು ಎಚ್ಚರ ವಹಿಸಬೇಕು ಎಂದಿದ್ದಾರೆ.

ಸೇನೆಗೆ ದೇಸಿ ದಿವ್ಯಾಸ್ತ್ರದ ದಿವ್ಯಶಕ್ತಿ

ಹೊಸದಿಲ್ಲಿ: ಎಐ ಆಧಾರಿತ ಮಾನವರಹಿತ ಕಮಿಕಾಜಿ ಡ್ರೋನ್ ದಿವ್ಯಾಸ್ತ್ರ ಎಂಕೆ-1 ಹಾರಾಟ ಪರೀಕ್ಷೆ ಯಶಸ್ವಿಯಾಗಿ ನಡೆದಿದೆ. ದೇಶೀಯ ರಕ್ಷಣಾ ತಂತ್ರಜ್ಞಾನ ಸಂಸ್ಥೆಯಾದ ಹಾವರ್‌ಇಟ್ ದಿವ್ಯಾಸ್ತ್ರವನ್ನು ನಿರ್ಮಿಸಿದ್ದು, ಇದೊಂದು ಆತ್ಮಾಹುತಿ ದಾಳಿ ಡ್ರೋನ್ ಆಗಿದೆ. ಇದು ನೈಜ ಸಮಯದ ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ದಾಳಿ ಸಾಮರ್ಥ್ಯವನ್ನು ಹೊಂದಿರುವ ವಿಶೇಷ ಸಂಯೋಜನೆ ಹೊಂದಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೆ ದೊಡ್ಡ ಉತ್ತೇಜನವಾಗಿದೆ. ಸೇನೆಯ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ದಿವ್ಯಾಸ್ತ್ರದ ಹಾರಾಟ ಪರೀಕ್ಷೆ ನಡೆದಿದೆ. ಉತ್ತರಪ್ರದೇಶದ ಲಖನೌ ಮೂಲದ ರಕ್ಷಣಾ ನವೋದ್ಯಮವಾದ ಹಾವರ್ ಇಟ್ ದಿವ್ಯಾಸ್ತ್ರ ಡ್ರೋನ್ ನಿರ್ಮಿಸಿದೆ. ಇದನ್ನು ಗುಪ್ತಚರ, ಕಣ್ಗಾವಲು ಮತ್ತು ಸ್ಥಳಾನ್ವೇಷಣೆ ಕಾರ್ಯಾಚರಣೆಗಳಿಗಾಗಿ ವಿನ್ಯಾಸ ಮಾಡಲ್ಪಟ್ಟಿದೆ.



ಎಐ ಆಧಾರಿತ ದಿವ್ಯಾಸ್ತ್ರ ಎಂಕೆ-1 ಆತ್ಮಾಹುತಿ ದಾಳಿ ಡ್ರೋನ್ ಹಾರಾಟ ಯಶಸ್ವಿ

ಎಲ್ಲಿ ಪರೀಕ್ಷೆ?

ರಾಜಸ್ಥಾನದ ಜೋಧ್‌ಪುರ ಮರಭೂಮಿ ಪ್ರದೇಶದಲ್ಲಿ 50 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚಿನ ಉಷ್ಣಾಂಶದಲ್ಲಿ ದಿವ್ಯಾಸ್ತ್ರದ ಹಾರಾಟ ಪರೀಕ್ಷೆಯನ್ನು ಸೋಮವಾರ ನಡೆಸಲಾಯಿತು.

ಶೇ.95 ದೇಸಿ ಉಪಕರಣ ಬಳಕೆ

ದಿವ್ಯಾಸ್ತ್ರ ಡ್ರೋನ್ ಸಾಮರ್ಥ್ಯ ಮಾತ್ರವಲ್ಲದೆ ಅದರ ನಿರ್ಮಾಣವೂ ಗಮನಸೆಳೆಯುತ್ತದೆ. ಶೇ.95 ದೇಸಿ ಉಪಕರಣಗಳಿಂದ ದಿವ್ಯಾಸ್ತ್ರ ಎಂಕೆ-1 ಮತ್ತು ಎಂಕೆ-2 ಡ್ರೋನ್‌ಗಳ ನಿರ್ಮಾಣ ಮಾಡಲಾಗುತ್ತಿದೆ.

ಅಗ್ಗದ ನಿರ್ಮಾಣ: ಅತ್ಯಾಧುನಿಕ ವೈಮಾನಿಕ ದಾಳಿ ನಡೆಸುವುದಕ್ಕೆ ದುಬಾರಿ ವಿದೇಶಿ ಡ್ರೋನ್ ಆಮದು ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಆಮದು ಡ್ರೋನ್‌ಗಳಿಂದ ಮೂರು ಪಟ್ಟು ಅಗ್ಗದ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಏನಿದು ಲಾಯಿಟರಿಂಗ್ ಮ್ಯೂನಿಷನ್?

ಸಾಮಾನ್ಯವಾಗಿ ಕ್ಷಿಪಣಿಯನ್ನು ಉಡಾಯಿಸಿದ ಬಳಿಕ ಅದರ ಗುರಿ ಬದಲಾಯಿಸಲು ಸಾಧ್ಯವಿಲ್ಲ. ಆದರೆ ಲಾಯಿಟರಿಂಗ್ ಮ್ಯೂನಿಷನ್ ಎಂದರೆ, ಗುರಿ ಪ್ರದೇಶದ ಮೇಲೆ ಕೆಲ ಗಂಟೆಗಳ ಕಾಲ ಹಾರುತ್ತಾ ಇರುತ್ತದೆ. ಸೂಕ್ತ ಗುರಿ(ಟಾರ್ಗೆಟ್) ಹುಡುಕುತ್ತದೆ. ಗುರಿ ಕಂಡ ತಕ್ಷಣ ಅದೇ ಗುರಿಯ ಮೇಲೆ ಅಪ್ಪಳಿಸಿ ಸ್ಫೋಟಗೊಳ್ಳುತ್ತದೆ.

ಶೀಘ್ರದಲ್ಲಿ ದಿವ್ಯಾಸ್ತ್ರ ಎಂಕೆ-2

ದಿವ್ಯಾಸ್ತ್ರ ಎಂಕೆ-2 ಡ್ರೋನ್ ಆರಂಭಿಕ ಹಂತದ ಪರೀಕ್ಷೆಗಳನ್ನು ನಡೆಸಿದ್ದಾಗಿ ಹಾವರ್‌ಇಟ್ ಹೇಳಿಕೊಂಡಿದೆ. ಇದು 8ರಿಂದ 12 ಗಂಟೆಗಳವರೆಗೆ ಹಾರಾಟ ಸಾಮರ್ಥ್ಯ ಹೊಂದಿರಲಿದೆ. ಇದರ ದಾಳಿ ದೂರವ್ಯಾಪ್ತಿ 1500ರಿಂದ 2000 ಕಿ.ಮೀ. ಇರಲಿದೆ.

ಏನಿದರ ವಿಶೇಷತೆ

- ವಿಧ: ಲಾಯಿಟರಿಂಗ್ ಮ್ಯೂನಿಷನ್/ಕಮಿಕಾಜಿ ಡ್ರೋನ್
- ಪೇಲೋಡ್: 15ರಿಂದ 80 ಕೆ.ಜಿ.ವರೆಗೆ
- ದಾಳಿ ವೇಗ: ಪ್ರತಿ ಗಂಟೆಗೆ 300ರಿಂದ 400 ಕಿ.ಮೀ.
- ದಾಳಿ ವ್ಯಾಪ್ತಿ: 500 ಕಿ.ಮೀ.ವರೆಗೆ
- ಉಡಾವಣೆ ವಿಧಾನ: ವಾಹನ ಆಧಾರಿತ ಉಡಾವಣೆ
- ಹಾರಾಟ ಅವಧಿ: 5 ಗಂಟೆಗಳವರೆಗೆ
- ಸ್ವದೇಶಿ ಅಂಶ: ಸುಮಾರು ಶೇ.95

ಕಿರುಸುದ್ದಿ

ರಸ್ತೆ ದುರಸ್ತಿ ಕಾಮಗಾರಿ ಅವಶ್ಯ

ಹುಬ್ಬಳ್ಳಿ: ನಗರದ ಪ್ರಮುಖ ವಾಣಿಜ್ಯ ಮತ್ತು ಸಂಚಾರ ಕೇಂದ್ರವಾಗಿರುವ ಪ್ರದೇಶಗಳಲ್ಲಿ ಫ್ಲೈಓವರ್ ಕೆಳಭಾಗದ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಅಲೆದಾಡಲು ಸಮಸ್ಯೆ ಆಗುತ್ತಿದೆ. ತಕ್ಷಣ ರಸ್ತೆ ದುರಸ್ತಿ ಕಾಮಗಾರಿ ಮಾಡಬೇಕು ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಆಗ್ರಹಿಸಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಂಸ್ಥೆ, ಸಾರ್ವಜನಿಕರು, ವ್ಯಾಪಾರಸ್ಥರು, ವಿದ್ಯಾರ್ಥಿಗಳು ಹಾಗೂ ವಾಹನ ಸವಾರರು ದಿನನಿತ್ಯ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಸಂಸ್ಥೆ ಆತಂಕ ವ್ಯಕ್ತಪಡಿಸಿದೆ.

ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ಆಳವಾದ ಗುಂಡಿಗಳು ನೀರಿನಿಂದ ತುಂಬಿ ಅಪಾಯದ ಸ್ಥಿತಿ ನಿರ್ಮಾಣವಾಗಿದ್ದು, ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳಿಗೆ ಅಪಘಾತದ ಭೀತಿ ಹೆಚ್ಚಾಗಿದೆ. ಬಸ್ ನಿಲ್ದಾಣ, ವ್ಯಾಪಾರ ಮಳಿಗೆಗಳು, ಮಾರುಕಟ್ಟೆ ಪ್ರದೇಶಗಳು ಹಾಗೂ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ಸಂಚಾರ ದಟ್ಟಣೆ ಹೆಚ್ಚಾಗುವುದರಿಂದ ಸಾರ್ವಜನಿಕರು ರಸ್ತೆ ದಾಟಲು ಕೂಡಾ ಕಷ್ಟಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಅಭಿವೃದ್ಧಿ ಕಾಮಗಾರಿಗಳು ಸಾರ್ವಜನಿಕರ ಅನುಕೂಲಕ್ಕಾಗಿ ನಡೆಯಬೇಕೇ ಹೊರತು ಜನರಿಗೆ ಹೆಚ್ಚುವರಿ ಸಂಕಷ್ಟ ಉಂಟುಮಾಡಬಾರದು. ಆದ್ದರಿಂದ ಸಂಬಂಧಪಟ್ಟ ಇಲಾಖೆಗಳು ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಡಾಂಬರೀಕರಣ ಕೈಗೊಳ್ಳುವುದು, ಮಳೆ ನೀರು ನಿಲ್ಲದಂತೆ ವ್ಯವಸ್ಥೆ ಮಾಡುವುದು ಹಾಗೂ ತಾತ್ಕಾಲಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷ ಜಿ. ಕೆ. ಆದಪ್ಪಗೌಡರ ಒತ್ತಾಯಿಸಿದ್ದಾರೆ. ನಗರದ ಅಭಿವೃದ್ಧಿಯ ಜೊತೆಗೆ ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೂ ಆದ್ಯತೆ ನೀಡಬೇಕು. ಇಲ್ಲದಿದ್ದರೆ ಸಾರ್ವಜನಿಕರ ಅಸಮಾಧಾನ ಹೆಚ್ಚುವ ಸಾಧ್ಯತೆ ಇದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಉದಯ ರೇವಣಕರ ತಿಳಿಸಿದ್ದಾರೆ.

ತನಿಖೆ ನಡೆಸಲು ಆಗ್ರಹ

ಹುಬ್ಬಳ್ಳಿ: ರಾಜ್ಯದಲ್ಲಿ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಅವ್ಯವಹಾರ ನಡೆದಿದ್ದು, ತಕ್ಷಣ ರಾಜ್ಯ ಸರ್ಕಾರ ಈ ಕುರಿತು ತನಿಖೆ ನಡೆಸಲು ಲೋಕಾಯುಕ್ತ ಅಥವಾ ಸಿಓಡಿ ವಹಿಸಬೇಕು ಎಂದು ಭಾರತೀಯ ಕಿಸಾನ್ ಸಂಘದ ರಾಜ್ಯಾಧ್ಯಕ್ಷ ಭೀಮಸೇನ ಕೋಕರೆ ಆಗ್ರಹಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆ ರೈತರಿಗೆ ಅನುಕೂಲವಾಗುವ ಬದಲಾಗಿ ಬೆಳೆ ವಿಮೆ ತುಂಬಿದ ರೈತರಿಗೆ ಬೆಳೆ ವಿಮೆ ಬಂದಿಲ್ಲ, ಇದು ರೈತರಿಗೆ ಅನ್ಯಾಯವಾಗಿದೆ. ರೈತರಿಗೆ ತಕ್ಷಣ ಬೆಳೆ ವಿಮೆ ವಿತರಿಸಬೇಕು ಹಾಗೂ ಅವ್ಯವಹಾರದ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕುಂದಗೋಳ ತಹಶೀಲ್ದಾರ್ ಕಚೇರಿ ಎದುರು ಕಳೆದ 12 ದಿನಗಳಿಂದ ಧರಣಿ ಸತ್ಯಾಗ್ರಹ ನಡೆಸಲಾಗುತ್ತಿದೆ. ಯಾವುದೇ ಅಧಿಕಾರಿಗಳು ಸ್ಪಂದಿಸಿಲ್ಲ ಎಂದರು. ಈ ಬಗ್ಗೆ ತನಿಖಾ ಇಲಾಖೆಗಳಿಂದ ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಮೂಲಕ ಕಂಪನಿಗಳ ರೈತರು ಅಷ್ಟೇ ಅಲ್ಲದೇ ಧಾರವಾಡದಲ್ಲಿ ಬೆಳೆ ವಿಮಾ ಹಣ ಕಟ್ಟಿದ ರೈತರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕಿದೆ. ಇಲ್ಲವಾದಲ್ಲಿ ಈ ಅವ್ಯವಹಾರದ ಕುರಿತು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಉತ್ತರ ಪ್ರಾಂತ ಅಧ್ಯಕ್ಷ ವಿವೇಕ ಮೋರೆ, ಕೋಶಾಧ್ಯಕ್ಷ ರಮೇಶ ಕೊರವಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಪಟ್ಟಸ್ವಾಮಿ ಇದ್ದರು.

ನೇರ ಪ್ರಸಾರದ ವ್ಯವಸ್ಥೆ

ಹುಬ್ಬಳ್ಳಿ: ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಮತ್ತು ಸಾರ್ವಜನಿಕರಿಗೆ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಡಿ. ಕೆ. ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸುವ ಐತಿಹಾಸಿಕ ಕ್ಷಣವನ್ನು ಒಟ್ಟಾಗಿ ವೀಕ್ಷಿಸಲು ಅನುಕೂಲವಾಗುವಂತೆ ಬೃಹತ್ ಎಲ್‌ಇಡಿ ಪರದೆಯ ಮೂಲಕ ನೇರ ಪ್ರಸಾರದ ವ್ಯವಸ್ಥೆಯನ್ನು ಮಾಡಲಾಗಿದೆ.

ಈ ಕಾರ್ಯಕ್ರಮವನ್ನು ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದು, ಈ ಸಮಾರಂಭದಲ್ಲಿ ನಮ್ಮ ಪಕ್ಷದ ಪ್ರಮುಖ ಮುಖಂಡ ರಜತ್ ಉಳ್ಳಾಗಡ್ಡಿಮಠ, ಸುವರ್ಣ ಕಲ್ಲಕುಂಟ್ಲ ಸೇರಿದಂತೆ ಪಾಲಿಕೆ ಸದಸ್ಯರು, ಕಾಂಗ್ರೆಸ್ ಪದಾಧಿಕಾರಿಗಳು, ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಜೂ.8ಕ್ಕೆ ಸಾಮಾನ್ಯ ಸಭೆ

ಹುಬ್ಬಳ್ಳಿ: ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಸಾಮಾನ್ಯ ಸಭೆಯನ್ನು ಜೂ.8ರಂದು ಬೆಳಗ್ಗೆ 11 ಗಂಟೆಗೆ ತಾಲೂಕು ಆಡಳಿತ ಸೌಧದ ತಾಲೂಕು ಪಂಚಾಯತ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷಿ ಚಟುವಟಿಕೆಗಳಿಗೆ ಹಿನ್ನಡೆ

ಸಿ.ಎಸ್.ಅರಸನಾಳ



ಮುಂಡರಗಿ: ಮುಂಡರಗಿ ಪಟ್ಟಣವೂ ಸೇರಿದಂತೆ ತಾಲೂಕಿನಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮವಾದ ಹಸಿ ಮಳೆಯಾಗಿದ್ದರಿಂದಾಗಿ ರೈತರು ತಮ್ಮ ಜಮೀನುಗಳನ್ನು ಹದಗೊಳಿಸಿ ಬಿತ್ತನೆ ಪ್ರಾರಂಭಿಸುವ ಸನ್ನಾಹದಲ್ಲಿದ್ದರು. ಆದರೆ ಮತ್ತೆ ಮಳೆ ಕೈಕೊಟ್ಟಿದ್ದರಿಂದ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾದಂತಾಗಿದೆ. ರೈತ ಸಮುದಾಯ ಮಳೆಗಾಗಿ ಜಾತಕಪಕ್ಷಿಯಂತೆ ಕಾಯುತ್ತಿದ್ದಾರೆ.

ಪ್ರಸ್ತುತ ವರ್ಷ ಮುಂಡರಗಿ ತಾಲೂಕಿನಾದ್ಯಂತ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ನೀರಾವರಿ ಹಾಗೂ ಖುಷ್ಕಿ ಜಮೀನಿನಲ್ಲಿ ಸುಮಾರು 49565 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಅವುಗಳಲ್ಲಿ ಈ ಭಾಗದ ಪ್ರಮುಖ ಬೆಳೆಗಳಾದ ಗೋವಿನಜೋಳ 29900 ಹೆಕ್ಟೇರ್, ಹೆಸರು 8100 ಹೆಕ್ಟೇರ್, ಸೂರ್ಯಕಾಂತಿ 4700 ಹೆಕ್ಟೇರ್, ಭತ್ತ 2450 ಹೆಕ್ಟೇರ್, ಶೇಂಗಾ 1950 ಹೆಕ್ಟೇರ್, ತೊಗರಿ 875 ಹೆಕ್ಟೇರ್, ಹತ್ತಿ 425 ಹೆಕ್ಟೇರ್, ಕಬ್ಬು 700 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಗೆ ಗುರಿ ಹೊಂದಲಾಗಿದೆ.

ದಿಗಂತ ವಿಶೇಷ

ತಾಲೂಕಿನಲ್ಲಿ ಎಪ್ರೀಲ್ ಮತ್ತು ಮೇ ತಿಂಗಳಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ. ಏಪ್ರಿಲ್ 14ರಿಂದ ಅಶ್ವಿನಿ, ಭರಣಿ, ಕೃತಿಕಾ ಮಳೆಗಳಾಗಿದ್ದು, ಮೇ 25ರಿಂದ ರೋಹಿಣಿ ಮಳೆ ಪ್ರಾರಂಭವಾಗಿದೆ. ತಾಲೂಕಿನಲ್ಲಿ ಏಪ್ರಿಲ್, ಮೇ ತಿಂಗಳಿನಲ್ಲಿ 87.3 ಮಿ.ಮೀ. ವಾಡಿಕೆ ಮಳೆ ಇತ್ತು. ಆದರೆ 134.9 ಮಿ.ಮಿ. ಮಳೆಯಾಗಿದೆ. ಆದರೂ ಜಿಲ್ಲೆಯ ಇತರೆ ತಾಲೂಕುಗಳಿಗೆ ಹೋಲಿಸಿದರೆ ಮುಂಡರಗಿ ತಾಲೂಕಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ. ಇನ್ನೂ ಉತ್ತಮ ಮಳೆಯಾಗಬೇಕು ಎನ್ನುವುದು ತಾಲೂಕಿನ ರೈತರ ಅಭಿಪ್ರಾಯವಾಗಿದೆ.

ಮುಂಗಾರು ಬಿತ್ತನೆ ಕಾರ್ಯಕ್ಕಾಗಿ ಈಗಾಗಲೇ ಮುಂಡರಗಿ ರೈತ ಸಂಪರ್ಕ ಕೇಂದ್ರದಲ್ಲಿ 10 ಕ್ವಿಂಟಾಲ್ ಹೆಸರು ಬೀಜ, 50 ಕ್ವಿಂಟಾಲ್ ತೊಗರಿ ಬೀಜ ಅದೇ ರೀತಿ ಡಂಬಳ ರೈತ ಸಂಪರ್ಕ ಕೇಂದ್ರದಲ್ಲಿ 15ಕ್ವಿಂಟಾಲ್ ಹೆಸರು ಬೀಜ ಮತ್ತು 50 ಕ್ವಿಂಟಾಲ್ ತೊಗರಿ ಬೀಜ ಸಂಗ್ರಹಿಸಲಾಗಿದೆ. ನಂತರದಲ್ಲಿ ಬೇಕಾದ ಬೀಜಗಳನ್ನು ಸಹ ಕೃಷಿ ಇಲಾಖೆ ಅಧಿಕಾರಿಗಳು ನಿಗದಿತ ಸಮಯಕ್ಕೆ ರೈತರಿಗೆ ದೊರೆಯುವಂತೆ ಕ್ರಮ ಕೈಗೊಳ್ಳಬೇಕೆನ್ನುವುದು ರೈತರ ಒತ್ತಾಯವಾಗಿದೆ.

> **ಈಗಾಗಲೇ ತಾಲೂಕಿನಾದ್ಯಂತ ಕೃಷಿ ಚಟುವಟಿಕೆಗಳು ನಡೆದಿದ್ದು, ರೈತರು ಗೋವಿನಜೋಳ, ಸೂರ್ಯಕಾಂತಿ ಹೆಸರು ಬಿತ್ತನೆ ನಡೆಯುತ್ತಿದ್ದು, ಮಸಾರಿ ಭೂಮಿಯಲ್ಲಿ ಹೆಚ್ಚಿನ ಹಸಿಯೂಗಿದ್ದು, ಎರೆಭೂಮಿಯಲ್ಲಿ ಹಸಿ ಕಡಿಮೆಯಾಗಿರುವುದರಿಂದ ಬಿತ್ತನೆ ಕಾರ್ಯ ಅಷ್ಟೊಂದು ಜೋರಾಗಿ ನಡೆದಿಲ್ಲ. ಆದರೆ ಮಸಾರೆ ಭೂಮಿಯಲ್ಲಿ ಕೃಷಿ ಚಟುವಟಿಕೆಗಳು ಅತ್ಯಂತ ಜೋರಾಗಿವೆ.**
> ■ **ಮಂಜುನಾಥ ಇಟಗಿ, ರೈತ, ಕೋಟಿಭಾಗ ಮುಂಡರಗಿ**

> **ಈಗಾಗಲೇ ರೈತರು ಮುಂಗಾರು ಬಿತ್ತನೆ ಮಾಡುತ್ತಿದ್ದು, ಬಿತ್ತನೆ ಮಾಡುವಾಗ ತೇವಾಂಶ ನೋಡಿ ಬಿತ್ತನೆ ಮಾಡಬೇಕು. ಬಿತ್ತನೆಗೆ ಪೂರ್ವದಲ್ಲಿ ಕಡ್ಡಾಯವಾಗಿ ಬಿಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಈಗಾಗಲೇ ಮುಂಡರಗಿ ಹಾಗೂ ಡಂಬಳ ಎರಡೂ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜಗಳ ದಾಸ್ತಾನು ಇದೆ. ಯಾವುದೇ ರೀತಿಯ ಬೀಜದ ಕೊರತೆ ಇಲ್ಲ.**
> ■ **ಪ್ರಾಣೇಶ, ಸಹಾಯಕ ಕೃಷಿ ನಿರ್ದೇಶಕ, ಮುಂಡರಗಿ**

ಕುಡಿಯುವ ನೀರಿನ ಕೊರತೆಯಾಗದಿರಲಿ

ನರಗುಂದ: ಪ್ರಸಕ್ತ ವರ್ಷ ಮುಂಗಾರು ಪ್ರಾರಂಭವಾಗಿದೆ. ಇನ್ನೂ ಮಳೆಯಾಗದೆ ಕೃಷಿ ಚಟುವಟಿಕೆಗೆ ತೊಂದರೆಯಾಗಿದೆ. ಆದ್ದರಿಂದ ಗ್ರಾಪಂ ಪಿಡಿಒಗಳು ಕುಡಿಯುವ ನೀರಿನ ಕೊರತೆಯಾಗದಂತೆ ಗಮನ ಹರಿಸಬೇಕೆಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಅವರು ಪಟ್ಟಣದ ತಾಪಂ ಸಭಾಭವನದಲ್ಲಿ ತಾಲೂಕು ವಿಪತ್ತು ನಿರ್ವಹಣಾ ಸಭೆಯಲ್ಲಿ ಮಾತನಾಡಿ, ಈಗಾಗಲೇ ಬೇಸಿಗೆಯಲ್ಲಿ ತಾಲೂಕಿನ ಬನಹಟ್ಟಿ, ಮೂಗನೂರ, ಹದಲಿ ಸೇರಿದಂತೆ ರೋಣ ಮತ್ತು ಗದಗ ತಾಲೂಕಿನಕೆಲವುಹಳ್ಳಿಗಳಲ್ಲಿಕುಡಿಯುವ ನೀರಿನ ಸಮಸ್ಯೆಯಾಗಿದೆ. ಪ್ರಸಕ್ತ ವರ್ಷ ಮುಂಗಾರು ಮಳೆ ಆಗದ್ದರಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಹೆಸ್ಕಾಂ ಅಧಿಕಾರಿಗಳು, ನೀರು ಸರಬರಾಜು ಸಿಬ್ಬಂದಿ, ಡಿಬಿಓಟಿ ಸಿಬ್ಬಂದಿ ಗ್ರಾಪಂ ಅಧಿಕಾರಿಗಳು, ಸಭೆ ಸೇರಿ ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆ ಮಾಡಲು ಯಾವುದೇ ರೀತಿಯ ತೊಂದರೆಯಾಗದಂತೆ ಚರ್ಚಿಸಿ ಕೆಲಸ ಮಾಡಬೇಕು. ಕುಡಿಯುವ ನೀರಿನ ಪೂರೈಕೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಈ ವರ್ಷ ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಮುಂಗಾರು ದುರ್ಬಲವೆಂದು ತಿಳಿದುಬಂದಿದೆ. ಆದ್ದರಿಂದ ಅಧಿಕಾರಿಗಳು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೆಚ್ಚಿನ ಗಮನ ನೀಡಬೇಕೆಂದು ಹೇಳಿದರು.

ಜಾನುವಾರುಗಳಿಗೆ ಮೇವಿನ ಕೊರತೆ ಕಂಡುಬಂದಲ್ಲಿ ಮತ್ತು ನೀರಿನ ಸರಬರಾಜಗೆ ಬೇಕಾದ ಅನುದಾನ ಮತ್ತು ಇತರೆ ಕೆಲಸಕಾರ್ಯಗಳ ಬಗ್ಗೆ ಏನಾದರೂ ಸಮಸ್ಯೆ ಇದ್ದರೆ ಅಧಿಕಾರಿಗಳು ನನ್ನ ಗಮನಕ್ಕೆ ತರಬೇಕು ಎಂದರು. ತಹಶೀಲ್ದಾರ್ ಶ್ರೀಶೈಲ ತಳವಾರ, ರೋಣ ತಹಶೀಲ್ದಾರ್ ನಾಗರಾಜ ಕೆ., ಗದಗ ತಹಶೀಲ್ದಾರ್ ಶ್ರೀನಿವಾಸ ಕುಲಕರ್ಣಿ, ತಾಪಂ ಅಧಿಕಾರಿ ಜಿನಗಾ, ಚಂದ್ರಶೇಖರ ಕಂದಕೂರ, ತಾಪಂ ಆಡಳಿತಾಧಿಕಾರಿ ಡಾ.ಎಚ್.ಬಿ. ಹುಲಗಣ್ಣವರ, ಹೆಸ್ಕಾಂ ಅಧಿಕಾರಿ ಖುದಾವಂದ, ತಾಪಂ ಅಧಿಕಾರಿ ಶ್ರೀಧರ ಚಿನಗುಂಡಿ, ವಿವಿಧ ಇಲಾಖಾಧಿಕಾರಿಗಳು ಇದ್ದರು.



ಬದುಕು ಬದಲಾಯಿಸುವ ವಚನಗಳು: ಪಾಟೀಲ

ನರಗುಂದ: ಬಸವಾದಿ ಶಿವಶರಣರ ವಚನಗಳಿಗೆ ಬದುಕನ್ನು ಬದಲಾಯಿಸುವ ಶಕ್ತಿ ಇದೆ. ಅವುಗಳು ಮಾನವನ ಜೀವನದ ದಾರಿದೀಪವಾಗಿವೆ. ತಂತ್ರಜ್ಞಾನದ ಭರಾಟೆಯಲ್ಲಿ ಬದಲಾಗುತ್ತಿರುವ ಮನುಷ್ಯರ ಜೀವನ ಶೈಲಿಗೆ ಶಿವಶರಣರ ವಚನಗಳು ಸ್ಫೂರ್ತಿದಾಯಕವಾಗಿವೆ ಎಂದು ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಕೆ.ಟಿ. ಪಾಟೀಲ ಹೇಳಿದರು.

ಅವರು ತಾಲೂಕಿನ ಭೈರನಹಟ್ಟಿ ಗ್ರಾಮದ ಶ್ರೀ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ದೊರೆಸ್ವಾಮಿ ವಿವಿಧೋದ್ದೇಶ ಟ್ರಸ್ಟ್ ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 383 ನೇ ಮಾಸಿಕ ಶಿವಾನುಭವದಲ್ಲಿ ಮಾತನಾಡಿದರು. ಜಾನಪದ ಚಿಂತಕ ಪ್ರೊ. ಆರ್.ಬಿ. ಚಿನಿವಾಲರ, ಶಿವಯ್ಯ ಹಿರೇಮಠ, ಶಿಕ್ಷಕರಾದ ಶಿವಾನಂದ ಮಲ್ಲಾಪೂರ, ಶಂಕರಗೌಡ ಅಸೂಟಿ, ಪ್ರಭಾಕರ ಮಂಟೂರ ಪ್ರಮುಖರು ಉಪಸ್ಥಿತರಿದ್ದರು. ಶರಣ ಬಸವೇಶ್ವರ ಭಜನಾ ಮಂಡಳಿಯವರಿಂದ ವಚನ ಸಂಗೀತ ನೆರವೇರಿತು. ಶ್ರೀಮಠದ ವ್ಯವಸ್ಥಾಪಕ ಮಹಾಂತೇಶ ಹಿರೇಮಠ ನಿರ್ವಹಿಸಿದರು.



ವಿದ್ಯಾರ್ಥಿಗಳಿಗೆ ಉಚಿತ ಕಾರ್ಯಾಗಾರ

ಧಾರವಾಡ: ದ್ವಿತೀಯ ಪಿಯುಸಿ ಮುಗಿಸಿ ಸಿಇಟಿ ಪರೀಕ್ಷೆ ಬರೆದು ಎಂಜಿನಿಯರಿಂಗ್ ಓದಬೇಕೆಂಬ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಕೋರ್ಸ್ ಬಗ್ಗೆ ನಗರದ ಐಎಸ್‌ಸಿಟಿ (ಗ್ಲೋಬಲ್ ಇನ್ಸ್ಟಿಟ್ಯೂಟ್) ಸಂಸ್ಥೆಯು ತನ್ನ 30ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ಪ್ರತ್ಯೇಕವಾಗಿ ಉಚಿತ ಕಾರ್ಯಾಗಾರ ಆಯೋಜಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಸ್ಥೆಯ ಸಂಸ್ಥಾಪಕ ಅನಿಲ ಘಾಸ್ತೆ, ಈ ಕಾರ್ಯಾಗಾರವನ್ನು ಜೂನ್ 7ರಂದು ಬೆಳಗ್ಗೆ10ಕ್ಕೆ ಕರ್ನಾಟಕ ಕುಲಪುರೋಹಿತ ಆಲೂರು ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ಪ್ರತ್ಯೇಕವಾಗಿ ಈ ಕಾರ್ಯಾಗಾರ ನಡೆಯಲಿದ್ದು, ಕಾರ್ಯಾಗಾರಕ್ಕೆ ವಿದ್ಯಾರ್ಥಿಗಳು ಮುಂಚಿತವಾಗಿ ಹೆಸರು ನೋಂದಣಿ ಮಾಡಿ ಭಾಗವಹಿಸಬೇಕು. ಪಾಲಕರು ಸಹ ಕಾರ್ಯಾಗಾರದಲ್ಲಿ ಭಾಗವಹಿಸಲು ಅವಕಾಶವಿದೆ. ನೋಂದಣಿ ವೆಬ್‌ಸೈಟ್ https://www.isctonline.com ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಐಐಐಟಿ ಸಾರ್ವಜನಿಕ ಸಂಪರ್ಕಾಧಿಕಾರಿ ವಾಸುದೇವ ಪರ್ವತಿ, ಸಿವಿಲ್ ಎಂಜಿನಿಯರಿಂಗ್ ಸಂಘದ ಅಧ್ಯಕ್ಷ ಸುನೀಲ ಬಾಗೇವಾಡಿ, ಸಂಘಟಕ ಮಾರ್ತಾಂಡಪ್ಪ ಕತ್ತಿ ಇದ್ದರು.

ಹತ್ಯೆ ಖಂಡಿಸಿ ಮೌನ ಪ್ರತಿಭಟನೆ ಇಂದು

ಹುಬ್ಬಳ್ಳಿ: ಜೈನ ಸಮುದಾಯದ ಸಾಧು-ಸಂತರು ರಸ್ತೆಗಳಲ್ಲಿ ವಿಹಾರ ಮಾಡುವಾಗ ನಡೆಯುತ್ತಿರುವ ಅಪಘಾತ ಹಾಗೂ ಹತ್ಯೆಯನ್ನು ಖಂಡಿಸಿ ದಿಗಂಬರ ಜೈನ ಸಮಾಜದ ವತಿಯಿಂದ ಜೂ. 3 ರಂದು ನಗರದಲ್ಲಿ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಜೈನ ಸಮಾಜದ ದಿಗಂಬರ ಮತ್ತು ಶ್ವೇತಾಂಬರ ಪರಂಪರೆಯ ಮುನಿ - ಆರ್ಯಿಕೆ, ಸಾಧು-ಸಾಧ್ವಿಯರು ದೇಶಾದ್ಯಂತ ಪಾದಯಾತ್ರೆಯ ವಿಹಾರ ಮಾಡುತ್ತಿರುತ್ತಾರೆ. ಇವರ ಪಾದಯಾತ್ರೆ ವೇಳೆ ಹೆದ್ದಾರಿಗಳಲ್ಲಿ ವಾಹನ ಚಾಲನೆ ಮಾಡುವ ವೇಳೆ ನಿರ್ಲಕ್ಷ್ಯದಿಂದ ಅಪಘಾತಗಳು ನಡೆಯುತ್ತಿವೆ. ಕೆಲವು ಕಡೆ ಉದ್ದೇಶ ಪೂರ್ವಕವಾಗಿ ಹತ್ಯೆ ಮಾಡಲಾಗುತ್ತಿದೆ. ಇದನ್ನು ಖಂಡಿಸಿ ಮೌನ ಪ್ರತಿಭಟನೆ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 10 ಗಂಟೆಗೆ ಮೆರವಣಿಗೆಯು ಮಹಾವೀರ ಗಲ್ಲಿಯ ಕಂಚಗಾರ ಗಲ್ಲಿಯ ಶಾಂತಿನಾಥ ಜಿನಮಂದಿರದಿಂದ ಪ್ರಾರಂಭವಾಗಿ ಶಂಕರ ಮಠ, ಬಾಬಾಸಾನ ಗಲ್ಲಿ, ದುರ್ಗದಬೈಲ, ಬ್ರಾಡವೆ, ಕೊಪ್ಪಿಕರ ರಸ್ತೆ, ಲ್ಯಾಮಿಂಗ್ಟನ್ ರಸ್ತೆಯ ಮೂಲಕ ತಹಶೀಲ್ದಾರ ಕಚೇರಿ ತಲುಪುವುದು. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪದವಿಹಾರ ಮಾಡುವ ಜೈನ ಸಾಧು ಸಂತರ ಸಂರಕ್ಷಣೆಗೆ ಸೂಕ್ತ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಸಮಾಜದ ಅಧ್ಯಕ್ಷ ರಾಜೇಂದ್ರ ಬಿಳಗಿ ತಿಳಿಸಿದ್ದಾರೆ.

ನೀಟ್ ಮಾದರಿ ಪರೀಕ್ಷೆ ರದ್ದತಿಗೆ ಆಗ್ರಹ



ಹುಬ್ಬಳ್ಳಿ: ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆಯಲು ನಡೆಸುವ ನೀಟ್ ಮಾದರಿ ಪರೀಕ್ಷೆಯನ್ನು ರದ್ದು ಪಡಿಸಬೇಕು ಎಂದು ಆಗ್ರಹಿಸಿ ಇಲ್ಲಿಯ ವಿದ್ಯಾನಗರ ಬಿವಿಬಿ ಕಾಲೇಜ್ ಎದುರು ಸಮಾವೇಶಗೊಂಡ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ(ಎನ್‌ಎಸ್‌ಯುಐ) ಸದಸ್ಯರು ಪ್ರತಿಭಟನೆ ನಡೆಸಿದರು. ವೈದ್ಯಕೀಯ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ವಿಫಲವಾಗುತ್ತಿದೆ. ಅವ್ಯವಹಾರಗಳು ನಡೆಯುತ್ತಿದ್ದು, ನೀಟ್ ಪರೀಕ್ಷೆಯು ವಿದ್ಯಾರ್ಥಿಗಳ ಮೇಲೆ ಮಾನಸಿಕ ಒತ್ತಡ ಹೇರುತ್ತಿದ್ದು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳು ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ. ತರಬೇತಿ ಕೇಂದ್ರಗಳಿಗೆ ತೆರಳದ ಇವರು ವೈದ್ಯಕೀಯ ಶಿಕ್ಷಣದಿಂದ ವಂಚನೆಗೊಳಗಾಗುತ್ತಿದ್ದಾರೆ ಎಂದು ವಿಶಾಲ ಮಾನೆ ಹೇಳಿದರು. ನಿಖಿಲ್ ಹಿರೇಮಠ, ಸುಮಾ, ಸೋಹೇಬ್, ರಾಜು ಸೇರಿದಂತೆ ಸುಮಾರು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೀರವಳ್ಳಿ ಶಾಲಾ ಪ್ರಾರಂಭೋತ್ಸವ



ಕಲಘಟಗಿ: ತಾಲೂಕಿನ ಬೀರವಳ್ಳಿ ಗ್ರಾಮದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವ ಸಂಭ್ರಮದಿಂದ ಜರುಗಿತು. ಶಾಲಾ ವಿದ್ಯಾರ್ಥಿಗಳನ್ನು ಹಾಗೂ ಪಾಲಕರನ್ನು ಚಕ್ಕಡಿಯಲ್ಲಿ ಕೂಡಿಸಿ ವಾದ್ಯ ಮೇಳದೊಂದಿಗೆ ಮೆರವಣಿಗೆ ಮಾಡಿ ಶಾಲೆಗೆ ಸ್ವಾಗತಿಸಲಾಯಿತು. ಮುಖ್ಯೋಪಾಧ್ಯಾಯ ಸಿ.ಎಸ್. ಗ್ಯಾನಪ್ಪನವರ ಹಾಗೂ ಸಹ ಶಿಕ್ಷಕ ವೃಂದ ಹಾಗೂ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಧಾರವಾಡ ಜಿಲ್ಲೆ ಸಹಕಾರಿ ತೊಟ್ಟಿಲು: ಮುಗದ

ಧಾರವಾಡ: ಭಾರತದಲ್ಲಿ ಪ್ರಥಮ ಸಹಕಾರಿ ಸಂಘವು ಅವಿಭಜಿತ ಕಣಗಿನಹಾಳ ಗ್ರಾಮದಲ್ಲಿ 1905ರಲ್ಲಿ ಆರಂಭವಾದ ಅವಿಭಜಿತ ಧಾರವಾಡ ಜಿಲ್ಲೆಗೆ ಸಹಕಾರಿ ತೊಟ್ಟಿಲು ಎಂದು ಕರೆಯುತ್ತಾರೆ ಎಂದು ಕೆಎಂಎಫ್ ಅಧ್ಯಕ್ಷ ಶಂಕರ ಮುಗದ ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಸಾರ್ವಜನಿಕರ ಸಹಭಾಗಿತ್ವ ಇದ್ದಾಗಲೇ ಸಹಕಾರಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಸಂಘದ ಕಾಕಾ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕುಮಾರೇಶ್ವರ ಗೃಹ ನಿರ್ಮಾಣ ಅಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಬಿ.ಭೂಮನಗೌಡರ, ಬಸವಪ್ರಭು ಹೊಸಕೇರಿ, ಡಾ. ಶೈಲಜಾ ಅಮರಶೆಟ್ಟಿ, ಡಾ.ಮಹೇಶ ಹೊರಕೇರಿ, ಡಾ.ಧನವಂತ ಹಾಜವಗೋಳ, ಎಸ್.ಬಿ.ಹೂಗಾರ ಇತರರಿದ್ದರು. ವೀರಣ್ಣ ಒಡ್ಡೀನ ಸ್ವಾಗತಿಸಿದರು. ಶಂಕರ ಕುಂಬಿ ನಿರೂಪಿಸಿದರು. ವಿಶ್ವೇಶ್ವರಿ ಹಿರೇಮಠ ವಂದಿಸಿದರು.



ಜ್ಞಾನದ ಸಂಜೀವಿನಿ ನೀಡುವ ಗುರುಗಳು: ಸ್ವಾಮೀಜಿ


ನರಗುಂದ: ಗುರು ಎಂದರೇ ಬೆಳಕು, ಜ್ಞಾನ, ತೇಜಸ್ಸು, ಆದಕ್ಕೆ ಜ್ಞಾನಸೂರ್ಯ ಎಂದು ಕರೆಯುತ್ತಾರೆ. ಸೂರ್ಯ ಬಂದ ಕೂಡಲೇ ಕತ್ತಲೆ ಸಹಜವಾಗಿ ಕರಗುವಂತೆ ಗುರುವಿನ ಜ್ಞಾನದ ಅನುಗ್ರಹ ಆದ ಕೂಡಲೇ ಅಜ್ಞಾನ ತಾನಾಗಿಯೇ ನಿವಾರಣೆಯಾಗಿ ಸುಜ್ಞಾನ ಪಲಿಸುತ್ತದೆ. ಗುರುಗಳು ಜ್ಞಾನದ ಸಂಜೀವಿನಿ ನೀಡುವ ಶಕ್ತಿಯಾಗಿದ್ದಾರೆಂದು ಪತ್ರೀವನಮಠದ ಗುರು ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಚಿಕ್ಕನರಗುಂದ ಗ್ರಾಮದ ಡಿ.ಎಸ್.ಕೆಂಚನಗೌಡ್ರ ಪ್ರೌಢಶಾಲೆಯ 2002-03 ನೇ ಸಾಲಿನ ಎಸ್ ಎಸ್‌ಎಲ್ ಸಿ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದರು. ಎಚ್.ಎ.ಮುದಿಯಪ್ಪನವರ ಮಾತನಾಡಿ, ಮನೆಯೇ ಮೊದಲ ಪಾಠಶಾಲೆ ಜನನಿ ತಾ ಮೊದಲ ಗುರು. ತಮ್ಮ ಮಕ್ಕಳನ್ನು ಮೊಬೈಲ್ ಹಾಗೂ ಟಿವಿಯಿಂದ ದೂರವಿಡಿ. ವಿದ್ಯೆಯ ಜೊತೆಗೆ ಒಳ್ಳೆಯ ಸಂಸ್ಕಾರ ಕೊಡಿ ಎಂದರು. ಎಸ್.ಎಸ್.ಕಂದಗಲ್ಲ ಅಧ್ಯಕ್ಷತೆ ವಹಿಸಿದ್ದರು. ರೇಣುಕಾ ಹೂಲಿ ಪ್ರಾರ್ಥನೆ ಹೇಳಿದರು. ಶಾಲೆಯಲ್ಲಿ ತಾವು ಪಡೆದ ಅನುಭವಗಳ ಬಗ್ಗೆ ಅನಿಸಿಕೆಗಳನ್ನು ವಿದ್ಯಾರ್ಥಿಗಳಾದ ಮಹಾಂತೇಶ ಹಾಲಗೌಡ್ರ, ನಿರ್ಮಲಾ ಹನಸಿ, ಗೀತಾ ಕಂಬಳಿ, ರವಿ ತಳವಾರ, ಹನುಮಂತ ಮೇಟಿ ವ್ಯಕ್ತಪಡಿಸಿದರು. ಮುತ್ತು ರಾಯರಡ್ಡಿ ಸ್ವಾಗತಿಸಿದರು. ಪ್ರಕಾಶ ಗುಡಸಲಮನಿ ನಿರೂಪಿಸಿದರು. ಶ್ರೀಕಾಂತ ಚಲವಾದಿ ವಂದಿಸಿದರು.





ಹುಬ್ಬಳ್ಳಿ: ಇಲ್ಲಿನ ಸೇವಾಭಾರತಿ ಟ್ರಸ್ಟ್ ಬಾಲ ಕಲ್ಯಾಣ ಕೇಂದ್ರದ ಆಶ್ರಯದಲ್ಲಿ ಅಧಿಕ ಮಾಸದ ಪೂಜೆ 110 ಮಹಿಳೆಯರಿಂದ ಶಿವನಿಗೆ 108 ಬಿಲ್ವಾರ್ಚನೆ ಪೂಜೆ ಮಾಡಲಾಯಿತು. ಕಮಲಾ ಪುರಾಣಿಕ ಅವರು ಪೂಜಾ ವಿಧಿ ವಿಧಾನಗಳನ್ನು ಬೋಧಿಸಿದರು. ಬಾಲ ಕಲ್ಯಾಣ ಕೇಂದ್ರದ ಅಧ್ಯಕ್ಷೆ ಕಮಲಾ ಜೋಶಿ ಹಾಗೂ ಮತ್ತಿತರರಿದ್ದರು.



ಹುಬ್ಬಳ್ಳಿ: ಸಾರಿಗೆ ನೌಕರರಿಗೆ ವೇತನ ನೀಡಿದ್ದು, ಇದರ ಬಗ್ಗೆ ಪ್ರತಿಯೊಬ್ಬರಿಗೂ ವೇತನ ಪಟ್ಟಿ ಹಾಗೂ ನೀಡಿದ ಹಿಂಬಾಕಿ ವಿವರ ನೀಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ಸದಸ್ಯರು ಮಂಗಳವಾರ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಆರ್‌ಸಿಬಿ ಗೆಲುವಿಗೆ ಪೂಜೆ: ವಿಜಯೋತ್ಸವ



ಕುಂದಗೋಳ: ಐಪಿಎಲ್ ಕ್ರಿಕೆಟ್ ಪಂದ್ಯದ ಅಂಗವಾಗಿ ಪಟ್ಟಣದ ಭೂತೇಶ್ವರ ದೇವಸ್ಥಾನದ ಆವರಣದಲ್ಲಿ ಶಾಸಕ ಎಂ.ಆರ್. ಪಾಟೀಲ ಅಭಿಮಾನಿ ಬಳಗದ ವತಿಯಿಂದ ಬೃಹತ್ ಎಲ್‌ಸಿಡಿ ಟಿವಿ ಅಳವಡಿಸಿ ಕ್ರಿಕೆಟ್ ಪ್ರೇಮಿಗಳಿಗೆ ಪಂದ್ಯ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಲಾಯಿತಲ್ಲದೆ, ಆರ್‌ಸಿಬಿ ತಂಡಕ್ಕೆ ಭರ್ಜರಿ ಗೆಲುವು ದೊರೆಯಲೆಂದು ಭೂತೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಅಭಿಮಾನಿ ಬಳಗದ ಸತೀಶ ಪಾಟೀಲ ,ವಾಗೀಶ ಮನಕಟ್ಟಿಮಠ, ಗಿರೀಶ ಗದಗಿನ,ಸುಭಾಷ ಸಾದರ,ರಮೇಶ ಗದಗಿನ ಹಾಗೂ ಪ್ರವೀಣ ಹಾದಿಮನಿ ನೇತೃತ್ವದಲ್ಲಿ ಎಲ್‌ಸಿಡಿ ಟಿವಿ ಅಳವಡಿಸಿ ಸಾರ್ವಜನಿಕರಿಗೆ ಉಚಿತವಾಗಿ ಪಂದ್ಯ ವೀಕ್ಷಿಸುವ ಅವಕಾಶ ಒದಗಿಸಲಾಯಿತು. ಆರ್‌ಸಿಬಿ ತಂಡದ ಗೆಲುವಿನ ಬಳಿಕ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

298 ಮನೆ ಕೂಡಲೇ ಹಸ್ತಾಂತರಿಸಿ



ನರಗುಂದ: ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಾಣಗೊಂಡ 298 ಮನೆಗಳನ್ನು ಈಗಾಗಲೇ 1 ಲಕ್ಷ ರೂ.ಗಳ ಡಿಪಾಸಿಟ್ ಮಾಡಿರುವ ಕಡುಬಡವರಿಗೆ ಕೂಡಲೇ ಹಸ್ತಾಂತರ ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಅಧ್ಯಕ್ಷ ನಬೀಸಾಬ ಕಿಲ್ಲೇದಾರ ಆಗ್ರಹಿಸಿದರು.

ಪುರಸಭೆ ಕಾರ್ಯಾಲಯದ ಆವರಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಆಶ್ರಯ ಮನೆ ಹಂಚಿಕೆ ಮಾಡುವಂತೆ ಆಗ್ರಹಿಸಿ ತಹಶೀಲ್ದಾರ್ ಹಾಗೂ ಮುಖ್ಯಾಧಿಕಾರಿ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು. ಪಟ್ಟಣದ ಮಧ್ಯ ಭಾಗದಲ್ಲಿನ ತೋಟದ ಕೆರೆ ದಡದ ಗುಡಿಸಲು ನಿವಾಸಿಗಳಿಗೆ ಹೈಕೋರ್ಟ್‌ನಿಂದ ಜಾಗ ಖಾಲಿ ಮಾಡಬೇಕೆಂದು ಮೇಲಿಂದ ಮೇಲೆ ನೋಟಿಸ್ ಬರುತ್ತಿವೆ. ಆಶ್ರಯ ಮನೆಗಳನ್ನು ಬೇಗ ಹಂಚಿಕೆ ಮಾಡದಿದ್ದರೆ ತೋಟದ ಕೆರೆ ಗುಡಿಸಲು ನಿವಾಸಿಗಳು ಬೀದಿ ಪಾಲಾಗುತ್ತಾರೆ. ಶಾಸಕರು ಕೇವಲ 15 ದಿನಗಳಲ್ಲಿ ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಆದರೆ ಉದ್ಘಾಟನೆಗೊಂಡು ಹಲವು ತಿಂಗಳು ಗತಿಸಿದೆ. ಇನ್ನೂ ವಿತರಣೆ ಆಗಿಲ್ಲ ಎಂದರು.

ರೇಣವ್ವ ಜಾಲಿಹಾಳ, ಬಿಬಿಜಾನ ಮುದಕವಿ, ರಾಜಬೀ ಜೋರಂ, ಮಾಬುಸಾಬ ಬಸಾಪೂರ, ರಾಜು ಡೆಂಬೆ, ಮಮತಾಜ ಗೋರಿಮನಿ, ಚಂದ್ರು ಚವ್ಹಾಣ, ರತ್ನಾ ಪೂಜಾರ, ನೇತ್ರಾವತಿ ನೇಕಾರ, ಮಹೇಶ ಮೇಲಿನಮನಿ, ಮಹಾದೇವಿ ಕಾಳೆ, ಸದ್ದಾಮ ಕಿಚಡಿ, ರಾಜು ಕಟ್ಟಿಮನಿ ಸೇರಿದಂತೆ ಅನೇಕರಿದ್ದರು.

ಮಂಡಳ ಚುನಾವಣೆ ರದ್ದತಿಗೆ ಆಗ್ರಹ

ಧಾರವಾಡ: ಮರಾಠಾ ಆಡಳಿತ ಮಂಡಳಿ ಬೈಲಾ ನಿಮಯ ಉಲ್ಲಂಘಿಸಿ ಆಡಳಿತ ಮಂಡಳಿ ವಿಸರ್ಜನೆ ಖಂಡಿಸಿ ಮರಾಠಾ ಸಮಾಜದ ಮುಖಂಡ ಬಸವರಾಜ ಜಾಧವ ನೇತೃತ್ವದಲ್ಲಿ ಮಂಡಳದ ಕಚೇರಿ ಮುಂಭಾಗ ಪ್ರತಿಭಟನೆ ನಡೆಯಿತು.

ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನ ತೆರುವಾದರೆ, ಆ ಸ್ಥಾನಕ್ಕೆ ಉಳಿದ ಅವಧಿಗೆ ಸದಸ್ಯರ ನೇಮಕ ಮಾಡುವ ನಿಯಮವಿದೆ ಎಂದು ಬಸವರಾಜ ತಿಳಿಸಿದರು. ಮಂಡಳಿ ಅಧ್ಯಕ್ಷ ಎಂ.ಎನ್.ಮೋರೆ ಮಾತನಾಡಿ, ಸದಸ್ಯರ ಸ್ಥಾನ ತೆರುವಾಗಿದ್ದೇ ನೆಪವಾಗಿಸಿ ಆಡಳಿತ ಮಂಡಳಿ ಜತೆ ಕಾರ್ಯಕಾರಿ ಸಮಿತಿ ವಿಸರ್ಜನೆ ನಿಯಮ ಬಾಹಿರ. ಮೂರು ವರ್ಷ ಅವಧಿ ಪೂರ್ಣಗೊಳಿಸಬೇಕು ಎಂಬುದು ನಿಯಮವಿದೆ ಎಂದರು.

ಕರ್ನಾಟಕ ರಾಜ್ಯ ಸಂಘಗಳ ನೋಂದಣಿ ಕಾಯ್ದೆ-1960ರ ಪ್ರಕಾರ ಮರಾಠಾ ವಿದ್ಯಾಪ್ರಸಾರಕ ಮಂಡಳ ಮೊದಲು ನೋಂದಾಯಿಸಿ, ನವೀಕರಿಸಬೇಕು. ಇದು ಪಾರದರ್ಶಕ ಮತ್ತು ಜವಾಬ್ದಾರಿಯ ಆಡಳಿತ ನಡೆಸಲು ಸಾಧ್ಯವಾಗಲಿದೆ. ಸತತ ಎರಡು ಅವಧಿಗೆ ಚುನಾಯಿತರಾದ ಸದಸ್ಯರು ಮೂರನೇ ಅವಧಿಗೆ ಸ್ಪರ್ಧೆಗೆ ಅವಕಾಶವಿಲ್ಲ. ಈ ನಿಯಮ ಜಾರಿಗೊಳಿಸಬೇಕು ಎಂದರು. ಮರಾಠಾ ವಿದ್ಯಾಪ್ರಸಾರಕ ಮಂಡಳ ಸುಧಾರಣಾ ಹೋರಾಟ ಸಮಿತಿ ಸದಸ್ಯರಾದ ವಿಠ್ಠಲ ಚವ್ಹಾಣ, ನಿಂಗಪ್ಪ ಪಾಗೋಜಿ, ದತ್ತಾತ್ರೇಯ ಮೋಟೆ, ಸುರೇಶ ಸವಾಸಿ, ರಾಘು ಸಾವಂತ, ಮಹೇಶ ಚವ್ಹಾಣ, ಬಾಬು ಜಾಧವ, ಮುಂಜನಾಥ ಮಾನೆ ಇದ್ದರು.



ಹಲವಾರು ಚೇತನಗಳಿಗೆ ಸ್ಫೂರ್ತಿ



ನವಲಗುಂದ: ತಾಲೂಕಿನಲ್ಲಿ ಕುಮಾರಗೊಪ್ಪ ಶಾಲೆ ಸೇರಿ ವಿವಿಧೆಡೆ ಸುದೀರ್ಘ ಸೇವೆ ಸಲ್ಲಿಸಿ ಮೌಲ್ಯಯುತ ಶಿಕ್ಷಣ ನೀಡುತ್ತಾ ಶಿಕ್ಷಣ ರಂಗದಲ್ಲಿ ಹಲವಾರು ಚೇತನಗಳಿಗೆ ಸ್ಫೂರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ಶಿಕ್ಷಕ ಶಿವಪ್ಪ ಆರೇರ ಅವರು ತಮ್ಮ ನಿವೃತ್ತಿ ಜೀವನವನ್ನು ಸಮಾಜಮುಖಿ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಬದುಕು ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಅಜಾತ ನಾಗಲಿಂಗಸ್ವಾಮಿ ಮಠದ ವೀರೇಂದ್ರ ಸ್ವಾಮೀಜಿ ಹೇಳಿದರು.

ಅವರು ಮೇಟಿ ಭವನದಲ್ಲಿ ತಾಲೂಕಿನ ಕುಮಾರಗೊಪ್ಪ ಸರ್ಕಾರಿ ಶಾಲೆ ಶಿಕ್ಷಕ ಶಿವಪ್ಪ ಆರೇರ ಅವರ ಸೇವಾನಿವೃತ್ತಿ ಅಭಿನಂದನಾ ಸಮಾರಂಭದ ಸಾನಿಧ್ಯವಹಿಸಿ ಮಾತನಾಡಿದರು.

ಶಿಕ್ಷಕ ಶಿವಪ್ಪ ಆರೇರ ಸನ್ಮಾನ ಸ್ವೀಕರಿಸಿ ಮಾತನಾಡಿ, ಮಕ್ಕಳೊಂದಿಗೆ ಕಳೆದ ದಿನಗಳು, ಅವರನ್ನು ಶೈಕ್ಷಣಿಕವಾಗಿ ಸಾಮಾಜಿಕವಾಗಿ ತಿದ್ದಿ ಬೆಳೆಸಿದ ಸಾರ್ಥಕ ಸೇವೆ ಸಲ್ಲಿಸಿದ ತೃಪ್ತಿ ನನಗಿದೆ ಎಂದರು. ಹರೀಶ ಬೊಮ್ಮನಹಳ್ಳಿ, ಶಿವಾನಂದ ಕದಂ, ಜೀವನ ಪವಾರ, ಆರ್ .ಬಿ.ಮುರನಾಳ, ಮಂಜುನಾಥ ಜಾಧವ, ಶಿವಾನಂದ ಬೆಂಚಿಕೇರಿ, ಮಹಾಂತೇಶ ಕುಲಕರ್ಣಿ, ಎಸ್. ಎಫ್. ನೀರಲಗಿ, ಪಿ.ಕೆ.ಹಿರೇಗೌಡ್ರ, ಹಾಗೂ ಪಡೆಸೂರ ಹಾಗೂ ಕುಮಾರಗೊಪ್ಪ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಪದಾಧಿಕಾರಿಗಳು ಇತರರಿದ್ದರು.

ಎಲ್ಲ ಕ್ಷೇತ್ರಗಳಲ್ಲೂ ಮುಂದೆ ಬನ್ನಿ

ಲಕ್ಷ್ಮೇಶ್ವರ: ಪ್ರಮುಖವಾಗಿ ವ್ಯಾಪಾರವನ್ನೇ ಆಶ್ರಯಿಸಿಕೊಂಡಿರುವ ಬಣಜಿಗ ಸಮಾಜ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕು ಎಂದು ಮುಕ್ತಿಮಂದಿರ ಧರ್ಮಕ್ಷೇತ್ರದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಬಿಸಿಎನ್ ಪಾಲಿಟೆಕ್ನಿಕ್ ಕಾಲೇಜು ಸಭಾಭವನದಲ್ಲಿ ನಡೆದ ಬಣಜಿಗ ಕ್ಷೇಮಾಭಿವೃದ್ಧಿ ಟ್ರಸ್ಟ್ 5ನೇ ವರ್ಷದ ವಾರ್ಷಿಕೋತ್ಸವದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಎ ಮುರಿಗೆಪ್ಪ ಉಪನ್ಯಾಸ ನೀಡಿ, ಸಮಾಜದವರು ಬಸವಣ್ಣನವರ ವಚನ ಸಾಹಿತ್ಯ ಓದಬೇಕು. ಅದರಂತೆ ನಡೆಯಬೇಕು ಎಂದರು. ಬಣಜಿಗಕ್ಷೇಮಾಭಿವೃದ್ಧಿಟ್ರಸ್ಟ್ ಅಧ್ಯಕ್ಷ ಲೋಹಿತ ನೆಲವಿಗಿ ಮಾತನಾಡಿ, ಪ್ರತಿಯೊಬ್ಬರೂ ವಿಶ್ವಾಸ ಪೂರ್ವಕವಾಗಿ ಸಮಾಜ ಸಂಘಟನೆಯಲ್ಲಿ ತೊಡಗಬೇಕು ಎಂದರು. ಜಿ.ಎಸ್. ರಾಮಾಶೆಟ್ರ ಪ್ರಾಸ್ತಾವಿಸಿದರು. ವಿವಿಧ ಕ್ಷೇತ್ರಗಳ ಸಮಾಜದ ಸಾಧಕರನ್ನು ಸನ್ಮಾನಿಸಲಾಯಿತು. ಬಸವರಾಜ ವಡಕಣ್ಣವರ ಮಹಿಳಾ ಘಟಕ ಅಧ್ಯಕ್ಷೆ ರತ್ನಾ ಕರ್ಕಿ ಪ್ರತಿಮಾ ಮಹಾಜನಶೆಟ್ಟರ ಇತರರಿದ್ದರು . ನೀಲಕ್ಕ ಕುಂಬಿ ಸ್ವಾಗತಿಸಿದರು. ಗಾಯಿತ್ರಿ ವಡಕಣ್ಣವರ ಪ್ರಾರ್ಥಿಸಿದರು. ಬಸವರಾಜ ಕತ್ತಿಶೆಟ್ರ,ರೇಖಾ ವಡಕಣ್ಣವರ ನಿರೂಪಿಸಿದರು.



ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಡಾ॥ ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079, ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ : Email: md.ksmscl@gmail.com

No: KSMSCL/EQPT/HFW/NHM-NFDS/15th FC/RDK KITS/RETND/03/2026-27, Date: 02.06.2026

ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:

1. **KSMSCL/EQPT/HFW/NHM-NFDS/15thFC/RDK KITS/RETND/03/2026-27 (IND-0263 Call 2) Date: 26.05.2026.**
2. **KSMSCL/EQPT/HFW/GH/GLUCOSTRIP/RETND/04/2026-27 (IND-0305- Call 02) Date: 26.05.2026.**
3. **KSMSCL/EQPT/HFW/GH/GLUCOSTRIP/RETND/05/2026-27 (IND-0306 Call 02) Date: 26.05.2026**
4. **KSMSCL/EQPT/HFW/OH/DU/TND/06/2026-27(IND-0399) Date: 26.05.2026**
5. **KSMSCL/EQPT/HFW/NPCB&VI/TND/07/2025-26(IND-0400) Date:26.05.2026.**
6. **KSMSCL/HFW/MH/PRGM/FCM-INJ/DRUGS/TND/09/2026-27 (IND-0401)**

ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

1. 15ನೇ ಹಣಕಾಸು ಆಯೋಗದ ಅನುದಾನಗಳನ್ನು ಬಳಸಿಕೊಂಡು NHM-NFDS ಕಾರ್ಯಕ್ರಮದಡಿಯಲ್ಲಿ ತ್ವರಿತ ರೋಗನಿರ್ಣಯ ಕಿಟ್‌ಗಳ ಖರೀದಿಗೆ ಮರು–ಟೆಂಡರ್ (IND-0263 Call 2)
2. ಗೃಹ ಆರೋಗ್ಯ ಯೋಜನೆಯಡಿಯಲ್ಲಿ ರಕ್ತ ಗ್ಲೂಕೋಸ್ ಪರೀಕ್ಷೆಗಾಗಿ ಸ್ಟ್ರಿಪ್ಸ್ ಲ್ಯಾನ್ಸೆಟ್‌ಗಳ ಪೂರೈಕೆಗಾಗಿ ಮರು–ಟೆಂಡರ್ (IND-0305- Call 02)
3. ಗೃಹ ಆರೋಗ್ಯ ಯೋಜನೆಯಡಿಯಲ್ಲಿ ರಕ್ತ ಗ್ಲೂಕೋಸ್ ಪರೀಕ್ಷೆಗಾಗಿ ಸ್ಟ್ರಿಪ್ಸ್ ಲ್ಯಾನ್ಸೆಟ್‌ಗಳ ಪೂರೈಕೆಗಾಗಿ ಮರು–ಟೆಂಡರ್ (IND-0306 Call 02)
4. ಬಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ದಂತ ಘಟಕಗಳ ಪೂರೈಕೆ ಮತ್ತು ಸ್ಥಾಪನೆಗೆ ಟೆಂಡರ್ (IND-0399)
5. NPCB&VI ಕಾರ್ಯಕ್ರಮದ ಭರವಸೆ ಕಾರ್ಯಕ್ರಮದ ಅಡಿಯಲ್ಲಿ ನೇತ್ರ ಉಪಕರಣಗಳ ಪೂರೈಕೆ ಮತ್ತು ಸ್ಥಾಪನೆಗಾಗಿ ಟೆಂಡರ್ (IND-0400)
6. ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಫೆರಿಕ್ ಕಾರ್ಬಾಕ್ಸಿ ಮಾಲ್ಟೋಸ್ ಇಂಜಕ್ಷನ್ ಖರೀದಿಸಿ ಸರಬರಾಜು ಮಾಡುವ ಬಗ್ಗೆ (IND-0401)

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು.

DIPR/CP/RO949/AAPL/2026-27

ಮಂಗಳೂರು ಮಹಾನಗರಪಾಲಿಕೆ

MCC/EE2/TENDER-10/2026-27 ದಿನಾಂಕ: 02-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO.58342, 58695, 58701, 58703, 58739, 58741** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 6 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 540.70 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 12–06–2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/304/26-27 dt: 02.06.2026

CHANGE OF NAME

I, **MASABBI SUDARJI** (Old Name) Resident of S M Krishna Nagar, Hubballi, Dist: Dharwad, Karnataka - 580024, have changed my name as **MASABBI ROJEWALE** (New Name) henceforth I will be called and recognized by new name for all future purposes, dated: 02/06/2026.

CHANGE OF NAME

I, **ASHWINI RAGHAVENDRA PHATTEPUR** (Old Name) Resident of Bilag Nagar, Ramdurg, Belagavi - 591123 have changed my name as **ASHWINI** (New Name) henceforth I will be called and recognized by new name for all future purposes, dated: 02/06/2026.

ನೇರ ನೇಮಕಾತಿ ಅಧಿಸೂಚನೆ

ಭಾರತ ಸರ್ಕಾರದ ಕಾರ್ಪೋರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣ ಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ, ಕುಂದಾಪುರ, ಸುರತ್ಕಲ್, ಕಾರ್ಕಳ ಹಾಗೂ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಹುದ್ದೆಗಳು : ಮ್ಯಾನೇಜರ್, ಸಹಾಯಕ ಮ್ಯಾನೇಜರ್ ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ
ಒಟ್ಟು ಹುದ್ದೆಗಳು: 65
ವೇತನ: ರೂ. 18,500 ರಿಂದ ರೂ. 45000
(ಅರ್ಹತೆ/ಅನುಭವ ಆಧಾರಿತ ವೇತನ)
ಸೌಲಭ್ಯಗಳು: ESI, PF
ಅರ್ಹತಾ ಪ್ರದೇಶ : ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.
ಹುದ್ದೆಗಳಿಗೆ ಆಯ್ಕೆಯ ಕೊನೆಯ ದಿನಾಂಕ:
20–06–2026
ಸಂಪರ್ಕಿಸಿ : ಎಸ್. ಸತೀಶ್ ನಾಯಕ್
+919980496533/9448627226

ಪುರಸಭೆ ಕಾರ್ಯಾಲಯ ಹಾರೂಗೇರಿ

ಅನಂ./ಪು.ಸ.ಹಾ/15ನೇಹ/2026–27 ದಿನಾಂಕ: 01/06/2026

ಟೆಂಡರ ಕೋಟೆಷನ್ ಪ್ರಕಟಣೆ (ಇ–ಪ್ರಕ್ಯೂರಮೆಂಟ್)

ಪುರಸಭೆ ಕಾರ್ಯಾಲಯದಿಂದ 15ನೇ ಹಣಕಾಸು ಹಾಗೂ ಎಸ್.ಎಫ.ಸಿ ವಿಷೇಶ ಅನುದಾನ ಯೋಜನೆಯಡಿ 2 ಕಾಮಗಾರಿಗೆ ಕೆ.ಜಿ–1 ಮತ್ತು ಕೆ.ಜಿ–2 ಮಾದರಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ ಕೋಟೆಷನ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಮೋತ್ತ ರೂ: 25 ರಿಂದ 45.00 ಲಕ್ಷಗಳವರೆಗೆ ಕಾಮಗಾರಿಯಿದ್ದು ಗೂಡ್ಸ್ ಇಂಡೆಂಟ್ ನಂ. 6303 ಮತ್ತು 6282 ಕಾಮಗಾರಿ ಕೈಗೊಳ್ಳಲು 6 ತಿಂಗಳ ಕಾಲಾವಧಿ ಇರುತ್ತದೆ. ಭರ್ತಿ ಮಾಡಿದ ಟೆಂಡರ ಕೋಟೆಷನ್‌ಗಳನ್ನು ಅಪಲೋಡ್ ಮಾಡುವ ಕೊನೆಯ ದಿನಾಂಕ: 09.06.2026 ಸಮಯ ಸಂಜೆ 4.30 ಗಂಟೆಯವರೆಗೆ. ಹಾಗೂ ಟೆಂಡರನ್ನು ತೆರೆಯುವ ದಿನಾಂಕ: 12.06.2026 ರಂದು ಮುಂಜಾನೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್ ಸೈಟ್ ನಲ್ಲಿ ಪರಿಶೀಲನೆ ಮಾಡಬಹುದು. ಟೆಂಡರಿನಲ್ಲಿ ತಿದ್ದುಪಡಿ ಇದ್ದಲ್ಲಿ ಆನ್‌ಲೈನ್ ನಲ್ಲಿ ಮಾತ್ರ ತಿಳಿಸಲಾಗುವುದು.

ಸಹಿ/–ಮುಖ್ಯಾಧಿಕಾರಿ
ಪುರಸಭೆ ಹಾರೂಗೇರಿ

DIPR/BGM/RO-NO-355/KSMCA/2026-27

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ: VTU/BGV/SAP/CW-6/T-743/2026-27/969 ದಿನಾಂಕ: 02–06–2026

ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು: **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಲೇಖನ ಸಾಮಗ್ರಿಗಳನ್ನು ವಾರ್ಷಿಕ ದರ ಒಪ್ಪಂದದ ಮೇರೆಗೆ ಪೂರೈಸುವುದು.** ಟೆಂಡರಿಗಿಟ್ಟ ಮೊತ್ತ: ರೂ. **50,00,000/–,** ಮುಂಗಡ ಠೇವಣಿ ಮೊತ್ತ: ರೂ. **1,00,000/–,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **16–06–2026** ರಂದು ಮಧ್ಯಾಹ್ನ **2.30** ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: **17–06–2026** ರಂದು ಸಂಜೆ **4.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.kppp.karnataka.gov.in** ಮತ್ತು **www.vtu.ac.in** ನೋಡಬಹುದು.
ಸೂಚನೆ: ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ದುದಾರರು ಟೆಂಡರ್ ಸಲ್ಲಿಸುವ ಮುಂಚಿತವಾಗಿ ಖರೀದಿ ಮತ್ತು ಉಗ್ರಾಣ ವಿಭಾಗದ ಕಛೇರಿಯಲ್ಲಿ ಮಾದರಿ ಸಾಮಗ್ರಿಗಳನ್ನು ಪರಿಶೀಲಿಸಬೇಕು ಮತ್ತು ಮಾದರಿಗಳ ಪ್ರಕಾರ ಮಾತ್ರ ಸಾಮಗ್ರಿಗಳನ್ನು ಪೂರೈಸಬೇಕು.

ಸಹಿ/–
ಕುಲಸಚಿವರು

ವಾಸಾಸಂಇ/ಬೆಳಗಾವಿ/352/ಅಡ್ವಟೈಸ್/2026–27

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಛೇರಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ, ಸರಸ್ವತಿ ಪುರಂ, ಮೈಸೂರು–09.
ದೂರವಾಣಿ ಸಂ: 0821–2545894 ಇ–ಮೇಲ್: kwbcemys2014@gmail.com

IFT ಸಂ.: 272/2026–27 ದಿನಾಂಕ: 29.05.2026

ಟೆಂಡರ್ ಪ್ರಕಟಣೆ

ಕಾಮಗಾರಿಯ ವಿವರ: ನಗರಸಭೆ, ನಂಜನಗೂಡಿನ 2022–23ನೇ ಸಾಲಿನ 15ನೇ ಹಣಕಾಸು ಅನುದಾನದಡಿ, ಠೇವಣಿ ಕೊಡುಗೆಯಡಿ ನಗರಸಭೆ, ನಂಜನಗೂಡು ಕಚೇರಿಯ ಆವರಣದಲ್ಲಿ 10 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಹಾಗೂ ಸಂಬಂಧಿತ ಕಾಮಗಾರಿಯ (ಲಂಪ್ಸಮ್ ಟೆಂಡರ್ – ಯಾವುದೇ **ವೇರಿಯೇಷನ್** ಇಲ್ಲದೆ) ಟೆಂಡರ್‌ನ್ನು **ರೂ.176.06 ಲಕ್ಷಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್** ಇಂಡೆಂಟ್ ಸಂಖ್ಯೆ: KUWSDB/2026-27/WS/WORK_INDENT514 ರಲ್ಲಿ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಸಂಪರ್ಕಿಸುವುದು

ಸಹಿ/–ಮುಖ್ಯ ಅಭಿಯಂತರರು

DIPR/MYS/258/SA/2026-27

ಕರ್ನಾಟಕ ಸರ್ಕಾರ (ರೇಷ್ಮೆ ಇಲಾಖೆ) ಜಿಲ್ಲಾ ಪಂಚಾಯತ್, ರಾಯಚೂರು.

ಸಂಖ್ಯೆ:ಸಅಸಂ–ಸಾಅವಿರಾ– KPPP.ಪೋ.ಟೆಂಡರ– ಸಿಆರ್– /2026–27 ದಿನಾಂಕ: 30–05–2026

ಇ–ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ

(https://kppp.karnataka.gov.in ಪೋರ್ಟ್ ಮೂಲಕ)

ರೇಷ್ಮೆ ಕೃಷಿ ಉಪ ನಿರ್ದೇಶಕರು, (ಜಿ.ಪಂ.) ರಾಯಚೂರು ಕಛೇರಿಯ ಮತ್ತು ಅಧೀನ ಕಛೇರಿಗಳಲ್ಲಿ ಮಂಜೂರಾತಿ ಹುದ್ದೆಗಳಿಗೆ ಎದುರಾಗಿ ಖಾಲಿ ಇರುವ ವಾಹನ ಚಾಲಕರು ಹಾಗೂ "ಡಿ" ಗ್ರೂಪ್ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ.

CALENDAR OF EVENTS: **1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ:** ರೇಉನಿರಾ/ಹೊಗುಸಿ/ಇ–ಟೆಂಡರ್/ ಇ–01/2026–27 ದಿನಾಂಕ:30–05–2026. **2) ಟೆಂಡರ್ ಗಿಟ್ಟ ಅಂದಾಜು ಮೊತ್ತ:** ರೂ.15.88 ಲಕ್ಷ **3) ಇಎಂಡಿ ಮೊತ್ತ:** ರೂ.39,700.00 (ಮೂವತ್ತೊಂಬತ್ತು ಸಾವಿರದ ಏಳು ನೂರು ಮಾತ್ರ) **4) e-portal ಮೂಲಕ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಪ್ರಾರಂಭ & ಅಂತಿಮ ದಿನಾಂಕ ಮತ್ತು ಸಮಯ:** ಪ್ರಾರಂಭ 30.05.2026 ರಿಂದ15.06.2026 ರವರೆಗೆ ಸಮಯ ಸಂಜೆ 5.30 ಗಂಟೆಯೊಳಗೆ **5) ಟೆಂಡರ್ Pre-Bid Meeting** ದಿನಾಂಕ & ವೇಳೆ: 09.06.2026, ಬೆಳಿಗ್ಗೆ 11.30 ಗಂಟೆಗೆ **6) e-portal ನ ತಾಂತ್ರಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ವೇಳೆ:** 17.06.2026, ಬೆಳಿಗ್ಗೆ 11.30 ಗಂಟೆಗೆ (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ.) **7) ತಾಂತ್ರಿಕ ಲಕೋಟೆಯ ದಾಖಲಾತಿಗಳನ್ನು ಪರಿಶೀಲನೆ ಮಾಡುವ ದಿನಾಂಕ, ವೇಳೆ & ಸ್ಥಳ:** 17.06.2026, ಬೆಳಿಗ್ಗೆ 11.30 ಗಂಟೆಗೆ, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ರಾಯಚೂರುರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್, ರಾಯಚೂರು (ದಿನಾಂಕ & ವೇಳೆ ಬದಲಾವಣೆಗೆ ಒಳಪಟ್ಟಿರುತ್ತದೆ.) **8) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ & ವೇಳೆ:** 20.06.2026, ಬೆಳಿಗ್ಗೆ 11.30 ಗಂಟೆಗೆ, (ದಿನಾಂಕ & ವೇಳೆ ಬದಲಾವಣೆಗೆ ಒಳಪಟ್ಟಿರುತ್ತದೆ.) **9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಕಛೇರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ರೇಷ್ಮೆ ಕೃಷಿ ಉಪ ನಿರ್ದೇಶಕರ ಕಛೇರಿ, ನಿಜಲಿಂಗಪ್ಪ ಕಾಲೋನಿ, ಜಿಲ್ಲಾ ಪಂಚಾಯತ್, ರಾಯಚೂರು ಇ–ಮೇಲ್: dds_raichur@yahoo.in ದೂರವಾಣಿ ಸಂಖ್ಯೆ: 080–220322.

ಸಹಿ/– ರೇಷ್ಮೆ ಕೃಷಿ ಉಪನಿರ್ದೇಶಕರು
ಜಿಲ್ಲಾ ಪಂಚಾಯತ್, ರಾಯಚೂರು

DIP/RCR/95/KSMC&A/97/2026-27

ಕರ್ನಾಟಕ ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ

ತಾ: ಸೇಡಂ ಜಿ: ಕಲಬುರಗಿ, E-mail : apmcsedam123@gmail.com office Ph : 08441-276030

ಸಂ:ಕೃಮಾಇ/ಕೃಉಮಾಸ/ಸೇ/ 72 /2026–27 ದಿನಾಂಕ: 29–05–2026

–: ಇ–ಟೆಂಡರ್ ಪ್ರಕಟಣೆ :–

2026–27 ನೇ ಸಾಲಿಗಾಗಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಾಗೂ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಭದ್ರತಾ/ಸ್ವಚ್ಛತಾ ಹಾಗೂ ಇತರೆ ಸೇವೆಗಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು 2000 ರ ಮೇರೆಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ರನ್ವಯ http://kppp.karnataka.gov.in ಟೆಂಡರ್ ಆಹ್ವಾನಿಸಲಾಗಿದೆ.

1) ಇ–ಟೆಂಡರ್ ಅರ್ಜಿಗಳನ್ನು ಪಡೆಯುವ ದಿನಾಂಕ: 01–06–2026 ರಿಂದ 16–06–2026 ಸಂಜೆ 4:00 ರವರೆಗೆ, 2) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16–06–2026 ಸಂಜೆ 04:00 ಗಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19–06–2026 ಬೆಳಿಗ್ಗೆ 11:00 ಗಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 25–06–2026 ಬೆಳಿಗ್ಗೆ 11:00 ಗಂಟೆಗೆ, 5) ಇ–ಟೆಂಡರ್ ತೆರೆಯುವ ಸ್ಥಳ : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ.

1) ಸೇವೆಯ ಹೆಸರು : ಭದ್ರತಾ/ಸ್ವಚ್ಛತಾ ನಿರ್ವಹಣೆ, 2) ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ–15, 3) ಭದ್ರತಾ ಠೇವಣಿ (ಇ.ಎಂ.ಡಿ): ರೂ. 3,50,000/–, 4) ಖಾಲಿ ಟೆಂಡರ್ ಫಾರ್ಮ ಬೆಲೆ: ಇ–ಪೋರ್ಟಲ್ ರಲ್ಲಿರುವಂತೆ, 5) ವಿವರ: ಭದ್ರತಾ ಸಿಬ್ಬಂದಿ–05, ಸ್ವಚ್ಛತಾ ಸಿಬ್ಬಂದಿ–02, ವಾಹನ ಚಾಲಕ–02, ಎಲೇಕ್ಟ್ರಿಷಿಯನ್–01, ಡಾಟಾ ಎಂಟ್ರಿ ಆಪರೇಟರ್–3, ಬೆರಳಚ್ಚುಗಾರ–02

ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು, ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ

ಸಹಿ/– ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ

ವಾ.ಸಾ.ಸಂ.ಇ/ಕಲಬುರಗಿ/178/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ ಕಾರ್ಯಾಲಯ, ಧಾರವಾಡ (ಡಿ.ಆರ್.ಡಿ.ಎ. ಶಾಖೆ)

Email ID : projectdirector14@gmail.com
ನಂ:ಧಾಜಿಪಂ/ಯೋಜನಿ/D–1/2025–26 ದಿನಾಂಕ : 01–06–2026

ಅಲ್ಪಾವಧಿ ಮರುಟೆಂಡರ್ ಪ್ರಕಟಣೆ ವಿವರ

ಎನ್.ಆರ್.ಎಲ್.ಎಂ ಯೋಜನೆಯಡಿ ಖಾಲಿಯಿರುವ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲು ಅರ್ಹ ಮ್ಯಾನ್ ಪವರ್ ಏಜನ್ಸಿಗಳನ್ನು e-procurement ಮುಖಾಂತರ ಆಹ್ವಾನಿಸಿರುವ ವಿವರ ಈ ಕೆಳಕಂಡಂತಿರುತ್ತದೆ.
(1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ : **02–06–2026** (2) ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : **19–06–2026** 5.30 PM (3) ಸ್ವೀಕರಿಸಲಾದ ಇ–ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22–06–2026** 11.30 AM (4) ಸ್ವೀಕರಿಸಲಾದ ಇ–ಟೆಂಡರ್‌ಗಳ ಹಣಕಾಸು ಬಿಡ್ ತೆರೆಯುವ ದಿನಾಂಕ : **24–06–2026** 11.30 AM (5) ಇ–ಟೆಂಡರ್ ತೆರೆಯುವ ಸ್ಥಳ : ಜಿಲ್ಲಾ ಪಂಚಾಯತ ಕಛೇರಿ ಧಾರವಾಡ
WEBSITE: https://kppp.karnataka.gov.in
ಟೆಂಡರ್ ಸಂಖ್ಯೆ : RDPR/2025-26/SE3402/CALL-2
ವಿ.ಸೂ : ತಾಂತ್ರಿಕ ಹಾಗೂ ಹಣಕಾಸಿನ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ಪಂಚಾಯತ, ಧಾರವಾಡ.

ವಾಸಾಸಂಇ/ಧಾ/ಕೆಎಸ್ಎಂಸಿಎ/250/26–27

ಕರ್ನಾಟಕ ಸರ್ಕಾರ ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್–ಕಾಂಪಾ/ಸಿಆರ್–03/2025–26/I ದಿ:3 0.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ. (ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ)

2026–27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, "ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026–27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು. ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್–3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್ ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
1. ಇ–ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 09.06.2026 ಅಪರಾಹ್ನ 4.00 ಗಂಟೆಯವರೆಗೆ 2. ಟೆಂಡರು ತೆರೆಯುವ ದಿನಾಂಕ: 10.06.2026 ಅಪರಾಹ್ನ 4.30 ಗಂಟೆ

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಶಿ/26–27/02/06/302

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/877 ಇ-mail: purchase@kmf.coop

ದಿನಾಂಕ: 01.06.2026

ಟೆಂಡರ್ ಪ್ರಕಟಣೆ

ಕಹಾಮದ ನಂದಿನಿ ಹೈಟೆಕ್ ಪ್ರಾಡಕ್ಟ್ ಘಟಕ ಚನ್ನರಾಯಪಟ್ಟಣ ಘಟಕದ ಉಪಯೋಗಕ್ಕೆ ಅವಶ್ಯಕತೆಯಿರುವ ಟ್ಯಾಕ್ಸಿ ವಾಹನಗಳ ಸೇವೆಯನ್ನು ಗುತ್ತಿಗೆ ಆಧಾರದಲ್ಲಿ ಎರಡು ವರ್ಷಗಳ ಅವಧಿಗೆ ಪಡೆಯಲು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು **https://kppp.karnataka.gov.in/** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

Sl. No.	Tender Number	Tender Indent Numbers	Particulars	Approx. Qty. & EMD
1	KMF/PUR/Tender-926/2026-27	KMF/2026-27/SE5270	Providing Taxi Services for a period of two Years to KMF Nandini Hitech Product Plant, Channarayapattana	Please refer the tender document.

ಇನ್ನಿತರೆ ವಿವರ ಹಾಗೂ ಮಾಹಿತಿಗಳನ್ನು ಟೆಂಡರ್ ದಾಖಲಾತಿಗಳಲ್ಲಿ ನೋಡಬಹುದು ಮತ್ತು **www.kmfnandini.coop.** ನೋಡಬಹುದು.

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ	01.06.2026 ರಿಂದ
ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	08.06.2026 ರಂದು ಬೆಳಗ್ಗೆ 11.00 ಗಂಟೆಗೆ
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	15.06.2026 ರಂದು ಸಂಜೆ 5.00 ಗಂಟೆಯವರೆಗೆ
ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ	16.06.2026 ರಂದು ಸಂಜೆ 5.05 ಗಂಟೆಗೆ
ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ	ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ

ಕರ್ನಾಟಕ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ,

ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು.
ಸಂ:ಕಾ.ಅ.(ವಿ)/ಲೋ.ಇ./ವಿದ್ಯುತ್/2026–27/305 ದಿನಾಂಕ:02.06.2026

ಟೆಂಡರ್ ಪ್ರಕಟಣೆ

ಭಾರತ ತಂಡ: ಗೋಲ್‌ಕೀಪರ್‌ಗಳು: ಸವಿತಾ, ಬಿಚು ದೇವಿ ಖರಿಬಾಮ್, **ಡಿಫೆಂಡರ್ಸ್:** ಸುಶೀಲಾ ಚಾನು ಪುಖ್ರಂಬಮ್, ಇಶಿಕಾ ಚೌಧರಿ, ಲಾಲ್ಥಾಂಟ್ಲುವಾಂಗಿ, ಶಿಲ್ಪಿ ದಬಾಸ್, ಜ್ಯೋತಿ, ನಿಕ್ಕಿ ಪ್ರಧಾನ, **ಮಿಡ್‌ಫೀಲ್ಡರ್‌ಗಳು:** ಸಲಿಮಾ ಟೆಟೆ (ನಾಯಕಿ), ನೇಹಾ, ಸುನೆಲಿತಾ ಟೊಪ್ಪೊ, ಸಾಕ್ಷಿ ರಾಣಾ, ದೀಪಿಕಾ ಸೊರೆಂಗ್, ಸೋನಂ, ಲಾಲ್ರೆಮ್ಸಿಯಾಮಿ, **ಫಾರ್ವರ್ಡ್‌ಗಳು:** ನವ್ನೀತ್ ಕೌರ್, ದೀಪಿಕಾ, ರುತುಜಾ ದಾದಾಸೋ ಪಿಸಾಳ್, ಇಶಿಕಾ, ಅನ್ನು

- ಸಲಿಮಾ ಟೆಟೆ ನಾಯಕಿ
- ಜಪಾನ್, ಉರುಗ್ವೆ, ಅಮೆರಿಕ ವಿರುದ್ಧ ಭಾರತ ಸೆಣಸು

ಕರ್ನಾಟಕಕ್ಕೆ ಜೂ. ಬ್ಯಾಸ್ಕೆಟ್‌ಬಾಲ್ ಕಿರೀಟ

ಬೆಂಗಳೂರು: ಇತ್ತೀಚೆಗೆ ಪುದುಚೇರಿಯಲ್ಲಿ ನಡೆದ 76 ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ರಾಜ್ಯ ಜೂನಿಯರ್ ಬಾಲಕರ ಬ್ಯಾಸ್ಕೆಟ್‌ಬಾಲ್ ತಂಡವು ಚಿನ್ನದ ಪದಕ ಗೆದ್ದಿದೆ. ಈ ಬೆನ್ನಲ್ಲೇ ಎಫ್‌ಐಬಿಎ ಏಷ್ಯಾ ಮತ್ತು ಕೆಬಿಎ ಅಧ್ಯಕ್ಷ ಡಾ. ಕೆ. ಗೋವಿಂದರಾಜ್ ತಂಡವನ್ನು ಸನ್ಮಾನಿಸಿದರು. ಇದೇ ವೇಳೆ ತಂಡಕ್ಕೆ ಟ್ರ್ಯಾಕ್‌ಸೂಟ್ ಮತ್ತು ಶೂಗಳ ಜೊತೆಗೆ ನಗದು ಬಹುಮಾನವನ್ನು ರೂ. 7.5 ಲಕ್ಷದಿಂದ ರೂ. 10.00 ಲಕ್ಷಕ್ಕೆ ಹೆಚ್ಚಿಸಲಾಯಿತು. ಆಗಿನ ಮೈಸೂರು ರಾಜ್ಯವು 1966 ರಲ್ಲಿ ಕೊಯಮತ್ತೂರಿನಲ್ಲಿ ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದಿತು, ನಂತರ ಕರ್ನಾಟಕ ರಾಜ್ಯವು 1980 ರಲ್ಲಿ ಜೆಮ್ಶೆಡ್‌ಪುರದಲ್ಲಿ ಮತ್ತು 1981 ರಲ್ಲಿ ಗೋವಾದಲ್ಲಿ ಅದೇ ಚಾಂಪಿಯನ್‌ಶಿಪ್ ಗೆದ್ದಿತು.

ವಾರಿಯರ್ಸ್ ಪ್ರತಿಭಾನ್ವೇಷಣೆ: 213 ಕ್ರಿಕೆಟಿಗರ ಸತ್ವಪರೀಕ್ಷೆ

ಬೆಂಗಳೂರು: ಜೂನ್ 20ರಿಂದ ಆರಂಭವಾಗಲಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಗಾಗಿ ಮಾಜಿ ಚಾಂಪಿಯನ್ 'ಮೈಸೂರು ವಾರಿಯರ್ಸ್' ಫ್ರಾಂಚೈಸಿಯು ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾನ್ವೇಷಣೆ ಶಿಬಿರಕ್ಕೆ ರಾಜ್ಯದ ಯುವ ಆಟಗಾರರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಕರ್ನಾಟಕದ ವಿವಿಧ ಭಾಗಗಳಿಂದ ಒಟ್ಟು 213 ಉದಯೋನ್ಮುಖ ಕ್ರಿಕೆಟಿಗರು ಈ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ತಮ್ಮ ಕೌಶಲ್ಯ ಪ್ರದರ್ಶಿಸಿದರು. ಇದರಲ್ಲಿ 68 ಆಲ್ ರೌಂಡರ್ಸ್, 63 ಮಧ್ಯಮ ವೇಗದ ಬೌಲರ್‌ಗಳು, 45 ಬ್ಯಾಟರ್‌ಗಳು, 20 ವಿಕೆಟ್ ಕೀಪರ್‌ಗಳು ಹಾಗೂ 17 ಸ್ಪಿನ್ನರ್‌ಗಳು ಕಾಣಿಸಿಕೊಂಡಿದ್ದರು. ಮೈಸೂರು ವಾರಿಯರ್ಸ್ ತಂಡದ ಮುಖ್ಯ ಕೋಚ್ ಆರ್.ಎಕ್ಸ್. ಮುರಳಿಧರ್, ಸಹಾಯಕ ಕೋಚ್ ವಿಜಯ್ ಮದ್ಯಾಳ್ಕರ್ ಮತ್ತು ಮಾಲೀಕರಾದ ಅರ್ಜುನ್ ರಂಗ ಅವರ ನೇತೃತ್ವದಲ್ಲಿ ಆಟಗಾರರ ಫಿಟ್‌ನೆಸ್ ಹಾಗೂ ತಾಂತ್ರಿಕ ಸಾಮರ್ಥ್ಯವನ್ನು ಪ್ರಮುಖವಾಗಿ ಪರೀಕ್ಷಿಸಲಾಗಿದ್ದು, ಅತ್ಯುತ್ತಮ ಪ್ರದರ್ಶನ ನೀಡಿದ 15 ಪ್ರತಿಭಾವಂತ ಆಟಗಾರರನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ. ಇಲ್ಲಿ ಆಯ್ಕೆಯಾದವರು ಮುಂಬರುವ ಮಹಾರಾಜ ಟ್ರೋಫಿ ಹರಾಜು ಪ್ರಕ್ರಿಯೆಗೆ ಪರಿಗಣಿಸುವಂತೆ ಕೆಎಸ್‌ಸಿಎಗೆ ಶಿಫಾರಸು ಮಾಡಲಾಗುವುದು.



ಐಪಿಎಲ್‌ನಲ್ಲಿ ಸ್ಟಾರ್‌ಗಳ ಉದಯ!







ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಯುವಕರ ಆಟ. ಬಿಸಿಸಿಐಗೂ ಅದು ಕೇವಲ ಒಂದು ಟೂರ್ನಿಯಲ್ಲ. ಕೇವಲ ಆದಾಯದ ಮೂಲವೂ ಅಲ್ಲ. ಲೀಗ್ ಒಂದು ಭವಿಷ್ಯ ರೂಪಿಸುವ ಯೋಜನೆ. ಭವಿಷ್ಯದ ಆಟಗಾರರನ್ನು ಹುಡುಕಿ ತರುವ ವಿಂಗ್ ಮತ್ತು ಭಾರತ ಕ್ರಿಕೆಟ್ ತಂಡವನ್ನು ಗಟ್ಟಿಗೊಳಿಸುವ ಬುನಾದಿ. ಏಕೆಂದರೆ ಭಾರತ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪಂದ್ಯಾವಳಿ ಪ್ರತಿ ವರ್ಷ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕಾಗೇ ಭಾರತ ತಂಡದಲ್ಲಿ ಆಡಬೇಕು, ದೇಶವನ್ನು ಪ್ರತಿನಿಧಿಸಬೇಕೆಂಬ ಕನಸನ್ನು ಹೊತ್ತಿರುವ ದೇಶದ ಸಮಸ್ತ ಕ್ರಿಕೆಟಿಗರು ಒಮ್ಮೆ ಐಪಿಎಲ್‌ನಲ್ಲಿ ಮಿಂಚಿದರೆ ಸಾಕು ಎಂಬ ಲೆಕ್ಕಾಚಾರಗಳನ್ನು ಹಾಕಿಕೊಂಡಿರುತ್ತಾರೆ. ಅದರಂತೆ ಅಫ್ಘಾನಿಸ್ತಾನ, ಇಂಗ್ಲೆಂಡ್ ಮತ್ತು ವಿಂಡೀಸ್ ವಿರುದ್ಧದ ಪಂದ್ಯಗಳಿಗೆ ಭಾರತ ತಂಡಕ್ಕೆ ಆಯ್ಕೆಯಾಗುವತ್ತ ಸಾಗಿದವರ್‍ಯಾರು? ಈಗಾಗಲೇ ಆಡಿದವರಲ್ಲಿ ಹಿನ್ನಡೆ ಅನುಭವಿಸಿದವರ್‍ಯಾರು ಮತ್ತು ಐಪಿಎಲ್‌ನಲ್ಲಿ ಮಿಂಚಿದ ಯುವಕರ ಪಟ್ಟಿಯನ್ನು ನೋಡುವುದಾದರೆ..

ಭಾರತ ಪ್ರತಿನಿಧಿಸಲು ವೈಭವ್ ಸಿದ್ಧ

ಈ ಬಾರಿಯ ಐಪಿಎಲ್‌ನಲ್ಲಿ ಭಾರತಕ್ಕೆ ಸಿಕ್ಕಿ ದೊಡ್ಡ ಟ್ರೋಫಿಯಂದರೆ ಅದು ವಭೌವ್ ಸೂರ್ಯವಂಶಿ. 15 ವರ್ಷದ ಬಾಲಕ ರಾಜಸ್ಥಾನ ತಂಡವನ್ನು ಪ್ರತಿನಿಧಿಸಿದ್ದು, ಈ ಬಾರಿಯ ಆರೆಂಜ್ ಕ್ಯಾಪ್, ಉದಯೋನ್ಮುಖ ಆಟಗಾರ, ಸೂಪರ್ ಸ್ಟ್ರೈಕರ ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. 776 ರನ್ ಗಳಿಸಿದ ಅವರ ಅಂಕಿ ಸಂಖ್ಯೆ ಭಾರತ ತಂಡಕ್ಕೆ ಅರ್ಹ ಅನ್ನುವ ಸ್ಪಷ್ಟತೆ ಕೊಡುತ್ತದೆ. ವೈಭವ್ ಅವರ ವಯಸ್ಸು ಮತ್ತು ರನ್ ಅಷ್ಟೇ ಇದಕ್ಕೆ ಕಾರಣವಲ್ಲ, ಬದಲಾಗಿ ವೈಭವ್ ಅವರ ಪ್ರಬುದ್ಧತೆ. ಬಂದ ತಕ್ಷಣ ಹೊಡೆದಾಡುವುದು ಅವರ ಅಸಲಿ ಆಟ. ಬಾಲನ್ನು ಬೌಂಡರಿಗಟ್ಟುವುದು ಅವರ ಶಕ್ತಿ. ಆದರೆ ಇದಕ್ಕೂ ಮಿಗಿಲಾದ ಆಟ ವೈಭವ್ ಪ್ರದರ್ಶಿಸಿದ್ದಾರೆ. ಕ್ವಾಲಿಫೈಯರ್ ಪಂದ್ಯದಲ್ಲಿ ತಂಡ ಹಿಂದೆ ಬಿದ್ದಾಗ ಅವರು ಆಡಿದ ಆಟವನ್ನು ಇಡೀ ದೇಶವೇ ಗಮನಿಸಿತು. ಈ ಆಟವೇ ಅವರ ಪ್ರಬುದ್ಧತೆಗೆ ಸಾಕ್ಷಿ. ಈ ನಡುವೆ ಏಷ್ಯನ್ ಗೇಮ್ಸ್‌ಗೆ ಆಯ್ಕೆ ಮಾಡಿದೆ ಎಂಬ ವಿಚಾರವೂ ನಮ್ಮ ಮುಂದಿದೆ.

ಆಸರೆಯಾದ ಆಯುಷ್ ಮಾಥ್ರೆ

ಚೆನ್ನೈ ತಂಡದ ಪರ ಆಡಿರುವ 18 ವರ್ಷದ ಯುವಕ ಆಯುಷ್ ಮಾಥ್ರೆ ಸಿಕ್ಕ ಪಂದ್ಯಗಳಲ್ಲಿ ಅಬ್ಬರಿಸಿ ಮೆರೆದಾಡಿ ದವರು. ಕಳೆದ ವರ್ಷ ಗಾಯದಿಂದ ಬದಲಾಯಿಸಿಕೊಂಡ ಆಟಗಾರರಲ್ಲಿ ಅವರನ್ನು ಚೆನ್ನೈ ತಂಡ ಸೇರಿಸಿಕೊಂಡಿದ್ದಲ್ಲದೆ, ಈ ವರ್ಷ ರಿಟೇನ್ ಕೂಡ ಮಾಡಿತ್ತು. ಈ ನಡುವೆ ಪಂದ್ಯಾವಳಿಯಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಮಿಂಚಿದ್ದಾರೆ. 6 ಪಂದ್ಯ ಮಾತ್ರ ಆಡಿರುವ ಅವರು 200 ರನ್ ಗಳಿಸಿದ್ದಾರೆ. ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಅವರ ಮಿಂಚಿನಾಟ ಗಮನಾರ್ಹ ವಾಗಿತ್ತು. ಅವರೂ ಕೂಡ ಪ್ರಬುದ್ಧತೆಯ ಆಟದಿಂದ ಹೆಸರು ಮಾಡಿದವರು. ಚೆನ್ನೈ ತಂಡದ ಬಹುತೇಕ ಆಟಗಾರರು ಪರದಾಟ ನಡೆಸಿರುವಾಗ ರನ್‌ರೇಟ್ ಮತ್ತು ಸ್ಕೋರ್‌ನ ಜವಾಬ್ದಾರಿ ತೆಗೆದುಕೊಂಡು ಮಿಂಚಿದವರು. ಹಾಗಾಗಿ ಅವರ ಮೇಲೂ ಬಿಸಿಸಿಐ ಕಣ್ಣಿಡಲಿದೆ.

ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್

ಪಂಜಾಬ್ ತಂಡದ ಆರಂಭಿಕ ಪ್ರಿಯಾಂಶ್ ಆರ್ಯ ಅವರ ಬ್ಯಾಟಿಂಗ ದೇಶವೇ ಮೆಚ್ಚಿದೆ. ಮುಖ್ಯವಾಗಿ ಮೊದಲಾರ್ಧದಲ್ಲಿ ಪ್ರಿಯಾಂಶ್ ಸಿಕ್ಸರ್‌ಗಳಿಂದಲೇ ಮಾತನಾಡುತ್ತಿದ್ದರು. 13 ಪಂದ್ಯಗಳಲ್ಲಿ 364 ರನ್ ಪೇರಿಸಿರುವ ಅವರು ಉದಯೋನ್ಮುಖ ಆಟಗಾರರ ಪಟ್ಟಿಯಲ್ಲಿ ಪ್ರಮುಖರು. ಇನ್ನೊಂದೆಡೆ ಅದೇ ಪಂಜಾಬ್ ತಂಡದ ಪ್ರಭಸಿಮ್ರನ್ ಸಿಂಗ್ ಕೂಡ ಅದೇ ವೇಗದಲ್ಲಿ ಬ್ಯಾಟಿಂಗ್ ಮಾಡಿದ್ದಾರೆ. ಮುಖ್ಯಾವಾಗಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಚೇಸಿಂಗ್ ವೇಳೆ ಇವರ ಆಟ ಗಮನಾರ್ಹವಾಗಿತ್ತು. 13 ಪಂದ್ಯಗಳಲ್ಲಿ ಪ್ರಭಸಿಮ್ರನ್ 510 ರನ್ ಗಳಿಸಿದ್ದು ಪಂಜಾಬ್ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದಾರೆ.

ಇನ್ನಷ್ಟು ಬ್ಯಾಟಿಗರು

ಪಾಟಿದಾರ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಮಿಂಚಿದ್ದಾರೆ. ಅವರೂ ಕೂಡ ಬಿಸಿಸಿಐಗೆ ಸ್ಪಷ್ಟ ಸಂದೇಶ ಕೊಟ್ಟಿದ್ದಾರೆ. ಈ ಭರಾಟೆಯಲ್ಲಿ ಉರ್ವಿಲ್, 722 ರನ್ ಗಳಿಸಿರುವ ಸುದರ್ಶನ್, ರಾಜಸ್ಥಾನ ತಂಡದ ಧ್ರುವ್ ಜುರೇಲ್, ಕೆಕೆಆರ್ ತಂಡದ ಅಂಗ್ರಿಶ್ ರಘುವಂಶಿ ಕೂಡ ಮಿಂಚಿನಾಟವಾಡಿದ್ದು, ಫಸ್ಟ್ ಕ್ಲಾಸ್ ಕ್ರಿಕೆಟ್ ಮತ್ತು ಎ ತಂಡಗಳ ಕ್ರಿಕೆಟ್‌ನಲ್ಲಿ ಭಾಗವಹಿಸಲು ಸಿದ್ಧರಾದಂತಿದ್ದಾರೆ.

ಯಾರಿಗೆ ಹಿನ್ನಡೆ?

ಮುನ್ನಡೆಯಿದ್ದಲ್ಲಿ ಹಿನ್ನಡೆಯಿದೆ ಎಂಬಂತೆ ಭಾರತ ತಂಡದ ಪ್ರಮುಖ ಆಟಗಾರರಿಗೆ ಹಿನ್ನಡೆಯೂ ಆಗಿದೆ. ಲಖನೌ ತಂಡದ ಮಾಜಿ ನಾಯಕ ಪಂತ್‌ಗೆ ಈಗಾಗಲೇ ಭಾರತ ತಂಡದಲ್ಲಿ ಹಿಂಬಡ್ತಿ ಸಿಕ್ಕಿದೆ. ದಿಲ್ಲಿಯ ಅಕ್ಷರ್‌ಗೂ ಹಿನ್ನಡೆಯಾಗಿದೆ. ಸೂರ್ಯ ಕುಮಾರ್, ಚೆನ್ನೈ ನಾಯಕ ರುತುರಾಜ್ ಗಾಯಕ್ವಾಡ್, ಕೆಕೆಆರ್ ನಾಯಕ ಅಜಿಂಕ್ಯಾ ರಹಾನೆ, ರಿಯಾನ್ ಪರಾಗ್, ರಿಂಕು ಸಿಂಗ್ ಸೇರಿದಂತೆ ಪ್ರಮುಖ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

ಬೌಲರ್‌ಗಳಲ್ಲಿ

ರಸೀಖ್‌ಗೊಂದು ಸಲಾಂ

ಆರ್‌ಸಿಬಿ ತಂಡದ ವೇಗಿ ರಸೀಖ್ ಸಲಾಂ ದಾರ್ ಮಿಂಚಿದ ಆಟಗಾರರಲ್ಲಿ ಒಬ್ಬರು. ಫೈನಲ್ ಪಂದ್ಯದಲ್ಲಿ



ಗಮನಾರ್ಹ ಪ್ರದರ್ಶನ ನೀಡಿದ ರಸೀಖ್, ವೇಗಿ ಯಶ್ ದಯಾಳ್ ಜಾಗದಲ್ಲಿ ಆಡಿ ಅತ್ಯುತ್ತಮ ಪ್ರದರ್ಶನ ನೀಡುತ್ತಾ ಬಂದರು. ಸಿಕ್ಕ ಅವಕಾಶಗಳನ್ನೆಲ್ಲಾ ಅಚ್ಚುಕಟ್ಟಾಗಿ ಬಳಸಿಕೊಂಡು 19 ವಿಕೆಟ್ ಪಡೆದು ಮಿಂಚಿದ್ದಾರೆ. ವಿಶೇಷ ಅಂದರೆ ಅವರಾಡಿದ್ದು 12 ಪಂದ್ಯಗಳಲ್ಲಿ ಮಾತ್ರ.

ಪ್ರಿನ್ಸ್ ಯಾದವ್ ಧಮಾಕಾ

ಲಖನೌ ತಂಡದ ಪರ ಗಮನಾರ್ಹ ಬೌಲಿಂಗ್ ಮಾಡಿ ಅಫ್ಘಾನಿಸ್ತಾನ ವಿರುದ್ಧದ ಏಕದಿನ ತಂಡಕ್ಕೆ ಆಯ್ಕೆಯಾಗಿರುವ ಪ್ರಿನ್ಸ್ ಯಾದವ್ ಈ ಬಾರಿಯ ಹೀರೋ.



ಮೊದಲಿನ ಪಂದ್ಯದಿಂದಲೂ ಕರಾರುವಾಕ್ ದಾಳಿ ಸಂಘಟಿಸಿದ್ದಾರೆ. ಕೊಹ್ಲಿ ಅವರ ವಿಕೆಟ್ ಪಡೆದಿರುವುದು ಅವರಿಗೆ ಬೂಸ್ಟರ್ ನೀಡಿದೆ. 14 ಪಂದ್ಯಗಳಲ್ಲಿ 16 ವಿಕೆಟ್ ಪಡೆದ ಅವರು, ಭಾರತದ ಭವಿಷ್ಯ ಆಟಗಾರರಾಗುವ ಸಂದೇಶ ನೀಡಿದ್ದಾರೆ. ಈ ಪ್ರದರ್ಶನದೊಂದಿಗೆ ಬಿಸಿಸಿಐ ಗಮನಕ್ಕೆ ಬಂದಿದ್ದಾರೆ.

ಕಾರ್ತಿಕ್ ತ್ಯಾಗಿ

ದೇಶಿ ಕ್ರಿಕೆಟ್‌ನಲ್ಲಿ ಸದ್ದು ಮಾಡಿ ಐಪಿಎಲ್‌ಗೆ ಬಂದ ಕಾರ್ತಿಕ್ ತ್ಯಾಗಿ ಗೆಲುವಿನಲ್ಲಿ ಮಿಂಚಿದವರಲ್ಲಿ



ಒಬ್ಬರು. ಕೆಕೆಆರ್ ತಂಡದಲ್ಲಿ ಬೌಲರ್‌ಗಳ ಅವಶ್ಯವಿತ್ತು. ಮುಖ್ಯ ಬೌಲರ್‌ಗಳು ಗಾಯಗೊಂಡು ಹೊರಬಿದ್ದ ನಂತರ ಪಂದ್ಯಾವಳಿಯಲ್ಲಿ ಕಾರ್ತಿಕ್ ತ್ಯಾಗಿ ಕೆಕೆಆರ್ ತಂಡದ ಪ್ರಮುಖ ಬೌಲರ್ ಆದರು. ಮಧ್ಯಮ ಓವರ್‌ಗಳಲ್ಲಿ ಮಿಂಚುತ್ತಾ ಗಮನ ಸೆಳೆದು ಹೀರೋ ಅನಿಸಿದರು. 13 ಪಂದ್ಯಗಳಲ್ಲಿ ಅವರು, 18 ವಿಕೆಟ್ ಪಡೆದಿದ್ದರು, ಮುಂದಿನ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

ಇನ್ನಷ್ಟು

ಹೈದರಾಬಾದ್ ತಂಡದಲ್ಲಿ ಪ್ರಫುಲ್ ಮತ್ತು ಸಾಕೀಬ್ ಹುಸೈನ್ ಎಂಬ ವೇಗಿಗಳು ಕೂಡ ಈ ಬಾರಿ ಭರ್ಜರಿ ಪ್ರದರ್ಶನ ನೀಡಿದ್ದಾರೆ. ಆರಂಭಿಕ ಪಂದ್ಯದಲ್ಲೇ 4 ವಿಕೆಟ್‌ಗಳೊಂದಿಗೆ ಮಿಂಚಿದ ಈ ಇಬ್ಬರೂ, ಕೊನೆಯ ಪಂದ್ಯದ ವರೆಗೂ ಹೈದರಾ ಬಾದ್‌ನ ಪ್ರಮುಖ ಬೌಲರ್‌ಗಳೇ ಅನಿಸಿಕೊಂಡರು. ಕೆಕೆಆರ್ ತಂಡದ ಅನುಕುಲ್ ರಾಯ್, ಆರ್‌ಸಿಬಿಯ ಕೃಣಾಲ್ ಪಾಂಡ್ಯ, ರಾಜಸ್ಥಾನ ತಂಡದ ಬ್ರಿಜೇಶ್ ಪಟೇಲ್, ಚೆನ್ನೈ ತಂಡದ ಅನ್ಶುಲ್ ಕಂಬೋಜ್ ಕೂಡ ಈ ಬಾರಿಯ ಐಪಿಎಲ್‌ನಲ್ಲಿ ಮಿಂಚಿ ಗಮನ ಸೆಳೆದಿದ್ದಾರೆ.

ಸೆಮಿಫೈನಲ್‌ಗೆ ಜ್ವೆರೆವ್



ಪ್ಯಾರಿಸ್: ಈ ಬಾರಿಯ ರೋಲ್ಯಾಂಡ್ ಗ್ಯಾರೋಸ್‌ನ ಗೆಲುವಿನ ಫೇವರಿಟ್ ಅಲೆಕ್ಸಾಂಡರ್ ಜ್ವೆರೆವ್ ಪ್ರತಿಷ್ಠಿತ ಫ್ರೆಂಚ್ ಓಪನ್ ಗ್ರ್ಯಾಂಡ್‌ಸ್ಲ್ಯಾಮ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಿಸಿದರು.

ಮಂಗಳವಾರದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅವರು, ರಾಫೇಲ್ ಜೋಡರ್ ವಿರುದ್ಧ ಮೂರು ಸೆಟ್ ಪಂದ್ಯದಲ್ಲಿ ಜಯಿಸಿದರು. ಮೊದಲನೇ ಸೆಟ್‌ನಲ್ಲಿ ಅಲ್ಪ ಪೈಪೋಟಿಯಿದ್ದರೂ ಮುಂದಿನ ಎರಡು ಸೆಟ್‌ಗಳಲ್ಲಿ ಸಲೀಸಾಗಿ ಗೆದ್ದ ಜ್ವೆರೆವ್ ಪಂದ್ಯದಲ್ಲಿ 7(3)–6(3), 6–1, 6–3 ರೊಂದಿಗೆ ಪ್ರಾಬಲ್ಯ ಸಾಧಿಸಿದರು. ಪಂದ್ಯಾವಳಿಯ ಮೊದಲ ಪಂದ್ಯದಿಂದಲೂ ಅವರು ಉತ್ತಮ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಮೊದಲನೇ ಸರ್ವ್‌ನಲ್ಲಿ ಶೇ. 80 ರಷ್ಟು ಅಂಕಗಳನ್ನು ಗಳಿಸಿದ ಜ್ವೆರೆವ್ ಬರೋಬ್ಬರಿ 7 ಏಸ್ ಪಾಯಿಂಟ್‌ಗಳನ್ನೂ ಪಡೆದುಕೊಂಡರು.

ಫ್ರೆಂಚ್ ಓಪನ್ ಗ್ರ್ಯಾಂಡ್ ಸ್ಲ್ಯಾಮ್

ಉಪಾಂತ್ಯಕ್ಕೆ ಅಂಡ್ರೀವಾ, ಮಾರ್ತಾ: ಮಹಿಳೆಯರ ವಿಭಾಗದಲ್ಲಿ ಮಿರ್ರಾ ಅಂಡ್ರೀವಾ, ಸೋರಾನಾ ಸಿರ್ಸ್ಟಿಯಾ ವಿರುದ್ಧ ಗೆಲುವು ಸಾಧಿಸಿದ್ದು ಸೆಮಿಫೈನಲ್‌ಗೇರಿದರು. ಮೊದಲನೇ ಸೆಟ್‌ನಿಂದಲೂ ಪ್ರಾಬಲ್ಯ ಸಾಧಿಸಿದ ಅಂಡ್ರೀವಾ 6–0, 6–3ರೊಂದಿಗೆ ಸೆಮಿಗೆ ಲಗ್ಗೆ ಹಾಕಿದರು. ಮಹಿಳೆಯ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎಲಿನಾ ಸ್ವಿಟೋಲ್ವಿನಾ ವಿರುದ್ಧ ಗೆಲುವು ಸಾಧಿಸಿರುವ ಮಾರ್ತಾ ಕೋಸ್ಯುಕ್ ಸೆಮಿಗೇರಿದ್ದಾರೆ. 3 ಸೆಟ್‌ಗಳ ಈ ಪಂದ್ಯದಲ್ಲಿ ಮೊದಲನೇ ಸೆಟ್ ಅನ್ನು 6–3ರಿಂದ ಗೆದ್ದ ಮಾರ್ತಾ ಎರಡನೇ ಸೆಟ್ ಅನ್ನು 2–6ರಿಂದ ಸೋತರು. ಬಳಿಕ ಮತ್ತೆ ಕಂಬ್ಯಾಕ್ ಮಾಡಿದ ಮಾರ್ತಾ 6–2ರಿಂದ ಕಡೆಯ ಸೆಟ್ ಗೆದ್ದು ಮಿಂಚಿದರು. ಮತ್ತೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೆಬಲೆಂಕಾ ಅರಿನಾ ಒಸ್ಕಾ ವಿರುದ್ಧ 7–5, 6–3ರಿಂದ ಗೆಲುವು ಸಾಧಿಸಿದರು. ಇದರೊಂದಿಗೆ ಕ್ವಾರ್ಟರ್‌ಫೈನಲ್‌ಗೆ ಲಗ್ಗೆ ಹಾಕಿದರು.

ಚೆಸ್: ಪ್ರಜ್ಞಾನಂದಗೆ ಗೆಲುವು

ಓಸ್ಲೊ (ನಾರ್ವೆ): ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯ ಏಳನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಜಯ ಸಾಧಿಸಿದ್ದು, ಅಂಕಪಟ್ಟಿಯ ಅಗ್ರಸ್ಥಾನದ ಪೈಪೋಟಿಯನ್ನು ಮತ್ತಷ್ಟು ರೋಚಕಗೊಳಿಸಿದ್ದಾರೆ. ಈ ಸುತ್ತಿನ ಪ್ರಮುಖ ಪಂದ್ಯದಲ್ಲಿ ಪ್ರಜ್ಞಾನಂದ, ಅಲಿರೇಜಾ ಫಿರೌಜಾ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಗೆಲುವು ದಾಖಲಿಸಿದರು. ಸುದೀರ್ಘ ಹೋರಾಟದಲ್ಲಿ ಮೇಲುಗೈ ಸಾಧಿಸಿದ ಭಾರತೀಯ ತಾರೆ, ಅಂತಿಮ ಹಂತದಲ್ಲಿ ತಪ್ಪಿಲ್ಲದ ಆಟವಾಡಿ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು. ಈ ಸೋಲು ಫಿರೌಜಾಗೆ ಟೂರ್ನಿಯಲ್ಲಿ ಎರಡನೇ ಕ್ಲಾಸಿಕಲ್ ಸೋಲಾಗಿದೆ. ವಿಶ್ವ ನಂ.1



ಮ್ಯಾಗ್ನಸ್ ಕಾರ್ಲ್‌ಸನ್ ಹಾಗೂ ವಿನ್ಸೆಂಟ್ ಕೀಮರ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ನಡೆದ ಆರ್ಮಗೆಡ್ಡನ್ ಪಂದ್ಯದಲ್ಲಿ ಕಾರ್ಲ್‌ಸನ್ ಗೆದ್ದು ಹೆಚ್ಚುವರಿ ಅಂಕಗಳನ್ನು ಪಡೆದು ಅಗ್ರಸ್ಥಾನದ ಪೈಪೋಟಿಯಲ್ಲಿ ಉಳಿದರು.

ಗುಕೇಶ್‌ಗೆ ಹೆಚ್ಚುವರಿ ಅಂಕ

ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಹಾಗೂ ವೆಸ್ಲಿ ಸೋ ನಡುವಿನ ಕ್ಲಾಸಿಕಲ್ ಪಂದ್ಯವೂ ಡ್ರಾದಲ್ಲಿ ಅಂತ್ಯಗೊಂಡಿತು. ನಂತರ ನಡೆದ ಆರ್ಮಗೆಡ್ಡನ್ ಕದನದಲ್ಲಿ ಗುಕೇಶ್ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ಗಳಿಸಿದರು. ಏಳು ಸುತ್ತುಗಳ ಅಂತ್ಯಕ್ಕೆ ವೆಸ್ಲಿ ಸೋ 12.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. ಫಿರೌಜಾ 10 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಕಾರ್ಲ್‌ಸನ್, ಕೀಮರ್ ಮತ್ತು ಪ್ರಜ್ಞಾನಂದ ತಲಾ 9 ಅಂಕಗಳೊಂದಿಗೆ ಸಮೀಪದಲ್ಲಿದ್ದಾರೆ.

ಮಹಿಳಾ ವಿಭಾಗದಲ್ಲಿ

ಮಹಿಳಾ ವಿಭಾಗದಲ್ಲಿ ಭಾರತದ ಕೊನೇರು ಹಂಪಿ ಹಾಗೂ ದಿವ್ಯಾ ದೇಶಮುಖ್ ನಡುವಿನ ಕ್ಲಾಸಿಕಲ್ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತು. ಬಳಿಕ ಆರ್ಮಗೆಡ್ಡನ್‌ನಲ್ಲಿ ಕಪ್ಪು ಕಾಯಿಗಳೊಂದಿಗೆ ಆಡಿದ ದಿವ್ಯಾ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ಪಡೆದು ಅಗ್ರಸ್ಥಾನದ ಪೈಪೋಟಿಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6003

6002 ಉತ್ತರ

ಎಡದಿಂದ ಬಲಕ್ಕೆ:
3.ಅಡ್ಡಿ 4.ಅನಂತಶಯನ
7.ಕವಲು 8.ಕಣಕ
9.ತೇರು 10.ದಕ್ಷ
12.ತೊಗಲು 14.ನಗರ
15.ಬದುಕುವದಾರಿ 18.ಕಿಂಡಿ

ಮೇಲಿನಿಂದ ಕೆಳಕ್ಕೆ :
1.ಅಜ್ಜ 2.ಮಾಯ
3.ಅದಲುಬದಲು 5.ತರುಣ
6.ನಕಲು 8.ಕರುಳಿನಕುಡಿ
11.ಬರಡು 13.ಗಡವ
16.ದುಷ್ಟ 17.ರಿಸಿ

ಎಡದಿಂದ ಬಲಕ್ಕೆ
2.ಹೆಚ್ಚು ತಿನ್ನುವ ಆಸಕ್ತಿಯುಳ್ಳವನು (4)
4.ಉಭಯಚರ ಗುಂಪಿಗೆ ಸೇರಿದ ಪ್ರಾಣಿ (2)
5.ಕುಲದ ನಡುವೆ ಅಡಗಿದ ಕೋಗಿಲೆ (3)
6.ಬಾಗಿಲನ್ನು ಕಾಯುವವನು (5)
8.ಪ್ರಾಚೀನ–ಹಳೆಯ ಕಾಲದ್ದು (4)
11.ಒಂದಕ್ಕೊಂದು ಹೊಂದಾಣಿಕೆ ಎಂಬರ್ಥದ ಶಬ್ದ (4)
12.ಮಣೆಯ ನಡುವೆ ಮನೋವಿಕಾರವಿದೆ (5)
14.ದಾರವನ್ನು ತಾರೆನೆಂದ ದಾನಿ (3)
16.ಮನೆಯ ಸಾಲುಗಳ ನಡುವಿನ ಹಾದಿ (2)
17.ಶರ ಒಳಗೊಂಡ ಕೀರ್ತಿ ತರುವಂಥಾದ್ದು (4)

ಮೇಲಿನಿಂದ ಕೆಳಕ್ಕೆ
1. ''ನನಗೆ ಅಗತ್ಯವಿದೆ'' ಎಂದು ಹೀಗೆ ಹೇಳುತ್ತೇವೆ (2)
2.ಎಳ್ಳಿನಿಂದ ಎಣ್ಣೆ ತೆಗೆಯುವವನು (5)
3.ಕತ್ತು ತಿರುಗಿಸಿ ಮಾಡುವ ವ್ಯಾಯಾಮ (4)
4.ಕೆನ್ನೆಯೂ ಹೌದು–ತಲೆಬುರುಡೆಯೂ ಹೌದು (3)
7.ಕಸಿವಿಸಿ–ಭ್ರಾಂತಿಯ ಸಮಾನಪದ (4)
8.ಪಾವಿತ್ರ್ಯತೆ ನೆಲೆಸಿರುವ ಸ್ಥಳ (4)
9.ಉತ್ಪನ್ನ–ಸೇವೆ ಬಳಸಿಕೊಳ್ಳುವ ವ್ಯಕ್ತಿ (5)
10.ಮಯ ಒಳಗೊಂಡ ಸುಂದರವಾದುದು (4)
13.ಅಮೂಲ್ಯ ವಸ್ತುಗಳನ್ನಿಡುವ ಲೋಹದ ಪೆಟ್ಟಿಗೆ (3)
15.ಗುಟ್ಟನ್ನು ಹೀಗೆ ಬಯಲು ಮಾಡು (2)


ಪೆಡಲ್‌ಗೆ ಬ್ರೇಕ್ ಹಾಕಿದ ಆಕ್ಸಿಲರೇಟರ್



ಶ್ರೀಲಕ್ಷ್ಮಿ

'ಜೀವ್ನಾನೆ ಒಂದು ಸೈಕಲ್ ಇದ್ದಂಗೆ, ತುಳ್ಕೊಂಡು ತಳ್ಕೊಂಡು ನಡಿಬೇಕು ಮುಂದೆ...' ಈ ಹಾಡನ್ನು ಇತ್ತೀಚಿಗೆ ಅಲ್ಲಲ್ಲಿ ಕೇಳ್ತಾನೆ ಇರ್ತೀವಿ. ಆದರೆ ಸೈಕಲ್ ತುಳಿಯೋರ ಸಂಖ್ಯೆ ಗಣನೀಯವಾಗಿ ಕಡಿಮೆ ಆಗುತ್ತಿರುವ ಈ ದಿನಗಳಲ್ಲಿ, ಸೈಕಲ್ ಕುರಿತಾದ ಉದಾಹರಣೆಗಳು ಎಷ್ಟು ಪ್ರಸ್ತುತ? ತ್ರಿಚಕ್ರ ಸೈಕಲ್‌ನಿಂದ ಪ್ರಾರಂಭವಾಗುವ ನಮ್ಮ ಸವಾರಿ, ಅದೇಕೋ ಬೈ ಸೈಕಲ್ ಹಂತವನ್ನು ಬೇಗನೆ ಮುಗಿಸಿ ಮೋಟಾರ್ ವಾಹನದ ಕಡೆಗೆ ಮುಖಮಾಡಿ ಸೈಕಲ್ ಫೇಸ್‌ಗೆ ತಿಲ್ಲಾನವನ್ನು ಹಾಡಿಯೇ ಬಿಡುತ್ತದೆ. ತಾತ–ಮುತ್ತಾತಂದಿರು ಹೇಳ್ತಿದ್ದ ಅವರ ಕಿಲೋಮೀಟರ್‌ಗಟ್ಟಲೆ ಸೈಕಲ್ ಸವಾರಿ ಕಥೆಗಳು ಕಥೆಗಳಾಗಿಯೇ ಉಳಿದುಬಿಟ್ಟವು.

ಗಂಟೆಗೆ ಎರಡು ರೂಪಾಯಿ, ಐದು ರೂಪಾಯಿಯಂತೆ ಕೂಡಿಟ್ಟು ಬಾಡಿಗೆ ಕೊಟ್ಟು ತುಳಿಯುತ್ತಿದ್ದ ಸೈಕಲ್ ಸವಾರಿಗಳನ್ನು ನೆನೆದು, ಈಗಿನ ಕಾಲದ ಬೈಸೈಕಲ್ ಮನೆಯ ಗ್ಯಾರೇಜಿನ ಒಂದು ಮೂಲೆಯಲ್ಲಿ ದೂಳು ಹಿಡಿದು ನಿಂತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಈಗಿನ ಪೆಟ್ರೋಲ್–ಡೀಸೆಲ್ ಬೆಲೆಗಳನ್ನು ಲೆಕ್ಕಿಸದೆ ವಾಹನ ಚಲಾಯಿಸುವ ಯುವ ಪೀಳಿಗೆಗೆ ಆ ಪೆಡ್ಲಿಂಗ್ ಖುಷಿಯ ಅಂದಾಜು ತಿಳಿಯಲು ಸಾಧ್ಯವೇ ಇಲ್ಲ, ಆಗಿನ ಕಾಲಕ್ಕೆ ಹೋಲಿಸಿದರೆ ಇಂದಿನ ಜನರ ಆರ್ಥಿಕತೆಯ ಮಟ್ಟ ಸುಧಾರಿಸಿದೆ. ಆದ್ದರಿಂದ ಹೆಚ್ಚೆಚ್ಚು ಮೋಟಾರ್ ವಾಹನಗಳ ಖರೀದಿಗೆ ಮುಂದಾಗುತ್ತಿದ್ದಾರೆ ಎಂದು ಹೇಳಬಹುದಾದರೂ ವಾಹನ ದಟ್ಟಣೆ ಹಾಗೂ ವಾಹನಗಳಿಂದಾಗುತ್ತಿರುವ ವಾಯು ಮಾಲಿನ್ಯದ ಬಗ್ಗೆ ಪರಿಸರ ದಿನದಂದು ಮಾತ್ರ ಯೋಚಿಸಿದರೆ ಪ್ರಯೋಜನವಿಲ್ಲ.



ಇಂದು ವಿಶ್ವ ಬೈಸಿಕಲ್ ದಿನ

ಸೈಕಲ್ ತುಳಿಯೋರು ಈಗಿನ ಕಾಲದಲ್ಲಿ ಇಲ್ಲವೇ ಇಲ್ಲ ಎಂದಲ್ಲ. ಈಗಲೂ ಪ್ರತಿನಿತ್ಯ ಸೈಕಲಿನಲ್ಲೆ ಓಡಾಡುವ ಬೈಸೈಕಲ್ ಸವಾರರು ನಮ್ಮ ಸುತ್ತಮುತ್ತ ಇದ್ದಾರೆ. ಆದರೆ ಬಹಳ ಕಡಿಮೆ. ಶ್ರಮವಹಿಸಿ ಮಾಡುವ ಕೆಲಸ ಕಾರ್ಯಗಳೆಂದರೆ ಯಾರಿಗೆ ಇಷ್ಟ ಹೇಳಿ? ಒಂದು ಗಂಟೆಗಳ ಕಾಲ ಸೈಕಲ್‌ನಲ್ಲಿ ಹೋಗುವ ಸಮಯವನ್ನು ಹದಿನೈದು ನಿಮಿಷಗಳಲ್ಲಿ ಶ್ರಮವಿಲ್ಲದೆ ಮೋಟಾರ್ ವಾಹನಗಳ ಮೂಲಕ ಹೋಗಿ ತಲುಪಬಹುದು ಎಂದರೆ ಯಾರು ತಾನೇ ಬೇಡ ಅಂತಾರೆ? ಒಂದು ಗಂಟೆಯ ಜಿಮ್ ಸೆಶನ್‌ಗೆ ಅರ್ಧ ಗಂಟೆ ಟ್ರಾಫಿಕಿನಲ್ಲಿ ಹೋಗಿ ಬರುವುದರ ಅರ್ಥ ತಿಳಿಯದಂತಾಗಿದೆ. ಸ್ಥೂಲಕಾಯವಿಲ್ಲದ ಸಮಾಜವಿದ್ದ ಆಗಿನ ಕಾಲದ ಸೀಕ್ರೆಟ್‌ಗಳಲ್ಲಿ ಸೈಕ್ಲಿಂಗೂ ಒಂದು ಎಂದೇ ಹೇಳಬಹುದು.

ಈಗಿನ ಕಾಲದಲ್ಲಿ ಹೆಸರಿಗಷ್ಟೆ ಹಂದಿನೆಂಟು ವರ್ಷದ ಮೇಲ್ಪಟ್ಟವರಿಗೆ ಲೈಸೆನ್ಸ್, ಆದರೆ ಹತ್ತು ಹನ್ನೆರಡು ವರ್ಷದವರು ವಾಹನ ಚಲಾಯಿಸುವುದನ್ನು ನೋಡುವುದು ಸರ್ವೇಸಾಮಾನ್ಯ. ಅಯ್ಯೋ! ಸಿಟಿಗಳಲ್ಲಿ ಜಾಗವೇ ಇಲ್ಲ, ಎಲ್ಲಿ ಸೈಕ್ಲಿಂಗ್ ಮಾಡೋದು? ಎಂಬ ಕುಂಟು ನೆಪ ಹೇಳುವವರಿಗೆ ಏನು ಹೇಳಲು ಸಾಧ್ಯ? ಮುಂದಿನ ರಸ್ತೆಯಲ್ಲಿ ಇರುವ ಸ್ನೇಹಿತನ ಮನೆಗೋ, ಅಂಗಡಿಗೋ ಗಾಡಿಯಲ್ಲಿಯೇ ಹೋಗ್ಬೇಕೆ? ನಡೆಯೋದು, ಸೈಕ್ಲಿಂಗ್ ಮಾಡೋದು ವ್ಯಾಯಾಮದ ಭಾಗವಾಗುತ್ತಿರುವ ಈ ಕಾಲಘಟ್ಟದಲ್ಲಿ, ಸೈಕ್ಲಿಂಗ್ ಒಂದು Mode of Transportation ಅಂತ ಹೇಳಿ ನೆನಪಿಸಬೇಕಿದೆ. ಪೆಡಲ್ ಮಾಡಿ ಕಾಲನ್ನು ಬಲಿಷ್ಠವಾಗಿ ಇಟ್ಟುಕೊಳ್ಳಬೇಕಾದ ಮಕ್ಕಳ ಕೈಗೆ ವಾಹನಗಳ ಕೀಲಿ–ಕೈ ಅವರ ಮಾನಸಿಕ ಅಂದಾಜಿಗೆ ಸವಾಲು ಒಡ್ಡುವ ಆಕ್ಸಿಲರೇಟರ್ ಹಿಡಿಸಿ ಭಯವಿಲ್ಲದೆ ನೋಡುತ್ತಿರುವ ಸಮಾಜದಲ್ಲಿ ನಾವಿದ್ದೇವೆ. ಮನುಷ್ಯ ಬೆಳೆದಂತೆಲ್ಲಾ ಬದಲಾವಣೆಗಳು ಅವಶ್ಯ. ಆದರೆ ಬೈಸೈಕಲ್ ತುಳಿಯುವ ವಯಸ್ಸಿನಲ್ಲಿ ಆಕ್ಸಿಲರೇಟರ್‌ನ ಪರಿಚಯವಾಗಿಬಿಟ್ಟರೆ ಪೆಡಲ್‌ಗೆ ಬ್ರೇಕ್ ಬೀಳೋದು ಗ್ಯಾರಂಟಿ. ಇಂತಹ ಸಮಯದಲ್ಲಿ ಪೋಷಕರಾದವರು ಮಕ್ಕಳ ವಯಸ್ಸಿನನುಸಾರ ತಿಳುವಳಿಕೆಯಿಂದ ಸೈಕಲ್, ವಾಹನಗಳನ್ನು ಅವರಿಗೆ ಪರಿಚಯಿಸುತ್ತಾ ಹೋದರೆ ಮಕ್ಕಳು ಸ್ವಲ್ಪವಾದರೋ ಸುರಕ್ಷಿತರಾಗಿ ವಾಹನ ಚಲಾವಣೆಗೆ ಮುಂದಾಗುತ್ತಾರೆ. ಟ್ರಾಫಿಕ್ ನಿಯಮಗಳು ತಿಳಿಯದೇ ಎಷ್ಟೋ ಅಪಘಾತಗಳು ದಿನನಿತ್ಯ ಸಂಭವಿಸುತ್ತಿವೆ. ಮೊಬೈಲ್, ಮೋಟಾರ್ ವಾಹನ... ಹೀಗೆ ಬಾಲ್ಯಾವಸ್ಥೆಯನ್ನು ಕಸಿದುಕೊಳ್ಳುವ ವಸ್ತುಗಳನ್ನು ಆತುರದಿಂದ ಮಕ್ಕಳಿಗೆ ಪರಿಚಯಿಸುವ ಕೆಲಸ ನಮ್ಮಿಂದಾಗದಿರಲಿ. ಮಕ್ಕಳು ಮಕ್ಕಳಾಗಿರಲು ನಾವು ಸಹಕರಿಸೋಣ. ಇಂದು ವಿಶ್ವ ಬೈಸಿಕಲ್ ದಿನ. ಒಂದು ರೌಂಡ್ ಪೆಡಲ್ ತುಳಿದು ಬರೋಣ.

ಪೆಡಲ್ ಮಾಡಿ ಕಾಲನ್ನು ಬಲಿಷ್ಠವಾಗಿ ಇಟ್ಟುಕೊಳ್ಳಬೇಕಾದ ಮಕ್ಕಳ ಕೈಗೆ ವಾಹನಗಳ ಕೀಲಿ–ಕೈ ಅವರ ಮಾನಸಿಕ ಅಂದಾಜಿಗೆ ಸವಾಲು ಒಡ್ಡುವ ಆಕ್ಸಿಲರೇಟರ್ ಹಿಡಿಸಿ ಭಯವಿಲ್ಲದೆ ನೋಡುತ್ತಿರುವ ಸಮಾಜದಲ್ಲಿ ನಾವಿದ್ದೇವೆ.

ಕಿರುಸುದ್ದಿ

ಅಶೋಕ ನೇಮಕ



• **ಶಿರಹಟ್ಟಿ:** ಜಯ ಕರ್ನಾಟಕ ಜನಪರ ವೇದಿಕೆಯ ಶಿರಹಟ್ಟಿ ತಾಲೂಕು ಅಧ್ಯಕ್ಷರಾಗಿ ಅಶೋಕ ಪರಸಪ್ಪ ಹುಬ್ಬಳ್ಳಿ ನೇಮಕವಾಗಿದ್ದು, ಕನ್ನಡ ನಾಡಿನ ನೆಲ ಜಲ ಭಾಷೆ, ಸಂಸ್ಕೃತಿಯ ರಕ್ಷಣೆ ಮತ್ತು ಸಮಾಜ ಮುಖಿ ಸೇವೆ ಸಲ್ಲಿಸುವ ಮೂಲಕ ಸಂಘದ ಬಲವರ್ಧನೆಗೆ ಶ್ರಮಿಸುವಂತೆ ಸಂಘಟನೆ ಸಂಸ್ಥಾಪಕ ಬಿ. ಗುಣರಂಜನ್ ಶೆಟ್ಟಿ ಅವರ ಆದೇಶದ ಮೇರೆಗೆ ಗದಗ ಜಿಲ್ಲಾಧ್ಯಕ್ಷ ಸಣ್ಣಯಲ್ಲಪ್ಪ ವಳಗೇರಿ ಅವರು ನೇಮಕ ಮಾಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.13ಕ್ಕೆ ಪ್ರತಿಭಾ ಪುರಸ್ಕಾರ

• **ನರಗುಂದ:** ಅಖಿಲ ಭಾರತ ಗಾಣಿಗ ವಿದ್ಯಾ ಹಾಗೂ ಉದ್ಯೋಗ ವರ್ಧಕ ಟ್ರಸ್ಟ್ ಹಾಗೂ ಜಿಲ್ಲಾ ಗಾಣಿಗ ಸಂಘದ ವತಿಯಿಂದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಜೂ.13 ರಂದು ಹಮ್ಮಿಕೊಳ್ಳಲಾಗಿದೆ. ಜೂ.14ರಂದು ಬೆಳಗ್ಗೆ 9 ಗಂಟೆಗೆ ರಾಜ್ಯಮಟ್ಟದ ಗಾಣಿಗ ವಧು-ವರರ ಸಮಾವೇಶ ಗದುಗಿನ ಗಾಣಿಗ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಮುಖಂಡರು ಹೇಳಿದರು. ಅವರು ಪತ್ರಿಕಾ ಪ್ರಕಟಣೆಗೆ ತಿಳಿಸಿ ಮಾತನಾಡಿ, ವಧು-ವರರು ಸಮಾವೇಶಕ್ಕೆ ಹೆಸರು ನೊಂದಾಯಿಸಿಕೊಳ್ಳಲು ಜೂ.10 ಕಡೆಯ ದಿನವಾಗಿದೆ. ಪ್ರತಿಭಾ ಪುರಸ್ಕಾರ ಮತ್ತು ವಧು-ವರರ ಸಮಾವೇಶದಲ್ಲಿ ಭಾಗವಹಿಸುವರು ಹೆಸರು ನೋಂದಾಯಿಸಿಕೊಳ್ಳಲು 8722169903, 9448540362, 8722841702 ಸಂಪರ್ಕಿಸಲು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

• **ಗದಗ:** ಶೈಕ್ಷಣಿಕ ವರ್ಷಕ್ಕಾಗಿ ಧಾರವಾಡ ಶಹರದ ಸಪ್ತಾಪೂರ ರಸ್ತೆಯಲ್ಲಿರುವ ಮಿಲಿಟರಿ ಬಾಲಕಿಯರ ವಸತಿ ನಿಲಯದ ಪ್ರವೇಶಕ್ಕೆ ಸೈನಿಕರ ಹೆಣ್ಣು ಮಕ್ಕಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಯುದ್ಧದಲ್ಲಿ ಮಡಿದ ಯೋಧರ ಮತ್ತು ಮಾಜಿ ಸೈನಿಕರ ಹೆಣ್ಣು ಮಕ್ಕಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.15 ರಂದು ಕೊನೆಯ ದಿನವಾಗಿದೆ.

ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 5 ನೇ ತರಗತಿಯಿಂದ ಪಿಯುಸಿ – 2 ರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು. ವಸತಿ ನಿಲಯದಲ್ಲಿ ವಾಸ್ತವ್ಯ ಮತ್ತು ಊಟೋಪಚಾರಗಳು ಉಚಿತವಾಗಿದೆ. ವಸತಿ ನಿಲಯದಲ್ಲಿ ಧಾರವಾಡ ನಗರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ನಿಲಯದಲ್ಲಿ ಪ್ರವೇಶ ನೀಡಲಾಗುವುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ಉಚಿತ ತರಬೇತಿ

• **ಗದಗ:** ಎಸ್‌ಸಿ,ಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ವಾಕರಸಾ ಸಂಸ್ಥೆಯ ಹುಬ್ಬಳ್ಳಿ, ಶಿಗ್ಗಾವಿ ತರಬೇತಿ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ನಿರುದ್ಯೋಗ ಯುವಕ ಯುವತಿಯರಿಗೆ ಊಟ ಉಪಹಾರ ಹಾಗೂ ವಸತಿ ಸಹಿತ 30 ದಿನಗಳ ವರೆಗೆ ಲಘು ಭಾರೀ ವಾಹನ ಚಾಲನಾ ತರಬೇತಿಯನ್ನು ಪರವಾನಗಿ ಪತ್ರದ ವ್ಯವಸ್ಥೆಯೊಂದಿಗೆ ಉಚಿತವಾಗಿ ತರಬೇತಿ ಪ್ರಾರಂಭಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

• **ಗದಗ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.15ರಂದು ಕೊನೆಯ ದಿನವಾಗಿದೆ. ಪಿಯುಸಿ, ಡಿಪ್ಲೋಮಾ, ಐಟಿಐ ಕೋರ್ಸಿನ ವಿದ್ಯಾರ್ಥಿಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ https://shp.karnataka.gov.in/bcwd ಮೂಲಕ ಅರ್ಜಿ ಸಲ್ಲಿಸಬೇಕು. ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾಣ ಅಧಿಕಾರಿಗಳು ಪರಿಶೀಲನೆ ಮಾಡಲು ಜೂ.17 ಅಂತಿಮ ದಿನಾವಾಗಿದೆ. ಜೂ.19 ತಾಲೂಕು ಸಮಿತಿಯ ಮೂಲಕ ಆಯ್ಕೆಯಾದ ಹೊಸ ವಿದ್ಯಾರ್ಥಿಗಳ ಪಟ್ಟಿಪ್ರಕಟಿಸಲಾಗುವುದು. ಆಯ್ಕೆಯಾದ ವಿದ್ಯಾರ್ಥಿಗಳು ವಸತಿ ನಿಲಯಗಳಿಗೆ ಜೂನ್ 25 ರಂದು ಪ್ರವೇಶ ಪಡೆಯಬಹುದು ಎಂದು ಹಿಂದುಳಿದ ವರ್ಗ ಕಲ್ಯಾಣ ಇಲಾಖೆ ಅಧಿಕಾರಿ ಪ್ರಕಟಣೆಗೆ ತಿಳಿಸಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	7811-7338
ಅಜವಾನ	10529-10499
ಅಲಸಂದಿ	4589-3657
ಕಡಲೆ	6231-5405
ಹೆಸರು	6800-4229
ಜೋಳ	4590-3910
ಗೋವಿನಜೋಳ	1726-1721
ಕುಸಬಿ	5349-5243
ಸೂರ್ಯಕಾಂತಿ	7059-7059
ತೊಗರಿ	5714-5714
ಗೋಧಿ	4912-2799
ಅವರೆ ಬ್ಯಾಳಿ	9000-9000



ನರಗುಂದ: ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ನಂ.2ರ ಹಿರಿಯ ಶಿಕ್ಷಕ ಜಿ.ಬಿ. ಕಂಟೆನ್ನವರ ಅವರು ತಮ್ಮ ಶಾಲೆಗೆ ಪ್ರವೇಶ ಪಡೆಯುವ ಮಕ್ಕಳಿಗೆ ಉಚಿತವಾಗಿ ಕಲಿಕಾ ಸಾಮಗ್ರಿಗಳನ್ನು ನೀಡಿದರು. ಶಿಕ್ಷಕರಾದ ಬಳಿಗೇರ, ರಾಮಕೃಷ್ಣ, ಪ್ರಸನ್ನಕುಮಾರ ಪಟ್ಟಣಶೆಟ್ಟಿ, ಶಿಕ್ಷಕಿ ಎಸ್.ವಿ. ಮಂಡಸೊಪ್ಪಿ, ಎಸ್‌ಡಿಎಂಸಿ ಸದಸ್ಯ ಶರಣಪ್ಪ ಹಡಪದ ಉಪಸ್ಥಿತರಿದ್ದರು.

ಮತ್ತೆ ಶಾಲೆಗಳತ್ತ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು

• **ಗದಗ:** ಬೇಸಿಗೆ ರಜೆಯ ಮಜಾದಲ್ಲಿದ್ದ ಮಕ್ಕಳು ಮತ್ತೆ ಶಾಲೆಗಳತ್ತ ಹೆಜ್ಜೆ ಹಾಕಿದರು. ಹೊಸ ತರಗತಿಗೆ ಸೇರುವ, ಸ್ನೇಹಿತರ ಭೇಟಿ ಮಾಡುವ ಹುಮ್ಮಸ್ಸಿನಲ್ಲಿದ್ದ ಮಕ್ಕಳನ್ನು ಶಿಕ್ಷಕರು ಸಂಭ್ರಮದಿಂದ ಸ್ವಾಗತಿಸಿದರು. ಶಾಲಾ ಪ್ರಾರಂಭೋತ್ಸವ ನಿಮಿತ್ತ ಜಿಲ್ಲೆಯ ಎಲ್ಲ ಶಾಲೆಗಳು ತಳಿರು ತೋರಣ, ರಂಗೋಲಿಗಳಿಂದ ಸಿಂಗಾರಗೊಂಡಿದ್ದವು. ಕೆಲ ಶಾಲೆಗಳಲ್ಲಿ ಮಕ್ಕಳಿಗೆ ಸಿಹಿ ತಿನ್ನಿಸುವ ಮೂಲಕ, ಮತ್ತೆ ಕೆಲ ಶಾಲೆಗಳಲ್ಲಿ ಮಕ್ಕಳಿಗೆ ಹೂವು ಕೊಟ್ಟು ಬರಮಾಡಿಕೊಳ್ಳಲಾಯಿತು. ಪ್ರಾರಂಭೋತ್ಸವದ ದಿನವೇ ಪ್ರಬಂಧ ಸ್ಪರ್ಧೆ, ಕಥೆ ಹೇಳುವ ಸ್ಪರ್ಧೆ, ಆಟ ಮತ್ತಿತರರ ಚಟುವಟಿಕೆ ಏರ್ಪಡಿಸಿದ್ದರಿಂದ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು. ವಿವಿಧ ಕಡೆ ಶಾಲಾ ಮಕ್ಕಳಿಂದ ಪ್ರಭಾತ್ ಫೇರಿ ನಡೆಯಿತು. ಶಾಲೆಯಲ್ಲಿ ಮೊದಲ ದಿನ ಮಕ್ಕಳಿಗೆ ಸಿಹಿ ಊಟ ಮಾಡಿಸಿ ಬಡಿಸಿದರು. ರಜೆ ಬಳಿಕ ಆರಂಭಗೊಂಡ ಶೈಕ್ಷಣಿಕ ವರ್ಷದ ಮೊದಲ ದಿನ ಶಾಲೆಗೆ ಹಾಜರಾದ ವಿದ್ಯಾರ್ಥಿಗಳ ಮೊಗದಲ್ಲಿ ಮಂದಹಾಸ, ಸರ್ಕಾರಿ ಶಾಲೆಗಳ ಆವರಣದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ಜಿಲ್ಲಾದ್ಯಂತ ಶಾಲೆಗಳಲ್ಲಿ ಎಸ್‌ಡಿಎಂಸಿ, ಶಿಕ್ಷಕ ಸಿಬ್ಬಂದಿಯಲ್ಲೂ ಸಂಭ್ರಮ ಮನೆ ಮಾಡಿತ್ತು. ಮುಂಜಾನೆಯೇ ಶಾಲಾ ಆವರಣಕ್ಕೆ ತೆರಳಿ ಮತ್ತೊಮ್ಮೆ ಸ್ವಚ್ಛಗೊಳಿಸಿ, ರಂಗೋಲಿ ಬಿಡಿಸಿ, ತಳಿರು-ತೋರಣಗಳಿಂದ ಅಲಂಕರಿಸಿ, ವಿದ್ಯಾರ್ಥಿಗಳನ್ನು ಸ್ವಾಗತಿಸಿ, ಸಿಹಿ ತಿನ್ನಿಸಿದ ದೃಶ್ಯಾವಳಿ ಎಲ್ಲೆಡೆ ಗೋಚರಿಸಿತು. ಕಳೆದ ಬಾರಿ ಮಕ್ಕಳಿಗೆ ಸರಿಯಾದ ಸಮಯಕ್ಕೆ ಪಠ್ಯಪುಸ್ತಕ ಹಾಗೂ ಜಿಲ್ಲಾದ್ಯಂತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಆರಂಭಗೊಂಡಿರುವ ಹಿನ್ನಲೆಯಲ್ಲಿ 1ರಿಂದ 10ನೇ ತರಗತಿ ವರೆಗಿನ ಶಾಲಾ ಪಠ್ಯಪುಸ್ತಕಗಳು ಈಗಾಗಲೇ ಆಯಾ ತಾಲೂಕಿನ ಬಿಇಒ ಕಚೇರಿ ಮೂಲಕ ಶಾಲೆಗಳಿಗೆ ಪೂರೈಸಲಾಗಿದ್ದು, ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.



ಲಕ್ಷ್ಮೇಶ್ವರ: ಸಮೀಪದ ಶಿಗ್ಲಿ ಗ್ರಾಮದಲ್ಲಿ ಅಧಿಕ ಮಾಸದ ಪ್ರಯುಕ್ತ ಶಿಗ್ಲಿ ಗ್ರಾಮದಲ್ಲಿ ವೀರಣ್ಣಾ ಹಾಲಪ್ಪ ಪವಾಡದ ಅವರ ಮನೆಗೆ ಭೇಟಿ ನೀಡಿದ ಕೊಟ್ಟೂರಿನ ಶಿವಪ್ರಕಾಶ ಸ್ವಾಮೀಜಿಗೆ ಸನ್ಮಾನಿಸಲಾಯಿತು. ನಿರ್ಮಲಾದೇವಿ ಪವಾಡದ, ಅನ್ನದಾನೇಶ್ವರ ಪವಾಡದ ವೀರ ಸೋಮೇಶ್ವರ ಪವಾಡದ, ಲಾವಣ್ಯ ಪವಾಡದ, ಲಕ್ಷ್ಮೀ ಪವಾಡದ, ಶಿವಯೋಗರಾಜ, ವಿಜಯವೀಣಾ, ನಮ್ರತಾ, ನಂದಿಶ್ವರ, ರಮೇಶ ಅಣ್ಣಿಗೇರಿ, ಜಗದೀಶ ಹಿರೇಮಠ, ರಾಮು ಗೋಕರ ಇದ್ದರು.

ಆಕ್ಸಿಜನ್ ಪೈಪ್ ಕಳ್ಳತನ | ಗರ್ಭಿಣಿಯರಿಗೆ ಸಂಕಷ್ಟ | ರೋಗಿಗಳ ಆರೋಪ

ಆಸ್ಪತ್ರೆಯಲ್ಲಿ ಮೂಲಸೌಕರ್ಯ ಕೊರತೆ



▸ ರುದ್ರಗೌಡ ಪಾಟೀಲ

• **ಗದಗ:** ಅವಳಿ ನಗರದ ಹೃದಯ ಭಾಗದಲ್ಲಿರುವ ದಂಡೆಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಹೆರಿಗೆಗೆ ಬಂದ ಗರ್ಭಿಣಿಯರು ಪರದಾಡುವ ಪರಿಸ್ಥಿತಿ ಎದುರಾಗಿದೆ.

ದಂಡೆಪ್ಪ ಮಾನ್ವಿ ಆಸ್ಪತ್ರೆ ಕೇಂದ್ರ ಬಸ್ ನಿಲ್ದಾಣಕ್ಕೆ ಹತ್ತಿರವಿದ್ದು ಕೇವಲ ನಗರದ ಜನರಿಗೆ ಸೀಮಿತವಾಗದೆ. ರೋಣ ಲಕ್ಷ್ಮೇಶ್ವರ ,ಗಜೇಂದ್ರಗಡ ,ಮುಂಡರಗಿ ಸೇರಿದಂತೆ ವಿವಿಧ ತಾಲೂಕಿನ ಮಹಿಳೆಯರಿಗೆ ಅನುಕೂಲವಾಗಿದೆ. ಆದರೆ ಮೊನ್ನೆ ನಡೆದ ಆಕ್ಸಿಜನ್ ಪೈಪ್ ಕಳ್ಳತನ ದಿಂದಾಗಿ ಆಸ್ಪತ್ರೆಯಲ್ಲಿರುವ ಆಪರೇಷನ್ ಥಿಯೇಟರ್ ಕಾರ್ಯನಿವಹಿಸದ ಕಾರಣ ಸಾರ್ವಜನಿಕರು ಪರದಾಡುವಂತಾಗಿದೆ. ಆಸ್ಪತ್ರೆಗೆ ಬರುವ ಗರ್ಭಿಣಿಯರ ಆರೋಗ್ಯದ ಸ್ಥಿತಿಗತಿ ಮೇಲೆ ವೈದ್ಯರು ಚಿಕಿತ್ಸೆ ನೀಡುತ್ತಾರೆ. ತುರ್ತು ಪರಿಸ್ಥಿತಿ ವೇಳೆ ಅನಿವಾರ್ಯವಾಗಿ ಸಿಸೇರಿಯನ್‌ಗೆ ಮುಂದಾಗುತ್ತಾರೆ. ಅಂತಹ ಸಂದರ್ಭದಲ್ಲಿ ರೋಗಿಗಳಿಗೆ ಆಕ್ಸಿಜನ್ ಕಡ್ಡಾಯವಾಗಿ ಬೇಕೆ ಬೇಕು. ಆದರೆ ಮೊನ್ನೆ ಆಕ್ಸಿಜನ್ ಪೈಪ್ ಕಳ್ಳತನವಾದ ನಂತರ ಸಿಸೇರಿಯನ್ ವಿಭಾಗ ಸಂಪೂರ್ಣವಾಗಿ ಬಂದಾಗಿದ್ದು, ಗರ್ಭಿಣಿಯರ ಮನೆಯವರಿಗೆ ಏನು ಮಾಡಬೇಕು ಎಂದು ಆತಂಕ್ಕೆ ಒಳಗಾಗಿದ್ದಾರೆ.

ಆಸ್ಪತ್ರೆಯ ಒಳಾಂಗಣದಲ್ಲಿ ಕೆಲವು ಕಡೆ ಸಿಸಿ ಕ್ಯಾಮೆರಾ ಅಳವಡಿಸಿದ್ದರೂ ಸರಿಯಾದ ನಿರ್ವಹಣೆ ಇಲ್ಲದ ಕಾರಣ ಕೆಟ್ಟು ಹೋಗಿದ್ದು ಒಂದೆಡೆಯಾದರೆ ,ಇತ್ತ ಹೊರವಲದಲ್ಲಿ ಯಾವುದೇ ಸಿಸಿ ಕ್ಯಾಮೆರಾಗಳನ್ನು ಅಳವಡಿಸದ ಕಾರಣ ಆಸ್ಪತ್ರೆಯ ಬಲ ಭಾಗದಲ್ಲಿರುವ ಆಕ್ಸಿಜನ್ ಸಿಲಿಂಡರ್‌ಗಳ ರೂಮಿನಿಂದ ಕನೆಕ್ಟ್ ಆಗಿರುವ ಬೆಲೆಬಾಳುವ ಲೋಹದ ಆಕ್ಸಿಜನ್ ಪೈಪನ್ನು ಕಳ್ಳರು ಹೊಂಚು ಹಾಕಿ ಕದ್ದಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಔಷಧಿ ಖಾಲಿ
ಆಸ್ಪತ್ರೆಗೆ ಇರಬೇಕಾದ ಕನಿಷ್ಟ ಔಷಧಿಗಳು ದಂಡೆಪ್ಪ ಮಾನ್ವಿ ಆಸ್ಪತ್ರೆಯಲ್ಲಿ ಇಲ್ಲದಿರುವುದರಿಂದ ಹೊರರೋಗಿಗಳಿಗೆ ತೊಂದರೆಯಾಗಿದೆ. ಈ ಕುರಿತು ಅಧಿಕಾರಿಗಳನ್ನು ವಿಚಾರಿಸಿದಾಗ ಔಷಧಿಗಳಿಗಾಗಿ ಜಿಮ್ಸ್ ಗೆ ಹೋಗಿ ಎನ್ನುವ ಮಾತುಗಳು ಕೇಳಿಬರುತ್ತಿದ್ದು, ಗರ್ಭಿಣಿಯರನ್ನು ಕರೆದುಕೊಂಡು ಬಂದ ಪಾಲಕರಿಗೆ ಹೊರವಲದ ಜಿಮ್ಸ್ ಗೆ ಹೋಗುವುದು ತಲೆ ನೋವಾಗಿ ಪರಿಣಮಿಸಿದೆ.

ಕೆಟ್ಟು ನಿಂತ ಹೀಟರ್, ಲಿಫ್ಟ್
ಬಾಣತಿಯರಿಗೆ ಬಿಸಿ ನೀರಿನ ಅವಶಕತೆ ಇರುವ ಕಾರಣ ಈ ಹಿಂದೆ ಹೀಟರ್‌ನ್ನು ಅಳವಡಿಸಿದ್ದು, ನಿರ್ವಹಣೆ ಕೊರತೆಯಿಂದ ಹೀಟರ್ ಕೆಟ್ಟು ಹೋಗಿದ್ದು,ಬಾಣತಿಯರಿಗೆ ತಣ್ಣೀರನ್ನೇ ಬಳಸುವುದು ಅನಿವಾರ್ಯವಾಗಿದೆ. ಒಳರೋಗಿಗಳಿಗೆ ಮೊದಲನೇ ಮಹಡಿಯಲ್ಲಿ ವಾರ್ಡ್ ಇದ್ದು ,ಇದಕ್ಕೆ ಸಂಪರ್ಕಿಸುವ ಲಿಫ್ಟ್ ಕೆಟ್ಟು ಹೋದ ಕಾರಣ ಗರ್ಭಿಣಿಯರು ನಡೆದುಕೊಂಡೇ ಮೇಲ್ಮಹಡಿಗೆ ಹತ್ತುವಂತಾಗಿದೆ ಎನ್ನುತ್ತಾರೆ ರೋಗಿಗಳ

ದಿಗಂತ ವಿಶೇಷ

» ದಂಡೆಪ್ಪ ಮಾನ್ವಿ ಆಸ್ಪತ್ರೆಯ ಆಕ್ಸಿಜನ್ ಪೈಪ್ ಕಳ್ಳತನವಾಗಿರುವುದು,ಸಮರ್ಪಕವಾಗಿ ಔಷಧ ಇಲ್ಲದಿರುವುದು ಸೇರಿದಂತೆ ಅನೇಕ ತೊಂದರೆಗಳ ಗೂಡು

» ಆಸ್ಪತ್ರೆಯ ಆಡಳಿತ ವಿಚಾರಕ್ಕೆ ಜಿಲ್ಲಾ ಆರೋಗ್ಯ ಇಲಾಖೆ ಹಾಗೂ ಜಿಲ್ಲಾ ಜಿಮ್ಸ್ ನಿರ್ದೇಶಕರು ಒಬ್ಬರ ಮೇಲೆ ಒಬ್ಬರು ಕೇಸರೆಚಾಟವನ್ನು ಮಾತ್ರ ನಿಲ್ಲಿಸುತ್ತಿಲ್ಲ ಕೂಡಲೇ ಜಿಲ್ಲಾಡಳಿತ ಮಧ್ಯ ಪ್ರವೇಶಿಸಿ ಸಾರ್ವಜನಿಕರಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂಬುದು ರೋಗಿಗಳ ಆಗ್ರಹ

> ದಂಡೆಪ್ಪ ಮಾನ್ವಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಪೈಪ್ ಕಳ್ಳತನ ಆಗಿರುವ ಬಗ್ಗೆ ಪೊಲೀಸರಿಗೆ ಈಗಾಗಲೇ ಕಂಪ್ಲೆಂಟ್ ನೀಡಲಾಗಿದೆ.ಉಳಿದ ತೊಂದರೆಗಳ ಕುರಿತು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.
> ■ ಡಾ.ಬಿ.ಸಿ .ಕರಿಗೌಡರ್, ಜಿಲ್ಲಾ ಶಸ್ತ್ರ ಚಿಕಿತ್ಸಕ

> ದಂಡೆಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಈಗ ಆರೋಗ್ಯ ಇಲಾಖೆ ಅಧೀನದಲ್ಲಿ ಬಂದಿದ್ದು ಇನ್ನೆರೆಡು ದಿನಗಳಲ್ಲಿ ಆಕ್ಸಿಜನ್ ಪೈಪ್‌ನ ದುರಸ್ತಿ ಮಾಡಿ ಪುನಃ ಆಪರೇಷನ್ ಥಿಯೇಟರ್‌ನ್ನು ಪ್ರಾರಂಭಿಸಲಾಗುವುದು.
> ■ ಎಸ್.ಎಸ್.ನೀಲಗುಂದ, ಜಿಲ್ಲಾ ಆರೋಗ್ಯಾಧಿಕಾರಿ

ವರ್ಷದಿಂದ ಅರ್ಧಕ್ಕೆ ನಿಂತ ಕಾಲೇಜು ಕಟ್ಟಡ

▸ ಶಿವಲಿಂಗಯ್ಯ ಹೊತಗಿಮಠ

• **ಲಕ್ಷ್ಮೇಶ್ವರ:** ಪಟ್ಟಣದ ಟಿಬಿ ಮಾನ್ವಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಕಟ್ಟಡ ಕಳೆದ 1 ವರ್ಷದಿಂದ ಅರ್ಧಕ್ಕೆ ನಿಂತಿದ್ದು ಸಾವಿರಾರು ವಿದ್ಯಾರ್ಥಿಗಳಿಗೆ ಉಪಯೋಗವಾಗ ಬೇಕಿದ್ದ ಕಟ್ಟಡ ಅರ್ಧಕ್ಕೆ ಮೋಟಕು ಗೊಂಡಿದೆ ಎಂದು ಸಾರ್ವಜನಿಕರು ಬೇಸರಿಸುತ್ತಿದ್ದಾರೆ.

2022-23ನೇ ರಾಜ್ಯವಲಯದ ವಿವೇಕ ಯೋಜನೆ ಅಡಿಯಲ್ಲಿ 135 ಲಕ್ಷ ರೂ. ಟೆಂಡರ್ ಕಾಮಗಾರಿ ಯಾಗಿ ಬಂದಿದ್ದ ಕೆಲಸ ನಂತರ ಶಿಕ್ಷಣ ಇಲಾಖೆಯಿಂದ 98.40 ಲಕ್ಷ ರೂ. ಮಂಜೂರಾತಿ ಆಗಿದ್ದು ಇನ್ನುಳಿದ ಹಣವಿಲ್ಲದ ಕಾರಣ ಕಾಮಗಾರಿ ಒಂದು ವರ್ಷದಿಂದ ನಿಂತಲ್ಲೇ ನಿಂತಿದೆ. ಸದ್ಯ ಕಾಲೇಜನಲ್ಲಿ ಉಪನ್ಯಾಸ ಕೊಠಡಿಗಳು 6 , ಲ್ಯಾಬ್ 4 1 ಗ್ರಂಥಾಲಯ, 1 ಕೊಠಡಿಯಲ್ಲಿ ಪ್ರಾಚಾರ್ಯ ಹಾಗೂ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದು, ಉಪನ್ಯಾಸಕರ ಕೊಠಡಿ ಅದರಲ್ಲಿ 3 ಕ್ಲಾಸ್ ರೂಮ್‌ಗಳು ಮಳೆ ಬಂದರೆ ಸಾಕು ಸೋರುತ್ತದೆ, ಗೋಡೆಗಳು ಬಿರುಕು ಬಿಟ್ಟಿದ್ದು ವಿದ್ಯಾರ್ಥಿಗಳಿಗೆ ಕುಳಿತು ಪಾಠ ಕೇಳಲು ತೊಂದರೆ ಆಗಿದೆ. ಕೇವಲ ಒಂದೇ ಡಿವಿಜನ್ ಮಾಡಲಾಗಿದ್ದು ಇನ್ನೊಂದು ಡಿವಿಜನ್ ಮಾಡಬೇಕು ಎಂದರೆ ಉಪನ್ಯಾಸಕರ ಕೊಠಡಿ ಅವಶ್ಯಕ. ಹೊಸಕಟ್ಟಡ ಕೊಠಡಿಗಳಿಗೆ ಕಿಟಕಿ, ಬಾಗಿಲು, ಸುಣ್ಣ ಬಣ್ಣ, ಡೆಸ್ಕ್ ಕುರ್ಚಿ ಇತರೆ ಉಪಕರಣಗಳ ಅವಶ್ಯಕತೆಯಿದೆ. ಈಗಾಗಲೇ ಪ್ರಥಮ ವರ್ಷದ ಪಿಯುಸಿಗೆ ಆರ್ಟ್ಸ್, ವಾಣಿಜ್ಯ,ವಿಜ್ಞಾನ ವಿಭಾಗಕ್ಕೆ ಅಂದಾಜು 300 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಅವರಿಗೆ ಸೂಕ್ತವಾದ ಕ್ಲಾಸ್ ರೂಮ್ ವ್ಯವಸ್ಥೆ ಆಗಬೇಕು, ಕಾಲೇಜಿಗೆ ಸುಸಜ್ಜಿತ ಆಟದ ಮೈದಾನಬೇಕಾಗಿದೆ. ಇನ್ನು ಕಾಲೇಜನಲ್ಲಿ ಖಾಯಂ 5 ಜನ ಉಪನ್ಯಾಸಕರಿದ್ದು 10 ಜನ ಅತಿಥಿ ಉಪನ್ಯಾಸಕರಿದ್ದಾರೆ. ಆದರೆ ಇನ್ನೂ ಕಾಲೇಜನಲ್ಲಿ ಪ್ರಥಮ ದರ್ಜೆ, ದ್ವಿತೀಯ ದರ್ಜೆ, ಸಿಪಾಯಿ ಸಹಾಯಕ ಸಿಬ್ಬಂದಿಗೆ ಮಂಜೂರಾತಿ ಸಿಕ್ಕಿಲ್ಲ ಎಂದು ದೂರಲಾಗಿದೆ.

> ಮೊದಲು ಶಿಕ್ಷಣ ಇಲಾಖೆಯಿಂದ 1.35ಕೋಟಿ ಟೆಂಡರ್ ಆಗಿತ್ತು. ಕಟ್ಟಡ ಪ್ರಾರಂಭಗೊಂಡು ಸ್ಲಾಬ್ ವರೆಗೆ ಬಂದಿತ್ತು. ನಂತರ ಶಿಕ್ಷಣ ಇಲಾಖೆಯಿಂದ 98.40 ಲಕ್ಷ ಅಷ್ಟೇ ಹಣ ಇಲಾಖೆಗೆ ಜಮೆ ಆಗಿದ್ದು, ಒಂದು ವರ್ಷದ ಹಿಂದೆ ಉಳಿದ ಹಣಕ್ಕಾಗಿ ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದೇವೆ. ಹಣ ಇನ್ನೂ ಬಂದಿಲ್ಲ. ಬಂದನಂತರ ಉಳಿದ ಕಾಮಗಾರಿ ಪೂರ್ಣಗೊಳ್ಳಲಿದೆ.
> ■ ಶ್ರೀಶೈಲ ಚೆಮ್ಮಟ್, ಸಹಾಯಕ ಅಭಿಯಂತರ, ಶಿರಹಟ್ಟಿ ಉಪವಿಭಾಗ



ಮಹಿಳೆಯರಿಗೆ ಕೌಶಲ್ಯಾಧಾರಿತ ಹೊಲಿಗೆ ತರಬೇತಿ ಅಗತ್ಯ

• **ಲಕ್ಷ್ಮೇಶ್ವರ:** ಮಹಿಳೆಯರು ಕೌಶಲ್ಯಾಧಾರಿತ ಹೊಲಿಗೆ ತರಬೇತಿ ಪಡೆದು ಸ್ವ ಉದ್ಯೋಗದಿಂದ ಆರ್ಥಿಕವಾಗಿ ಸಬಲರಾಗಬೇಕು ಎಂದು ಹಿಂದೂ ಸೇವಾ ಪ್ರತಿಷ್ಠಾನದ ರಾಜ್ಯ ಸಂಯೋಜಕ ನಟರಾಜ ರಾನಡೆ ಹೇಳಿದರು.

ಅವರು ತಾಲೂಕಿನ ಸೂರಣಗಿ ಗ್ರಾಮದಲ್ಲಿ ಸೂರಣಗಿ ಗ್ರಾಮದ ಹಿಂದೂ ಸೇವಾ ಪ್ರತಿಷ್ಠಾನದಿಂದ ಹೊಲಿಗೆ ಹಾಗೂ ಕಸೂತಿ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿ, ಹೊಲಿಗೆ ತರಬೇತಿ ನಿರುದ್ಯೋಗಿಗಳ ಬದುಕಿಗೆ ದಾರಿಯಾಗಬೇಕು ಎಂದರು. ತಾಲೂಕು ಸಂಯೋಜಕ ಚೇತನ ಯಲಿಗಾರ, ವೀರಭದ್ರೇಶ್ವರ ಟ್ರಸ್ಟ್ ಕಮಿಟಿಯ ಉಪಾಧ್ಯಕ್ಷ ವಿರೂಪಾಕ್ಷಪ್ಪ ಅರಳಿ ಮಹಿಳಾ ಅವಲಂಬನೆ ಪ್ರಮುಖರಾದ ಜಯಮ್ಮ ದನಾಕಟ್ಟವರು, ಸೇವಾ ಮಿತ್ರ ನವೀನ ಬಡಿಗೇರ, ಕವಿತಾ ಬಡಿಗೇರ, ರೂಪಾ ಪೂಜಾರ, ಕಿರಣ ಕೋಳ್ಳೆಣ್ಣೆ, ಲಕ್ಷ್ಮಿ ಮಾನಯ್ಯನಮಠ ಇತರರಿದ್ದರು.



ಸ್ವಾವಲಂಬಿ ಸಾರಥಿ ಯೋಜನೆ ಸಹಕಾರಿ: ಕುಲಕರ್ಣಿ

• **ಗದಗ:** ಸರ್ಕಾರದ ಸ್ವಾವಲಂಬಿ ಸಾರಥಿ ಯೋಜನೆಯು ಹಿಂದುಳಿದ ವರ್ಗಗಳ ಜನರಿಗೆ ಮಹತ್ವಾಕಾಂಕ್ಷಿ ಯೋಜನೆ ಆಗಿದೆ. ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗದ ಹಕ್ಕನ್ನು ಕೊಡುತ್ತದೆ. ಜೊತೆಗೆ ಶೇ 50% ಹಣ ಒದಗಿಸುವ ಮೂಲಕ ಸಹಾಯ ಒದಗಿಸುತ್ತದೆ ಎಂದು ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಗುರುರಾಜ ಕುಲಕರ್ಣಿ ಹೇಳಿದರು.

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿ ಸಭಾಂಗಣದಲ್ಲಿ ಸ್ವಾವಲಂಬಿ ಸಾರಥಿ ಯೋಜನೆ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಮಾರ್ಗದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ವಾವಲಂಬಿ ಸಾರಥಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ಸರ್ಕಾರದ ಸಾಲ ಹಾಗೂ ಸಹಾಯಧನದ ನೆರವಿನಿಂದ ಎಂ-ಪ್ಯಾನಲ್ ಆಗಿರುವ ವಾಹನ ತಯಾರಿಕಾ ಸಂಸ್ಥೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಅಗತ್ಯಕ್ಕೆ ಅನುಗುಣವಾದ ಕಾರುಗಳನ್ನು ಖರೀದಿಸಿ ಉದ್ಯೋಗ ಆರಂಭಿಸಬಹುದು. ವಾಹನವನ್ನು ಕೇವಲ ಖರೀದಿಸುವುದಷ್ಟೇ ಅಲ್ಲದೆ, ಅದನ್ನು ಆದಾಯದ ಮೂಲವನ್ನಾಗಿ ಮಾಡಿಕೊಂಡು ಆರ್ಥಿಕ ಪ್ರಗತಿ ಸಾಧಿಸಬೇಕು ಎಂದರು.


ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

• **ಗದಗ:** ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಮುಂಡರಗಿ ಮೌಲಾನಾ ಆಜಾದ ಮಾದರಿ ಶಾಲೆಗೆ ಕರ್ತವ್ಯ ನಿರ್ವಹಿಸಲು ಇಂಗ್ಲಿಷ್, ಹಿಂದಿ, ಸಮಾಜ ವಿಜ್ಞಾನ, ಉರ್ದು ಹಾಗೂ ದೈಹಿಕ ಶಿಕ್ಷಕರ ವಿಷಯಗಳಿಗೆ ಭೋಧನೆ ಮಾಡಲು ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.4 ಕೊನೆಯ ದಿನವಾಗಿದೆ. ಬಿ.ಎಡ್ ಪದವಿ ವಿದ್ಯಾರ್ಹತೆಯನ್ನು ಹೊಂದಿರಬೇಕು. ಅಭ್ಯರ್ಥಿಗಳು ಶೈಕ್ಷಣಿಕ ದಾಖಲಾತಿಯನ್ನು ಮೌಲಾನಾ ಆಜಾದ ಮಾದರಿ ಶಾಲೆ, ಹೊಸ ಬಿ.ಎಡ್ ಕಾಲೇಜು ಹತ್ತಿರ, ಬ್ಯಾಲವಾಡಗಿ, ಮುಂಡರಗಿ ಅರ್ಜಿ ಸಲ್ಲಿಸಬೇಕು.

ಮಕ್ಕಳನ್ನೇ ಆಸ್ತಿಯಾಗಿಸಿ: ಸಿ.ಸಿ.ಪಾಟೀಲ

• **ನರಗುಂದ:** ಪಾಲಕರು ಮಕ್ಕಳಿಗೆ ಆಸ್ತಿಯನ್ನು ಮಾಡದೇ ಮಕ್ಕಳನ್ನೆ ಆಸ್ತಿಯನ್ನಾಗಿ ಮಾಡಬೇಕು. ಶಾಲೆಯಲ್ಲಿ ಕಲಿತಂತಹ ವಿಷಯಗಳನ್ನು ಮನೆಯಲ್ಲಿ ಅಭ್ಯಾಸ ಮಾಡುವುದನ್ನು ಪಾಲಕರು ಗಮನಿಸಬೇಕು. ಮಕ್ಕಳಿಗೆ ಮೊಬೈಲ್ ಕೊಡಕೂಡದು ಎಂದು ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಪಟ್ಟಣದ ಶಾಸಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.1 ಹಾಗೂ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ 2026-27ನೇ ಸಾಲಿನ ಶಾಲಾ ಪ್ರಾರಂಭೋತ್ಸ ವಿದ್ಯಾರ್ಥಿಗಳಿಗೆ ಪುಷ್ಪಾರ್ಚಣೆ ಮಾಡುವ ಮೂಲಕ ಶಾಲೆಗೆ ಸ್ವಾಗತಿಸಿದ ನಂತರ ಮಾತನಾಡಿದರು.ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ಕಂಬಳಿ ಮಾತನಾಡಿ, ಶಿಕ್ಷಕರು ಪ್ರತಿನಿತ್ಯ ವಿಷಯಗಳ ಪೂರ್ವ ತಯಾರಿ ಮಾಡಿಕೊಂಡು ಬೋಧಿಸಬೇಕು. ಶಿಕ್ಷಕರು ಪಾಠ ಬೋಧನೆ ಅವಧಿಯಲ್ಲಿ ಮೊಬೈಲ್ ಬಳಕೆ ಮಾಡಬಾರದು. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪಠ್ಯಪುಸ್ತಕ, ಶೂ ಸಾಕ್ಸ್ ಬಿಸಿಯೂಟ ಎಲ್ಲ ಕಾರ್ಯಕ್ರಮಗಳು ಜಾರಿಯಲ್ಲಿವೆ. ಈ ವರ್ಷ ಶೇ.15 ರಷ್ಟು ಮಕ್ಕಳ ದಾಖಲಾತಿ ಹೆಚ್ಚಿಸಲು ಪ್ರಧಾನ ಗುರುಗಳಿಗೆ ಮತ್ತು ಸಹ ಶಿಕ್ಷಕರಿಗೆ ಎಸ್‌ಡಿಎಂಸಿ ರವರ ಸಹಕಾರದೊಂದಿಗೆ ದಾಖಲಾತಿ ಆಂದೋಲನ ಮಾಡಲು ಮಾರ್ಗದರ್ಶನ ಮಾಡಿದರು.ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ನೆಗಳೂರ, ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಶಿವಾನಂದ ಮುತವಾಡ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎನ್.ಆರ್.ನೀಡಗುಂದಿ, ಅಕ್ಷರದಾಸೋಹದ ಸಹಾಯಕ ನಿರ್ದೇಶಕ ಎಂ.ಡಿ.ಅಸುಂಡಿ, ಬಸವರಾಜ ಮಳಗಿ, ಎಸ್.ಡಿ.ಇನಾಮದಾರ, ಎಂ.ಬಿ.ಮಲ್ಲಾಪುರ, ಎನ್.ಎಂ.ಬಾರ್ಕಿ, ಬಿ.ಎ.ಬೋಯಿಟೆ, ಎಸ್.ವೈ.ಸುರಕೋಡ, ಆರ್.ಕೆ.ಮುಧೋಳ ಇದ್ದರು. ಹನಮಂತಪ್ಪ ಮಾದರ ನಿರೂಪಿಸಿದರು. ಎಸ್.ಎಸ್.ಬಿರಾದರ ವಂದಿಸಿದರು.



ಬೇಸಿಗೆ ಸಂಗೀತ ಶಿಬಿರದ ಸಮಾರೋಪ

• **ಗಜೇಂದ್ರಗಡ:** ನಗರದ ಸ್ವರ ಸಂಗಮ ಸಂಗೀತ ಪಾಠಶಾಲೆಯ ವತಿಯಿಂದ ಬೇಸಿಗೆ ಸಂಗೀತ ಶಿಬಿರದ ಸಮಾರೋಪ ಸಮಾರಂಭವು ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಡಾ. ಶ್ರೀರಾಮ ಕಾಸರ ಮಾತನಾಡಿ, ಸಂಗೀತವು ಕೇವಲ ಕಲೆಯಲ್ಲ, ಅದು ವ್ಯಕ್ತಿತ್ವ ವಿಕಸನದ ಸಾಧನವಾಗಿದೆ. ಮಕ್ಕಳಲ್ಲಿ ಶಿಸ್ತು, ಏಕಾಗ್ರತೆ ಹಾಗೂ ಆತ್ಮವಿಶ್ವಾಸ ಬೆಳೆಸುವಲ್ಲಿ ಸಂಗೀತದ ಪಾತ್ರ ಮಹತ್ವದ್ದಾಗಿದೆ ಎಂದರು. ಹನುಮಂತ ಕೆಂಚಿ ಮಾತನಾಡಿ, ಸಂಗೀತವು ಮನಸ್ಸಿಗೆ ನೆಮ್ಮದಿ ನೀಡುವುದರ ಜೊತೆಗೆ ಮಕ್ಕಳಲ್ಲಿನ ಪ್ರತಿಭೆಯನ್ನು ಹೊರತರುವ ಶಕ್ತಿಯನ್ನು ಹೊಂದಿದೆ. ಇಂತಹ ಶಿಬಿರಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು. ಜನಪದ ಗಾಯಕ ರಾಮಕೃಷ್ಣ ಪೂಜಾರ, ತಬಲವಾದಕ ಧನರಾಜ ಕರ್ನೆ, ಸಂಗೀತ ಶಿಕ್ಷಕಿ ಪ್ರಗತಿ ರಾಯಬಾಗಿ, ಮುರ್ತುಜಾ ಮಳಗಾವಿ ಇತರರಿದ್ದರು.



ರೈತರ ಎಫ್‌ಐಡಿ ಪರಿಶೀಲಿಸಿ ರಸಗೊಬ್ಬರ ವಿತರಿಸಿ

• **ನರಗುಂದ:** ಕಡ್ಡಾಯವಾಗಿ ರೈತರ ಎಫ್‌ಐಡಿ ಪರಿಶೀಲಿಸಿ ನಿಗದಿತ ಪ್ರಮಾಣದಲ್ಲಿ ಮಾತ್ರ ರಸಗೊಬ್ಬರವನ್ನು ಕೆ-ಕಿಸಾನ್ ತಂತ್ರಾಂಶ ಬಳಸಿಕೊಂಡು ಪಿಓಎಸ್ ಮಷೀನ್ ಮೂಲಕ ರಸಗೊಬ್ಬರ ವಿತರಿಸಬೇಕು. ಇದರಿಂದ ಕಾಳಸಂತೆಯಲ್ಲಿ ರಸಗೊಬ್ಬರ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ರೈತರು ಅನವಶ್ಯಕವಾಗಿ ಹೆಚ್ಚುವರಿ ರಸಗೊಬ್ಬರ ಬಳಸದಂತೆ ನಿಯಂತ್ರಿಸಿ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಳ್ಳಲು ಸಹಾಯವಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಎಫ್. ಬೆಳವಟಿಗಿ ಹೇಳಿದರು. ಮಂಗಳವಾರ ಪಟ್ಟಣದ ತಾಲೂಕು ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ತಾಲೂಕಿನ ಖಾಸಗಿ ಹಾಗೂ ಸಹಕಾರಿ ಸಂಘಗಳ ರಸಗೊಬ್ಬರ ಮಾರಾಟಗಾರರ ಸಭೆಯಲ್ಲಿ ಮಾತನಾಡಿದರು. ರಸಗೊಬ್ಬರ ಮಾರಾಟಗಾರರು ಕಡ್ಡಾಯವಾಗಿ ರಸಗೊಬ್ಬರ ಪರವಾನಗಿಯನ್ನು ನವೀಕರಿಸಿಕೊಳ್ಳಬೇಕು. ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ರಸಗೊಬ್ಬರವನ್ನು ಮಾರಾಟ ಮಾಡಬಾರದು. ತಪ್ಪಿದಲ್ಲಿ ಸೂಕ್ತ ಕಾನೂನು ಕ್ರಮಗಳನ್ನು ಜರುಗಿಸಲಾಗುವುದು ಎಂದರು. ತಹಶೀಲ್ದಾರ್ ಶ್ರೀಸೈಲ ತಳವಾರ ಮಾತನಾಡಿ, ಸೂಕ್ತ ಪ್ರಮಾಣದಲ್ಲಿ ರಸಗೊಬ್ಬರವನ್ನು ದಾಸ್ತಾನು ಮಾಡಿಕೊಳ್ಳಲು ಸೂಚಿಸಿದರು. ಕೃಷಿ ಪರಿಕರ ಮಾರಾಟಗಾರ ಸಂಘದ ಅಧ್ಯಕ್ಷ ವೆಂಕಟೇಶ ಗುಡಿಸಾಗರ ಮಾತನಾಡಿದರು. ಆತ್ಮ ಯೋಜನೆಯ ತಾಲೂಕು ತಾಂತ್ರಿಕ ವ್ಯವಸ್ಥಾಪಕ ಪ್ರವೀಣ ಪಾಟೀಲ, ಶಿವಾಜಿ ಸಾತೆ, ಶರತ ಪಾಟೀಲ ಇತರರಿದ್ದರು.

ಆಡಿಯೋ ಸತ್ಯಕ್ಕೆ ದೂರ: ಡಿ.ಎಂ. ಕಾತರಕಿ



• **ಮುಂಡರಗಿ:** ಮಾಜಿ ಮಂತ್ರಿ ಜಮೀರ ಅಹ್ಮದಖಾನ ಅವರ ಬಗ್ಗೆ ಅಡಿಯೋ ಸತ್ಯಕ್ಕೆ ದೂರವಾಗಿದೆ. ಅವರ ತರಹ ಮಿಮಿಕ್ರಿಮಾಡಿ ಅವರ ವರ್ಚಸ್ಸಿಗೆ ಧಕ್ಕೆ ಬರುವಹಾಗೆ ಅಡಿಯೋ ಬಿಡುಗಡೆಮಾಡಿದ್ದು ಎಲ್ಲವೂ ಫೇಕಾಗಿದೆ. ಜನಪರ ಕಾಳಜಿವುಳ್ಳ ಜಮೀರ್ ಅಹ್ಮದಖಾನ ಅವರನ್ನು ಮುಸ್ಲಿಂ ಬಂಧವರ ಪ್ರತಿನಿಧಿಯಾಗಿ ಪರಿಗಣಿಸಿ ಅವರಿಗೆ ಉಪಮುಖ್ಯಮಂತ್ರಿ ಸ್ಥಾನವನ್ನು ನೀಡಬೇಕು ಮತ್ತು ಮುಖ್ಯ ಖಾತೆಯನ್ನು ನೀಡಬೇಕೆಂದು ಕೆಪಿಸಿಸಿ ಅಲ್ಪಸಂಖ್ಯಾತರ ಮಾಜಿ ಪ್ರಧಾನ ಕಾರ್ಯದರ್ಶಿ ಡಿ.ಎಂ. ಕಾತರಕಿ ಹೇಳಿದರು.

ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಸತೀಶ ಜಾರಕಿಹೊಳಿ ಅವರಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನವನ್ನು ನೀಡುವುದರ ಜೊತೆಗೆ ಉಪಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ. ಶಿವಕುಮಾರ ನೇತೃತ್ವದ ಸರ್ಕಾರದಲ್ಲಿ ನೀಡಬೇಕು. ಸಚಿವ ಡಾ.ಎಚ್.ಕೆ.ಪಾಟೀಲರಿಗೆ ಉಪಮುಖ್ಯಮಂತ್ರಿ ಸ್ಥಾನ ಮತ್ತು ಸಂಪುಟದಲ್ಲಿ ಉನ್ನತ ಮಟ್ಟದ ಖಾತೆಯನ್ನು ನೀಡಬೇಕು ಶಾಸಕ ಜಿ.ಎಸ್.ಪಾಟೀಲರಿಗೂ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಅಂಜುಮನ್ ಕಮಿಟಿಯ ಮಾಜಿ ಅಧ್ಯಕ್ಷ ನಬಿಸಾಬ ಕೆಲೂರ, ಯೋಜನಾ ಸಮಿತಿಯ ಸದಸ್ಯ ರಾಜಾಭಕ್ಷಿ ಬೆಟಗೇರಿ, ಯುವ ಮುಖಂಡ ರಾಘವೇಂದ್ರ ನರೇಗಲ್ಲ , ಎಂ.ಕೆ.ತಳಗಡೆ, ಆರ್.ಎ.ಮುಲ್ಲಾ, ಬಸುಸಾಬ ನಾಯ್ಕರ, ಶಿರಾಜ ಬೆಟಗೇರಿ, ಮೌಲಾಸಾಬ ಬಾಗವಾನ ಮುಂತಾದವರಿದ್ದರು.

ಬಸವರಾಜ ಶಿವಣ್ಣನವರಿಗೆ ಸಚಿವ ಸ್ಥಾನ ನೀಡಿ

• **ಲಕ್ಷ್ಮೇಶ್ವರ:** ಪತ್ರಿಕಾ ಕಾರ್ಯಾಲಯದಲ್ಲಿ ಹಾಲಮತ ಸಮಾಜದಿಂದ ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕ ಬಸವರಾಜ ಶಿವಣ್ಣನವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಪತ್ರಿಕಾಗೋಷ್ಠಿ ನಡೆಯಿತು.

ಈ ವೇಳೆ ಮಾತನಾಡಿದ ಹಾಲಮತ ಸಮಾಜದ ಮುಖಂಡ ಸೋಮಣ್ಣ ಬೆಟಗೇರಿ, ಉತ್ತರಕರ್ನಾಟಕ ಭಾಗದಲ್ಲಿ ಜನಸಾಮಾನ್ಯರನ್ನು ಅಪ್ಪಿಕೊಳ್ಳುವ ಸಚಿವರು ಬೇಕಾಗಿದ್ದಾರೆ. ಶಾಸಕ ಬಸವರಾಜ ಶಿವಣ್ಣನವರ ಶಾಸಕರಾಗಿ ಅಪಾರ ಜನಪ್ರಿಯತೆ ಇರುವ ಅವರು ಪಕ್ಷಕ್ಕೆ, ಸರ್ಕಾರಕ್ಕೆ ಅವರ ಅನುಭವ ಬಹಳ ಮಹತ್ವದ್ದಾಗಿದೆ. ಈ ಭಾಗದಲ್ಲಿ ಅವರಿಗೆ ಸಚಿವ ಸ್ಥಾನ ಕೊಟ್ಟಿದ್ದೆ ಆದರೆ ಅಹಿಂದ ವರ್ಗ ಮತ್ತಷ್ಟು ಗಟ್ಟಿಯಾಗುತ್ತದೆ, ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯಬೆಳವಣಿಗೆಆಗುತ್ತದೆ. ಅವರನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಅಂದರೆ ಈ ಭಾಗದಲ್ಲಿ ಅಹಿಂದ ಸಂಘಟನೆ ಕಟ್ಟಲಿಕ್ಕೆ ಬಹಳ ಕಷ್ಟವಾಗುತ್ತದೆ. ಸರಳ ಸಜ್ಜನಿಕೆಯ ಉತ್ತಮ ಸೇವೆ ಮಾಡುವ ಅವರಿಗೆ ಡಿ.ಕೆ. ಶಿವಕುಮಾರ ನೇತೃತ್ವದ ಸರ್ಕಾರದಲ್ಲಿ ಸಚಿವಸ್ಥಾನ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ರಾಹುಲ್ ಹೊಳಲಾಪುರ ,ಮುದಕಣ್ಣ ಗದ್ದಿ, ಛಾಯಪ್ಪ ಬಸಾಪುರ, ಮುತ್ತಣ್ಣ ಟೋಕಾಳಿ, ಮಂಜುನಾಥ ಶೇರಸೂರಿ, ಸುರೇಶ ಹೊಳಲಾಪುರ, ಮಲ್ಲೇಶಪ್ಪ ಬಸಾಪುರ, ಪುಟ್ಟಪ್ಪ ಬಳಗಾನೂರ ಇದ್ದರು.



ತಿಪ್ಪಣ್ಣಪ್ಪಗೆ ವಿಪ ಸದಸ್ಯ ಸ್ಥಾನ ನೀಡಿ



• **ಗದಗ:** ಎಚ್.ಕೆ.ಪಾಟೀಲರಿಗೆ ಡಿಸಿಎಂ, ಮಂಕಾಳ ವೈದ್ಯರಿಗೆ ಸಚಿವ ಸ್ಥಾನ ಹಾಗೂ ತಿಪ್ಪಣ್ಣಪ್ಪ ಕಮಕನೂರರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಬೇಕು ಎಂದು ಗಂಗಾಮತಸ್ಥ ಸಮಾಜದ ಹಿರಿಯರು ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರ ಟ್ರಸ್ಟ್‌ನ ಅಧ್ಯಕ್ಷ ಜೆ.ಬಿ. ಗಾರವಾಡ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಂಗಾಮತಸ್ಥ ಸಮಾಜದ ಹಿರಿಯರು ಹಾಗೂ ವಿಧಾನ ಪರಿಷತ್ ಸದಸ್ಯರಾಗಿದ್ದ ತಿಪ್ಪಣ್ಣಪ್ಪ ಕಮಕನೂರ ಕಳೆದ ಎರಡು ಅವಧಿಯಲ್ಲಿ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಿದ್ದರೂ ಕೇವಲ ಒಂದು ಹಾಗೂ ಎರಡು ವರ್ಷಗಳ ಅವಧಿ ಮಾತ್ರ ಪೂರ್ಣಗೊಳಿಸಿದ್ದಾರೆ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಪೂರ್ಣಾವಧಿ ವಿಧಾನ ಪರಿಷತ್‌ಗೆ ಅವಕಾಶ ಕಲ್ಪಿಸಬೇಕು ಎಂದರು.

ಸಮಾಜದ ಮುಖಂಡರಾದ ಸಿ.ಬಿ. ಬಾರಕೇರ, ಶ್ರೀಧರ ಸುಲ್ತಾನಪೂರ, ಗುರಣ್ಣ ಆದಪ್ಪನವರ, ಬಸವರಾಜ ಜಾಲಗಾರ, ಚಂದ್ರಶೇಖರ ಪೂಜಾರ, ಮಹಾಂತೇಶ ಬಾರಕೇರ, ಪರಶುರಾಮ ಬಾರಕೇರ, ಶರಣಪ್ಪ ಬಾರಕೇರ ಇದ್ದರು.

ಜಿಎಸ್‌ಪಾಗೆ ಸಚಿವ ಸ್ಥಾನ ನೀಡಲು ಆಗ್ರಹ

• **ನರೇಗಲ್ಲ:** ಅಭಿವೃದ್ಧಿ ಹರಿಕಾರ ಎಂದು ಹೆಸರು ಪಡೆದಿರುವ ಶಾಸಕ ಜಿ.ಎಸ್. ಪಾಟೀಲ ಅವರು ಕಾಂಗ್ರೆಸ್ ಪಕ್ಷಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಹಿರಿತನ ಆಧರಿಸಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಗಜೇಂದ್ರಗಡ ತಾಲೂಕು ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಮೈಲಾರಪ್ಪ ವೀ. ಚಳ್ಳಮರದ ಹೈಕಮಾಂಡ್‌ಗೆ ಒತ್ತಾಯಿಸಿದರು.

ಪಟ್ಟಣದಲ್ಲಿ ನರೇಗಲ್ಲ ಬ್ಲಾಕ್ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಅವರು ಮಾತನಾಡಿ, ಸತತ 45 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ನಿರತರಾಗಿ ಪಕ್ಷ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಇಂದಿರಾ ಗಾಂಧಿ ಅವರೊಂದಿಗೆ ಹೆಜ್ಜೆ ಹಾಕಿದ ಹಾಗೂ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ರಾಜಕೀಯ ಮಾಡಿದ ಜಿ.ಎಸ್.ಪಾಟೀಲರಿಗೆ ಸ್ಥಾನಮಾನ ನೀಡಬೇಕು ಇಲ್ಲವಾದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನಿಡಿದರು.

ನರೇಗಲ್ಲ ಬ್ಲಾಕ್ ಕಮೀಟಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಶರಣಪ್ಪ ಬೆಟಗೇರಿ ಮಾತನಾಡಿ, ಜಿ.ಎಸ್.ಪಾಟೀಲ ಅವರು ಜಲ ಅಭಿವೃದ್ಧಿ, ರೈತರ ಭೂಮಿ ಹಿತ ಕಾಪಾಡಲು ಕ್ಷೇತ್ರಾದ್ಯಂತ ಸಾಕಷ್ಟು ಕೆರೆಗಳನ್ನು ನಿರ್ಮಿಸಿ ಸಾವಿರ ಕೆರೆಗಳ ಸರದಾರ ಎಂದು ಹೆಸರು ಮಾಡಿದ್ದಾರೆ. ಈಗಲಾದರು ಅವರಿಗೆ ಸಚಿವಸ್ಥಾನ ನೀಡಬೇಕು ಎಂದರು. ಕಾಂಗ್ರೆಸ್ ಪಕ್ಷದ ಮುಖಂಡರಾದ ನಿಂಗನಗೌಡ ಲಕ್ಕನಗೌಡ್ರ, ಅಲ್ಲಾಬಕ್ಷಿ ನದಾಫ್, ಸಂತೋಷ ಹನಮಸಾಗರ, ಶೇಖಪ್ಪ ಜುಟ್ಲ, ಗುಡದಪ್ಪ ಗೋಡಿ, ಮುತ್ತಪ್ಪ ನೂಲ್ಕಿ ಇದ್ದರು.



ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ

ಇದ್ದ ಸ್ಥಳದಲ್ಲೇ ಶೀಘ್ರ ಮೂರಿನಕಟ್ಟೆ ನಿರ್ಮಾಣ

ಭಟ್ಕಳ: ಮೂರಿನಕಟ್ಟೆಯನ್ನು ಈಗಿರುವ ಪ್ರದೇಶದಲ್ಲೇ ಪುನರ್ ನಿರ್ಮಾಣ ಮಾಡಲು ಒಟ್ಟಾಭಿಪ್ರಾಯ ಸಂಗ್ರಹಿಸಲಾಗಿದೆ. ಈ ಬಗ್ಗೆ ಜಿಲ್ಲಾಡಳಿತ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳ ಜತೆ ಚರ್ಚೆ ನಡೆಸಲಾಗಿದ್ದು, ಶೀಘ್ರದಲ್ಲಿ ಹಿಂದೂಗಳ ಧಾರ್ಮಿಕ ಆಚರಣೆಗೆ ಯಾವುದೇ ಧಕ್ಕೆ ಬಾರದಂತೆ ಹಿಂದೆ ಕಟ್ಟೆ ಇದ್ದ ಸ್ಥಳದಲ್ಲೇ ಹೆದ್ದಾರಿ ಮಧ್ಯದಲ್ಲಿ ಮೂರಿನಕಟ್ಟೆ ನಿರ್ಮಿಸಲಾಗುವುದು ಎಂದು ಉತ್ತರ ಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಪ್ರವಾಸಿ ಮಂದಿರದಲ್ಲಿ ಮಂಗಳವಾರ ಬೆಳಗ್ಗೆ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೂರಿನಕಟ್ಟೆಯನ್ನು ಈಗಿದ್ದ ಸ್ಥಳದಲ್ಲೇ ಸುಮಾರು 150 ಚದರ ಅಡಿ ಪ್ರದೇಶದಲ್ಲಿ ನಿರ್ಮಿಸಲಾಗುತ್ತದೆ. ಜೊತೆಗೆ ಸುತ್ತಲ ಅತಿಕ್ರಮಣ ಪ್ರದೇಶವನ್ನೂ ರಕ್ಷಿಸಲಾಗುವುದು. ಹೆದ್ದಾರಿ ಪ್ರಾಧಿಕಾರದ ವತಿಯಿಂದ ಪುನರ್ ನಿರ್ಮಾಣದ ಕಟ್ಟೆ ಬಗ್ಗೆ ನೀಲ ನಕ್ಷೆಯನ್ನು ಸಹ ತಯಾರಿಸಲಾಗಿದ್ದು, ಜಾಗ ಗುರುತಿಸಿಕೊಂಡು ಆದಷ್ಟು ಶೀಘ್ರದಲ್ಲಿ ಕಟ್ಟೆ ನಿರ್ಮಾಣ ಮಾಡಲಿದ್ದೇವೆ ಎಂದರು.

ಮೂರಿನಕಟ್ಟೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಲೈಟಿಂಗ್, ಗ್ರಿಲ್ ಹಾಕಲಾಗುವುದು, ಅದರ ಪಕ್ಕದಲ್ಲಿ ಬಸ್ ಬೇ ನಿರ್ಮಾಣ ಮಾಡಲು ಕೂಡಾ ಕ್ರಮಕೈಗೊಳ್ಳಲಾಗುವುದು ಎಂದ ಅವರು, ಯಾವುದೇ ರೀತಿಯಲ್ಲಿ ವಾಹನ ಓಡಾಟಕ್ಕೆ ತೊಂದರೆಯಾಗದಂತೆ ನೀಲ ನಕ್ಷೆ ತಯಾರಿಸಲಾಗಿದೆ ಎಂದರು.

ಸುದ್ದಿಗಾರರು ಕೇಳಿದ ಪ್ರಶ್ನೆಗುತ್ತರಿಸಿದ ಅವರು ಯಾವುದೇ ಕಾರಣಕ್ಕೂ ರಾಷ್ಟ್ರೀಯ ಹೆದ್ದಾರಿ ವಶಪಡಿಸಿಕೊಂಡ ಜಾಗಾವನ್ನು ಅತಿಕ್ರಮಣ ಮಾಡಲು ಬಿಡುವುದಿಲ್ಲ, ಕಾನೂನಾತ್ಮಕವಾಗಿ ಎಲ್ಲಾ ಕೆಲಸಗಳನ್ನು ಕೂಡಾ ತ್ವರಿತಗತಿಯಲ್ಲಿ ಮಾಡಿ ಮುಗಿಸುತ್ತೇವೆ ಎಂದರು.

ಕಟ್ಟೆ ಧ್ವಂಸಕ್ಕೆ ತೀವ್ರ ಖಂಡನೆ: ಮೂರಿನಕಟ್ಟೆ ಯನ್ನು ಧ್ವಂಸ ಮಾಡಿರುವುದು ತೀರಾ ಖಂಡನೀಯ.



ನೀಲನಕ್ಷೆ ವೀಕ್ಷಿಸಿದ ಕಾಗೇರಿ



ಭಟ್ಕಳ: ಪಟ್ಟಣದ ಮುರಿನಕಟ್ಟೆಗೆ ಮಂಗಳವಾರ ಬೆಳಗ್ಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಭೇಟಿ ನೀಡಿ ಕಟ್ಟೆ ಪುನರ್ ನಿರ್ಮಾಣದ ನೀಲನಕ್ಷೆಯನ್ನು ವೀಕ್ಷಿಸಿದರು. ಹೆದ್ದಾರಿ ಪ್ರಾಧಿಕಾರದ ಅಭಿಯಂತರರು ಮುರಿನಕಟ್ಟೆ ಪುನರ್ ನಿರ್ಮಾಣದ ನೀಲನಕ್ಷೆಯನ್ನು ಸಂಸದರಿಗೆ ತೋರಿಸಿ ಕಟ್ಟೆ ಪುನರ್ ನಿರ್ಮಾಣ ನಡೆಯುವ ಸ್ಥಳದ ಬಗ್ಗೆ ಸಂಸದರಿಗೆ ಸಂಪೂರ್ಣ ಮಾಹಿತಿ ನೀಡಿದರು. ಸಂಸದರು ತ್ವರಿತವಾಗಿ ಕೆಲಸ ಆರಂಭಿಸಲು ಸೂಚಿಸಿದರು. ಸಂಸದರು ಮುರಿನಕಟ್ಟೆ ಪುನರ್ ನಿರ್ಮಾಣದ ಬಗ್ಗೆ ಪ್ರವಾಸಿ ಮಂದಿರದಲ್ಲೂ ಸಹ ಎಸಿ, ಡಿವೈಎಸ್ಪಿ ಮತ್ತಿತರ ಅಧಿಕಾರಿಗಳ ಸಭೆ ನಡೆಸಿ ಚರ್ಚೆ ನಡೆಸಿದರು.

ಮೂರಿನಕಟ್ಟೆಯ ವಿಚಾರ ಹಿಂದೂಗಳಿಗೆ, ಜಿಲ್ಲಾಡಳಿತಕ್ಕೆ ಮತ್ತು ಎನ್‌ಹೆಚ್ಐಎ ಸಂಬಂಧಿಸಿದ್ದು. ಆದರೆ, ಭಟ್ಕಳದ ತಂಝೀಂ ಸಂಸ್ಥೆ, ಮುಸ್ಲಿಮರು ಇದರಲ್ಲಿ ತಲೆ ಹಾಕಿರುವುದು ಸರಿಯಲ್ಲ. ಭಟ್ಕಳದಲ್ಲಿ ಶಾಂತಿ ಕದಡಲು ಕಾಲು ಕೆರೆದು ಜಗಳ ಮಾಡಿದಂತಾಗಿದೆ. ರಾಜ್ಯದಲ್ಲಿ ಬಿಗು ಆಡಳಿತ ವ್ಯವಸ್ಥೆ ಇದ್ದಿದ್ದರೆ ಇಂತಹ ಕೃತ್ಯ ನಡೆಯುತ್ತಿರಲಿಲ್ಲ ಎಂದರು.

ಕಾಂಗ್ರೆಸ್ಸಿನಿಂದ ಓಲೈಕೆ ರಾಜಕಾರಣ: ಕಾಂಗ್ರೆಸ್ಸಿನ ಓಲೈಕೆ ರಾಜಕಾರಣದಿಂದಲೇ ರಾಜ್ಯದಲ್ಲಿ ಕಾನೂನು ಕೈಗೆ ತೆಗದುಕೊಳ್ಳುವ ಕೃತ್ಯ ನಡೆಯುತ್ತಿದೆ. ಅಪರಾಧಿ ಕೃತ್ಯಕ್ಕೆ ಕಾಂಗ್ರೆಸ್ ಸರ್ಕಾರದ ಬೆಂಬಲ ಇದೆ. ಹಿಂದೂ ಸಂಘಟನೆಗಳು ಜೂನ್ 5ರಂದು ನಡೆಸುವ ಪ್ರತಿಭಟನೆಗೆ ನಮ್ಮ ಬೆಂಬಲ ಇದೆ ಎಂದರು.

ಮಾಜಿ ಶಾಸಕ ಸುನೀಲ ನಾಯ್ಕ, ಪಶ್ಚಿಮ ಘಟ್ಟಗಳ ಕಾರ್ಯಪಡೆಯ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಜಿಲ್ಲಾ ಬಿಜೆಪಿ ಕಾರ್ಯದರ್ಶಿಗಳಾದ ಸುಬ್ರಾಯ ದೇವಡಿಗ, ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತರಾಮ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಶ್ರೀಕಾಂತ ನಾಯ್ಕ, ಪ್ರಮುಖರಾದ ಕೇದಾರ ಕೊಲ್ಲೆ, ಭಾಸ್ಕರ ದೈಮನೆ, ರಾಜೇಶ ನಾಯ್ಕ, ಶ್ರೀನಿವಾಸ ನಾಯ್ಕ, ಪ್ರಮೋದ ಜೋಷಿ ಮುಂತಾದವರಿದ್ದರು.

ಶೋಷಿತ ಸಮುದಾಯ ಅಭ್ಯುದಯಕ್ಕೆ

1.96ಲಕ್ಷ ಕೋಟಿ ರೂ.ಮೀಸಲು: ಅಠವಲೆ

ಕಲಬುರಗಿ: ಪ್ರಸಕ್ತ 2026-27ನೇ ಸಾಲಿಗೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಸಮುದಾಯಗಳ ಕಲ್ಯಾಣಕ್ಕೆ ಸುಮಾರು 1,96,400.37 ಕೋಟಿ ರೂ. ೯ಸಲಿಟ್ಟಿದೆ ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಅಠವಳೆ ಹೇಳಿದರು.

ಮಂಗಳವಾರ ಇಲ್ಲಿನ ಐವಾನ್-ಎ-ಶಾಹಿ ಅತಿಥಿಗೃಹದಲ್ಲಿ ಕರೆಯಲಾದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಆಯವ್ಯಯದಲ್ಲಿ 35,195.27 ಕೋಟಿ ರೂ. ಹೆಚ್ಚಳವಾಗಿದೆ. ಇದು ತಳ ಸಮುದಾಯದ ಅಭಿವೃದ್ಧಿಗೆ ನಮ್ಮ ಸರ್ಕಾರಕ್ಕಿರುವ ಬದ್ಧತೆ ತೋರಿಸುತ್ತದೆ ಎಂದರು.

ದಲಿತರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಮುಖಾಂತರ ಅನೇಕ ಯೋಜನೆಗಳನ್ನು ರೂಪಿಸಿದೆ. ಇದಲ್ಲದೆ ಪ್ರಧಾನಮಂತ್ರಿ ಆವಾಸ್ ಯೋಜನೆ, ಮುದ್ರಾ ಯೋಜನೆ, ಜನಧನ ಯೋಜನೆ, ಸ್ವಚ್ಛ ಭಾರತ ಮಿಷನ್ ಹೀಗೆ ಅನೇಕ ಸಮಾಜ ಸುಧಾರಣೆ ಯೋಜನೆ ಹಾಕಿಕೊಂಡಿದೆ ಎಂದ ಅವರು, ತಮ್ಮ ಸಚಿವಾಲಯವು ಎಸ್. ಸೇರಿದಂತೆ ಓ.ಬಿ.ಸಿ, ವಿಶೇಷಚೇತನರು, ಹಿರಿಯ ನಾಗರಿಕರು, ಲಿಂಗತ್ವ ಅಲ್ಪಸಂಖ್ಯಾತರ ಕಲ್ಯಾಣಕ್ಕೂ ಶ್ರಮಿಸುತ್ತಿದೆ ಎಂದರು.

ಆದರ್ಶ ಗ್ರಾಮ ಯೋಜನೆಯಡಿ ಕಳೆದ 2021-22ರಿಂದ 2025-26ರ ವರೆಗೆ 85 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಹೈಮಾಸ್ಟ್ ದೀಪ ಅಳವಡಿಕೆದಂತಹ 205 ಕಾಮಗಾರಿಗಳ ಸಮರ್ಪಕ ಅನುಷ್ಠಾನ ಮಾಡಿ 65 ಗ್ರಾಮಗಳನ್ನು ಆದರ್ಶ ಗ್ರಾಮವೆಂದು ಘೋಷಿಸಲಾಗಿದೆ.

ಇನ್ನು 2025-26ರಲ್ಲಿ 20 ಗ್ರಾಮಗಳ ಆಯ್ಕೆ ಮಾಡಿದ್ದು, ಡಿ.ಪಿ.ಆರ್ ಕಾರ್ಯ ಸಿದ್ಧತೆಯಲ್ಲಿದೆ. 2021-22ರಿಂದ 2025-26 ಅವಧಿಯಲ್ಲಿ ಒಟ್ಟಾರೆ 7.68 ಕೋಟಿ ರೂ. ಕಲಬುರಗಿ ಜಿಲ್ಲೆಗೆ ಹಂಚಿಕೆ ಮಾಡಿದ್ದು, ಅಷ್ಟು ಹಣ ಖರ್ಚು ಮಾಡಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಆರ್.ಪಿ.ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷ ವೆಂಕಟಸ್ವಾಮಿ, ಉಪಾಧ್ಯಕ್ಷ ಕಾಕಾಸಾಹೇಬ್ ಕಂಬಾಳಕರ್, ಮಹಾರಾಷ್ಟ್ರದ ಅಧ್ಯಕ್ಷ ರಾಜಾ ಸರ್ವದೆ, ಮುಂಬೈ ಪ್ರದೇಶದ ಜನರಲ್ ಸೆಕ್ರೆಟರಿ ವಿವೇಕ ಪವಾರ, ದಕ್ಷಿಣ ಭಾರತದ ಜನರಲ್ ಸೆಕ್ರೆಟರಿ ಎ.ಬಿ.ಹೊಸಮನಿ, ಮುಖಂಡರಾದ ಪ್ರಕಾಶ ಮೂಲಭಾರತಿ, ನಾಗೇಶ ತಳಕೇರಿ ಇದ್ದರು.



ಮೋದಿಯಿಂದ ಸರ್ವರ ಹಿತ

ಸಬಕಾ ಸಾತ್ ಸಬಕಾ ವಿಕಾಸ್ ಘೋಷವಾಕ್ಯದೊಂದಿಗೆ ಸರ್ವ ಜನರ ಹಿತ ಕಾಪಾಡುವ ಕೆಲಸ ನಮ್ಮ ಸರ್ಕಾರ ಮಾಡುತ್ತಿದೆ. ಸಮಾಜ ಸುಧಾರಕ ಕಾಕಾ ಕಾಳೆಸ್ಕರ್ ಅವರ ನೇತೃತ್ವದ ಹಿಂದುಳಿದ ಆಯೋಗವು ಓ.ಬಿ.ಸಿ.ವರ್ಗಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕೆಂದು ವರದಿ ನೀಡಿದ್ದರು ಅದು ಅನುಷ್ಠಾನಕ್ಕೆ ಬಂದಿರಲಿಲ್ಲ. ಮಂಡಲ್ ಆಯೋಗದ ಪರಿಣಾಮ ಶೇ.27 ಮೀಸಲಾತಿ ಈ ಸಮುದಾಯಕ್ಕೆ ದೊರಕಿತ್ತು. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಕಲ್ಪಿಸಿದ್ದರಿಂದ ಎಸ್.ಸಿ-ಎಸ್.ಟಿ. ಸಮುದಾಯಕ್ಕೆ ಮೀಸಲು ಲಭ್ಯವಾಗುತ್ತಿದೆ. ಸರ್ವರ ಹಿತ ಬಯಸುವ ನಮ್ಮ ಸರ್ಕಾರ ಹಿಂದುಳಿದ ಸಮುಯದಾಯಕ್ಕೆ ನ್ಯಾಯ ಕಲ್ಪಿಸಲು ದೇಶದಾದ್ಯಂತ ಹಿಂದುಳಿದವರ ಜಾತಿ ಜನಗಣತಿ ಮಾಡಲು ನಿರ್ಧರಿಸಿದೆ ಎಂದು ಸಚಿವ ರಾಮದಾಸ್ ಅಠವಳೆ ಹೇಳಿದರು.

ಆಳಂದ ಗಲಭೆ ಪ್ರಕರಣ ವಾಪಸ್ | ಸರ್ಕಾರದ ಕ್ರಮ ಖಂಡಿಸಿ ರಾಜ್ಯಪಾಲರಿಗೆ ಮನವಿ

ಕಾಂಗ್ರೆಸ್‌ನಿಂದ ಓಲೈಕೆ ರಾಜಕಾರಣ: ಛಲವಾದಿ

ಬೆಂಗಳೂರು/ಕಲಬುರಗಿ: ಜಿಲ್ಲೆಯ ಆಳಂದದ ವಿವಾದಿತ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಪವಿತ್ರ ರಾಘವ ಚೈತನ್ಯ ಶಿವಲಿಂಗಕ್ಕೆ ಅಪಮಾನ ಎಸಗಿ, ಕೋಮು ಉದ್ವಿಗ್ನತೆ ಸೃಷ್ಟಿಸಿದ, ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ ಉಂಟುಮಾಡಿ ಹಾಗೂ ಪೊಲೀಸ್ ಅಧಿಕಾರಿಗಳ ಮೇಲೆಯೇ ಹಲ್ಲೆ ನಡೆಸಿದ ಗಂಭೀರ ಪ್ರಕರಣಗಳ ಹಲವು ಕೇಸ್‌ಗಳನ್ನು ಹಿಂಪಡೆಯಲು ರಾಜ್ಯ ಸರ್ಕಾರ ಮುಂದಾಗಿರುವುದು ಅತ್ಯಂತ ಆಘಾತಕಾರಿ ಮತ್ತು ಖಂಡನೀಯ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ಸಮಾಜ ವಿರೋಧಿ ಹಾಗೂ ಕ್ರಿಮಿನಲ್ ತತ್ವಗಳ ಬೆನ್ನಿಗೆ ನಿಲ್ಲುವ ಮೂಲಕ ಕಾಂಗ್ರೆಸ್ ಸರ್ಕಾರ ತಾನು ಜನವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಹಿನ್ನೆಲೆಯಲ್ಲಿ ಸಂವಿಧಾನವಿರೋಧಿ ಹಾಗೂ ಜನವಿರೋಧಿಯಾದ ಈ ಆದೇಶವನ್ನು ತಕ್ಷಣವೇ ರದ್ದುಪಡಿಸುವಂತೆ ಗೌರವಾನ್ವಿತ ರಾಜ್ಯಪಾಲರಿಗೆ ಕಲಬುರಗಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘಟನೆಯ ವಿಚಾರಣೆ ಕೋರ್ಟ್‌ನಲ್ಲಿ ಬಾಕಿ ಇರುವಾಗಲೇ ಸರ್ಕಾರ ದಾಳಿಕೋರರ ಮೇಲಿನ ಪ್ರಕರಣವನ್ನು ವಾಪಸ್ ಪಡೆದಿದೆ. ಇದನ್ನು ವಾಪಸ್ ಪಡೆಯಬಾರದು ಎಂದು ಆಗ್ರಹಿಸಿ ಮಾನ್ಯ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ. ರಾಘವ ಚೈತನ್ಯ ಮಂದಿರದಲ್ಲಿನ ಶಿವಲಿಂಗಕ್ಕೆ ಆರು ನೂರು ವರ್ಷಗಳ ಇತಿಹಾಸವಿದೆ. ಇಲ್ಲಿ ಪದೇ ಪದೇ ಗಲಭೆಗಳು ಆಗಿವೆ. ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಿದರು.



ಪೂಜೆ ಮಾಡಲು ಸೇರಿದ್ದ ಹಿಂದೂಗಳ ಮೇಲೆ ಸಾವಿರಾರು ಸಂಖ್ಯೆಯಲ್ಲಿ ಜನರು ತಲ್ವಾರ್, ಮಚ್ಚಿನಿಂದ ದಾಳಿ ಮಾಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರಿಗೂ ರಕ್ತ ಬರುವಂತೆ ಹಲ್ಲೆ ಮಾಡಿದ್ದಾರೆ. ಪೊಲೀಸ್ ವಾಹನಗಳನ್ನು ಜಖಂ ಮಾಡಿ ಜಿಲ್ಲಾಧಿಕಾರಿ ಮೇಲೂ ದಾಳಿ ನಡೆದಿದೆ. ಇದೊಂದು ದೊಡ್ಡ ಘಟನೆ. ಆದರೆ ರಾಜ್ಯ ಸರ್ಕಾರ ಇಷ್ಟೆಲ್ಲಾ ಆದರೂ ಏನೂ ಆಗಿಲ್ಲವೆಂಬಂತೆ ಪ್ರಕರಣವನ್ನು ಹಿಂದಕ್ಕೆ ಪಡೆದಿದೆ ಎಂದು ದೂರಿದರು. ದಾಳಿಕೋರರಿಗೆ ಶಿಕ್ಷೆ ಕೊಡಿಸುವ ಬದಲು ಸರ್ಕಾರ ಪ್ರೋತ್ಸಾಹ ನೀಡಿದೆ. ಇದು ಜನರಿಗೆ ಮತ್ತು ಹಿಂದೂತ್ವಕ್ಕೆ ಮಾಡಿದ ಅವಮಾನ. ಹಿಂದೂ, ಮುಸ್ಲಿಂ ಎನ್ನುವುದಕ್ಕಿಂತ ಜನರು ನೆಮ್ಮದಿಯಿಂದ ಬದುಕಬೇಕು. ಎಲ್ಲರಿಗೂ ನ್ಯಾಯಕೊಡುವ ಬದಲು ವಿಧಾನಸಭೆ ಸ್ಪೀಕರ್ ಯು.ಟಿ ಖಾದರ್ ಮೂಲಕ ಪತ್ರ ಕೊಡಿಸಿ ಪ್ರಕರಣ ವಾಪಸ್ ಪಡೆದಿದ್ದಾರೆ. ಇದು ಖಂಡನೀಯ ಕ್ರಮ ಎಂದರು.

> **ಸಾಂವಿಧಾನಿಕ ಹುದ್ದೆಯಲ್ಲಿರುವ ಡಿಸಿ, ಎಸ್ಪಿ ಹಾಗೂ ಕೇಂದ್ರ ಸಚಿವರ ಮೇಲೆ ಹಲ್ಲೆ ನಡೆಸಿದ ಗಲಭೆಕೋರರ ಮೇಲಿನ ಕೇಸನ್ನು ಕಾಂಗ್ರೆಸ್ ಸರ್ಕಾರ ವಾಪಸ್ ಪಡೆಯುತ್ತದೆ ಎಂದರೆ, ಯಾವ ಮಟ್ಟಕ್ಕೆ ಓಲೈಕೆ ರಾಜಕಾರಣ ಮಾಡುತ್ತಿದೆ ಎಂಬುದು ತಿಳಿಯುತ್ತದೆ. ಕಲಬುರಗಿಯಲ್ಲಿ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರ ನೇತೃತ್ವದಲ್ಲಿ ಸಾಂಕೇತಿಕವಾಗಿ ಹೋರಾಟ ನಡೆದಿದ್ದು, ನಮ್ಮ ಹೋರಾಟ ಇಲ್ಲಿಗೆ ನಿಂತಿಲ್ಲ.**
>
> ■ **ಅಶೋಕ್ ಬಗಲಿ, ಬಿಜೆಪಿ ಜಿಲ್ಲಾಧ್ಯಕ್ಷ, ಕಲಬುರಗಿ ಗ್ರಾಮಾಂತರ**

ನಿಯೋಗದಲ್ಲಿ ಎಂಎಲ್ಸಿ ಸುನಿಲ್ ವಲ್ಯಾಪುರೆ, ಶಶಿಲ್ ಜಿ.ನಮೋಶಿ, ಬಿ.ಜಿ.ಪಾಟೀಲ್, ಶಾಸಕ ಅವಿನಾಶ್ ಜಾಧವ್, ಮಾಜಿ ಸಂಸದ ಡಾ. ಉಮೇಶ್ ಜಾಧವ್, ಅಮರನಾಥ್ ಪಾಟೀಲ್, ಶರಣಪ್ಪ ತಳವಾರ, ಶಿವರಾಜ ಪಾಟೀಲ್ ರದ್ದೇವಾಡಗಿ, ಸಂಜಯ್ ಮಿಸ್ಕಿನ್, ನಿತಿನ್ ಗುತ್ತೇದಾರ್, ಹರ್ಷಾ ಗುತ್ತೇದಾರ್, ಬಸವರಾಜ ಬೆಣ್ಣೂರ, ಲಿಂಗರಾಜ ಬಿರಾದಾರ, ಆನಂದ ಪಾಟೀಲ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಹಿಜಾಬ್ ಬೆನ್ನಲ್ಲೆ ವಿದ್ಯಾರ್ಥಿಗಳಿಗೆ ಕೇಸರಿ ಶಾಲು ವಿತರಣೆ

ಶ್ರೀರಾಮ ಸೇನೆ ಕಾರ್ಯಕರ್ತರು ಪೊಲೀಸ್ ವಶಕ್ಕೆ

ಬೆಳಗಾವಿ: ಶಾಲಾ-ಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ, ಹಿಂದೂಪರ ಕಾರ್ಯಕರ್ತರು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಕೇಸರಿ ಶಾಲು ನೀಡುವುದಕ್ಕೆ ಮುಂದಾಗಿದ್ದರು.

ಮಂಗಳವಾರ ಶ್ರೀರಾಮ ಸೇನೆ ನೇತೃತ್ವದಲ್ಲಿ ಚನ್ನಮ್ಮ ವೃತ್ತದಲ್ಲಿ ಕಾಂಗ್ರೆಸ್ ಸರ್ಕಾರ ಹಾಗೂ ಹಿಜಾಬ್ ವಿರುದ್ಧ ಆಕ್ರೋಶ ಹೊರಹಾಕಿ ಪ್ರತಿಭಟನೆ ನಡೆಸಿದರು.

ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರವನ್ನ ಕಡ್ಡಾಯ ಮಾಡಬೇಕು. ಈ ಕೂಡಲೇ ಹಿಜಾಬ್ ನಿಷೇಧ ಮಾಡಬೇಕು. ಮಕ್ಕಳ ಮನಸ್ಸು ಕೆಡಿಸುವ, ಮುಸ್ಲಿಂ ಸಮಾಜದ ಓಲೈಕೆಗೆ ಸರ್ಕಾರ ಮುಂದಾಗಿದೆ ಎಂದು ಅಸಮಾಧಾನ ಹೊರಹಾಕಿ ಘೋಷಣೆ ಕೂಗಿದರು.

ಹಿಜಾಬ್ ನಿಷೇಧಿಸದಿದ್ದರೆ ಪ್ರತಿ ಕಾಲೇಜಿಗೂ ತೆರಳಿ ಭಗವಾ ಧ್ವಜ ಹಾಗೂ ಕೇಸರಿ ಶಾಲು ವಿತರಿಸುತ್ತೇವೆ. ಚನ್ನಮ್ಮ ವೃತ್ತದಿಂದ ಕಾಲೇಜುಗಳಿಗೆ ಕೇಸರಿ ಧ್ವಜ ಹಂಚಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಶ್ರೀರಾಮ ಸೇನೆ ಕಾರ್ಯರ್ತರು ಎಚ್ಚರಿಕೆ ನೀಡಿದರು.

ಇದೇ ವೇಳೆ ಜಿಲ್ಲಾ ಶ್ರೀ ರಾಮಸೇನೆ ಅಧ್ಯಕ್ಷ ರವಿಕುಮಾರ ಕೋಕಿತಕರ್ ಮಾತನಾಡಿ, ಮತ ಬ್ಯಾಂಕ್‌ಗಾಗಿ ಕಾಂಗ್ರೆಸ್ ಸರ್ಕಾರ ಹಿಜಾಬ್ ಹಾಕಬಹುದು ಎಂದು ಹೇಳುವ ಮೂಲಕ ಮತಭೇದ ಮಾಡಲು ಹೊರಟಿದೆ. ಪ್ರತಿ ಶಾಲೆಗಳ ವಿದ್ಯಾರ್ಥಿ ಸಮವಸ್ತ್ರ ಕಡ್ಡಾಯ ಇರುತ್ತದೆ. ಆದರೆ, ಸರ್ಕಾರ ಒಂದು ಸಮುದಾಯ ಎತ್ತಿ ಕಟ್ಟುವ ಹಾಗೂ ಮುಸ್ಲಿಂರನ್ನು ಎತ್ತಿ ಹಿಡಿದು ಹಿಂದುಗಳನ್ನು ಕೆಳಗೆ ತುಳಿಯುವ ಕಾರ್ಯ ಮಾಡುತ್ತಿದೆ ಎಂದು ದೂರಿದರು.

ಪ್ರತಿಭಟನೆ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡಲು ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯ ಪೊಲೀಸರು ಚನ್ನಮ್ಮ ವೃತ್ತದಲ್ಲಿಯೇ ಹಿಂದೂಪರ ಸಂಘಟನೆ ಮುಖಂಡರು ಸೇರಿ 20ಕ್ಕೂ ಹೆಚ್ಚು ಶ್ರೀರಾಮಸೇನೆ ಕಾರ್ಯಕರ್ತರನ್ನು ವಶಕ್ಕೆ ಪಡೆಯುವ ಸಂದರ್ಭದಲಿ ಕೆಲಕಾಲ ವಾಗ್ವಾದ ನಡೆಯಿತು.

ಬಳಿಕ ಶ್ರೀರಾಮ ಸೇನೆಯ 20ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ನಗರದ ಹೊರ ವಲಯದಲ್ಲಿ ಬಿಡುಗಡೆಗೊಳಿಸಿದರು.

ಈ ವೇಳೆ ಶ್ರೀರಾಮ ಸೇನೆಯ ಉ.ಕ ರಾಜ್ಯಾಧ್ಯಕ್ಷ ರವಿಕುಮಾರ ಕೋಕಿತಕರ್, ಸೇರಿದಂತೆ ಹಲವಾರು ಹಿಂದೂಪರ ಕಾರ್ಯಕರ್ತರು ಪಾಲ್ಗೊಂಡಿದ್ದರು.



6 ಜನರ ಮೇಲೆ ಹೆಜ್ಜೇನು ದಾಳಿ

ಹಗರಿಬೊಮ್ಮನಹಳ್ಳಿ: ತಾಲೂಕಿನ ಬನ್ನಿಕಲ್ಲು ಗ್ರಾಮದಲ್ಲಿ ನರೇಗಾ ಕೂಲಿ ಕಾರ್ಮಿಕರ ಮೇಲೆ ಸೋಮವಾರ ಬೆಳಗ್ಗೆ ನಡೆ ಹೆಜ್ಜೇನು ದಾಳಿಯಿಂದ 6 ಜನರು ಗಾಯಗೊಂಡ ಪ್ರಸಂಗ ನಡೆದಿದೆ. ಸೋಮವಾರ ಬೆಳ್ಳಂಬೆಳಗ್ಗೆ ಹೊಳಗುಂದಿ ರಸ್ತೆಯ ಹಳ್ಳದಲ್ಲಿ ಕೆಲಸಕ್ಕಾಗಿ ಕೂಲಿ ಕಾರ್ಮಿಕರು ತೆರಳಿದ್ದರು. 8 ಗಂಟೆಯ ಸುಮಾರಿನಲ್ಲಿ ಊಟಕ್ಕೆ ಕುಳಿತಾಗ ಏಕಾಏಕಿ ಕಾರ್ಮಿಕರ ಮೇಲೆ ಹೆಜ್ಜೇನು ದಾಳಿ ಮಾಡಿವೆ. ಮಲ್ಲಾಡು ಹನುಮಂತವ್ವ, ಪೂಜಾರ್ ಫಕೀರವ್ವ, ಬಾರಿಕರ ಗಂಗಮ್ಮ, ಯೋಗಿ ಜಗದೀಶ, ನಂದಿಬೇವೂರ್ ಹಾಲಮ್ಮ, ಬಾರಿಕರ ಭೂಪಾಲಪ್ಪರಿಗೆ ಕಡಿದಿವೆ.

ಕೂಡಲೇ ಹಂಪಸಾಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿ, ಹೆಚ್ಚಿನ ಚಿಕಿತ್ಸೆಗಾಗಿ ಪಟ್ಟಣದ ನೂರು ಹಾಸಿಗೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಯಿತು. ಆಸ್ಪತ್ರೆಗೆ ತಾಪಂ ಅಧಿಕಾರಿಗಳು ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ರಮೇಶ ಮಹಾಲಿಂಗಪುರ, ಪಿಡಿಒ ತಿಪ್ಪೆಸ್ವಾಮಿ ಭೇಟಿ ನೀಡಿ ಚಿಕಿತ್ಸೆ ಕೊಡಿಸಿದ್ದಾರೆ. ಯಾವುದೇ ಪ್ರಾಣಾಪಾಯವಾಗಿಲ್ಲ ಎಂದು ತಿಳಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ



ಸಿದ್ದಾಪುರ: ತಾಲೂಕಿನ ಹಾರ್ಸಿಕಟ್ಟಾ ಗಣೇಶ ಮಂಟಪದಲ್ಲಿ ಲಕ್ಷ್ಮೀನಾರಾಯಣ ಯಕ್ಷಗಾನ ಕಲಾಮಂಡಳಿ ಹೆಮ್ಮನಬೈಲ್, ಯಕ್ಷತರಂಗಿಣಿ ಹಾರ್ಸಿಕಟ್ಟಾ ಹಾಗೂ ಯಕ್ಷಾಭಿಮಾನಿ ಬಳಗ ಹಾರ್ಸಿಕಟ್ಟಾ ಇವರಿಂದ ಸರ್ಪ ಸಂಘರ್ಷ ಯಕ್ಷಗಾನ ಪ್ರದರ್ಶನಗೊಂಡು ಮೆಚ್ಚುಗೆಗಳಿಸಿತು.



ಮುಂಡಗೋಡ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಶಿರಸ್ತೇದಾರರಾಗಿ ಸೇವೆ ಸಲ್ಲಿಸುತ್ತಿದ್ದ ಜಿ.ಬಿ.ಭಟ್ ನಿವೃತ್ತಿ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕ ವಿನೋದ ರಾಠೋಡ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಇಲ್ಲಿನ ತಹಶೀಲ್ದಾರ್ ಕಚೇರಿಯ ಸಭಾಭವನದಲ್ಲಿ ಮಂಗಳವಾರ ಸಂಜೆ ಇಬ್ಬರನ್ನೂ ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು. ತಹಶೀಲ್ದಾರ್ ಶಂಕರ ಗೌಡಿ, ಕಂದಾಯ ಇಲಾಖೆ ಸಿಬ್ಬಂದಿ, ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ಪುರಸಭೆ ಸಿಬ್ಬಂದಿಗೆ ಕಿರುಕುಳ: ಡಿಸಿಗೆ ಮನವಿ

ಹಳಿಯಾಳ: ಪಟ್ಟಣದ ಪುರಸಭೆ ನೌಕರರು ಕಳೆದ ಕೆಲ ದಿನಗಳ ಹಿಂದೆ ಹಳಿಯಾಳ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಹಳಿಯಾಳ ತಹಶೀಲ್ದಾರರಿಗೆ ಹಾಗೂ ಪೊಲೀಸ್ ಇಲಾಖೆಗೆ ಎಸ್‌ಸಿ ಎಸ್ಟಿಯ ಒಬ್ಬ ವ್ಯಕ್ತಿಯು ಪದೇ ಪದೇ ಬೈಗುಳಗಳಿಂದ ಕಚೇರಿಯ ಸಿಬ್ಬಂದಿಗಳಿಗೆ ಕಿರುಕುಳ ನೀಡುತ್ತಿರುವ ಕುರಿತು ದೂರನ್ನು ನೀಡಿದ್ದ ಘಟನೆ ನಡೆದಿತ್ತು. ಹಾಗೂ ಆ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸಲು ಮನವಿ ಹಾಗೂ ಪೊಲೀಸ್ ದೂರನ್ನು ಕೂಡ ಜರುಗಿಸಲಾಗಿತ್ತು.

ಅದರ ಮುಂದಿನ ಭಾಗವಾಗಿ ಇಂದು ಹಳಿಯಾಳ ಪುರಸಭೆಯ ಎಲ್ಲಾ ಸಿಬ್ಬಂದಿಗಳು ಕಾರವಾರಕ್ಕೆ ಭೇಟಿ ನೀಡಿ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ರವರನ್ನು ಭೇಟಿ ಮಾಡಿ ಮತ್ತೊಮ್ಮೆ ವಿವರವಾಗಿ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಯವರು ಆರೋಪಿಯ ಮೇಲೆ ಸೂಕ್ತ ಕ್ರಮ ಜರುಗಿಸುವ ಭರವಸೆ ನೀಡಿ ಸರ್ಕಾರಿ ಕಾರ್ಯದಲ್ಲಿ ಭಾಧ್ಯತೆಗಳನ್ನುಂಟು ಮಾಡುವ ಯಾವುದೇ ಸಾರ್ವಜನಿಕರಿರಲಿ ಅವರ ಮೇಲೆ ಕಾನೂನಿ ಕ್ರಮ ಅವಶ್ಯವಿದ್ದು ಸತ್ಯಾಸತ್ಯತೆಯನ್ನು ಪರಿಶೀಲಿಸಿ ಆರೋಪಿತನಿಗೆ ಸಾಧ್ಯವಿದ್ದಲ್ಲಿ ಕಾನೂನಿನಂತೆ ತೀವ್ರ ಕ್ರಮ ಜರುಗಿಸಲು ಪರಿಶೀಲಿಸುತ್ತೇನೆ ಹಾಗೂ ಸರಕಾರಿ ಸಹ ನೌಕರರ ಹಿತಾಸಕ್ತಿ ಕಾಪಾಡ ಬೇಕಿರುವುದು ಜಿಲ್ಲಾಧಿಕಾರಿಯಾದ ನನ್ನ ಆದ್ಯ ಕರ್ತವ್ಯವಿದ್ದು ಖಂಡಿತವಾಗಿಯೂ ಎಲ್ಲಾ ನೌಕರರಿಗೂ ನ್ಯಾಯ ಒದಗಿಸಿ ಕೊಡುವ ಭರವಸೆ ನೀಡಿದ್ದಾರೆಂದು ಪುರಸಭೆಯ ವ್ಯವಸ್ಥಾಪಕ ಕೊಡ್ಲಿ ಹೇಳಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಹಳಿಯಾಳ ಪುರಸಭೆಯ ಹದಿನಾರಕ್ಕೂ ಹೆಚ್ಚಿನ ಸಿಬ್ಬಂದಿಗಳು ಕಾರವಾರದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವಾಗ ಹಾಜರಿದ್ದರು ಎಂದು ದಾಖಲೆಗಳನ್ನು ಬಿಡುಗಡೆ ಮಾಡಿ ಹೇಳಿಕೆ ನೀಡಿದ್ದಾರೆ.



ಹಳಿಯಾಳ: ಹಳಿಯಾಳ ಪುರಸಭೆಯ ಸಿಬ್ಬಂದಿಗಳು ಕಾರವಾರಕ್ಕೆ ಭೇಟಿ ನೀಡಿ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಅವರಿಗೆ ಮನವಿ ಸಲ್ಲಿಸಿದರು.

ಅಕ್ರಮ ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಮುಂಡಗೋಡ: ತಾಲೂಕಿನ ಯಲ್ಲಾಪುರ ರಸ್ತೆಯ ಬ್ಲೂಹಿಲ್ ಹೋಟೆಲ್ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮಂಗಳವಾರ ಪೊಲೀಸರು ಗಾಂಜಾ ಸಹಿತ ಬಂಧಿಸಿದ್ದಾರೆ.

ಪಟ್ಟಣದ ಹಳೂರ ಓಣಿಯ ನಿವಾಸಿ ಇಸ್ಮಾಯಿಲ್ ಜಮಖಂಡಿ (40) ಬಂಧಿತ ಆರೋಪಿ. ತಾಲೂಕಿನ ಯಲ್ಲಾಪುರ ರಸ್ತೆಯ ಬ್ಲೂಹಿಲ್ ಹೋಟೆಲ್ ಹತ್ತಿರಬ್ಯಾಗ್‌ನಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ಸುಮಾರು 25,000 ರೂ. ಮೌಲ್ಯದ 436ಗ್ರಾಂ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ್ದ ಬೈಕ್‌ನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಎಸ್.ಪಿ ದೀಪನ್ ಎಂ.ಎನ್., ಹೆಚ್ಚುವರಿ ಎಸ್.ಪಿ ಕೃಷ್ಣಮೂರ್ತಿ ಜಿ., ಶಿರಸಿ ಡಿವೈಎಸ್ಪಿ ಗೀತಾ ಪಾಟೀಲ ಮಾರ್ಗದರ್ಶನದಲ್ಲಿ ಮುಂಡಗೋಡ ಸಿಪಿಐ ರಮೇಶ ಹಾನಾಪುರ, ಪಿಎಸ್‌ಐ ಮಂಜುನಾಥ ಗೌಡರ, ಪ್ರೋಪೆಶನರಿ ಪಿಎಸೈ ಕಾಸಿಮಸಾ ವಾಗಣಗೇರಿ, ಸಿಬ್ಬಂದಿಗಳಾದ ಸಿದ್ದಲಿಂಗೇಶ, ಅಣ್ಣಪ್ಪ ಬುಡಿಗೇರ, ಕೆಂಚಪ್ಪ ಜಾಲಿಕಟ್ಟಿ, ಮುತ್ತು ಭೋವಿ, ಸಂಜು ರಾಠೋಡ, ಮಂಜುನಾಥ ಓಣಿಕೇರಿ ಮತ್ತು ಬಸವರಾಜ ಒಡೆಯರ ಆರೋಪಿಯನ್ನು ಬಂಧಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಪಘಾತ: ಬೈಕ್ ಸವಾರನಿಗೆ ಗಾಯ

ಅಂಕೋಲಾ: ಕಾರಿಗೆ ಬೈಕ್ ಡಿಕ್ಕಿ ಹೊಡೆದು ಬೈಕ್ ಸವಾರ ತೀವ್ರವಾಗಿ ಗಾಯಗೊಂಡ ಘಟನೆ ತಾಲೂಕಿನ ಹೊಸಕಂಬಿ ಮಾದನಗೇರಿ ಅರಣ್ಯ ಇಲಾಖೆಯ ಚೆಕ್ ಪೋಸ್ಟ್ ಬಳಿ ರಾಜ್ಯ ಹೆದ್ದಾರಿ 143 ರಲ್ಲಿ ಸಂಭವಿಸಿದೆ.

ಬೈಕ್ ಸವಾರ ಮೊಗಟ ನಿವಾಸಿ ದಿನೇಶ ವಿ,ನಾಯಕ(45) ಗಾಯಗೊಂಡ ವ್ಯಕ್ತಿಯಾಗಿದ್ದು ಈತ ಕೆ.ಎ31ಇಜೆ4664 ನೋಂದಣಿ ಸಂಖ್ಯೆಯ ಬೈಕಿನಲ್ಲಿ ಮಾದನಗೇರಿ ಕಡೆಯಿಂದ ಹೊಸಕಂಬಿ ಕಡೆ ಅತಿವೇಗ ಮತ್ತು ಅಜಾಗರೂಕತೆಯಿಂದ ಬೈಕ್ ಚಲಾಯಿಸಿ ಎರಡು ವಾಹನಗಳನ್ನು ಓವರಟೇಕ್ ಮಾಡಲು ರಸ್ತೆಯ ತೀರಾ ಬಲಭಾಗಕ್ಕೆ ಬಂದು ಬೈಕ್ ವೇಗವನ್ನು ನಿಯಂತ್ರಿಸಲಾಗದೇ ಎದುರಿನಿಂದ ಬರುತ್ತಿದ್ದ ಎದುರುಗಡೆಯಿಂದ ಬರುತ್ತಿದ್ದ ಎಂ.ಎಚ್09ಜಿ.ಜಡ್ 1754 ನೋಂದಣಿ ಸಂಖ್ಯೆಯ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದು ತನ್ನ ಎರಡೂ ಕಾಲುಗಳ ಮಂಡಿ ಮತ್ತು ಖಾಸಗಿ ಅಂಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಬೈಕ್ ಸವಾರನ ಮೇಲೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60099	68600
ಬಿಳಿಗೋಟು	25299	35499
ಕೆಂಪುಗೋಟು	26011	37111
ಬೆಟ್ಟೆ	40699	48399
ರಾಶಿ	50500	53299
ಚಾಲಿ	43911	48260
ಬಿ.ಕಾಳುಮೆಣಸು	94070	94070

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	56959	56959
ರಾಶಿ	48769	55899
ಬೆಟ್ಟೆ	37506	48499
ಕೆಂಪುಗೋಟು	20600	35699
ಬಿಳಿಗೋಟು	16569	36119
ಚಾಲಿ	37409	48055
ಕೋಕಾ	12000	31900
ಕಾಳುಮೆಣಸು	57790	69000

ಎಲ್ ನಿನೋ ವಾತಾವರಣ | ಆತಂಕದಲ್ಲಿ ಬೆಳೆಗಾರರು

ಉದುರುತ್ತಿರುವ ಅಡಕೆ ಮುಗುಡು

ಸುಧೀರ ನಾಯರ್

ಬನವಾಸಿ: ಪ್ರಸಕ್ತ ವರ್ಷದ ಎಲ್ ನಿನೋ ವಾತಾವರಣ ಬನವಾಸಿ ಭಾಗದ ಅಡಕೆ ಬೆಳೆಯ ಮೇಲೆ ಪರಿಣಾಮ ಬೀರಿದೆ. ಒಂದೆಡೆ ಅಡಕೆಯ ಸಿಂಗಾರ ಒಣಗಿ ಮುಂದಿನ ಬೆಳೆಯ ಮೇಲೆ ಪರಿಣಾಮ ಬೀರಿದ್ದರೆ ಇನ್ನೊಂದೆಡೆ ಅಡಕೆ ಮರಗಳಿಗೂ ನೀರು ಸಾಕಾಗದೇ ಕೆಂಪು ಬಣ್ಣಕ್ಕೆ ತಿರುಗಲಾರಂಭಿಸಿದೆ.

ಸದಾ ತಂಪು ವಾತಾವರಣ ಎಂದೇ ಪ್ರಸಿದ್ಧವಾಗಿರುವ ತಾಲೂಕಿನಲ್ಲಿ ಇತ್ತೀಚಿನ ವರ್ಷಗಳ ಬೇಸಿಗೆಯ ದಿನಗಳಲ್ಲಿ ತಾಪಮಾನ ಗಣನೀಯ ಏರಿಕೆ ಆಗುತ್ತಿದೆ. ಈ ವರ್ಷ ಎಲ್ ನಿನೋ ಪರಿಣಾಮವಾಗಿ ಮೇ ತಿಂಗಳಿನಲ್ಲಿ ಮಧ್ಯಾಹ್ನದ ತಾಪಮಾನ 38 ಡಿಗ್ರಿ ಸೆಲ್ಸಿಯಸ್ ವರೆಗೂ ತಲುಪಿದೆ. ಇದರ ಪರಿಣಾಮ ಅಡಕೆ ಬೆಳೆಯ ಮೇಲಾಗಿದ್ದು ಇದು ಬನವಾಸಿ ಭಾಗದಲ್ಲಿನ ಅಡಕೆ ಕೃಷಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಪ್ರತಿ ಮರಕ್ಕೆ ಎರಡು ಅಥವಾ ಮೂರು ಅಡಕೆ ಸಿಂಗಾರ ಬಂದಿದ್ದರೂ ಬಿಸಿಲು ಮತ್ತು ತಾಪಮಾನದ ಕಾರಣದಿಂದ ಅಡಕೆ ಸಿಂಗಾರ ಸತ್ತಿವೆ. ಕೆಲ ಮರಗಳಲ್ಲಿ ಒಂದೆಡರು ಅಡಕೆ ಗೊನೆಗಳು ಉಳಿದುಕೊಂಡಿದ್ದರೂ ಈಗ ಬೆಳೆಯಬೇಕಿದ್ದ ಅಡಕೆ ಮುಗುಡು ಉದುರಲಾರಂಭಿಸಿವೆ.

ದಿಗಂತ ವಿಶೇಷ

ಕೃಷಿಗೆ ಕಾಡಿದ ನೀರಿನ ಸಮಸ್ಯೆ: ಭತ್ತದ ಬೆಳೆಗೆ ಪ್ರಸಿದ್ಧಿ ಪಡೆದಿರುವ ಬನವಾಸಿ ಭಾಗದಲ್ಲಿ ಕೃಷಿಕರು ಕಳೆದ 10 ವರ್ಷಗಳ ಈಚೆ ಅಡಕೆ ಬೆಳೆಯತ್ತ ವಾಲಿದ್ದಾರೆ. ಬನವಾಸಿ, ದಾಸನಕೊಪ್ಪ ಸೇರಿದಂತೆ ಇಲ್ಲಿಯ 8 ಕ್ಕೂ ಅಧಿಕ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರತಿ ವರ್ಷ 1 ಸಾವಿರಕ್ಕೂ ಅಧಿಕ ಎಕರೆಗಳಲ್ಲಿ ಅಡಕೆ ತೋಟ ತಲೆಯೆತ್ತಿದೆ. ಬೇಸಿಗೆಯ ಈ ದಿನಗಳಲ್ಲಿ ಅಡಕೆ ಬೆಳೆಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬೇಕಾಗುತ್ತದೆ.



ತಾಪಮಾನ 38 ಡಿಗ್ರಿ ಸೆಲ್ಸಿಯಸ್ ಅಥವಾ ಅದಕ್ಕಿಂತ ಜಾಸ್ತಿಯಾದರೆ ಅಡಕೆಯ ಮುಗುಡು ಉದುರಲಾರಂಭಿಸುತ್ತದೆ. ಈ ವೇಳೆ ಅಡಕೆ ಮರಗಳಿಗೆ ಅಧಿಕ ಪ್ರಮಾಣದಲ್ಲಿ ನೀರು ನೀಡಬೇಕು. ಮಳೆಯಾದರೆ ವಾತಾವರಣ ತಂಪಾಗಿ ಈ ಸಮಸ್ಯೆ ಪರಿಹಾರವಾಗುತ್ತದೆ.

■ ಡಾ. ಬಿ.ಪಿ. ಸತೀಶ, ಡಿಡಿ, ತೋಟಗಾರಿಕೆ ಇಲಾಖೆ ಶಿರಸಿ

ಅಡಕೆ ತೋಟದಲ್ಲಿ ಸಿಂಗಾರ ಸಾಯುವಿಕೆ ಹಾಗೂ ಮುಗುಡು ಉದುರುವಿಕೆ ಈ ವರ್ಷ ಜಾಸ್ತಿ ಆಗಿದೆ. ಮಳೆ ಇನ್ನೂ ವಿಳಂಬವಾದರೆ ನಾವು ಬೆಳೆ ಹಾನಿ ಅನುಭವಿಸಬೇಕಾದ ಆತಂಕ ಎದುರಿಸುತ್ತಿದ್ದೇವೆ.

■ ಭರತ್ ಪಿಳ್ಳೈ, ಕೃಷಿಕ

ಅಡಕೆ ಮರದ ಬೇರು ಅಡ್ಡವಾಗಿ ಹರಡಿರುವುದರಿಂದ ಮೇಲಿನಿಂದಲೇ ನೀರು ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕಾಗುತ್ತದೆ. ಪ್ರತಿ ವರ್ಷ ಜನವರಿ ತಿಂಗಳಿಂದ ಮೇ ತಿಂಗಳ ಮಧ್ಯೆ ಆಗಾಗ ಅಲ್ಪ ಪ್ರಮಾಣದ ಮಳೆ ಸುರಿದು ವಾತಾವರಣವನ್ನು ತಂಪುಗೊಳಿಸುವ ಜೊತೆಗೆ ಅಡಕೆ ಕೃಷಿಗೆ ಪೂರಕ ನೀರು ಒದಗಿಸುತ್ತಿತ್ತು. ಈ ವರ್ಷ ಮಳೆಯಾಗದೇ ಇರುವುದು ಅಡಕೆ ಮರಗಳನ್ನು ಕೆಂಪು ಬಣ್ಣಕ್ಕೆ ತಿರುಗುವಂತೆ ಮಾಡಿದೆ.

ಬನವಾಸಿ ಭಾಗಕ್ಕೆ ವರದಾನವಾದ ವರದಾ ನದಿ ನೀರು ಈ ವರ್ಷ ಅವಧಿಗೆ ಮುನ್ನವೇ ಬತ್ತಿದೆ. ವರದಾ ನದಿಯ ಹೊಂಡಗಳಲ್ಲಿ ಅಲ್ಲಲ್ಲಿ ನಿಂತ ನೀರನ್ನೂ ರೈತರು ಪಂಪ್ ಮಾಡಿ ಕೃಷಿ, ಅಡಕೆ ತೋಟಕ್ಕೆ ನೀಡಿದ್ದಾರೆ. ಈಗ ಆ ನೀರೂ ಸಹ ಖಾಲಿ ಆಗಿದೆ. ಬೋರ್ ಮೂಲಕ ಅಡಕೆ ತೋಟಕ್ಕೆ ಕೆಲ ರೈತರು ನೀರುಣಿಸುತ್ತಿದ್ದರಾದರೂ, ಬನವಾಸಿಯ ಅಸಮರ್ಪಕ ವಿದ್ಯುತ್ ಪೂರೈಕೆ, ವೋಲ್ಟೇಜ್ ಕೊರತೆಯ ಸಮಸ್ಯೆಯಿಂದ ರೈತರು ಕಂಗಾಲಾಗಿದ್ದಾರೆ. ರಾಜ್ಯದ ವಿವಿಧೆಡೆ ಉತ್ತಮ ಮಳೆಯಾಗುತ್ತಿದೆಯಾದರೂ ಶಿರಸಿ ತಾಲೂಕು ಹಾಗೂ ಬನವಾಸಿ ಭಾಗದಲ್ಲಿ ಇನ್ನೂ ಉತ್ತಮ ಮಳೆಯಾಗಿಲ್ಲ. ಅಲ್ಲದೇ ವಾತಾವರಣದ ಉಷ್ಣಾಂಶದ ಪ್ರಮಾಣದಲ್ಲಿಯೂ ಇಳಿಕೆಯಾಗಿಲ್ಲ. ಈ ಎಲ್ಲದರ ಪರಿಣಾಮ ಅಡಕೆ ಬೆಳೆಯ ಮೇಲಾಗುತ್ತಿದೆ. ಹವಾಮಾನ ಇಲಾಖೆ ಸಹ ಈ ವರ್ಷ ವಾಡಿಕೆ ಮಳೆಗಿಂತ ಕಡಿಮೆ ಮಳೆ ಆಗಲಿದೆ ಎಂದು ಮುನ್ಸೂಚನೆ ನೀಡಿರುವದು ರೈತರ ಆತಂಕಕ್ಕೆ ಕಾರಣವಾಗಿದೆ.

ಉತ್ತಮ ಶಿಕ್ಷಣದಿಂದ ಭವಿಷ್ಯ ಉಜ್ವಲ

ಯಲ್ಲಾಪುರ: ತಾಲೂಕಿನಹುಲಗೋಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭೋತ್ಸವವನ್ನು ವಿಜೃಂಭಣೆಯಿಂದಆಚರಿಸಲಾಯಿತು. ವಿದ್ಯಾರ್ಥಿಗಳನ್ನು ಬ್ಯಾಂಡ್ ಸೆಟ್ ಮೂಲಕ ಶಾಲೆಯ ಆವರಣದೊಳಗೆ ಬರಮಾಡಿಕೊಳ್ಳಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಿ ಮಾತನಾಡಿ, ಮಕ್ಕಳು ಪ್ರತಿದಿನವೂ ತಪ್ಪಿಸದೇ ಶಾಲೆಗೆ ಹಾಜರಾಗಬೇಕು. ಉತ್ತಮ ಶಿಕ್ಷಣ ಪಡೆಯುವುದರಿಂದ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದು. ಸರ್ಕಾರದಿಂದ ದೊರೆಯುವ ಎಲ್ಲ ಸೌಲಭ್ಯಗಳನ್ನು ಮಕ್ಕಳು ಬಳಸಿಕೊಳ್ಳುವಂತವರಾಗಬೇಕು ಹಾಗೂ ಸಮಾಜದ ಮುಂದಿನ ಉತ್ತಮ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಶುಭಕೋರಿದರು.

ಮದನೂರು ಕ್ಲಸ್ಟರ್‌ನ ಸಿಆರ್‌ಪಿಗಳಾದ ವಿಶ್ವನಾಥ್ ಮರಾಠಿರವರು ಮಾತನಾಡಿ, ಸರ್ಕಾರದಿಂದ ಮಕ್ಕಳ ಉತ್ತಮ ಶಿಕ್ಷಣಕ್ಕೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಸರಿಯಾದ ಸಮಯಕ್ಕೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಶಾಲೆಗೆ ಗೈರುಹಾಜರಾಗದೆ ಉತ್ತಮ ಶಿಕ್ಷಣವನ್ನು ಪಡೆಯುತ್ತ ಗಮನ ಹರಿಸಬೇಕು. ಶಿಕ್ಷಣದಿಂದ ಆತ್ಮವಿಶ್ವಾಸ ಬೆಳೆಯುತ್ತದೆ ಆತ್ಮವಿಶ್ವಾಸದಿಂದ ಸಾಧನೆ ಮಾಡಲು ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಕರಾಗಿ ನಿವೃತ್ತಿ ಹೊಂದಿದ ಮಮ್ತಾಜ್ ನದಾಫ್ ಅವರನ್ನು ಬೀಳ್ಕೊಡಲಾಯಿತು. ನಂತರ ಮಾತನಾಡಿದಅವರು, ಸೇವಾವಧಿಯಲ್ಲಿ ನಾನು ಅನೇಕ ಶಾಲೆಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಶಿಕ್ಷಣ ಕ್ಷೇತ್ರದ ಸುದೀರ್ಘ ಸೇವೆ ತೃಪ್ತಿಯನ್ನುತಂದಿದೆ. ತಮ್ಮಲ್ಲೆರ ಪ್ರೀತಿಗೆ ಸದಾ ಚಿರಋಣಿಯಾಗಿರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಸಂತೋಷ ಮರಾಠಿ, ಎಸ್.ಡಿ.ಎಂ.ಸಿ. ಸದಸ್ಯರು, ಪಾಲಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಸಹ ಶಿಕ್ಷಕ ಗಣೇಶ್ ಭಟ್ ಸ್ವಾಗತಿಸಿ, ನಿರೂಪಿಸಿದರು. ವಿನುತಾ ನಾಯ್ಕ ವಂದಿಸಿದರು.



ಮೂರಿನಕಟ್ಟೆ: ಪರ್ಯಾಯ ಸೂಕ್ತ ಸ್ಥಳ ಗುರುತು

ಭಟ್ಕಳ: ನಗರದ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 66 ರ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಸಮಯದಲ್ಲಿ ವಾಹನ ಸಂಚಾರಕ್ಕೆ /ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗದ ಹಾಗೆ ಅಮ್ಮನವರ ಹೊರೆಯನ್ನಿಡುವ (ಮೂರಿನಕಟ್ಟೆ) ಸ್ಥಳಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸೂಕ್ತ ಪರ್ಯಾಯ ಸ್ಥಳವನ್ನು ಗುರುತಿಸುವುದು ಅಗತ್ಯವೆಂದು ಕಂಡುಬಂದಿದೆ.

ನಗರದ ಎಲ್ಲಾ ಸಮುದಾಯದ ಹಿರಿಯ ನಾಗರಿಕರು ಹಾಗೂ ಒಮ್ಮತದ ಅಭಿಪ್ರಾಯದೊಂದಿಗೆ ಪರ್ಯಾಯ ಸೂಕ್ತ ಸ್ಥಳವನ್ನು ಗುರುತಿಸಲಾಗಿದೆ.

ಎಲ್ಲರ ಒಪ್ಪಿಗೆಯಂತೆ ಹಾಲಿ ಅಮ್ಮನವರ ಹೊರೆಯನ್ನು ಇಡಲಾಗಿರುವ ಅದೇ ರಸ್ತೆಯ ಮಿಡಿಯನ್ ಗಾಗಿ ಲಭ್ಯ ಇರುವ ಸ್ಥಳವನ್ನು ಪರ್ಯಾಯ ಸ್ಥಳವೆಂದು ಗುರುತಿಸಲಾಗಿದೆ. NHAI ರವರಿಂದ ಹಾಗೂ ಸ್ಥಳೀಯ ತಾಲ್ಲೂಕು ಆಡಳಿತದ ಸಹಯೋಗದೊಂದಿಗೆ ಸ್ಥಳದಲ್ಲಿ ಮಿಡಿಯನ್ ಹಾಗೂ ರಸ್ತೆ ಕಾಮಗಾರಿ ಮುಖಂಡರೊಂದಿಗೆ ಜಿಲ್ಲಾಡಳಿತದಿಂದ ಜರುಗಿಸಿ ಸಮಾಲೋಚನೆ ಪ್ರಾರಂಭಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಪ್ರದಾಯಿಕ ಉಡುಪು ಕಡ್ಡಾಯ

ಭಟ್ಕಳ: ಗೋವಾ ರಾಜ್ಯದ ಪರ್ತಗಾಳಿಯಲ್ಲಿರುವ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಕ್ಕೆ ಆಗಮಿಸುವ ಭಕ್ತರು ಕಡ್ಡಾಯವಾಗಿ ಭಾರತೀಯ ಸಾಂಪ್ರದಾಯಿಕ ಉಡುಪಿನಲ್ಲಿಯೇ ಪ್ರವೇಶಿಸಬೇಕು ಎಂದು ಮಠದ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಠದ ಪಾವಿತ್ರ್ಯ ಹಾಗೂ ಧಾರ್ಮಿಕ ಸಂಪ್ರದಾಯಗಳ ಸಂರಕ್ಷಣೆಯ ದೃಷ್ಟಿಯಿಂದ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದ್ದು, ಭಕ್ತರು ಭಾರತೀಯ ಶೈಲಿಯ ಉಡುಪು ಧರಿಸಿ ಆಗಮಿಸುವಂತೆ ಮನವಿ ಮಾಡಲಾಗಿದೆ. ಪರಮಪೂಜ್ಯ ಸ್ವಾಮೀಜಿಗಳ ದರ್ಶನ ಹಾಗೂ ಭೇಟಿಗೆ ಆಗಮಿಸುವ ಎಲ್ಲ ಭಕ್ತರೂ ಮಠವೂ ಸೂಚಿಸಿದ ನಿಗದಿತ ಉಡುಪು ನಿಯಮವನ್ನು ಅನುಸರಿಸಬೇಕು ಎಂದು ತಿಳಿಸಲಾಗಿದೆ.

ಪುರುಷ ಭಕ್ತರು ಕೇಸರಿ ಅಥವಾ ಕಾವಿ ಬಣ್ಣದ ಧೋತಿ ಧರಿಸುವುದನ್ನು ತಪ್ಪಿಸಿ, ಬಿಳಿ ಬಣ್ಣದ ಧೋತಿ ಹಾಗೂ ಸಾಂಪ್ರದಾಯಿಕ ಉತ್ತರೀಯ ಧರಿಸುವುದು ಸೂಕ್ತ ಎಂದು ಸೂಚಿಸಲಾಗಿದೆ. ಭಕ್ತರು ಈ ನಿಯಮಗಳನ್ನು ಪಾಲಿಸುವ ಮೂಲಕ ಮಠದ ಗೌರವ ಮತ್ತು ಪಾವಿತ್ರ್ಯ ಕಾಪಾಡುವಲ್ಲಿ ಸಹಕರಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಕುಡುಕರ ಅಡ್ಡೆಯಾದ ಪ್ರತಿಷ್ಠಿತ ಡಿಎಫ್‌ಎ ಮೈದಾನದ ಸ್ಟೇಡಿಯಂ

ಸಂದೇಶ್ ಎಸ್.ಜೈನ್

ದಾಂಡೇಲಿ: ನಗರದ ಪ್ರತಿಷ್ಠಿತ ಮೈದಾನವಾಗಿರುವ ಡಿ.ಎಫ್.ಎ ಮೈದಾನದ ಸ್ಟೇಡಿಯಂ ಕುಡುಕರ ಅಡ್ಡೆಯಾಗಿ ಮಾರ್ಪಟ್ಟಿದೆ.

ಇದೇ ಮೈದಾನದಲ್ಲಿ ಡಿಪಿಎಲ್ ಕ್ರಿಕೆಟ್ ಪಂದ್ಯಾವಳಿ ಸೇರಿದಂತೆ ಅನೇಕ ಪಂದ್ಯಾವಳಿಗಳು, ತಾಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಕ್ರೀಡಾಕೂಟಗಳು, ದಸರಾ ಕ್ರೀಡಾಕೂಟ, ಜಿಲ್ಲಾ ಮಟ್ಟದ ಕಂದಾಯ ಇಲಾಖೆಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಕ್ರೀಡಾಕೂಟ ನಡೆದಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸ್ವತ: ಜಿಲ್ಲಾಧಿಕಾರಿಯವರು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಉಪಸ್ಥಿತಿಯಲ್ಲಿಕಂದಾಯಇಲಾಖೆಯ ಕ್ರೀಡಾಕೂಟಆಯೋಜನೆಗೊಂಡಿರುವ ಇತಿಹಾಸವನ್ನು ಈ ಮೈದಾನ ಹೊಂದಿದೆ. ಇನ್ನು ಇದೇ ಮೈದಾನದಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಅವಧಿಯಲ್ಲಿ ಪುರುಷರು, ಮಹಿಳೆಯರು, ವಯೋವೃದ್ಧರಾದಿಯಾಗಿ ಎಲ್ಲರೂ ವಾಯುವಿಹಾರ ಮಾಡುತ್ತಾರೆ.

ಸುಂದರವಾದ ವಿಶಾಲವಾದ ಈ ಮೈದಾನದ ಒಂದು ಬದಿ ಸ್ಟೇಡಿಯಂ ಮೈದಾನಕ್ಕೊಂದು ವಿಶೇಷ ಮೆರುಗನ್ನು ತಂದು ಕೊಡುತ್ತಿದೆ. ಆದರೆ ಇಂತಹ ಸ್ಟೇಡಿಯಂ ಇದೀಗ ಕುಡುಕರ ಅಡ್ಡೆಯಾಗಿ ಪರಿವರ್ತನೆಯಾಗಿರುವುದು ಕ್ರೀಡಾಭಿಮಾನಿಗಳಿಗೆ ಮತ್ತು ಕ್ರೀಡಾಪಟುಗಳಿಗೆ ಅತೀವ ಬೇಸರ ತಂದಿದೆ. ಯಾರು ಇಲ್ಲದ ಸಮಯದಲ್ಲಿ ಹಾಗೂ ರಾತ್ರಿಯಾಗುತ್ತಿದ್ದಂತೆಯೆ ಕುಡುಕರು ಈ ಸ್ಟೇಡಿಯಮನ್ನು ತಮ್ಮ ಅಡ್ಡೆಯನ್ನಾಗಿಸಿಕೊಂಡಿದ್ದಾರೆ. ಕುಡಿದು ಬಿಸಾಕಿದ ಬಾಟಲಿಗಳು, ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳು ಎಲ್ಲೊಂದರಲ್ಲಿ ಚೆಲ್ಲುವುದು ಮಾತ್ರವಲ್ಲದೇ, ಕುಡಿದ ಮದ್ಯದ ಬಾಟಲಿಗಳನ್ನು ಎಲ್ಲೊಂದರಲ್ಲಿ ಒಡೆದು ಹಾಕುತ್ತಿರುವುದು ಕಂಡುಬಂದಿದೆ. ಈ ಬಗ್ಗೆ ಸಂಬಂಧಪಟ್ಟವರು ಕೂಡಲೇ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ.



ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದ ಸಬಾ



ದಾಂಡೇಲಿ: ನಗರದ ಸೈಂಟ್ ಮೈಕಲ್ ಕಾನ್ವೆಂಟ್ ಪ್ರೌಢಶಾಲೆಯ ವಿದ್ಯಾರ್ಥಿನಿ ಸಬಾ ರಾಜೇಸಾಬ ಕೇಸನೂರ ಇವಳು ಮರು ಮೌಲ್ಯಮಾಪನ ಹಾಗೂ ಮರು ಪರೀಕ್ಷೆ ಬರೆದು ಎಸ್.ಎಸ್.ಎಲ್.ಸಿಯಲ್ಲಿ ಶಾಲೆಗೆ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದು ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದುಕೊಳ್ಳುವ ಮೂಲಕ ಕಲಿತ ಶಾಲೆಗೆ, ತಾಲೂಕಿಗೆ ಮತ್ತು ಜಿಲ್ಲೆಗೆ ಕೀರ್ತಿಯನ್ನು ತಂದಿದ್ದಾಳೆ.

ಈ ಮೊದಲು 614 ಅಂಕವನ್ನು ಪಡೆದಿದ್ದ ಇವಳು ಗಣಿತ ವಿಷಯದಲ್ಲಿ 97 ಅಂಕಗಳನ್ನು ಪಡೆದುಕೊಂಡಿದ್ದಳು. ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿ ಎರಡು ಅಂಕಗಳನ್ನು ಹೆಚ್ಚುವರಿಯಾಗಿ ಪಡೆದು 99 ಅಂಕಗಳನ್ನು ಪಡೆದುಕೊಂಡಿದ್ದಾಳೆ. 93 ಅಂಕಗಳನ್ನು ಪಡೆದುಕೊಂಡಿದ್ದ ವಿಜ್ಞಾನ ವಿಷಯಕ್ಕೆ ಮರು ಪರೀಕ್ಷೆ ಬರೆದು 99 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಒಟ್ಟು 622 ಅಂಕಗಳೊಂದಿಗೆ ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದುಕೊಂಡಿದ್ದಾಳೆ.ಇವಳು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಂಘಟನೆಯ ಅಧ್ಯಕ್ಷ ರಾಜೇಸಾಬ ಕೇಸನೂರ ಇವರ ಸುಪುತ್ರಿಯಾಗಿದ್ದಾಳೆ.ಇವಳ ಸಾಧನೆಗೆ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಮುಖ್ಯೋಪಾಧ್ಯಾಯಿನಿ, ಶಿಕ್ಷಕ ವೃಂದ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳ ಪಾಲಕರ ಸಂಘದ ಪದಾಧಿಕಾರಿಗಳು ಮತ್ತು ಗಣ್ಯರನೇಕರು ಹರ್ಷ ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಮಕ್ಕಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತ

ಸಿದ್ದಾಪುರ: ತಾಲೂಕಿನಾದ್ಯಂತ ಸೋಮವಾರ ಶಾಲೆಗಳು ಪ್ರಾರಂಭವಾಗಿದ್ದು ಮಕ್ಕಳು ಸಂತಸದಿಂದ ಶಾಲೆಗೆ ಆಗಮಿಸಿದರು.

ಮೊದಲ ದಿನವೇ ವಿದ್ಯಾರ್ಥಿಗಳ ಹಾಜರಾತಿ ಪ್ರಮಾಣ 92 ಶೇಕಡಾದಷ್ಟಿರುವುದು ವಿಶೇಷವಾಗಿತ್ತು. ಶಾಲೆಗಳಲ್ಲಿ ತಳಿರು ತೋರಣಗಳನ್ನು ಹಾಕಿ ಅಲಂಕರಿಸಲಾಗಿತ್ತು. ಶಾಲಾ ಅಭಿವೃದ್ಧಿ ಸಮಿತಿಯವರು, ಶಿಕ್ಷಕರು ಮಕ್ಕಳನ್ನು ಪುಷ್ಪಗುಚ್ಛ ನೀಡಿ ಬರಮಾಡಿಕೊಂಡರು.

ವಿದ್ಯಾರ್ಥಿಗಳಿಗೆಇಲಾಖೆಯಿಂದ ಸರಬರಾಜು ಮಾಡಿದ ಪಠ್ಯ ಪುಸ್ತಕಗಳನ್ನು ವಿತರಿಸಲಾಯಿತು. ಶಿಕ್ಷಕರ-ಪಾಲಕರ ಸಭೆ ನಡೆಸಲಾಯಿತು. ಸಿಹಿ ವಿತರಣೆಯೊಂದಿಗೆ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣುಗಳನ್ನು ನೀಡಲಾಯಿತು. ಶಿಕ್ಷಣ ಇಲಾಖೆಯ ಅಧಿಕಾರಿಗಳು ಅನೇಕ ಶಾಲೆಗಳಿಗೆ ಭೇಟಿ ನೀಡಿ ಪ್ರಾರಂಭೋತ್ಸವದಲ್ಲಿ ಪಾಲ್ಗೊಂಡು ''ಉತ್ತಮ ಕಲಿಕೆ, ಉಜ್ವಲ ಭವಿಷ್ಯ'' ಶಿಕ್ಷಣ ಇಲಾಖೆಯ ಈ ವರ್ಷದ ಧ್ಯೇಯ ವಾಕ್ಯವೆಂದು ತಿಳಿಸಿದರು.

ಮಕ್ಕಳು ಶಿಕ್ಷಣದಿಂದ ವಂಚಿತರಾಗದಿರಲಿ: ಕ್ಷೇತ್ರ ಶಿಕ್ಷಣಾಧಿಕಾರಿ

ಅಂಕೋಲಾ: ಉತ್ತಮ ತರಬೇತಿ ಪಡೆದ ಶಿಕ್ಷಕರು, ಮಕ್ಕಳಿಗೆ ಉಚಿತ ಗುಣಮಟ್ಟದ ಶಿಕ್ಷಣ, ಶೈಕ್ಷಣಿಕ ಸೌಲಭ್ಯಗಳನ್ನು ನೀಡುವ ಮೂಲಕ ಸರ್ಕಾರ ಶಿಕ್ಷಣ ಇಲಾಖೆ ಮಕ್ಕಳ ಕಲಿಕೆಗೆ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲಿಸಿ ಅವರ ಭವಿಷ್ಯ ರೂಪಿಸಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಅಂಕೋಲಾ ಇವರ ಆಶ್ರಯದಲ್ಲಿ ತಾಲೂಕಿನ ತೆಂಕಣಕೇರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿನಡೆದ ತಾಲೂಕು ಮಟ್ಟದ ಶಾಲಾ ಪ್ರಾರಂಭೋತ್ಸವ ಉದ್ಘಾಟಿಸಿ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಾಲಾ ದಾಖಲಾತಿಯಿಂದ ಯಾವ ಮಕ್ಕಳೂ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ತಾಲೂಕಿನ ಎಲ್ಲ ಭಾಗಗಳಲ್ಲಿ ಮಕ್ಕಳ ದಾಖಲಾತಿಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.



ತೆಂಕಣಕೇರಿಯ ಹಿರಿಯ ಪ್ರಾಥಮಿಕ ಶಾಲೆ ಉತ್ತಮ ಶೈಕ್ಷಣಿಕ ಮತ್ತು ಇತರ ಚಟುವಟಿಕೆಗಳ ಮೂಲಕ ತಾಲೂಕಿನ ಅತ್ಯುತ್ತಮ ಶಾಲೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ ನಾಯಕ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣದ ಜೊತೆಗೆ ಉಚಿತ ಪುಸ್ತಕ ಮತ್ತಿತರ ಶೈಕ್ಷಣಿಕ ಪರಿಕರಗಳು, ಸಮವಸ್ತ್ರ ಮೊದಲಾದ ಸೌಲಭ್ಯಗಳನ್ನು ಸರ್ಕಾರ ಒದಗಿ ಸುತ್ತಿದ್ದು, ಶಿಕ್ಷಕರು ಮಕ್ಕಳ ಉಜ್ವಲ ಭವಿಷ್ಯಕ್ಕೆ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅಶೋಕ ನಾಯ್ಕ ಮಾತನಾಡಿ, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಮಹತ್ವದಾಗಿದ್ದು ಮಕ್ಕಳಿಗೆ ಮನೆಯಲ್ಲಿ ಉತ್ತಮ ಸಂಸ್ಕಾರ ನೀಡುವ ಕೆಲಸ ಪ್ರತಿ ಮನೆಗಳಲ್ಲಿ ಆಗಬೇಕು ಎಂದರು.

ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಪಾಂಡುರಂಗ ಗೌಡ, ಅಕ್ಷರ ದಾಸೋಹ ಸಮನ್ವಯಾಧಿಕಾರಿ ಪದ್ಮಾ ನಾಯಕ ಮಾತನಾಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಾಗೇಂದ್ರ ನಾಯ್ಕ, ಸ್ಥಳೀಯ ಪ್ರಮುಖ ರಾಜೇಶ ನಾಯ್ಕ, ರಾಮಕೃಷ್ಣ ನಾಯ್ಕ, ಶ್ರೀಕಾಂತ ನಾಯ್ಕ, ಅನೀಲ ನಾಯ್ಕ ಮತ್ತಿತರರು ಇದ್ದರು. ಮುಖ್ಯಾಧ್ಯಾಪಕ ಅರುಣ ಶೇಡಗೇರಿ ಸ್ವಾಗತಿಸಿದರು, ಶಿಕ್ಷಣ ಸಂಯೋಜಕಿ ಜ್ಯೋತಿ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕಿ ವನಿತಾ ನಾಯಕ ನಿರ್ವಹಿಸಿದರು, ಯಾಸ್ಮೀನ್ ಶೇಖ್ ವಂದಿಸಿದರು. ತೆಂಕಣಕೇರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಬ್ಬದ ವಾತಾ ವರಣ ನಿರ್ಮಾಣವಾಗಿತ್ತು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು,ಮಕ್ಕಳ ಪಾಲಕರು, ಗ್ರಾಮಸ್ಥರು ಸಂಭ್ರಮದಿಂದ ಪಾಲ್ಗೊಂಡರು.

ಮಕ್ಕಳ ಶಿಕ್ಷಣಕ್ಕೆ ಮೂಲ ಸೌಕರ್ಯ ಕಲ್ಪಿಸುವುದು ಸಮಾಜದ ಜವಾಬ್ದಾರಿ

ಹೊನ್ನಾವರ: ಪಟ್ಟಣದ ಸೇಂಟ್ ಥಾಮಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸೋಮವಾರದಂದು 2026– 27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಹಾಗೂ ದಾನಿಗಳ ಸನ್ಮಾನ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ ಗಣ್ಯಾತಿಗಣ್ಯರನ್ನು ಪುಷ್ಪ ಗುಚ್ಛ ನೀಡಿ ಸ್ವಾಗತಿಸಲಾಯಿತು. ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ತುಂಬೆ ವಿಕಾಸ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ವೀರೇಂದ್ರ ನಾಯ್ಕ ಹೊಸ ಬೆಂಚ್‌ಗಳನ್ನು ಪ್ರಾಂಶುಪಾಲರಿಗೆ ಹಸ್ತಾಂತರಿಸುವುದರ ಮೂಲಕ ಮಾತನಾಡಿದ ಅವರು, ಮಕ್ಕಳ ಶಿಕ್ಷಣಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವುದು ಸಮಾಜದ ಜವಾಬ್ದಾರಿ. ಈ ನಿಟ್ಟಿನಲ್ಲಿ ನಮ್ಮ ಟ್ರಸ್ಟ್ ಸದಾ ಸಿದ್ಧ ಎಂದರು.

ಈ ಸಂದರ್ಭದಲ್ಲಿ ತುಂಬ ವಿಕಾಸ ಟ್ರಸ್ಟ್‌ನ ಕಾರ್ಯದರ್ಶಿಗಳಾದ ವಿನೋದ ನಾಯಕ ಮಾತನಾಡಿ, ಮಕ್ಕಳ ಉಜ್ವಲ ಭವಿಷ್ಯಕ್ಕೆ ಶುಭ ಹಾರೈಸಿದರು.



ಸಂಸ್ಥೆಯ ಮುಖ್ಯಸ್ಥರಾದ ರೆ.ಐಶಾನ್ ಜೋಶ್ವಾರವರು ಮಾತನಾಡಿ, ದಾನಿಗಳ ನೆರವಿನಿಂದ ಮಕ್ಕಳಿಗೆ ಉತ್ತಮ ಕಲಿಕಾ ವಾತಾವರಣ ಸಿಕ್ಕಿದೆ. ಟ್ರಸ್ಟ್‌ನ ಈ ಕೊಡುಗೆ ಸದಾ ಸ್ಮರಣೀಯ ಎಂದು ಕೃತಜ್ಞತೆ ಸಲ್ಲಿಸಿದರು.

ಖಜಂಚಿಗಳಾದ ಕೆ.ಸಿ. ವರ್ಗೀಸ್ ಮಾತನಾಡಿ, ಖಾಸಗಿ ಸಹಭಾಗಿತ್ವದಿಂದ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಸಾಧ್ಯ ಇಂತಹ ದಾನಿಗಳ ಸಹಕಾರ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಶಾಲಾವತಿಯಿಂದ ತುಂಬೆ ವಿಕಾಸ ಟ್ರಸ್ಟ್ ಪದಾಧಿಕಾರಿಗಳನ್ನು ಶಾಲು, ಹಾರ, ಸ್ಮರಣಿಕೆ ನೀಡಿ ಗೌರವ ಪೂರ್ವಕವಾಗಿ ಸನ್ಮಾನಿಸಲಾಯಿತು. ಶಿಕ್ಷಕಿ ಇಂದಿರಾ ವಿ. ಗೌಡ ಗೌರವ ಸನ್ಮಾನ ಪತ್ರವನ್ನು ಓದಿ ಸಂಸ್ಥೆಯ ಹೆಚ್ಚಿನ ಅಭಿವೃದ್ಧಿಗೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಮಕ್ಕಳ ನಿರೂಪಣೆ, ಪ್ರಾರ್ಥನಾ ನೃತ್ಯ, ಸ್ವಾಗತ ಗೀತೆ ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತುದಾರರಾದ ಬಿ. ಡಿ . ಫರ್ನಾಂಡಿಸ್, ಶಾಲಾ ಶಿಕ್ಷಕ ವೃಂದ, ಪಾಲಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೇಂಟ್ ಥಾಮಸ್ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ತೆರೆಸಾ ಫೆರ್ನಾಂಡಿಸ್ ಎಲ್ಲರನ್ನು ಸ್ವಾಗತಿಸಿದರು. ಶಿಕ್ಷಕಿ ಕವಿತಾ ಮಡಿವಾಳ ವಂದಿಸಿದರು.

ಕಿರುಸುದ್ದಿ

ನೂತನ ಬಸ್ ಸಂಚಾರ ಪ್ರಾರಂಭ

ಬ್ಯಾಡಗಿ: ಪಟ್ಟಣದಲ್ಲಿ ಕಳೆದು 15ದಿನಗಳಿಂದ ಮುಖ್ಯ ರಸ್ತೆ ಅಗಲೀಕರಣ ಪ್ರಾರಂಭವಾದಾಗಿನಿಂದ ಬಸ್ ನಿಲ್ದಾಣಕ್ಕೆ ಬಸ್ ನಿಲ್ದಾಣ ಬಂದ್ ಆಗಿದ್ದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿತ್ತು ಕೆಲವು ಸಂಘಟನೆಗಳು ನಗರದಲ್ಲಿ ಬಸ್ ಬಿಡುವಂತೆ ಸಾರಿಗೆ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಇದನ್ನು ಮನಗಂಡ ಮೋಟೆಬೆನ್ನೂರಿಂದ ಶಿಡೇನೂರ ಗ್ರಾಮಕ್ಕೆ ನೂತನ ಬಸ್ ಸಂಚಾರಕ್ಕೆ ಚಾಲನೆ ನೀಡಿದರು.

ಈ ಬಸ್ ಮೋಟೆಬೆನ್ನೂರಿನಿಂದ.ಬ್ಯಾಡಗಿ ಮಾರ್ಗವಾಗಿ ಶಿಡೇನೂರ ಗ್ರಾಮಕ್ಕೆ ತೆರಳಿದ ಹಂಸಬಾವಿ, ರಟ್ಟಿಹಳ್ಳಿ, ಹಿರೇಕೆರೂರ ಕಡೆಗೆ ಹೋಗುವ ಪ್ರಯಾಣಿಕರಿಗೆ ರಾಣೇಬೆನ್ನೂರು, ಹರಿಹರ, ದಾವಣಗೆರೆ, ಕದರಮಂಡಲಗಿ, ಹಾವೇರಿ, ಹುಬ್ಬಳ್ಳಿ ಸೇರಿದಂತೆ ಮತ್ತು ಹಲವು ಕಡೆ ತೆರಳಲು ಪ್ರಯಾಣಿಕರಿಗೆ ಬಹಳಷ್ಟು ಅನುಕೂಲ ಆಗಲಿದೆ.

ನೂತನ ಬಸ್ ಸಂಚಾರವು ಬೆಳಗ್ಗೆ 7.30 ರಿಂದ ಸಂಜೆ 7.30 ರ ವರೆಗೆ ಬಿಡುವಿಲ್ಲದ ಸಂಚರಿಸಲಿದೆ.

ಗ್ರಾಮಗಳ ಪ್ರಯಾಣಿಕರು ಮತ್ತು ಪಟ್ಟಣದ ಪ್ರಯಾಣಿಕರಿಗೆ ಅನುಕೂಲವಾಗಲಿದ್ದು ಈ ನೂತನ ಬಸ್ ಸಂಚಾರದಿಂದ ಪ್ರಯಾಣಿಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥಾಪಕರಾದ ಅಡರಗಟ್ಟಿ, ಚನ್ನಬಸಪ್ಪ ಹುಲ್ಲತ್ತಿ, ಬಸವರಾಜ್ ಸಂಕಣ್ಣನವರ್, ಮಂಜುನಾಥ್ ಹಂಜಗಿ ಅನೇಕರು ಉಪಸ್ಥಿತರಿದ್ದರು.

ಮತಗಟ್ಟೆ ಅಧಿಕಾರಿ, ಮೇಲ್ವಿಚಾರಕರು, ಏಜೆಂಟರಿಗೆ ತರಬೇತಿ

ಹಾವೇರಿ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026 ಕಾರ್ಯ ಜೂನ್ 30ರಿಂದ ಪ್ರಾರಂಭವಾಗಲಿದ್ದು, ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಅಧಿಕಾರಿ, ಮತಗಟ್ಟೆ ಮೇಲ್ವಿಚಾರಕರು ಹಾಗೂ ಮತಗಟ್ಟೆ ಏಜೆಂಟರುಗಳಿಗೆ ತರಬೇತಿ ಜೂನ್ 4 ರಂದು ಬೆಳಿಗ್ಗೆ 10 ಗಂಟೆಯಿಂದ ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಹಾನಗಲ್ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ಹಾನಗಲ್ ಡಾ.ಬಾಬು ಜಗಜೀವನರಾಮ್ ಭವನದಲ್ಲಿ, ಶಿಗ್ಗಾಂವ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ಶಿಗ್ಗಾಂವ ಅಂಬೇಡ್ಕರ ಸಂಕೀರ್ಣ ಭವನ, ಹಾವೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ಹಾವೇರಿ ಗಾಂಧಿ ಭವನ, ಬ್ಯಾಡಗಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ಬ್ಯಾಡಗಿ ಬಿ.ಇ.ಎಸ್.ಎಂ. ಆರ್ಟ್ಸ ಮತ್ತು ಕಾಮರ್ಸ್ ಕಾಲೇಜ್‌ನಲ್ಲಿ, ಹಿರೇಕೆರೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ಹಿರೇಕೆರೂರು ಅಬ್ದುಲ್ ಕಲಾಂ ಕಲಾಭವನದಲ್ಲಿ ಹಾಗೂ ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟವರಿಗೆ ರಾಣೇಬೆನ್ನೂರು ಎಪಿಎಂಸಿ ಸಮುದಾಯ ಭವನದಲ್ಲಿ ತರಬೇತಿ ಆಯೋಜಿಸಲಾಗಿದೆ.

ನೋಡಲ್ ಅಧಿಕಾರಿಗಳ ನೇಮಕ

ಹಾವೇರಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಸಂಬಂಧ ಮತದಾರರ ಸಹಾಯ ಕೇಂದ್ರ ಹಾಗೂ ಬಿ.ಎಲ್.ಓ ಸಹಾಯ ಕೇಂದ್ರಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ನೋಡಲ್ ಅಧಿಕಾರಿಗಳನ್ನು ನೇಮಕಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಸಹಾಯವಾಣಿ ಕೇಂದ್ರಗಳನ್ನು ಆಯಾ ಮತಗಟ್ಟೆಗಳಲ್ಲಿ ಸ್ಥಾಪಿಸಲು ಹಾಗೂ ಬಿಎಲ್‌ಒ ಸಹಾಯವಾಣಿ ಕೇಂದ್ರಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ, ನಗರ ಪ್ರದೇಶಗಳಲ್ಲಿ ವಾರ್ಡುವಾರು ಸ್ಥಾಪಿಸಲು ಹಾಗೂ ಈ ಸಹಾಯವಾಣಿ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಒದಗಿಸಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

82-ಹಾನಗಲ್, 83-ಶಿಗ್ಗಾಂವ, 84-ಹಾವೇರಿ, 85-ಬ್ಯಾಡಗಿ, 86- ಹಿರೇಕೆರೂರು ಹಾಗೂ 87-ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರಗಳಿಗೆ ಆಯಾ ತಾಲೂಕಿನ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಗ್ರಾಮೀಣ ಪ್ರದೇಶಕ್ಕೆ ಹಾಗೂ ಪುರಸಭೆ ಮುಖ್ಯಾಧಿಕಾರಿಗಳು ಹಾಗೂ ನಗರಸಭೆ ಪೌರಾಯುಕ್ತರನ್ನು ನಗರ ಪ್ರದೇಶಗಳಿಗೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.



ಬ್ಯಾಡಗಿ: ಪಟ್ಟಣದಲ್ಲಿ ಕಳೆದು 15ದಿನಗಳಿಂದ ಮುಖ್ಯ ರಸ್ತೆ ಅಗಲೀಕರಣ ಪ್ರಾರಂಭವಾದಾಗಿನಿಂದ ಬಸ್ ನಿಲ್ದಾಣಕ್ಕೆ ಬಸ್ ನಿಲ್ದಾಣ ಬಂದ್ ಆಗಿದ್ದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿತ್ತು ಕೆಲವು ಸಂಘಟನೆಗಳು ನಗರದಲ್ಲಿ ಬಸ್ ಬಿಡುವಂತೆ ಸಾರಿಗೆ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಇದನ್ನು ಮನಗಂಡ ಮೋಟೆಬೆನ್ನೂರಿಂದ ಶಿಡೇನೂರ ಗ್ರಾಮಕ್ಕೆ ನೂತನ ಬಸ್ ಸಂಚಾರಕ್ಕೆ ಚಾಲನೆ ನೀಡಿದರು.

ಸಂಸ್ಕಾರ, ಶಿಸ್ತು ಬೆಳೆಸುವ ಕೇಂದ್ರ ಶಾಲೆ: ಪ್ರಕಾಶ

ರಾಣೇಬೆನ್ನೂರ: ಶಾಲೆಯು ಕೇವಲ ಶಿಕ್ಷಣ ನೀಡುವುದಲ್ಲದೆ, ಸಂಸ್ಕೃತಿ, ಸಂಸ್ಕಾರ, ಶಿಸ್ತು, ಸಮಯಪಾಲನೆ ಹಾಗೂ ಏಕಾಗ್ರತೆಯಂತಹ ಜೀವನ ಮೌಲ್ಯಗಳನ್ನು ಬೆಳೆಸುವ ಕೇಂದ್ರವಾಗಿದ್ದು ಗುರುಹಿರಿಯರಿಗೆ ಗೌರವ ನೀಡುವುದು ಹಾಗೂ ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಯಶಸ್ಸಿನ ಮೆಟ್ಟಿಲುಗಳಾಗಿವೆ ಎಂದು ಪಿಡಿಓ ಪ್ರಕಾಶ ಎಂ.ಕೆ ಹೇಳಿದರು. ತಾಲೂಕಿನ ಮುದೇನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಗ್ರಾಮ ಪಂಚಾಯತಿ ಇವರುಗಳ ಸಂಯುಕ್ತಾಶ್ರಯದಲ್ಲಿ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿ ಶಾಲೆಗಳಿಗೆ ಮೊರೆ ಹೋಗದೆ ನಮ್ಮೂರ ಸರಕಾರಿ ಶಾಲೆಯ ಪೂರ್ವ ಪ್ರಾಥಮಿಕ ಹಂತದ ಎಲ್‌ಕೆಜಿ ಯುಕೆಜಿ ಹಾಗೂ 1ರಿಂದ 7ನೇ ತರಗತಿಯ ದ್ವಿಭಾಷಾ ಮಾಧ್ಯಮ ಈ ಶೈಕ್ಷಣಿಕ ಅವಧಿಯಿಂದ ಪ್ರಾರಂಭವಾಗಿದ್ದು ಅನುಭವವುಳ್ಳ ನುರಿತ ಶಿಕ್ಷಕರು ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಉತ್ತಮ ಬೋಧನೆ ಮಾಡುತ್ತಿದ್ದಾರೆ. ಉಚಿತ ಶಿಕ್ಷಣದ ಲಾಭವನ್ನು ಪೋಷಕರು ಹಾಗೂ ಮಕ್ಕಳು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಾಶ ಹೇಳಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ರೂಪಾ ಗವೆನವರ. ಉಪಾಧ್ಯಕ್ಷ ಹನುಮಪ್ಪ ಕೊಳ್ಳೇರ, ಶಿಕ್ಷಕ ಪ್ರಕಾಶ ಹೊಸಳ್ಳಿ, ಲಕ್ಷ್ಮಿಬಾಯಿ ನಾವಿ, ಸುರೇಶ ಕರೂರು, ಜಗದೀಶ ಎಲ್ ಕೆ, ಸುನೀತಾ ಕಡ್ಲಿಗೊಂದಿ, ರಾಜೇಶ್ವರಿ ಕಲಾಭಾವಿ, ಶಹನಾಜ್ ರಾಟಿಮನಿ, ರಾಘವೇಂದ್ರ ಹುಲ್ಲತ್ತಿ, ಚನ್ನವೀರ ಬಿಸೆಂಬ್ಲಿ, ಮಾಲತೇಶ ಓಲೇಕಾರ ಮತ್ತಿತರರು ಇದ್ದರು.



ರಾಣೇಬೆನ್ನೂರ:ತಾಲೂಕಿನ ಮುದೇನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಪಿಡಿಓ ಪ್ರಕಾಶ ಎಂ.ಕೆ ಉದ್ಘಾಟಿಸಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ರೂಪಾ ಗವೆನವರ, ಉಪಾಧ್ಯಕ್ಷ ಹನುಮಪ್ಪ ಕೊಳ್ಳೇರ, ಶಿಕ್ಷಕ ಪ್ರಕಾಶ ಹೊಸಳ್ಳಿ, ಲಕ್ಷ್ಮಿಬಾಯಿ ನಾವಿ, ಸುರೇಶ ಕರೂರು, ಜಗದೀಶ ಎಲ್ ಕೆ, ಸುನೀತಾ ಕಡ್ಲಿಗೊಂದಿ, ರಾಜೇಶ್ವರಿ ಕಲಾಭಾವಿ, ಶಹನಾಜ್ ರಾಟಿಮನಿ, ರಾಘವೇಂದ್ರ ಹುಲ್ಲತ್ತಿ, ಚನ್ನವೀರ ಬಿಸೆಂಬ್ಲಿ, ಮಾಲತೇಶ ಓಲೇಕಾರ ಸೇರಿದಂತೆ ಮತ್ತಿತರರು ಇದ್ದರು.

ಎಪಿಎಂಸಿಯ ಗೋದಾಮ್‌ಗೆ ಮುಗಿಬಿದ್ದ ರೈತರು

ಸೋಯಾಬಿನ್ ಬಿತ್ತನೆ ಬೀಜಕ್ಕಾಗಿ ಹರಸಾಹಸ

ಹಾವೇರಿ: ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘ (ಕೆಓಎಫ್)ದಿಂದ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರೈತರಿಗೆ ಅಗತ್ಯ ಸೊಯಾಬಿನ್ ಡೆಮೋ ಉಚಿತ ಬಿತ್ತನೆ ಬೀಜಗಳನ್ನು ವಿತರಿಸುವುದಾಗಿ ಘೋಷಿಸಿತ್ತು. ಆದರೆ ಪರೀಕ್ಷಾರ್ಥವಾಗಿ ವಿತರಿಸುವ ಸೋಯಾಬಿನ್ ಡೆಮೋ ಉಚಿತ ಬಿತ್ತನೆ ಬೀಜಗಳನ್ನು ಪಡೆದುಕೊಳ್ಳಲು ರೈತರು ಮಂಗಳವಾರ ನಗರದ ಹಾನಗಲ್ ರಸ್ತೆ ಎಪಿಎಂಸಿಯ ಗೋದಾಮು ಬಳಿ ಮುಗಿಬಿದ್ದ ಘಟನೆ ನಡೆಯಿತು.

ಕಳೆದ 3-4 ದಿನಗಳಿಂದ ಕೆಓಎಫ್ ದಿಂದ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರೈತರಿಗೆ ಅಗತ್ಯವಾದ ಸೊಯಾಬಿನ್ ಬಿತ್ತನೆ ಬೀಜಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ರೈತರಿಂದ ಜಮೀನಿನ ಪಹಣಿ ಹಾಗೂ ಆಧಾರ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ತೆಗೆದುಕೊಂಡು ಎಫ್ ಐಡಿಗೆ ಸೇರ್ಪಡೆ ಮಾಡಿದ ನಂತರ ಸೋಯಾಬಿನ್ ಬೀಜದ ಬ್ಯಾಗ್ ಗಳನ್ನು ನೀಡಲಾಗುತ್ತಿದೆ. ಆದರೆ ಮಂಗಳವಾರ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸೇರಿದ್ದರು.

ರೈತರಿಂದ ದಾಖಲೆ ಪಡೆದು 2ದಿನ ಬಿಟ್ಟು ಬರುವಂತೆ ತಿಳಿಸುತ್ತಿದ್ದರಿಂದ ರೈತರಲ್ಲಿ ಆಕ್ರೋಶದ ವಾತಾವರಣ ಸೃಷ್ಟಿಯಾಯಿತು. ಇದನ್ನು ಪ್ರಶ್ನಿಸಿದ ರೈತರಿಗೆ, ಶನಿವಾರ ದಾಖಲೆ ಕೊಟ್ಟ ರೈತರನ್ನು ಎಫ್‌ಐಡಿಗೆ ನೋಂದಣಿ ಮಾಡಿಸಿ, ಬೀಜ ವಿತರಿಸಲಾಗುತ್ತಿದೆ. ಸೋಮವಾರ ಕೊಟ್ಟವರಿಗೆ ಮಂಗಳವಾರ ಕೊಡುತ್ತಿದ್ದೇವೆ. ಇವತ್ತು ಕೊಟ್ಟವರಿಗೆ ಬಿತ್ತನೆ ಬೀಜ ಸಿಗುತ್ತೋ ಇಲ್ಲವೋ ಗೊತ್ತಿಲ್ಲ, ಒಂದುವೇಳೆ ದಾಸ್ತಾನು ಇದ್ದರೆ ಬುಧವಾರ ಅಥವಾ ಗುರುವಾರ ಕೊಡುತ್ತೇವೆ ಎಂದು ಸಿಬ್ಬಂದಿಗಳು ತಿಳಿಸಿದರು.

ಇದಕ್ಕೆ ರೈತರಿಂದ ಆಕ್ರೋಶ ವ್ಯಕ್ತವಾಗಿ ಕೆಲಕಾಲ ಗೊಂದಲದ ವಾತಾವರಣ ಉಂಟಾಯಿತು. ರೈತರು ಹಾಗೂ ಅಧಿಕಾರಿಗಳ ನಡುವೆ ಜಟಾಪಟಿ ನಡೆದು ಗೋದಾಮಿನಲ್ಲಿ ನೂಕುನುಗ್ಗಲು ಉಂಟಾಯಿತು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್‌ಪಿ ಗಿರಿಮಲ್ಲಪ್ಪ ತಳಕಲ್ಲ, ಶಹರ ಠಾಣೆ ಸಿಪಿಐ ಮೋತಿಲಾಲ್ ಪವಾರ, ಗ್ರಾಮೀಣ ಠಾಣೆಯ ಸಿದ್ದಾರೂಢ ಬಡಿಗೇರ, ಡಿ.ರವಿಕುಮಾರ ರೈತರೊಂದಿಗೆ ಸಮಾಲೋಚನೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಮುಂದಾದರು. ಈಗಾಗಲೇ ದಾಖಲೆ ನೀಡಿದ ರೈತರು ಖುದ್ದಾಗಿ ಬಂದಲ್ಲಿ ತಲಾ 25ಕೆಜಿ ತೂಕದ 1ಚೀಲವನ್ನು ಮಾತ್ರ ನೀಡುವುದಾಗಿ ತಿಳಿಸಿ ಅದರಂತೆ ಸಿಬ್ಬಂದಿಗಳು ಹೆಸರು ಕೂಗಿ ಕರೆದು ದಾಸ್ತಾನು ಖಾಲಿಯಾಗುವವರೆಗೆ ಒಬ್ಬರಿಗೆ ಒಂದೆ ಚೀಲ ವಿತರಿಸಿದರು.



ದಾಖಲೆ ವಾಪಸ್ ನೀಡಲಿ

ಈ ವೇಳೆ ಪತ್ರಿಕೆಯೊಂದಿಗೆ ಮಾತನಾಡಿದ ರೈತ ಮಂಜುನಾಥ ಬಾರ್ಕಿ ಹಾಗೂ ಶಿವಯ್ಯ ಗೌರಿಮಠ, ಸೊಯಾಬಿನ್ ಡೆಮೋ ಬೀಜಕ್ಕಾಗಿ ಪಾಳೆ ಹಚ್ಚಿದ್ದೇವೆ. 3-4ದಿನದಿಂದ ದಾಖಲೆ ಪಡೆದುಕೊಂಡು ಬೀಜ ನೀಡುತ್ತಿದ್ದು, ಇಂದು ಬೆಳಗ್ಗೆ ಕೂಡ ದಾಖಲಾತಿ ಪಡೆದು ಈಗ ಬೀಜದ ದಾಸ್ತಾನು ಖಾಲಿಯಾಗಿದೆ ಎಂದು ರೈತರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಗೋದಾಮಿಯಲ್ಲಿ ದಾಸ್ತಾನು ಇದ್ದರೆ ಕೊಡಲಿ, ಇಲ್ಲದಿದ್ದರೆ ಬೇಡ, ನಾವು ಒಳಗೆ ಬಂದು ನೋಡುತ್ತೇವೆ ತೋರಿಸಿ ಎಂದರೂ ತೋರಿಸುತ್ತಿಲ್ಲ. ಒಳಗಡೆ ಇಟ್ಟುಕೊಂಡು ಇಲ್ಲವೆನ್ನುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ, ಬೀಜ ಇಲ್ಲದಿದ್ದರೇ ನಮ್ಮ ದಾಖಲೆ ವಾಪಸ್ ನೀಡಲಿ ಎಂದು ಆಗ್ರಹಿಸಿದರು.

ಪ್ರತಿ ಗ್ರಾಮದಲ್ಲಿ 50-100ಎಕರೆಯಲ್ಲಿ ಸೋಯಾಬಿನ್ ಪರೀಕ್ಷಾರ್ಥ ಬೀಜ ಬಿತ್ತನೆ ಮಾಡುವ ಉದ್ದೇಶ ಎಣ್ಣೆ ಬೀಜ ಬೆಳೆಗಾರರ ಸಂಘದ್ದಾಗಿದೆ. ಅದರಂತೆ ಹಾವೇರಿ ತಾಲೂಕಿಗೆ 1,500 ಚೀಲ ಪೂರೈಸಿದ್ದು, 3-4ದಿನಗಳಿಂದ ರೈತರಿಂದ ದಾಖಲೆ ಪಡೆದು 709 ರೈತರಿಗೆ ವಿತರಿಸಿದ್ದೇವೆ. ಹಿಂದಿನ ದಾಖಲೆ ಅನ್ವಯ ಮಂಗಳವಾರ 450 ಬ್ಯಾಗ್ ವಿತರಿಸಲಾಗಿತ್ತು. ದಾಸ್ತಾನು ಖಾಲಿಯಾದ ಹಿನ್ನೆಲೆ ದಾಖಲಾತಿ ಪಡೆಯಲು ನಿರಾಕರಿಸಿದ್ದು, ರೈತರು ಒತ್ತಾಯಿಸಿದ್ದರಿಂದ ದಾಖಲೆ ಪಡೆದುಕೊಂಡಿದ್ದೇವೆ. ಮಂಗಳವಾರ ಸಂಜೆ ತನಕ ಖಾಲಿ ಆಗುವವರೆಗೆ ವಿತರಿಸಲಾಗಿದೆ.

■ ಸಂಗಮೇಶ ಹಂಪಿ, ಕ್ಷೇತ್ರಾಧಿಕಾರಿ, ಕೆಓಎಫ್, ಹಾವೇರಿ.

ಪ್ರಕಾಶ ಕೋಳಿವಾಡಗೆ ಸಚಿವ ಸ್ಥಾನ ನೀಡಿ

ರಾಣೇಬೆನ್ನೂರ: ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಡಿ.ಕೆ. ಶಿವಕುಮಾರ ನೇತೃತ್ವದ ನೂತನ ಸಚಿವ ಸಂಪುಟದಲ್ಲಿ ಸ್ಥಳೀಯ ಶಾಸಕ ಪ್ರಕಾಶ ಕೋಳಿವಾಡರಿಗೆ ಸಚಿವ ಸ್ಥಾನ ನೀಡಬೇಕು ಎಂದು ನಿಶಾರ್ಡ್ ಸಂಸ್ಥೆ ಅಧ್ಯಕ್ಷೆ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರಾದ ರುಕ್ಮಿಣಿ ಸಾವುಕಾರ ಹೇಳಿದರು.

ನಗರದಲ್ಲಿ ಸ್ಥಳೀಯ ಶಾಸಕ ಪ್ರಕಾಶ ಕೋಳಿವಾಡರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಲು ಕರೆಯಲಾಗಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಸಂಪುಟದಲ್ಲಿ ಯುವಕರಿಗೆ ಪ್ರಾಧಾನ್ಯತೆ ನೀಡುವಂತೆ ಪಕ್ಷದ ನಾಯಕ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿರುವ ಯುವನಾಯಕ ಪ್ರಕಾಶ ಕೋಳಿವಾಡರಿಗೆ ಸಚಿವ ಸ್ಥಾನ ನೀಡುವುದು ಸೂಕ್ತ. ಈಗಾಗಲೇ ಶಾಸಕರು ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವುದರಿಂದ ರಾಣೇಬೆನ್ನೂರು ತಾಲೂಕು ಜಿಲ್ಲೆಯಲ್ಲಿಯೇ ಹೆಚ್ಚಿನ ಅಭಿವೃದ್ಧಿ ಕಾಣಲಿದೆ ಎಂದು ಒತ್ತಾಯಿಸಿದರು.

ಅಂಜುಮನ್ ಸಂಸ್ಥೆ ಅಧ್ಯಕ್ಷ ಎಚ್.ಎಫ್. ಬಿದರಿ ಮಾತನಾಡಿ, ಶಾಸಕರು ಹೊಸ ಹೊಸ ಚಿಂತನೆ ಹೊಂದಿದ್ದು ಶಿಕ್ಷಣ ಕ್ಷೇತ್ರದ ಸುಧಾರಣೆಗೆ ವಿಶೇಷ ಒತ್ತು ನೀಡಿದ್ದಾರೆ. ವಿದ್ಯಾರ್ಥಿಗಳಲ್ಲಿ ಇಂಗ್ಲಿಷ ಹಾಗೂ ಕಂಪ್ಯೂಟರ್ ತರಬೇತಿ ಮಕ್ಕಳಲ್ಲಿ ಕೊಡಿಸಲು ಶ್ರಮವಹಿಸಿದ್ದಾರೆ. ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದರು. ಬಿ.ಬಿ.ನಂದ್ಯಾಲ ಮಾತನಾಡಿದರು.

ಅಶೋಕ ನಾಯ್ಕ್, ಮುಂದಿನಮನಿ, ಬೇಬಕ್ಕ ಮೆಣಸಿನಹಾಳ, ಅಜರೆಡ್ಡಿ, ಡಾ.ಮನೋಜ ಸಾವುಕಾರ, ಇರ್ಫಾನ್ ದಿಡಗೂರ ಸೇರಿದಂತೆ ಮತ್ತಿತರರಿದ್ದರು.



ಡಿ.ಕೆ. ಶಿವಕುಮಾರ ಸಿಎಂ ಆಗಲೆಂದು ಮಂಡಿಸೇವೆ ಸಲ್ಲಿಸಿದ ಅಭಿಮಾನಿ

ಹಾವೇರಿ: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮುಖ್ಯಮಂತ್ರಿ ಆಗಬೇಕೆಂದು ಹರಕೆ ಹೊತ್ತಿದ್ದ ಹಾವೇರಿಯ ಬಸ್ತಿ ಓಣಿಯ ರಾಜು ತುಮ್ಮಣ್ಣನವರ ಎಂಬ ಅಭಿಮಾನಿಯೊಬ್ಬರು ಇದೀಗ ಡಿ.ಕೆ.ಶಿವಕುಮಾರ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಮಂಡಿಸೇವೆ ಸಲ್ಲಿಸಿ ಹರಕೆ ತೀರಿಸಿದರು.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದಲ್ಲಿರುವ ಶ್ರೀ ಮೈಲಾರಲಿಂಗೇಶ್ವರ ದೇವಾಲಯಕ್ಕೆ ಭೇಟಿ ನೀಡಿದ ರಾಜು ತುಮ್ಮಣ್ಣನವರ್, ಕ್ಷೇತ್ರದಲ್ಲಿ ಸ್ನಾನ ಮಾಡಿ ಕೈಯಲ್ಲಿ ಡಿ.ಕೆ. ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಮಂಡಿಸೇವೆ ಸಲ್ಲಿಸಿದರು. ಹಲವು ಮೀಟರ್‌ಗಳಷ್ಟು ದೂರ ಮಂಡಿಯಲ್ಲಿ ನಡೆದುಕೊಂಡು ಬಂದು ಅವರು ತಮ್ಮ ಹರಕೆಯನ್ನು ನೆರವೇರಿಸಿದರು. ಬಳಿಕ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇವಾಲಯದ ಅರ್ಚಕರು ಅವರಿಗೆ ಕೇಸರಿ ಶಾಲು ಹೊದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ರಾಜು ತುಮ್ಮಣ್ಣನವರ ಮಾತನಾಡಿ, ಡಿ.ಕೆ. ಶಿವಕುಮಾರ್ ಸಿಎಂ ಆದರೆ ಮಂಡಿಸೇವೆ ಸಲ್ಲಿಸುತ್ತೇನೆ ಎಂದು ಈ ಹಿಂದೆಯೇ ಹರಕೆ ಹೊತ್ತಿದ್ದೆ. ಸರ್ಕಾರ ಅಧಿಕಾರಕ್ಕೆ ಬಂದ ಎರಡೂವರೆ ವರ್ಷಗಳ ಬಳಿಕ ಅವರು ಸಿಎಂ ಆಗುತ್ತಾರೆ ಎಂದು ನಿರೀಕ್ಷಿಸಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಇದೀಗ ಸರ್ಕಾರಕ್ಕೆ ಮೂರು ವರ್ಷಗಳು ಪೂರ್ಣಗೊಂಡ ಬಳಿಕ ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಿರುವ ಹಿನ್ನೆಲೆಯಲ್ಲಿ ಮೈಲಾರ ಲಿಂಗೇಶ್ವರನ ಸನ್ನಿಧಾನದಲ್ಲಿ ಮಂಡಿಸೇವೆ ಸಲ್ಲಿಸಿ ಹರಕೆ ತೀರಿಸಿದ್ದೇನೆ ಎಂದರು.

ನಾನು ಡಿ.ಕೆ. ಶಿವಕುಮಾರ್ ಅವರ ಅಭಿಮಾನಿ. ಅವರು ಮುಖ್ಯಮಂತ್ರಿ ಆಗುತ್ತಿರುವುದು ನನಗೆ ಸಂತಸ ತಂದಿದೆ. ಈ ಎರಡು ವರ್ಷಗಳಷ್ಟೇ ಅಲ್ಲ, 2028ರಲ್ಲಿಯೂ ಅವರೇ ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಅವರು ಅಭಿಪ್ರಾಯಪಟ್ಟರು.



ಕಲಾವಿದ ಮಾಲತೇಶ ಗರಡಿಮನಿಗೆ ಪ್ರಶಸ್ತಿ



ರಾಣೇಬೆನ್ನೂರ: ಸ್ಥಳೀಯ ಕಲಾವಿದ ಮಾಲತೇಶ ಗರಡಿಮನಿ ಇವರ ಚಿತ್ರಕಲಾ ಕ್ಷೇತ್ರದ ಸಾಧನೆಯನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿ ದೊರಕಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ನಾಡೋಜ ಡಾ. ಆರ್.ಎಂ. ಹಡಪದ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಡಾ. ಎಸ್.ಸಿ. ಪಾಟೀಲ, ಡಾ.ಬಸವರಾಜ ಗವಿಮಠ, ಡಾ.ಮೋಹನರಾವ್ ಪಾಂಚಾಳ, ಮೇಘ ಮೈತ್ರಿ ಕನ್ನಡ ಸಂಘದ ಅಧ್ಯಕ್ಷ ರಮೇಶ ಕಮತಗಿ ಸೇರಿದಂತೆ ಮತ್ತಿತರರು ಇದ್ದರು.

ಇಂದಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ಹಾವೇರಿ: ತಾಲೂಕಿನ ಅಗಡಿ ಗ್ರಾಮದ ಶ್ರೀ ಆನಂದವನದಲ್ಲಿ ಅಧಿಕ ಮಾಸದ ನಿಮಿತ್ತ ಜೂ.3ರಿಂದ 9ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಜೂ.3 ರಂದು ಬೆಳಗ್ಗೆ 108 ಗುರುಚರಿತ್ರೆ, ಪಾರಾಯಣ, ಗಣಪತಿ ಹೋಮ, ಪೂರ್ಣಾಹುತಿ, ಮಧುಕರಿ ಪ್ರಸಾದ, ಸಂಜೆ ಭಜನೆ ನಡೆಯಲಿದೆ. ಜೂ.4ರಂದು ಗುರುಚರಿತ್ರೆ, ಚಂಡಿ ಪಾರಾಯಣ, ದತ್ತ ಮಾಲಾ ಮಂತ್ರ ಹೋಮ, ಜೂ.5ರಂದು ಗುರುಚರಿತ್ರೆ, ನವಚಂಡಿ ಹೋಮ, ಸಂಜೆ ದೇವಿ ಗೊಂದಳ ಕಾರ್ಯಕ್ರಮ ನಡೆಯಲಿದೆ.ಜೂ.6ರಂದು ಗುರುಚರಿತ್ರೆ, ಮಲ್ಹಾರಿ ಪಾರಾಯಣ, ಪವಮಾನ ಹೋಮ, ಸಂಜೆ ಭಜನೆ ನಡೆಯಲಿದ್ದು, ಜೂ.7ರಂದು ಗುರುಚರಿತ್ರೆ, ಚಿಕ್ಕಯ್ಯ ಕಾರ್ಯಕ್ರಮ, ಭಂಡಾರ ಅರ್ಚನೆ, ಮಲ್ಹಾರಿ ಹೋಮ ಜರುಗಲಿದೆ. ಜೂ.8 ರಂದು ಗುರುಚರಿತ್ರೆ, ದೊಡ್ಡಯ್ಯ ಕಾರ್ಯಕ್ರಮ, ಪ್ರತ್ಯಂಗಿರಾ ಹೋಮ, ಜೂ.9ರಂದು ಗುರುಚರಿತ್ರೆ, ರುದ್ರ ಸ್ವಾಹಕಾರ ಹೋಮ, ಪ್ರಸಾದ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಿದೆ.

ಮೌನ ಮೆರವಣಿಗೆ ಜೂ.6ಕ್ಕೆ ಮುಂದೂಡಿಕೆ

ಹಾನಗಲ್ಲ: ಗೋಮಾತೆಯನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲು ಜೂ. 3ರಂದು ನಿಗದಿಯಾಗಿದ್ದ ಮುಸ್ಲಿಂ ಸಮುದಾಯದ ಮೌನ ಮೆರವಣಿಗೆಯನ್ನು ಜೂ. 6ಕ್ಕೆ ಮುಂದೂಡಲಾಗಿದೆ ಎಂದು ಅಂಜುಮನ್ ಇಸ್ಲಾಂ ಹಾನಗಲ್ಲ ಕಮೀಟಿ ಅಧ್ಯಕ್ಷ ನಜೀರ್ ಅಹ್ಮದ್ ಸವಣೂರ ಹೇಳಿದರು.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಹಾನಗಲ್ಲ ಸೇರಿದಂತೆ ತಾಲೂಕಿನ ವಿವಿಧ ಅಂಜುಮನ್ ಕಮೀಟಿ ಮತ್ತು ಪಂಚ ಕಮೀಟಿ ಪ್ರಮುಖರು ಸೇರಿ ಸಭೆ ಮಾಡಿ ಮೌನ ಮೆರವಣಿಗೆಯನ್ನು ಮುಂದೂಡುವ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಬುಧವಾರ ರಾಜ್ಯದ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರ ಸಮಾರಂಭ ಇದೆ. ಹೀಗಾಗಿ ಪೊಲೀಸ್ ಇಲಾಖೆ ಸೂಚನೆ ಮೇರೆಗೆ ನಮ್ಮ ಮೌನ ಮೆರವಣಿಗೆಯನ್ನು ಮುಂದೂಡಲಾಗಿದೆ ಎಂದು ತಿಳಿಸಿದರು.

ಗೋವು ರಾಷ್ಟ್ರೀಯ ಪ್ರಾಣಿ ಎಂದು ಕೇಂದ್ರ ಘೋಷಿಸಬೇಕು. ನಮ್ಮ ಸಮುದಾಯ ಯಾವ ಜಾನುವಾರ ಆಹಾರವಾಗಿ ಬಳಸಬೇಕು ಎಂದು ರಾಜ್ಯ ಸರಕಾರ ನಿರ್ಧರಿಸಬೇಕು ಎಂಬ ಹಲವು ಬೇಡಿಕೆಗಳನ್ನು ಇಟ್ಟುಕೊಂಡು ಮೌನ ಮೆರವಣಿ ನಡೆಯಲಿದೆ.

ಶನಿವಾರ ಬೆಳಿಗ್ಗೆ 11 ಗಂಟೆಗೆ ಇಲ್ಲಿನ ಕಾಶ್ಮೀರಿ ದರ್ಗಾದಿಂದ ತಹಸೀಲ್ದಾರ್ ಕಚೇರಿ ತನಕ ಮೌನ ಮೆರವಣಿಗೆ ನಡೆಯಲಿದೆ. ತಾಲೂಕಿನ ಮುಸ್ಲಿಂ ಸಮುದಾಯ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ನಜೀರ್ ಅಹ್ಮದ್ ಸವಣೂರ ಹೇಳಿದರು.

ಅಕ್ಕಿಆಲೂರ ಅಂಜುಮನ್ ಕಮೀಟಿ ಕಾರ್ಯದರ್ಶಿ ಯಾಸೀರ್‌ಅರಾಫತ್ ಮಕಾಂದಾರ್, ಹಾನಗಲ್ಲ ಅಂಜುಮನ್ ಕಮೀಟಿಯ ನಿಸಾರ್‌ಅಹ್ಮದ್ ಗೌಂಡಿ, ನಿಸಾರ್‌ಅಹ್ಮದ್ ಖಾಜಿ, ಅಬ್ದುಲ್ ರೆಹಮಾನ್ ನರೇಗಲ್, ಅಪ್ರೋಜ್ ಅಹ್ಮದ್ ರಾಣೆಬೆನ್ನೂರ, ಖುರ್ಷಿದ್ ಹುಲ್ಲತ್ತಿ, ನಿಸಾರ್‌ಅಹ್ಮದ್ ಪಾನವಾಲೆ, ನವೀದ್ ಯಾವಗಲ್, ಇರ್ಫಾನ್ ಸೌದಾಗರ್, ಮುನೀರ್‌ಅಹ್ಮದ್ ಪಾಳಾ ಮತ್ತಿತರರು ಇದ್ದರು.



ಮೂಲಭೂತ ಸೌಲಭ್ಯ ಒದಗಿಸಲು ಸಾರ್ವಜನಿಕರ ಒತ್ತಾಯ

ಶಿಗ್ಗಾವಿ: ಜಿ+1 ಮನೆಗಳನ್ನು ಫಲಾನುಭವಿಗಳಿಗೆ ವಿತರಿಸಿ ಒಂದು ವರ್ಷ ಕಳೆಯುತ್ತ ಬಂದರೂ ನಿರ್ಮಿತಿ ಕೇಂದ್ರ ಹಾಗೂ ಪುರಸಭೆಯ ಅಧಿಕಾರಿಗಳು ಮನೆಗಳಿಗೆ ಸಮರ್ಪಕ ವಿದ್ಯುತ್ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸದೇ ಇರುವುದನ್ನು ಖಂಡಿಸಿ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಲು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ನಗರ ಸಮಿತಿ ಹಾಗೂ ಜಿ+1 ಮನೆ ಫಲಾನುಭವಿಗಳ ಹೋರಾಟ ಸಮಿತಿಗಳ ನೇತೃತ್ವದಲ್ಲಿ ನಿವಾಸಿಗಳು ಪುರಸಭೆಯ ಮುಖ್ಯಾಧಿಕಾರಿ ರವೀಂದ್ರ ಬಾಗಲಕೋಟೆ ಅವರಿಗೆ ಮನವಿ ಸಲ್ಲಿಸಿದರು.



ಜಿ+ ಮನೆಗಳಿಗೆ ಪೂರ್ಣ ಪ್ರಮಾಣದ ವಿದ್ಯುತ್ ಸೌಲಭ್ಯವನ್ನು ಕಲ್ಪಿಸಿ, ಎಲ್ಲ ಮನೆಗಳಿಗೂ ವಿದ್ಯುತ್ ಮೀಟರ್ ಅಳವಡಿಸಬೇಕು. ಈ ಪ್ರದೇಶದಲ್ಲಿರುವ ಕೆಲವು ಬೀದಿಗಳಲ್ಲಿರುವ ವಿದ್ಯುತ್ ಕಂಬಗಳಲ್ಲಿ ವಿದ್ಯುತ್ ದೀಪ (ಲೈಟ್)ಗಳನ್ನು ಅಳವಡಿಸಬೇಕು. ಕುಡಿಯುವ ನೀರಿನ ಸಮರ್ಪಕ ಸೌಲಭ್ಯಕ್ಕಾಗಿ ಪ್ರತಿ ಜಿ+ ಮನೆಗಳಿಗೆ ನೀರಿನ ನಲ್ಲಿ ಅಳವಡಿಸಿ, ಕುಟುಂಬಗಳಿಗೆ ಅಗತ್ಯವಿರುವಷ್ಟು ನೀರು ನಿರಂತರವಾಗಿ ದೊರೆಯುವಂತೆ ಮಾಡಬೇಕು. ಅಲ್ಲದೇ ಕನಿಷ್ಠ ಐದು ಸಾರ್ವಜನಿಕ ನಲ್ಲಿಗಳನ್ನು ಅಳವಡಿಸಿ ನೀರು ದೊರೆಯುವಂತೆ ಮಾಡಬೇಕು.

ಆವರಣದಲ್ಲಿ ಸಮುದಾಯ ಭವನ ಹಾಗೂ ಅಂಗನವಾಡಿ ಮಂಜೂರು ಮಾಡಬೇಕು. ಜಿ+ ಮನೆಗಳಿರುವ ಪ್ರದೇಶಕ್ಕೆ ಸೌಹಾರ್ದ ಪರಂಪರೆಗೆ ಹೆಸರುವಾಸಿಯಾಗಿರುವ ನಮ್ಮ ನೆಲದ ಹೆಮ್ಮೆ ಶ್ರೀ ಶರೀಫ ಶಿವಯೋಗಿ ಗುರು ಗೋವಿಂದ ಭಟ್ಟ ನಗರ ಎಂದು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಮಾತನಾಡಿ, ಪುರಸಭೆಯ ಮುಖ್ಯಾಧಿಕಾರಿ ರವೀಂದ್ರ ಬಾಗಲಕೋಟೆ, ಮೂರ್ನಾಲ್ಕು ದಿನಗಳಲ್ಲಿ ಕುಡಿಯುವ ನೀರಿಗೆ ಸಾರ್ವಜನಿಕ ನಲ್ಲಿ ಸಂಪರ್ಕ ಕೊಡಿಸುವುದಾಗಿ ಭರವಸೆ ನೀಡಿದರು. ಅಲ್ಲದೆ ನಿರ್ಮಿತಿ ಕೇಂದ್ರದ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಸಂಪರ್ಕಿಸಿ ವಿದ್ಯುತ್ ಸಂಪರ್ಕ ಹಾಗೂ ದುರಸ್ತಿ ಇರುವ ಮನೆಗಳ ಸಮಸ್ಯೆ ಪರಿಹರಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಡಿವೈಎಫ್‌ಐ ಶಹರ ಘಟಕದ ಅಧ್ಯಕ್ಷ ವಾಸೀಮ್ ತಿಮ್ಮಾಪೂರ, ಕಾರ್ಯದರ್ಶಿ ಕಿಶೋರ್ ಧೋತ್ರೆ, ಜಿ+1 ಮನೆ ಹೋರಾಟ ಸಮಿತಿಯ ಅಧ್ಯಕ್ಷ ವೀರಣ್ಣ ಗಡ್ಡಿಯವರ, ಮುಖಂಡರಾದ ಗುರುನಗೌಡ ದುಂಡಿಗೌಡ್ರ, ಮಕಬುಲ್ ಯಲ್ಲಾಪೂರ, ಮಂಜುಳಾ ಹಾನಗಲ್, ಕಸ್ತೂರಿ ವಡ್ಡರ, ಇಮಾಮ್ ಹುಸೇನ್ ಧಾರವಾಡ, ನಾರಾಯಣ ಮೀರಜಕರ್, ಕೃಷ್ಣಪ್ಪ ಗದಗ, ಜಯಮ್ಮ ಅಂಗಡಿ, ನಾಸೀರ್ ಬಡಿಗೇರ, ಗೌಸ್, ಹಜರತ್ ಅಲಿ, ಬಸವರಾಜ ಮೇದಾರ, ರವಿ ಹರಿಜನ ಉಪಸ್ಥಿತರಿದ್ದರು.

ನಿವೃತ್ತಿ ಅಂತ್ಯವಲ್ಲ, ಹೊಸ ಅನುಭವಗಳ ಅಧ್ಯಾಯದ ಆರಂಭ

ಹಾವೇರಿ: ನಿವೃತ್ತಿ ಸೇವೆಯ ಅಂತ್ಯವಲ್ಲ, ಹೊಸ ಅನುಭವಗಳ ಅಧ್ಯಾಯದ ಆರಂಭ. ಆಡಳಿತದಲ್ಲಿ ಶಿಸ್ತು, ಸಮಯಪ್ರಜ್ಞೆ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಿದ ಅಶೋಕ ಶಾಸ್ತ್ರೀಯವರು ಜಿಲ್ಲೆಯ ಎಲ್ಲ ಪ್ರಾಚಾರ್ಯರು ಹಾಗೂ ಉಪನ್ಯಾಸಕ ಬಳಗದ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ಜಿಲ್ಲಾ ಪ್ರಾಚಾರ್ಯರ ಸಂಘದ ಅಧ್ಯಕ್ಷ ಡಾ.ನಾಗರಾಜ ದ್ಯಾಮನಕೊಪ್ಪ ಹೇಳಿದರು.

ದಾನೇಶ್ವರಿ ನಗರದ ಪದವಿಪೂರ್ವ ಕಾಲೇಜುಗಳ ನೌಕರರ ಭವನದಲ್ಲಿ ಜಿಲ್ಲಾ ಪ್ರಾಚಾರ್ಯರ ಸಂಘ, ಉಪನ್ಯಾಸಕರ ಸಂಘ, ನೌಕರರ ಸಂಘ ಹಾಗೂ ಪದವಿಪೂರ್ವ ಕಾಲೇಜುಗಳ ವಿವಿಧ ಸಂಘಟನೆಗಳ ವತಿಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಡಿಡಿಪಿಯು ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಶಾಸ್ತ್ರೀಯವರಿಗೆ ಹಮ್ಮಿಕೊಂಡಿದ್ದ ಆತ್ಮೀಯ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಅಶೋಕ ಶಾಸ್ತ್ರೀಯವರು ನೀಡಿದ ಕೊಡುಗೆ ಮಾದರಿಯಾಗಿದೆ ಎಂದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಪ್ರಭಾರ ಉಪನಿರ್ದೇಶಕ ಬಸವರಾಜ ಇಟ್ಟಿಗುಡಿ ಮಾತನಾಡಿ, ಶೈಕ್ಷಣಿಕ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕರ್ತವ್ಯ ನಿಷ್ಠೆಗೆ ಅಶೋಕ ಶಾಸ್ತ್ರೀಯವರು ಹೆಸರಾಗಿದ್ದಾರೆ. ಅವರ ಮಾರ್ಗದರ್ಶನದಿಂದ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಕ್ಷೇತ್ರವು ಹಲವು ಉತ್ತಮ ಸಾಧನೆಗಳನ್ನು ದಾಖಲಿಸಿದೆ ಎಂದು ಶ್ಲಾಘಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅಶೋಕ ಶಾಸ್ತ್ರೀಯವರು ತಮ್ಮ ದೀರ್ಘ ಸೇವಾವಧಿಯ ಅನುಭವಗಳನ್ನು ಹಂಚಿಕೊಂಡು, ನಾನು ನಿರ್ವಹಿಸಿದ ಪ್ರತಿಯೊಂದು ಜವಾಬ್ದಾರಿಯಲ್ಲೂ ವಿದ್ಯಾರ್ಥಿ ಹಾಗೂ ಶಿಕ್ಷಣದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದ್ದೇನೆ. ಸಹೋದ್ಯೋಗಿಗಳು, ಪ್ರಾಚಾರ್ಯರು ಹಾಗೂ ಉಪನ್ಯಾಸಕರಿಂದ ದೊರೆತ ಸಹಕಾರವೇ ನನ್ನ ಸೇವಾ ಯಶಸ್ಸಿನ ಮೂಲ ಕಾರಣ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ನಿಕಟಪೂರ್ವ ಉಪನಿರ್ದೇಶಕ ಆನಂದ ಮುದಕಮ್ಮನವರ, ಉಪನ್ಯಾಸಕರ ಸಂಘದ ಅಧ್ಯಕ್ಷ ಎಸ್.ಎಸ್. ನಿಸ್ಸೀಮಗೌಡ್ರ ಮಾತನಾಡಿದರು.

ಇದೇ ಸಂದರ್ಭದಲ್ಲಿ 2025ರ ಆಗಸ್ಟ್‌ನಿಂದ 2026ರ ಮೇ ತಿಂಗಳವರೆಗೆ ಜಿಲ್ಲೆಯ ವಿವಿಧ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ಸಿ.ಪಿ. ಹರವಿ, ರಮೇಶ ಲಮಾಣಿ, ಪ್ರಮೋದ ನಲವಾಗಲ, ರವಿಕುಮಾರ ಅಂಭೋರೆ, ಎಸ್.ಬಿ. ಸಂಗಾಪುರ, ಶಿವಾನಂದ ಬೆನ್ನೂರ, ರಾಜೇಂದ್ರ ಕರಿಗೌಡ್ರ, ಕೆ.ಪಿ. ಬ್ಯಾಡಗಿ, ಶೇಖರಪ್ಪ ಭಜಂತ್ರಿ, ಎಂ.ಎನ್. ಹತ್ತಿಯವರ, ಎಂ.ಬಿ. ಸತೀಶ, ಜಿ.ಪಿ. ಪೂಜಾರ, ಎಂ.ಆರ್. ಚೂರಿ ಹಾಗೂ ಎಸ್.ಸಿ. ಪಾಟೀಲ ಇತರರು ಇದ್ದರು. ಪ್ರಾಚಾರ್ಯ ಜೆ.ಆರ್. ಶಿಂಧೆ ಸ್ವಾಗತಿಸಿದರು. ರವಿಕುಮಾರ ಅಂಭೋರೆ ನಿರೂಪಿಸಿದರು. ವಿ.ಎನ್. ಆಲದಕಟ್ಟಿ ವಂದಿಸಿದರು.

ಕಿರುಸುದ್ದಿ

ಜೂ.5ರಿಂದ ಜಾತ್ರೆ, ಓಕುಳಿ

ಘಟಪ್ರಭಾ: ಶ್ರೀಗುಬ್ಬಲಗುಡ್ಡ ಕೆಂಪಯ್ಯಸ್ವಾಮಿ ಮಠದ ಡಾ.ಮಲ್ಲಿಕಾರ್ಜುನ ಶ್ರೀಗಳು ದಿವ್ಯ ಸಾನ್ನಿಧ್ಯದಲ್ಲಿ ಜೂ.5ರಿಂದ 8ರವರೆಗೆ ಘಟಪ್ರಭಾ (ಮಲ್ಲಾಪೂರ ಪಿ.ಜಿ) ಪಟ್ಟಣದ ಶ್ರೀಮಹಾಲಕ್ಷ್ಮೀದೇವಿ ಹಾಗೂ ಶ್ರೀಮಾರುತಿ ದೇವರ ಓಕಳಿ ಮತ್ತು ಜಾತ್ರಾ ಮಹೋತ್ಸವ ಜರುಗಲಿದೆ. ಜೂ.5ರಂದು ಬೆಳಗ್ಗೆ 6ಕ್ಕೆ ಶ್ರೀದೇವಿಗೆ ಮಹಾಭಿಷೇಕ ಹಾಗೂ ಉಡಿ ತುಂಬುವ ಕಾರ್ಯಕ್ರಮ, ಮಧ್ಯಾಹ್ನ ಮಹಾಪ್ರಸಾದ, ಸಂಜೆ 4ಕ್ಕೆ ಪಾದ ಕಟ್ಟುವುದು, ರಾತ್ರಿ 9ಕ್ಕೆ ಶ್ರೀರಾಘವೇಂದ್ರ ಪಾರಿಜಾತ ಕಂಪನಿ ಸಾ.ಹಿಡಕಲ್ ಇವರಿಂದ ಶ್ರೀಕೃಷ್ಣ ಪಾರಿಜಾತ ನಾಟಕ ಜರುಗುವುದು. ಜೂ. 6ರಂದು ಬೆಳಗ್ಗೆ 7ಕ್ಕೆ ಶ್ರೀಮಾರುತಿ ದೇವರ ಮಹಾಭಿಷೇಕ, ಬೆಳಗ್ಗೆ 11ಕ್ಕೆ ತೆರೆಬಂಡಿ ಶರ್ತು, ಸಂಜೆ 6ಕ್ಕೆ ಓಕಳಿ ಕೊಂಡ ಪೂಜಾ ಜರುಗುವುದು. ಜೂ.7ರಂದು ಸಂಜೆ 4ಕ್ಕೆ ನಡುಓಕಳಿ ಜರುಗುವುದು. ರಾತ್ರಿ 9.30ಕ್ಕೆ ಶ್ರೀಲಕ್ಷ್ಮೀದೇವಿ ನಾಟ್ಯ ಸಂಘ, ಮಲ್ಲಾಪೂರ ಪಿ.ಜಿ ಇವರು ಅರ್ಪಿಸುವ ಸುಂದರ ಸಾಮಾಜಿಕ ನಾಟಕ ಜರುಗುವುದು. ಜೂ.8ರಂದು ಸಂಜೆ 4ಕ್ಕೆ ಕಡೆ ಓಕಳಿ, ನಂತರ ಮಹಾಪ್ರಸಾದ ಜರುಗಲಿದೆ ಎಂದು ಕಮೀಟಿಯವರು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಕನ್ನಡ ಶಾಲೆಗೆ ಪುತ್ರನನ್ನು ದಾಖಲಿಸಿದ ಕನ್ನಡ ಪ್ರಾಧ್ಯಾಪಕ

ಹಾರೂಗೇರಿ: ಇಂದಿನ ದಿನಗಳಲ್ಲಿ ಅನೇಕ ಪೋಷಕರು ತಮ್ಮ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳನ್ನೇ ಆಯ್ಕೆ ಮಾಡುತ್ತಿರುವ ಸಂದರ್ಭದಲ್ಲಿ, ಕನ್ನಡ ನಾಡು-ನುಡಿಯ ಮೇಲಿನ ತಮ್ಮ ಬದ್ಧತೆಯನ್ನು ಕಾರ್ಯರೂಪಕ್ಕೆ ತಂದು ತೋರಿಸಿರುವ ಸ್ಥಳೀಯ ಎಸ್ ಪಿ ಎಂ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ವಿಲಾಸ ಕಾಂಬಳೆ ತಮ್ಮ ಪುತ್ರ ಕಾರ್ತಿಕನನ್ನು ಸರ್ಕಾರಿ ಕನ್ನಡ ಶಾಲೆಗೆ ದಾಖಲಿಸಿ ಮಾದರಿಯಾಗಿದ್ದಾರೆ. ಈ ಮೂಲಕ ಸರ್ಕಾರಿ ಶಾಲೆಗಳ ಉಳಿವು-ಬೆಳವಣಿಗೆಯ ಪರವಾಗಿ ಬಲವಾದ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಆದರ್ಶ ಶಿಕ್ಷಕರಾಗಿ, ಸಮಾಜಮುಖಿ ಚಿಂತಕರಾಗಿ ಹಾಗೂ ಕನ್ನಡದ ಅಭಿಮಾನಿಯಾಗಿ ಗುರುತಿಸಿಕೊಂಡಿರುವ ಡಾ. ವಿಲಾಸ ಕಾಂಬಳೆ ಅವರು ತಮ್ಮ ಮಗ ಕಾರ್ತಿಕ್ ನನ್ನು ಹಾರೂಗೇರಿ ಪಟ್ಟಣದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗೆ ದಾಖಲಿಸಿರುವ ಇವರ ನಡೆ, ಸರ್ಕಾರಿ ಶಾಲೆಗಳ ಬಗ್ಗೆ ಸಮಾಜದಲ್ಲಿ ಹೊಸ ವಿಶ್ವಾಸ ಮೂಡಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಎಲ್ಲಾ ಸರ್ಕಾರಿ ಶಾಲಾ ಹಾಗೂ ಖಾಸಗಿ ಶಾಲಾ ಶಿಕ್ಷಕರು, ಉಪನ್ಯಾಸಕರು ಆದಷ್ಟು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸಿ, ಶಿಕ್ಷಣ ಇಲಾಖೆಯ ಕೈ ಬಲಪಡಿಸಲು ವಿನಂತಿಸಿದ್ದಾರೆ.

ಬಸ್ ಸೌಲಭ್ಯಕ್ಕೆ ಆಗ್ರಹ



ಖಾನಾಪುರ: ತಾಲೂಕಿನ ಬಿಜಗರ್ಣಿ, ಅನಗಡಿ, ಹಲಸಾಲ, ಪಡಲವಾಡಿ, ಕರಂಜಾಳ ಹಾಗೂ ಅಕ್ಕಪಕ್ಕದ ಗ್ರಾಮಗಳಿಗೆ ಖಾನಾಪುರ ಪಟ್ಟಣ, ನಂದಗಡ-ಹಲಸಿಯಿಂದ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲದ್ದರಿಂದ ಈ ಭಾಗದ ಜನರಿಗೆ ಮತ್ತು ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಈ ಗ್ರಾಮಗಳಿಗೆ ಸಮರ್ಪಕ ಬಸ್ ಸೌಲಭ್ಯ ಒದಗಿಸಬೇಕೆಂದು ಆಗ್ರಹಿಸಿ ಬಿಜಗರ್ಣಿ ಹಾಗೂ ಸುತ್ತಲಿನ ಗ್ರಾಮಸ್ಥರು ಮಂಗಳವಾರ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಖಾನಾಪುರ ಘಟಕದ ಘಟಕ ವ್ಯವಸ್ಥಾಪಕರಿಗೆ ಲಿಖಿತ ಮನವಿ ಸಲ್ಲಿಸಿದರು. ಮನವಿಯಲ್ಲಿ ಈಗಿನ ವೇಳಾಪಟ್ಟಿ ಪ್ರಕಾರ ಬಿಜಗರ್ಣಿ, ಅನಗಡಿ, ಹಲಸಾಲ, ಪಡಲವಾಡಿ, ಕರಂಜಾಳಗಳಿಗೆ ಮುಂಜಾನೆ 11ಕ್ಕೆ ಬಸ್ ಬಂದು ಹೋಗುತ್ತಿದೆ. ಇದರಿಂದ ಖಾನಾಪುರ, ನಂದಗಡ ಮತ್ತು ಹಲಸಿಗೆ ಹೋಗುವ ಶಾಲಾ ಕಾಲೇಜು ಮಕ್ಕಳಿಗೆ ತೊಂದರೆಯಾಗುತ್ತಿದೆ. ಈ ಬಸ್ ಸಂಚಾರವನ್ನು 11ರ ಬದಲು 9.30ಕ್ಕೆ ಬದಲಿಸಬೇಕು ಮತ್ತು ಉಳಿದ ಸಮಯದಲ್ಲಿ ಎಲ್ಲ ಬಸ್‌ಗಳು ಸರಿಯಾದ ಸಮಯಪಾಲನೆ ಮಾಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಶ್ರೀಕಾಂತ ಮಾದಾರ, ತಾನಾಜಿ ತಾಂಬೂಳಕರ, ಮಾರುತಿ ಕಾಂಬಳೆ, ಅನೀಲ ಚೌರಿ, ದೀಪಕ ಚೌರಿ, ರಾಮಚಂದ್ರ ದೇಸಾಯಿ, ನಾಮದೇವ ಕಾಂಬಳೆ, ಸುಧೀರ ಗುಂಜಿಕರ, ವಿಕಾಸ ದೇಸಾಯಿ, ಹಿಂದೂರಾವ್ ದೇಸಾಯಿ ಹಾಗೂ ಇತರರು ಇದ್ದರು.

ನಾಗರತ್ನಾ ಹಂಚಿನಮನಿ ನಿಧನ



ಹಿರೇಬಾಗೇವಾಡಿ: ಇಲ್ಲಿಯ ಬಸವನಗರ ನಿವಾಸಿ ನಾಗರತ್ನಾ ಸೋಮಶೇಖರ ಹಂಚಿನಮನಿ (64) ನಿಧನರಾದರು. ಮೃತರಿಗೆ ಇಬ್ಬರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧುಗಳು ಇದ್ದಾರೆ.



ಸಂಕೇಶ್ವರ: ಪಟ್ಟಣದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ ಬೆಳಗಾವಿ ಹಾಗೂ ರಾಷ್ಟ್ರೀಯ ಬಸವದಳ ಸಂಕೇಶ್ವರ, ಹಾಗೂ ಸಾಹಿತ್ಯ ಬಳಗ ಸಂಕೇಶ್ವರ ಇವರ ಸಹಯೋಗದಲ್ಲಿ ನಡೆದ ವಚನ ಸಾಹಿತ್ಯ ಮತ್ತು ಬಸವಣ್ಣನವರ ಆಶಯಗಳು ಎಂಬ ವಿಷಯದ ಕುರಿತು ಉಪನ್ಯಾಸ

ಬಸವಣ್ಣನವರ ತತ್ವಾದರ್ಶ ಜಗತ್ತಿಗೆ ಪ್ರೇರಣೆ

ಸಂಕೇಶ್ವರ: ಬಸವಣ್ಣನವರ ತತ್ವಾದರ್ಶಗಳು ಇಡೀ ಜಗತ್ತಿಗೆ ಆದರ್ಶವಾಗಿದ್ದು, ಸ್ಪೇನ್, ಡೆನ್ಮಾರ್ಕ್ ಹಾಗೂ ಅಮೇರಿಕಾದಂತಹ ರಾಷ್ಟಗಳು ಈಗೀಗ ಬಸವಣ್ಣನವರ ವಚನಗಳಿಂದ ಪ್ರೇರಿತರಾಗಿದ್ದಾರೆ ಎಂದು ಹಿರಿಯ ಸಾಹಿತಿ ಹಾಗೂ ಉಪನ್ಯಾಸಕಿ ಹಮೀದಾ ಬೇಗಂ ದೇಸಾಯಿ ಹೇಳಿದರು. ಪಟ್ಟಣದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ ಬೆಳಗಾವಿ ಹಾಗೂ ರಾಷ್ಟ್ರೀಯ ಬಸವದಳ ಸಂಕೇಶ್ವರ, ಹಾಗೂ ಸಾಹಿತ್ಯ ಬಳಗ ಸಂಕೇಶ್ವರ ಇವರ ಸಹಯೋಗದಲ್ಲಿ ನಡೆದ ವಚನ ಸಾಹಿತ್ಯ ಮತ್ತು ಬಸವಣ್ಣನವರ ಆಶಯಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡಿದ ಅವರು, ಧರ್ಮ- ವರ್ಗಗಳನ್ನು ಮೀರಿ ಬೆಳೆದ ಬಸವಣ್ಣನವರು ಎಂದಿಗೂ ನಮಗೆ ಆದರ್ಶವಾಗಿದ್ದು, ಅವರೊಬ್ಬ ಮಹಾಮಾನವತವಾದಿ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಚಾಲಕರಾದ ಶಿವರಾಜ ಅರಳಿ ಚಕೋರ ಸಾಹಿತ್ಯ ವಿಚಾರ ವೇದಿಕೆಯ ಮೂಲ ಆಶಯ ಹಾಗೂ ಉದ್ದೇಶ ಕುರಿತು ಮಾತನಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ದಯಾನಂದ ನೂಲಿಯವರು ಬಸವಣ್ಣನವರ ಸಾಕಷ್ಟು ವಿಚಾರಗಳ ಕುರಿತು ಚರ್ಚಿಸಿದರು. ಕಾಡಪ್ಪಾ ಬಸ್ತವಾಡಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಡಾ ಗುರುಪಾದ ಮರಗುದ್ದಿ,ಎಲ್,ವಿ, ಪಾಟೀಲ, ಶಿಕ್ಷಕರಾದ ಮಂಜುನಾಥ ಮುದೂರ,ಶಾಂತಾದೇವಿ ಪಾಟೀಲ, ಹಾಗೂ ಡಾ. ಮೈತ್ರೇಯಣಿ ಗದಿಗೆಪ್ಪಗೌಡರ ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಹಾಜರಿದ್ದರು. ಸುವರ್ಣಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಕಾಡೇಶ ಬಸ್ತವಾಡಿ ವಂದಿಸಿದರು.



ಮೂಡಲಗಿ : ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಶಾಲಾ ಕಾಲೇಜ್ ಪ್ರಾರಂಭೋತ್ಸವ ಕಾರ್ಯಕ್ರಮ ಜರುಗಿತು. ಸಂಸ್ಥೆ ಕಾರ್ಯದರ್ಶಿ ಡಾ ಭೋಜರಾಜ ಬೆಳಕೂಡ ಮಾತನಾಡಿದರು. ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ, ಪ್ರಾಚಾರ್ಯ ಡಾ.ಸಂಗಮೇಶ ಹೂಗಾರ, ವಿ.ಜಿ.ಕಟ್ಟಿಮನಿ, ಮುಖ್ಯ ಶಿಕ್ಷಕರಾದ ರಮೇಶ ಹೆಬ್ಬಾಳ್, ಕುಮಾರ ಪೋಟಿ, ಇಂಗ್ಲಿಷ ಮೀಡಿಯಂ ಸ್ಕೂಲ್‌ನ ಪ್ರಾಚಾರ್ಯ ರಮೀಜಾ ಅಣ್ಣಿಗೇರಿ ಇದ್ದರು. ಎಸ್.ಬಿ. ಮನ್ನಿಕೇರಿ ಸ್ವಾಗತಿಸಿದರು. ವಿದ್ಯಾ ಬಡಿಗೇರ ನಿರೂಪಿಸಿದರು. ಗುರು ಖಡಕಭಾವೀ ವಂದಿಸಿದರು.

ಎಐ ಆಧಾರಿತ ಇನೋವೇಶನ್, ಸ್ಕಿಲ್ ಲ್ಯಾಬ್ ಉದ್ಘಾಟನೆ

ತಂತ್ರಜ್ಞಾನ ಕಲಿಕೆಗೆ ಹೊಸ ದಾರಿ: ಡಿಸಿ



ಬೆಳಗಾವಿ: ಇಂದಿನ ಜಗತ್ತಿನಲ್ಲಿ ಕೃತಕ ಬುದ್ಧಿಮತ್ತೆ, ರೊಬೋಟಿಕ್ಸ್, ಮೆಷಿನ್ ಲರ್ನಿಂಗ್ ಹಾಗೂ ಡಿಜಿಟಲ್ ತಂತ್ರಜ್ಞಾನಗಳು ಪ್ರತಿಯೊಂದು ಕ್ಷೇತ್ರದಲ್ಲೂ ಅನಿವಾರ್ಯವಾಗಿವೆ. ಇಂತಹ ತಂತ್ರಜ್ಞಾನಗಳ ಅರಿವು ಮತ್ತು ಪ್ರಾಯೋಗಿಕ ಅನುಭವ ವಿದ್ಯಾರ್ಥಿಗಳಿಗೆ ಚಿಕ್ಕ ವಯಸ್ಸಿನಲ್ಲಿಯೇ ದೊರೆತರೆ ಅವರು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಜ್ಜಾಗುತ್ತಾರೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಶನ್ ಹೇಳಿದರು.

ನಗರದ ಉದ್ಯಮಬಾಗದಲ್ಲಿರುವ ಜೈನ್ ಹೆರಿಟೇಜ್ ಸ್ಕೂಲ್ನಲ್ಲಿ ಸ್ಥಾಪಿಸಲಾಗಿರುವ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ ಆಧಾರಿತ ಇನೋವೇಶನ್ ಮತ್ತು ಸ್ಕಿಲ್ ಲ್ಯಾಬ್‌ನ್ನು ಉದ್ಘಾಟಿಸಿ, ಮಾತನಾಡಿ, ಮುಂದಿನ ದಿನಗಳಲ್ಲಿ ಉದ್ಯೋಗ, ಕೈಗಾರಿಕೆ, ಆರೋಗ್ಯ, ಕೃಷಿ, ಶಿಕ್ಷಣ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಎಐ ಪ್ರಮುಖ ಪಾತ್ರ ವಹಿಸಲಿದೆ. ವಿದ್ಯಾರ್ಥಿಗಳು ಈ ತಂತ್ರಜ್ಞಾನವನ್ನು ಕೇವಲ ಬಳಸುವವರಾಗಿರದೆ, ಹೊಸ ಆವಿಷ್ಕಾರಗಳನ್ನು ಮಾಡುವವರಾಗಬೇಕು. ಅದಕ್ಕಾಗಿ ಇಂತಹ ಅತ್ಯಾಧುನಿಕ ಲ್ಯಾಬ್‌ಗಳ ಅಗತ್ಯವಿದೆ.

ಜೈನ್ ಹೆರಿಟೇಜ್ ಸ್ಕೂಲ್ ಈ ನಿಟ್ಟಿನಲ್ಲಿ ಉತ್ತಮ ಹೆಜ್ಜೆ ಇಟ್ಟಿದ್ದು, ಬೆಳಗಾವಿಯ ಮಕ್ಕಳಿಗೆ ಭವಿಷ್ಯದ ತಂತ್ರಜ್ಞಾನ ಜಗತ್ತಿನ ಬಾಗಿಲನ್ನು ತೆರೆದಿದೆ ಎಂದರು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಕ್ಲಸ್ಟರ್ ಮ್ಯಾನೇಜರ್ ವೆಂಕಟೇಶ ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಮಸ್ಯೆ ಪರಿಹಾರ ಕೌಶಲ್ಯ ಹಾಗೂ ತಾಂತ್ರಿಕ ಜ್ಞಾನವನ್ನು ಬೆಳೆಸುವಲ್ಲಿ ಇಂತಹ ಲ್ಯಾಬ್‌ಗಳು ಅತ್ಯಂತ ಪರಿಣಾಮಕಾರಿ ಎಂದರು.

ಎಐ, ರೊಬೋಟಿಕ್ಸ್ ಮತ್ತು ನವೋದ್ಯಮ ಆಧಾರಿತ ಶಿಕ್ಷಣವು ಇಂದಿನ ಅವಶ್ಯಕತೆಯಾಗಿದೆ. ಜೈನ್ ಹೆರಿಟೇಜ್ ಸ್ಕೂಲ್ ಸ್ಥಾಪಿಸಿರುವ ಈ ಲ್ಯಾಬ್ ಮಕ್ಕಳಿಗೆ ಹೊಸ ಜಗತ್ತನ್ನು ಪರಿಚಯಿಸಲಿದೆ. ಭವಿಷ್ಯದ ಸವಾಲುಗಳನ್ನು ಎದುರಿಸಲು ಮತ್ತು ಜಾಗತಿಕ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಇದು ನೆರವಾಗಲಿದೆ, ಎಂದು ತಿಳಿಸಿದರು.

ನೂತನ ಲ್ಯಾಬ್ ವಿವಿಧ ವಿಭಾಗಗಳನ್ನು ವೀಕ್ಷಿಸಿ ಅದರಲ್ಲಿರುವ ತಂತ್ರಜ್ಞಾನ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆ ಮತ್ತು ನವೋದ್ಯಮ ಚಿಂತನೆ ಬೆಳೆಸಲು ಈ ಲ್ಯಾಬ್ ಮಹತ್ವದ ಪಾತ್ರ ವಹಿಸಲಿದೆ ಎಂದು ಡಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ರೋಬೋಟ್‌ಗಳಿಂದ ಅತಿಥಿಗಳಿಗೆ ಸ್ವಾಗತ

ಶಾಲೆಯ ಆರಂಭೋತ್ಸವದ ಹಿನ್ನೆಲೆಯಲ್ಲಿ ಸಂಪೂರ್ಣ ಆವರಣವನ್ನು ಆಕರ್ಷಕವಾಗಿ ಅಲಂಕರಿಸಲಾಗಿತ್ತು. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ರೋಬೋಟ್‌ಗಳು ಅತಿಥಿಗಳು ಹಾಗೂ ವಿದ್ಯಾರ್ಥಿಗಳನ್ನು ಸ್ವಾಗತಿಸಿದವು. ರೋಬೋಟ್‌ಗಳೊಂದಿಗೆ ವಿದ್ಯಾರ್ಥಿಗಳು ಸಂವಾದ ನಡೆಸಿದ ದೃಶ್ಯ ಎಲ್ಲರ ಗಮನ ಸೆಳೆಯಿತು. ಲ್ಯಾಬ್‌ನಲ್ಲಿ ಎಐ ಆಧಾರಿತ ಕಲಿಕಾ ಮಾದರಿಗಳು, ರೊಬೋಟಿಕ್ಸ್ ಕಿಟ್‌ಗಳು, ಕೋಡಿಂಗ್, ಆಟೋಮೇಷನ್ ವ್ಯವಸ್ಥೆಗಳು ಸೇರಿದಂತೆ ವಿವಿಧ ತಾಂತ್ರಿಕ ಸಾಧನಗಳನ್ನು ಅಳವಡಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವ ನೀಡುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ಜೈನ್ ಹೆರಿಟೇಜ್ ಸ್ಕೂಲ್‌ನ ಈ ಪ್ರಯತ್ನವು ಬೆಳಗಾವಿಯ ವಿದ್ಯಾರ್ಥಿಗಳಿಗೆ ಭವಿಷ್ಯದ ಕೌಶಲ್ಯಗಳನ್ನು ಕಲಿಯಲು ಮತ್ತು ನವೋದ್ಯಮ ಚಿಂತನೆ ಬೆಳೆಸಲು ಮಹತ್ವದ ವೇದಿಕೆಯಾಗಲಿದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟರು.

ಈ ವೇಳೆ ಖ್ಯಾತ ವೈದ್ಯ ಡಾ.ಮಾಧುರಿ ದೀಕ್ಷಿತ, ಜೈನ್ ಗ್ರೂಪ್ ನಿರ್ದೇಶಕಿ ಶ್ರದ್ಧಾ ಕಟವಟೆ, ಮುಖ್ಯ ಆಡಳಿತಾಧಿಕಾರಿ ಆ್ಯಮಿ ದೋಶಿ, ಪ್ರಾಚಾರ್ಯೆ ರೋಹಿಣಿ ಕೆ.ಬಿ., ಆಲ್ಪೇಶ್ ಜೈನ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ವಿಶೇಷ ಕನ್ನಡ ಜಾಗೃತಿ ಜಾಥಾ

ಅಥಣಿ: ತಾಲೂಕಿನ ಗಡಿಗ್ರಾಮ, ನಂದಿ ಬಸವಣ್ಣನ ಐಕ್ಯಸ್ಥಳ ಖಿಳೇಗಾವಿಯ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ಶಾಲೆಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು, ಗ್ರಾಮದಲ್ಲಿ ವಿಶೇಷ ಕನ್ನಡ ಜಾಗೃತಿ ಜಾಥಾ ನಡೆಸುವ ಮೂಲಕ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್, ವೀರರಾಣಿ ಕಿತ್ತೂರು ಚೆನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಅಕ್ಷರದ ಅವ್ವಸಾವಿತ್ರಿಬಾಯಿ ಫುಲೆ ಸೇರಿದಂತೆ ಅನೇಕ ಮಹಾಪುರುಷರ ವೇಷದಾರಿಗಳಾಗಿ ಆಗಮಿಸಿದ ವಿದ್ಯಾರ್ಥಿಗಳು ಘೋಷಣೆ ಕೂಗುತ್ತ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಶಾಲೆಯ ಆವರಣದಲ್ಲಿ ವಿದ್ಯಾದೇವತೆ ಸರಸ್ವತಿ ಹಾಗೂ ಗ್ರಾಮ ದೇವತೆ ಬಸವಣ್ಣನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಶಾಲಾ ಮಕ್ಕಳಿಗೆ ಸಿಹಿ ಹಂಚಿ, ಪುಸ್ತಕ ಮತ್ತು ಸಮವಸ್ತ್ರ ವಿತರಿಸಿ ಪುಷ್ಪವೃಷ್ಟಿ ಮಾಡುವ ಮೂಲಕ ಮಕ್ಕಳನ್ನು ಶಾಲೆಗೆ ಸ್ವಾಗತಲಾಯಿತು.

ಈ ವೇಳೆ ಶಿಕ್ಷಣ ಪ್ರೇಮಿ, ದೇವಸ್ಥಾನ ಅಭಿವೃದ್ಧಿ ಸಮಿತಿ ಹಿರಿಯ ಸದಸ್ಯ ಮುರುಗೇಶ ಬಾನಿ ಮಾತನಾಡಿ, ಮುಂದಿನ ಶೈಕ್ಷಣಿಕ ಜೀವನಕ್ಕೆ ಈ ಜ್ಞಾನ ದೇಗುಲಕ್ಕೆ ಆಗಮಿಸುತ್ತಿದ್ದಾರೆ. ಶಾಲೆಯ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿನೂತನ ಕಾರ್ಯಕ್ರಮಗಳನ್ನ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

ಎಚ್ ಶಿವರಾಮೇಗೌಡ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಬ ತೆಲಸಂಗ ಮಾತನಾಡಿದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಸಪ್ಪ ಜಗಳಗಟ್ಟಿ ಅಧ್ಯಕ್ಷತೆ ವಹಿಸಿದರು. ಮುಖ್ಯೋಪಾಧ್ಯಾಯ ಎ.ಪಿ.ಪವಾರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಕರವೇ ತಾಲೂಕ ಅಧ್ಯಕ್ಷ ಉದಯ ಮಕಾಣಿ, ಎಸ್‌ಡಿಎಂಸಿ ಉಪಾಧ್ಯಕ್ಷ ಮಹೇಶ ಉಮರೆ, ಸಂಪನ್ಮೂಲ ಅಧಿಕಾರಿ ಮಹಾಂತೇಶ ಕೂಳ್ಳೊಳ್ಳಿ, ನಾವಿ, ಜಿ.ಎ.ಕೊಷ್ಟಿ ಸೇರಿದಂತೆ ಶಿಕ್ಷಕರಾದ ಟಿ.ಜಿ.ಪೂಜಾರಿ, ವಿಜಯಲಕ್ಷ್ಮಿ ಶೇಟ್, ಎ.ಆಫ್.ಕಮಲಾಪುರೆ, ಕವಿತಾ ನಿಡೋಣಿ, ಪಿ.ಪಿ.ಪೂಜಾರಿ, ಜಗನ್ನಾಥ ಬಾಮನೆ, ಸಿದ್ದು ಹಂಡಗಿ, ಸತೀಶ ಯಲ್ಲಟ್ಟಿ, ಶಿರಾಜ್ ಸನದಿ, ಮಹಾಂತೇಶ ಹಲವಾಯಿ, ಕುಮಾರ ಬಡಿಗೇರ, ಅನಿಲ್ ಒಡಿಯರ ಇದ್ದರು.



ವಿಮಾ ಮೊತ್ತದ ಚೆಕ್ ವಿತರಣೆ

ಹುಕ್ಕೇರಿ: ತಾಲೂಕಿನ ಗುಡಸ ಗ್ರಾಮದ ಪಿಕೆಪಿಎಸ್ ಸದಸ್ಯರೀರ್ವರು ಇತ್ತೀಚೆಗೆ ನಿಧನರಾದ ಪ್ರಯುಕ್ತ ಸಂಘದಿಂದ ಕೈಕೊಂಡ ಪ್ರಧಾನ ಮಂತ್ರಿಜೀವನಜ್ಯೋತಿ ಭೀಮಾಯೋಜನೆ ಮತ್ತುಡಿಸಿಸಿ ಬ್ಯಾಂಕ್ ಹಾಗೂ ಖಾಸಗಿ ವಿಮಾ ಕಂಪನಿ ಸಹಯೋಗದಲ್ಲಿ ಮಂಜೂರಾದ ವಿಮಾ ಮೊತ್ತ ಠೇವಣಿ ಮಾಡಿ ಅದರ ಬಡ್ಡಿ ಉಪಯೋಗಿಸಿಕೊಳ್ಳಬೇಕೆಂದು ವಾರಸುದಾರರಿಗೆ ಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶಕತ್ತಿ ತಿಳಿಸಿದರು.

ಸೋಮವಾರ ತಾಲೂಕಿನ ಗುಡಸ ಗ್ರಾಮದ ಸಂಘದ ಕಾರ್ಯಾಲಯದಲ್ಲಿ ಮೃತ ಸದಸ್ಯರ ವಾರಸುದಾರ ಕಾಶವ್ವಾ ನಾಸಿಪುಡಿಗೆ 1 ಲಕ್ಷ ರೂ. ಮತ್ತು ಸಂತೋಷ ತಳವಾರಗೆ 2 ಲಕ್ಷ ರೂ. ಮೊತ್ತದ ವಿಮಾ ಚೆಕ್ ವಿತರಿಸಿ ಮಾತನಾಡಿದರು.


ಕೇಂದ್ರಸರ್ಕಾರದಪ್ರಧಾನಮಂತ್ರಿಜೀವನ ಜ್ಯೋತಿ ಭೀಮಾ ಯೋಜನೆ ರೈತರಿಗೆ ಬಹಳ ಅನುಕೂಲವಾಗಿದೆ. ಅದಕ್ಕಾಗಿ ಡಿಸಿಸಿ ಬ್ಯಾಂಕ್ ಮೂಲಕ ಇದನ್ನು ಅನುಷ್ಠಾನಗೊಳಿಸಲಾಗಿದೆ ಎಂದರು.

ಈ ಸಂಘದ 7 ಜನ ಮೃತ ಸದಸ್ಯರ ವಾರಸುದಾರರಿಗೆ 14 ಲಕ್ಷರೂ ಹಾಗೂ ಖಾಸಗಿ ವಿಮಾ ಕಂಪನಿಯವರಿಂದ 10 ಜನ ವಾರಸುದಾರರಿಗೆ 10 ಲಕ್ಷರೂ ವಿಮಾ ಮೊತ್ತ ನೀಡಲಾಗಿದೆ. ಇದರಿಂದ ಮೃತ ಸದಸ್ಯರ ಕುಟುಂಬಕ್ಕೆ ಆರ್ಥಿಕ ನೆರವು ಕಲ್ಪಿಸಿದಂತಾಗಿದೆ ಎಂದರು.

ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ನರಸನ್ನವರ ಮಾತನಾಡಿ, ಸಂಘ ಯಾವಾಗಲೂ ಸದಸ್ಯರ ಭವಿಷ್ಯ ದೃಷ್ಟಿಯಿಂದ ಇಂತಹ ಯೋಜನೆಗಳನ್ನು ಅಳವಡಿಸಿಕೊಂಡಿದೆ. ಇದರಿಂದ ಸದಸ್ಯರಿಗೆ ಹೆಚ್ಚಿನ ಆರ್ಥಿಕ ಸದೃಢತೆಗೆ ಸಹಕಾರಿ ಆಗುತ್ತದೆ ಎಂದರು.

ನಂತರ ವಿಮಾ ಮೊತ್ತದ ಚೆಕ್ ವಾರಸುದಾರರಿಗೆ ರಮೇಶ ಕತ್ತಿ ಮತ್ತು ಆಡಳಿತ ಮಂಡಳಿ ಪದಾಧಿಕಾರಿಗಳು ವಿತರಿಸಿದರು.

ಸಂಘದಅಧ್ಯಕ್ಷ ಮಲ್ಲಿಕಾರ್ಜುನ ನರಸನ್ನವರ, ನಿರ್ದೇಶಕ ಸದಾನಂದ ಹಿರೇಮಠ, ಬಾಬು ಜಾರಕಿಹೊಳಿ, ಮುಖಂಡರಾದ ಶಿವನಗೌಡ ಪಾಟೀಲ, ಶಂಕರಗೌಡ ಪಾಟೀಲ, ಬಸಗೌಡದೇಸಾಯಿ, ಅಪ್ಪಣ್ಣಾಖಾತೇದಾರ, ಮುಖ್ಯಕಾರ್ಯ ನಿರ್ವಾಹಕ ಎಸ್.ಎಸ್. ಮಲ್ಲಾಪೂರೆ ಮತ್ತಿತರರಿದ್ದರು.



ಹೆಬ್ಬಾಳ್ಕರ್‌ಗೆ ಡಿಸಿಎಂ ಸ್ಥಾನ ಸಿಗಲೆಂದು ವಿಶೇಷ ಪೂಜೆ

ಬೆಳಗಾವಿ: ರಾಜ್ಯದ ನೂತನ ಸರ್ಕಾರದ ರಚನೆಗೆ ಸಂಬಂಧಿಸಿದ ರಾಜಕೀಯ ಬೆಳವಣಿಗೆಗಳ ನಡುವೆಯೇ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಮುಖಂಡರು ಮತ್ತು ಕಾರ್ಯಕರ್ತರು ಸುಕ್ಷೇತ್ರ ಸುಳೇಭಾವಿ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ನಡೆಸಿದರು.

ನಿಕಟಪೂರ್ವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಹಾಗೂ ಬೆಳಗಾವಿ ಗ್ರಾಮೀಣ ಕ್ಷೇತ್ರದ ಹಾಲಿ ಶಾಸಕಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ರಾಜ್ಯದ ನಿಯೋಜಿತ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ನೇತೃತ್ವದ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಯಾಗಿ ಹಾಗೂ ಪ್ರಮುಖ ಖಾತೆಗಳ ಸಚಿವರಾಗಿ ಸ್ಥಾನ ಪಡೆಯಲೆಂದು ಮಹಾಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.



ವಿಶೇಷ ಪೂಜೆ ಬಳಿಕ ದೇವಿಯ ಸನ್ನಿಧಾನದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿದ ಮುಖಂಡರು, ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಉನ್ನತ ಹುದ್ದೆ ದೊರೆತು ರಾಜ್ಯದ ಜನತೆಗೆ ಇನ್ನಷ್ಟು ಸೇವೆಸಲ್ಲಿಸುವ ಅವಕಾಶ ಸಿಗಲಿ ಎಂದು ಹಾರೈಸಿದರು. ಅಲ್ಲದೆ, ರಾಜ್ಯದ ಹೊಸ ಸರ್ಕಾರ ಜನಪರ ಆಡಳಿತ ನೀಡುವ ಮೂಲಕ ಅಭಿವೃದ್ಧಿಯ ಹೊಸ ಅಧ್ಯಾಯ ಬರೆಯಲಿ ಎಂಬ ಆಶಯ ವ್ಯಕ್ತಪಡಿಸಿದರು.

ಈ ಈ ವೇಳೆ ಗಂಗಣ್ಣ ಕಲ್ಲೂರ, ದೇವಣ್ಣ ಹುಂಕ್ರಿಪಾಟೀಲ, ಲಕ್ಷ್ಮೀನಾರಾಯಣ ಕಲ್ಲೂರ, ದತ್ತಾ ಬಂಡಿಗಣಿ, ಆಡಿವೇಶ ಇಟಗಿ, ನಾಗೇಶ ದೇಸಾಯಿ, ಬಸವರಾಜ ಮ್ಯಾಗೋಟಿ, ನಾರಾಯಣ ಲೋಕರೆ, ಅಡಿವೆಪ್ಪ ನಾಗರಾಳಿ, ಮಹಾದೇವ ಕೇಸಪ್ಪನಟ್ಟಿ, ತುಳಸಪ್ಪ ಯರಜರ್ವಿ, ಸಂಭಾಜಿ ಯಮೋಜಿ, ಲಕ್ಷ್ಮಣ ಮಂಡು, ರುದ್ರಪ್ಪ ಅಮರಾಪುರ, ಮಹೇಶ ಸುಗಣೆನ್ನವರ್, ಸಿದ್ದಬಸವ ಮಣತುರಗಿಮಠ, ನಾಗಯ್ಯ ಕುಡಚಿಮಠ, ಪ್ರೇಮ್ ಕೋಲಕಾರ, ಅಪ್ಸರ್ ಜಮಾದಾರ್ ಸೇರಿದಂತೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

ಶಾಲಾ ಪ್ರಾರಂಭೋತ್ಸವ: ಮಕ್ಕಳಿಗೆ ಬ್ಯಾಗ್ ವಿತರಣೆ

ಯರಗಟ್ಟಿ: ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ನಡೆಯಿತು. ಶಾಲಾ ಆವರಣದಲ್ಲಿ ತಳೀರು ತೋರಣ, ರಂಗೋಲಿಗಳಿಂದ ಶೃಂಗರಿಸಿ ಗ್ರಾಮದ ಗಣ್ಯರನ್ನು ಮತ್ತು ಮಕ್ಕಳು ಸೇರಿ ಶಾಲಾ ಪ್ರಾರಂಭೋತ್ಸವ ಹಾಗೂ ಮಕ್ಕಳ ಸ್ವಾಗತ, ಹೊಸ ವಿದ್ಯಾರ್ಥಿಗಳಿಗೆ ಸಿಹಿ ಹಂಚಿ, ನೋಟ್ ಬುಕ್ ನೀಡಿ ಬರಮಾಡಿ ಕೊಳ್ಳಲಾಯಿತು.

ಎಂ.ಎಂ.ಚಿಲದ ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಎಲ್ ಕೆಜಿ ಹಾಗೂ ಒಂದನೇ ತರಗತಿಗೆ ಮಕ್ಕಳನ್ನು ದಾಖಲಿಸಿಕೊಳ್ಳಲು ಮತ್ತು ಮರು ದಾಖಲಾತಿಯನ್ನು ಹೆಚ್ಚಿಸಲು ಆಯಾ ಸ್ಥಳೀಯ ಶಾಲೆಗಳ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಮ್‌ಸಿ) ಸದಸ್ಯರುಗಳು ವಿಶೇಷ ಆಂದೋಲನಗಳನ್ನು ನಡೆಸುತ್ತಿದ್ದಾರೆ.



ಎಸ್‌ಡಿಎಂಸಿ ಅಧ್ಯಕ್ಷ ಲಕ್ಕಪ್ಪ ಜಗದಾರ ಅವರು ಎಲ್‌ಕೆಜಿ ಹಾಗೂ ಒಂದನೇ ತರಗತಿಗೆ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಿಸಿದರು. ಪಟ್ಟಣದಲ್ಲಿ ಮಕ್ಕಳು ಶಿಕ್ಷಕರು ಪಾಲಕರು ತೆರಳಿ ಸಾರ್ವಜನಿಕರಲ್ಲಿ ಶಾಲಾ ಪ್ರಾರಂಭೋತ್ಸವದ ಜಾಗೃತಿ ಮೂಡಿಸುವ ಮೆರವಣಿಗೆ ಜರುಗಿತು.

ತಹಶೀಲ್ದಾರ್ ಎಂ.ವಿ. ಗುಂಡಪ್ಪಗೋಳ ಮಾತನಾಡಿದರು. ಈ ವೇಳೆ ಶಾಲಾ ಪ್ರಧಾನ ಗುರುಗಳಾದ ಎ.ಎ. ಮಕ್ತುಮನವರ, ಶಿಕ್ಷಕ ಎಸ್.ಬಿ.ಮಿಕಲಿ, ಎಸ್‌ಡಿಎಂಸಿ ಉಪಾಧ್ಯಕ್ಷೆ ಸುನೀತಾ ಹಿರೇಮಠ, ಎಸ್‌ಡಿಎಂಸಿ ಸದಸ್ಯರಾದ ಫೀರೋಜ ಖಾದ್ರಿ, ವಿಜಯ ಬಡಿಗೇರಿ, ದುಂಡಯ್ಯಾ ಹಿರೇಮಠ, ಮುದ್ದಕಪ್ಪ ತಡಸಲೂರು, ಶಕುಂತಲಾ ಹಡಪದ, ಪ್ರೇಮಾ ಹೂಲಿಕಟ್ಟಿ, ಸುಹಾನಾ ಉಗರಗೋಳ, ಶಾಹೀನ ಹುಕ್ಕೇರಿ, ಲಕ್ಷ್ಮೀ ಸರೇಬಾನ, ಶಿಕ್ಷಕ, ಶಿಕ್ಷಿಯರು, ಗ್ರಾಮದ ಹಿರಿಯ ಮುಖಂಡರು, ಮತ್ತಿತರರು ಇದ್ದರು.

ತಹಶೀಲ್ದಾರ್ ಕಚೇರಿಗೆ ಮುತ್ತಿಗೆ



ಬೆಳಗಾವಿ: ಕರ್ನಾಟಕ ಪರಿಶಿಷ್ಟ ಪಂಗಡ ವಾಲ್ಮೀಕಿ ರಾಜ್ಯ ಯುವ ಘಟಕ ಸಂಘಟನೆಯಿಂದ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕ ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ನೆರಸಿ ಗ್ರಾಮಕ್ಕೆ ನೀಡಿದ ಹಿಡಿಕಲ್ ಡ್ಯಾಮ್ 4 ಎಕರೆ ಭೂಮಿಯಲ್ಲಿ ಸ್ಮಶಾನಕ್ಕೆ ಹಾಗೂ ಇನ್ನಿತರ ಗ್ರಾಮದ ಜನರ ಅನುಕೂಲಕ್ಕೆ ನೀಡಿದ್ದು, ಆ ಗ್ರಾಮದ ಒಂದು ಕುಟುಂಬವು ಜಮೀನಿನಲ್ಲಿ ಒತ್ತುವರಿಯಾಗಿ ಸಾಗುವಳಿ ಮಾಡುತ್ತಿದ್ದು, ಈ ವಿಚಾರವಾಗಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರೂ ಬೇಜವಾಬ್ದಾರಿ ವಹಿಸಿದ ಖಾನಾಪುರ ತಹಶೀಲ್ದಾರ ಕಚೇರಿ ವಿರುದ್ಧ ರಾಜ್ಯಾಧ್ಯಕ್ಷರಾದ ಮಹೇಶ್ ಶೀಗಿಹಳ್ಳಿ ರವರ ನೇತೃತ್ವದಲ್ಲಿ, ತಹಶೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸಿದರು.

ಈ ವೇಳೆ ಖಾನಾಪುರ ತಾಲೂಕಿನ ಅಧ್ಯಕ್ಷ ಆನಂದ ಊದಿ, ತಾಲೂಕು ಗೌರವ ಅಧ್ಯಕ್ಷ ರಾಜು ನಾಯಕ, ಲಕ್ಷ್ಮಣ ಬಾಗಡಿ, ರಾಮ್ ಪೂಜಾರಿ, ರುದ್ರಪ್ಪ ಮುಖಾರಿ, ಸುನೀಲ ಬಾಳನ್ನವರ, ಶುಭಂ ತಳವಾರ, ಆಕಾಶ ಸರಿಕಾರ, ರೋಹಿತ್ ಅರಳಗುಂದಿ ಹಾಗೂ ಹಲವಾರು ಕಾರ್ಯರ್ತರು ಪಾಲ್ಗೊಂಡಿದ್ದರು.

ಆಸರೆ ಯೋಜನೆ ನೋಂದಣಿ ಅಭಿಯಾನ

ಖಾನಾಪುರ: ಛಾಯಾಚಿತ್ರಗ್ರಾಹಕರಿಗೆ ಆರ್ಥಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘದಿಂದ ಆಸರೆ ಯೋಜನೆಯನ್ನು ಪರಿಚಯಿಸಿದ್ದು, ಈ ಯೋಜನೆಯ ನೊಂದಣಿ ಅಭಿಯಾನ ಜೂ.1ರಿಂದ ರಾಜ್ಯಾದ್ಯಂತ ಆರಂಭಗೊಂಡಿದೆ ಎಂದು ತಾಲೂಕು ಛಾಯಾಚಿತ್ರಗ್ರಾಹಕರ ಸಂಘದ ಅಧ್ಯಕ್ಷ ಸುನೀಲ ಮೂಡಲಗಿ ಮಾಹಿತಿ ನೀಡಿದರು.

ಪಟ್ಟಣದ ರವಳನಾಥ ದೇವಾಲಯದಲ್ಲಿ ಸೋಮವಾರ ಸಂಘದ ವತಿಯಿಂದ ಆಯೋಜಿಸಿದ್ದ ನೊಂದಣಿ ಅಭಿಯಾನ ಉದ್ದೇಶಿಸಿ ಮಾತನಾಡಿ, ಈ ಅಭಿಯಾನದಡಿ ಹೆಸರು ನೊಂದಾಯಿಸಿಕೊಂಡ ಛಾಯಾಗ್ರಾಹಕರು ಆಕಸ್ಮಿಕವಾಗಿ ನಿಧನರಾದಲ್ಲಿ ಅವರ ಕುಟುಂಬಕ್ಕೆ ಸಂಘದ ವತಿಯಿಂದ 1 ಲಕ್ಷ ಆರ್ಥಿಕ ನೆರವು ನೀಡಲಾಗುತ್ತದೆ. ತಾಲೂಕಿನ ಎಲ್ಲ ಛಾಯಾಗ್ರಾಹಕರು ಈ ಯೋಜನೆಯಡಿ ನೊಂದಣಿ ಮಾಡಿಕೊಳ್ಳಬೇಕು ಎಂದರು. ಪತ್ರಕರ್ತರ ಸಂಘದ ಅಧ್ಯಕ್ಷ ಪ್ರಸನ್ನ ಕುಲಕರ್ಣಿ ನೊಂದಣಿ ಅಭಿಯಾನದ ಭಿತ್ರಪತ್ರ ಲೋಕಾರ್ಪಣೆಗೊಳಿಸಿದರು. ಹಿರಿಯ ಛಾಯಾಗ್ರಾಹಕ ಗಣಪತ ಗುರವ ನೊಂದಣಿ ಅರ್ಜಿಗಳನ್ನು ವಿತರಿಸಿದರು. ಶಿರೀಷ ಬಿರ್ಜೆ ಪ್ರಾಸ್ತಾವಿಕ ಮಾತನಾಡಿ ಆಸರೆ ಯೋಜನೆಯ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಮಾಣಿಕ ಕುರಿಯಾ, ನಿರ್ದೇಶಕ ಅಪ್ಪಾಜಿ ಪಾಟೀಲ ಸೇರಿದಂತೆ ಸಂಘದ ಸದಸ್ಯರು ಇದ್ದರು.



ರಸ್ತೆ ಕಾಮಗಾರಿಗೆ ಶಾಸಕ ಭೂಮಿ ಪೂಜೆ



ಕಬ್ಬೂರು: ರಸ್ತೆಗಳ ನಿರ್ಮಾಣದಿಂದ ಸಾರ್ವಜನಿಕರಿಗೆ ಸರಕು ಸಾಗಾಣಿಕೆ ಮಾಡಲು ಅನುಕೂಲವಾಗುತ್ತದೆ. ಸ್ಥಳೀಯರು ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಜಾಗೆ ನೀಡಿ ಅನುಕೂಲ ಮಾಡಬೇಕು ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ಅವರು ಸಮೀಪದ ಜಾಗನೂರ ಗ್ರಾಮದ ಖಿಂಡಿ ತೋಟದ ವಿಜಯನಗರ-ಗುರಕುಲ ರಸ್ತೆ ಅಭಿವೃದ್ಧಿಗೆ ಪಂಚಾಯತಿ ರಾಜ ಇಲಾಖೆ 40ಲಕ್ಷ ರೂ. ಮೊತ್ತದ ರಸ್ತೆ ಸುಧಾರಣಾ ಕಾಮಗಾರಿಗೆ ಮಂಗಳವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ರಸ್ತೆಗಳ ಸುಧಾರಣೆಯಿಂದ ರೈತರು ಕಾರ್ಖಾನೆಗಳಿಗೆ ಕಬ್ಬು, ಪೇಟೆಗೆ ದವಸ ಧಾನ್ಯ ಸಾಗಾಟ ಮಾಡಲು ಸಹಕಾರಿಯಾಗುತ್ತದೆ. ಇದರಿಂದಾಗಿ ರೈತರು ಆರ್ಥಿಕವಾಗಿ ಸ್ಥಿತಿವಂತರಾಗಲು ಸಾಧ್ಯವಿದೆ ಎಂದರು.

ಈ ವೇಳೆ ಹಿರಾ ಶುಗರ್ ನಿರ್ದೇಶಕ ಸುರೇಶ ಬೆಲ್ಲದ, ಮುಖಂಡ ಸದಾಶಿವ ಘೋರ್ಪಡೆ, ಮಲ್ಲೇಶ ಹಣಮಂತಗೋಳ, ಹಣಮಂತ ಕರಿಕಟ್ಟಿ, ಮುತ್ತೇಪ್ಪ ಹನಮನ್ನವರ, ಮಾರುತಿ ಹಮ್ಮಾರ, ಮಹಾಂತೇಶ ಶಿರಗೂರ, ಸಿದ್ದು ಖಿಂಡಿ, ಗೋಪಾಲ ನಾವಿ,ಶಿವಾನಂದ ಪಾಟೀಲ, ಉದ್ದಪ್ಪ ಖಿಂಡಿ, ಎಸ್.ಎಸ್.ಹೊಸಮನಿ, ರಾಮನಗೌಡ ಪಾಟೀಲ, ನಾಗಪ್ಪ ತಿಗಡಿ, ಹನಮಂತ ಖಿಂಡಿ, ಲಕ್ಷ್ಮಣ ತಿಗಡಿ, ರಾಮಪ್ಪ ತಿಗಡಿ, ಸಿದ್ರಾಮ ಹನಮನ್ನವರ, ಹನಮಂತ ಖಾನಪ್ಪನವರ ಸೇರಿದಂತೆ ಇತರರು ಇದ್ದರು.

ಉಜ್ವಲ ಭವಿಷ್ಯ ರೂಪಿಸಿಕೊಳ್ಳಿ: ಕಾಂಬಳೆ

ಕುಡಚಿ: ಮಕ್ಕಳು ಪ್ರತಿದಿನ ಉತ್ಸಾಹ ಹಾಗೂ ಉಲ್ಲಾಸದಿಂದ ಶಾಲೆಗೆ ಆಗಮಿಸಿ, ಶಿಕ್ಷಕರು ನೀಡುವ ಬೋಧನೆ ಮತ್ತು ಮಾರ್ಗದರ್ಶನವನ್ನು ಅನುಸರಿಸುವಮೂಲಕತಮ್ಮಜೀವನವನ್ನು ಉಜ್ವಲಗೊಳಿಸಿಕೊಳ್ಳಬೇಕು ಎಂದು ಮುಖ್ಯೋಪಾಧ್ಯಾಯ ಎಸ್.ಪಿ.ಕಾಂಬಳೆ ಹೇಳಿದರು. ಅವರು ರಾಯಬಾಗ ತಾಲೂಕಿನ ಕುಡಚಿ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆ ಅಜೀತ ಬಾನೆ ಪ್ರಾಥಮಿಕ ಹಾಗೂ ಹೊಸ ಪ್ರೌಢಶಾಲೆಯಲ್ಲಿ ಸಂಭ್ರಮ ಮತ್ತು ಉತ್ಸಾಹದಿಂದ ನಡೆದ ಶಾಲಾ ಪ್ರಾರಂಭೋತ್ಸವದ ಕಾರ್ಯಕ್ರಮವನ್ನು ಸರಸ್ವತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿ ಮಾತನಾಡಿದರು. ಶಾಲೆಗೆ ಆಗಮಿಸಿದ ವಿದ್ಯಾರ್ಥಿಗಳನ್ನು ಶಾಲಾ ಪ್ರಾರಂಭೋತ್ಸವದ ಸಂಭ್ರಮದೊಂದಿಗೆ ಆರತಿ ಬೆಳಗಿ, ಪುಷ್ಪಾರ್ಚನೆ ಮಾಡುವ ಮೂಲಕ ಆತ್ಮೀಯವಾಗಿ ಸ್ವಾಗತಿಸಲಾಯಿತು. ನಂತರ ಎಲ್ಲಾ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಿಸಲಾಯಿತು. ಸಹಶಿಕ್ಷಕರಾದ ಅಶೋಕ ಯಲ್ಲಟ್ಟಿ, ರಾಮಚಂದ್ರ ಸವಣೂರ, ಭೀಮಪ್ಪ ಕೋಣೆ, ಆರ್.ಎ. ಬಾವಿ, ಎಸ್.ಎಂ. ಭಾವಿ, ಬಿ.ಆರ್. ಹೊನ್ನಾಕಟ್ಟಿ, ಬಿ.ಜಿ. ಗೌರಗೊಂಡ, ಭಜಂತ್ರಿ, ನಾಗೂರ, ಖಂಡೂರೆ, ಅರ್ಚನಾ ನಾಗರೇಶಿ, ರೂಪಾ ಬಳೋಲ, ಕೀರ್ತಿ ಶೆಡಬಾಳೆ, ಲಕ್ಷ್ಮೀ ಸತ್ಯನಾಯಿಕ, ಸರಿತಾ ಬಿಳ್ಳೂರ ಸೇರಿದಂತೆ ಶಾಲೆಯ ಸಿಬ್ಬಂದಿ, ಪಾಲಕರು, ವಿದ್ಯಾರ್ಥಿಗಳು ಇದ್ದರು.



ಕಿರುಸುದ್ದಿ

ಮಕ್ಕಳಿಗೆ ಅದ್ದೂರಿ ಸ್ವಾಗತ

ಹಲ್ಯಾಳ: ಹೊಸ ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ಹಲ್ಯಾಳದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅದ್ದೂರಿಯಾಗಿ ಸ್ವಾಗತಿಸಿದರು. ಶಾಲೆಗೆ ಆಗಮಿಸಿದ ಮಕ್ಕಳನ್ನು ಹೂವು, ಸಿಹಿ ವಿತರಿಸುವ ಮೂಲಕ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಮುಖ್ಯೋಪಾಧ್ಯಾಯ ಎ.ಎಸ್.ದೇವಮಾನೆ ಮಾತನಾಡಿ, ಶಿಕ್ಷಣವು ಮಕ್ಕಳ ಭವಿಷ್ಯ ರೂಪಿಸುವ ಶಕ್ತಿಯಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ನಿಯಮಿತವಾಗಿ ಶಾಲೆಗೆ ಹಾಜರಾಗಿ ಉತ್ತಮ ಶಿಕ್ಷಣ ಪಡೆಯಬೇಕು ಎಂದರು. ಗುರುಮಾತೆಯರು, ಶಿಕ್ಷಕ ವೃಂದವು ಮಕ್ಕಳಿಗೆ ಶುಭ ಹಾರೈಸಿ, ಹೊಸ ಶೈಕ್ಷಣಿಕ ವರ್ಷವು ಯಶಸ್ವಿಯಾಗಲಿ ಎಂದು ಆಶಿಸಿದರು. ಪೋಷಕರು ಸಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಾಲೆಯ ಈ ವಿಶೇಷ ಸ್ವಾಗತ ಕಾರ್ಯಕ್ರಮವನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

ಗುಣಮಟ್ಟದ ಕಾಮಗಾರಿ ಕೈಗೊಳ್ಳಿ: ಪ್ರಿಯಾಂಕಾ



ರಾಯಬಾಗ: ತಾಲೂಕಿನ ನಿಪನಾಳ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮಂಜೂರಾದ 50 ಲಕ್ಷ ರೂ. ವೆಚ್ಚದಲ್ಲಿ ಪರಿಶಿಷ್ಟ ಪಂಗಡ ಕಾಲೋನಿಯಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಮಂಗಳವಾರ ಸಂಸದ ಪ್ರಿಯಾಂಕಾ ಜಾರಕಿಹೊಳಿ ಹಾಗೂ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆಗೆ ಚಾಲನೆ ನೀಡಿದರು.

ಸರ್ಕಾರ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುತ್ತಿದೆ. ಅದನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಂಡು ಗುಣಮಟ್ಟದ ಕಾಮಗಾರಿ ಮಾಡಬೇಕು ಎಂದು ಮನವಿ ಸಂಸದ ಪ್ರಿಯಾಂಕಾ ಜಾರಕಿಹೊಳಿ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ. ಈ ವೇಳೆ ಮಹಾವೀರ ಮೊಹಿತೆ, ಸಿದ್ರಾಮ ಪೂಜೇರಿ, ಶಿವನಗೌಡ ಪಾಟೀಲ, ಸಚೀನ ನಾಯಿಕವಾಡಿ, ಸದಾಶಿವ ಗೋರ್ಪಡೆ, ಅಣ್ಣಾಸಾಹೇಬ ಖೇಮಲಾಪುರೆ, ಮಹಾದೇವ ಕದಂ, ಸಿದ್ದು ಖಿಂಡಿ, ಲಕ್ಷ್ಮಣ್ ಮಂಗಿ, ಪುಂಡಲಿಕ ತಿಗಡಿ, ಸಿದ್ದರಾಮ ಹನಮನ್ನವರ, ಗೋಪಾಲ್ ಕೋನ್ಯಗೋಳ, ಸಂಜು ಕುರಣಿ, ಬಾಳೇಶ ಕುರಬೇಟ, ರಾಜು ಹಳಬರ, ನಿರ್ಮಲಾ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಡಿಕೆಶಿ ಪ್ರಮಾಣವಚನ ವೀಕ್ಷಣೆಗೆ ವ್ಯವಸ್ಥೆ

ಬೆಳಗಾವಿ: ರಾಜ್ಯ ರಾಜಕೀಯದಲ್ಲಿ ಐತಿಹಾಸಿಕ ಕ್ಷಣವೆಂದು ಪರಿಗಣಿಸಲಾಗುತ್ತಿರುವ ಸನ್ಮಾನ್ಯ ಡಿ.ಕೆ. ಶಿವಕುಮಾರ ಅವರ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಸಮಾರಂಭವನ್ನು ಸಾರ್ವಜನಿಕರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಒಟ್ಟಾಗಿ ವೀಕ್ಷಿಸಲು ಬೆಳಗಾವಿಯಲ್ಲಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.



ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಅವರ ನೇತೃತ್ವದಲ್ಲಿ ನಗರದ ಕಾಂಗ್ರೆಸ್ ಭವನದ ಎದುರು ಬೃಹತ್ ಎಲ್ಇಡಿ ಪರದೆ ಅಳವಡಿಸಲಾಗಿದ್ದು, ಬುಧವಾರ ಮಧ್ಯಾಹ್ನ 3 ಗಂಟೆಯಿಂದ ಪ್ರಮಾಣವಚನ ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಬೆಳಗಾವಿ ನಗರ ಹಾಗೂ ಗ್ರಾಮೀಣ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಮತ್ತು ಅಭಿಮಾನಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಪ್ರಮಾಣವಚನ ಸಮಾರಂಭದ ನೇರ ಪ್ರಸಾರ ಮುಗಿದ ಬಳಿಕ ಕಾಂಗ್ರೆಸ್ ಭವನದಿಂದ ನಗರದ ಚನ್ನಮ್ಮ ವೃತ್ತದವರೆಗೆ ಮೆರವಣಿಗೆ ಆಯೋಜಿಸಲಾಗಿದೆ. ಮೆರವಣಿಗೆಯಲ್ಲಿ ಸಾವಿರಾರು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಚನ್ನಮ್ಮ ವೃತ್ತದಲ್ಲಿ ವಿಶೇಷ ವಿಜಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅಲ್ಲಿ ಡಿಕೆಶಿ ಅವರ ಬೃಹತ್ ಭಾವಚಿತ್ರಕ್ಕೆ ಹಾಲಿನ ಅಭಿಷೇಕ ನೆರವೇರಿಸಲಾಗುವುದು. ಜೊತೆಗೆ ಸಿಹಿ ಹಂಚಿ, ಸಂಭ್ರಮಾಚರಣೆ ಮೂಲಕ ಹೊಸ ಸರ್ಕಾರಕ್ಕೆ ಶುಭ ಹಾರೈಸಲಾಗುವುದು. ಈ ಕುರಿತು ಪ್ರಕಟಣೆ ನೀಡಿರುವ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್, ರಾಜ್ಯದ ಅಭಿವೃದ್ಧಿ ಮತ್ತು ಜನಪರ ಆಡಳಿತಕ್ಕೆ ಹೊಸ ದಿಕ್ಕು ನೀಡಲಿರುವ ಡಿ.ಕೆ. ಶಿವಕುಮಾರ್ ಅವರ ಪ್ರಮಾಣವಚನ ಸಮಾರಂಭವನ್ನು ಎಲ್ಲರೂ ಒಟ್ಟಾಗಿ ವೀಕ್ಷಿಸಿ ಸಂಭ್ರಮಿಸಬೇಕು ಎಂದು ಕರೆ ನೀಡಿದ್ದಾರೆ.



ಹಲ್ಯಾಳ: ಹೊಸ ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ಹಲ್ಯಾಳದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಅದ್ದೂರಿಯಾಗಿ ಸ್ವಾಗತಿಸಿದರು. ಶಾಲೆಗೆ ಆಗಮಿಸಿದ ಮಕ್ಕಳನ್ನು ಹೂವು, ಸಿಹಿ ವಿತರಿಸುವ ಮೂಲಕ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಕಾವ್ಯ ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಜೂ.7ರಂದು

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲೂಕಿನ ಸಹೃದಯ ಸಾಹಿತ್ಯ ಪ್ರತಿಷ್ಠಾನವು ಕೊಡಮಾಡುವ ರಾಜ್ಯಮಟ್ಟದ ಸಹೃದಯ ಕಾವ್ಯ ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ ಜೂ.7ರಂದು ಬೆಳಗ್ಗೆ 10ಕ್ಕೆ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ. ರಂಗಕರ್ಮಿ ಹಾಗೂ ಹಿರಿಯ ಸಾಹಿತಿ ಶಿರೀಷ ಜೋಶಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಕವಿ, ಜನಪದ ವಿದ್ವಾಂಸ ಡಾ.ಬಸವರಾಜ ಜಗಜಂಪಿ ಪ್ರಶಸ್ತಿ ಪ್ರದಾನ ಮಾಡುವರು. ತೀರ್ಪುಗಾರ ನಾಡಿನ ಹಿರಿಯ ಸಂಶೋಧಕ ಡಾ.ಪಿ.ಜಿ.ಕೆಂಪಣ್ಣವರ, ಬೆಳಗಾವಿ ಕಾರ್ಯಪಾಲಕ ಅಭಿಯಂತರ ವಿಠ್ಠಲ ತಡಸಲೂರ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಹಿರಿಯ ಪತ್ರಕರ್ತ ಎಲ್.ಎಸ್. ಶಾಸ್ತ್ರಿಗೆ ಸಹೃದಯ ಗೌರವ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರತಿಷ್ಠಾನದ ಅಧ್ಯಕ್ಷ ನಾಗೇಶ್ ಜೆ.ನಾಯಕ ಉಪಸ್ಥಿತರಿರುತ್ತಾರೆ. ದಾಂಡೇಲಿ ನಾಗರೇಖಾ ಗಾಂವಕರ್ 'ಪಾದಕ್ಕೊಂದು ಕಣ್ಣು' ಕವನ ಸಂಕಲನ, ಶಿಗ್ಗಾಂವಿ ಲಕ್ಷ್ಮೀಕಾಂತ ಮಿರಜಕರ್ 'ಖಾಲಿ ಜೋಳಿಗೆಯ ಜೋಗಿ' ಗಜಲ್ ಸಂಕಲನಕ್ಕೆ ಪ್ರಶಸ್ತಿ ಲಭಿಸಿದ್ದು ಅವರಿಗೆ ತಲಾ ರೂ. 5000 ನಗದು ಪುರಸ್ಕಾರ, ನೆನಪಿನ ಕಾಣಿಕೆ ನೀಡಿ ಸತ್ಕರಿಸಲಾಗುವುದು. ಈ ವೇಳೆ ಕವಿಗೋಷ್ಠಿ ನಡೆಯಲಿದ್ದು ಜಯಶ್ರೀ ಗೂಳಪ್ಪನವರ, ಕಿರಣ ಗಣಾಚಾರಿ, ಇಂದಿರಾ ಮೋಟೆಬೆನ್ನೂರು, ಅಯ್ಯಪ್ಪ ಕಂಬಾರ, ಚನ್ನಯ್ಯ ಪೂಜೇರ, ಸೌಮ್ಯ ಕೋಟಗಿ, ಶ್ರೀನಿಧಿ ಪಟ್ಟಣಶೆಟ್ಟಿ, ಮಾರುತಿ ಪೂಜೇರ, ಅನುಸೂಯಾ ಮೇಟ್ಯಾಲ, ಆನಂದ ಹಕ್ಕೆನ್ನವರ, ಲಕ್ಷ್ಮಿ ಹಿರೇಮಠ, ಶಿವಾನಂದ ಉಳ್ಳಿಗೇರಿ ಕವನ ವಾಚಿಸಲಿದ್ದಾರೆ ಎಂದು ಕಾರ್ಯದರ್ಶಿ ರಮೇಶ್ ಕೆ. ತಳವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಯಬಾಗ: ತಾಲೂಕಿನ ಶ್ರೇಷ್ಠ ಪಶುವೈದ್ಯ ಪ್ರಶಸ್ತಿಗೆ ಬಾಜನರಾದ ಡಾ.ಎಚ್.ಟಿ.ನಾವಿ, ಡಾ.ಉಮೇಶ ಮಿರ್ಜಿ, ಅಥಣಿ ತಾಲೂಕಿನ ಸಂಕ್ರಟ್ಟಿಯ ಪಶುವೈದ್ಯಾಧಿಕಾರಿ ಡಾ.ಶಿವಾನಂದ ಮಗದುಮ್ ಸೇರಿ ಜಿಲ್ಲಾಮಟ್ಟದ ಶ್ರೇಷ್ಠ ಪಶುವೈದ್ಯ ಪ್ರಶಸ್ತಿಗೆ ಬಾಜನರಾದ ಪಶುವೈದ್ಯಾಧಿಕಾರಿಗಳಿಗೆ ರಾಯಭಾಗ ತಾಲೂಕಿನ ಕೃತಕ ಗರ್ಭಧಾರಣಾ ಕಾರ್ಯಕರ್ತರಿಂದ ಹೃದಯ ಪೂರ್ವಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ, ಮೇಲ್ವಿಚಾರಣಾ ಸಮಿತಿ ಸಭೆ
ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ

ಬೆಳಗಾವಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಜಲ ಜೀವನ ಮಿಷನ್' ಅಡಿಯಲ್ಲಿ ಪ್ರತಿ ಗ್ರಾಮೀಣ ಮನೆಗೂ ನಲ್ಲಿ ನೀರು ಒದಗಿಸುವ ಯೋಜನೆ ಜಿಲ್ಲೆಯಲ್ಲಿ ಮತ್ತಷ್ಟು ಸಮರ್ಪಕವಾಗಿ ಜಾರಿಗೊಳಿಸಬೇಕು. ಕೇಂದ್ರದ ವಿವಿಧ, ಯೋಜನೆಗಳು ಯಾವುದೇ ಅಡೆತಡೆಯಿಲ್ಲದೆ ಪೂರ್ಣಗೊಳಿಸಬೇಕು ಎಂದು ಸಂಸದ ಜಗದೀಶ ಶೆಟ್ಟರ ಹೇಳಿದರು.



ಮಂಗಳವಾರ ಸುವರ್ಣ ವಿಧಾನಸೌಧದ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆದ 2026-27ನೇ ಸಾಲಿನ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಿಲ್ಲೆ ಎಲ್ಲ ರೀತಿಯಿಂದ ಸಂಪನ್ಮೂಲ ಭರಿತ ಜಿಲ್ಲೆಯಾಗಿದೆ. ವಿದ್ಯಾರ್ಥಿಗಳಿಗೆ ಕಲಿಕಾ ಗುಣಮಟ್ಟದ ಹೆಚ್ಚಿಸಬೇಕು. ಮುಂಬರುವ ದಿನಮಾನಗಳಲ್ಲಿ ಜಿಲ್ಲೆಯನ್ನು ಶೈಕ್ಷಣಿಕವಾಗಿ ಇನ್ನೂ ಉತ್ತಮವಾದಂತಹ ಸಾಧನೆ ಮಾಡುವಂತಹ ಕಾರ್ಯಕ್ರಮ ರೂಪಿಸಲು ತಿಳಿಸಿದರು. ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮಾರ್ಗಸೂಚಿಗಳನ್ನು ಪಾಲಿಸಬೇಕು. ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಕ್ರಮವಹಿಸಬೇಕು. ಅಲ್ಲದೇ ಅಗತ್ಯದ ಔಷಧಗಳನ್ನು ದಾಸ್ತಾನು ಮಾಡಿಕೊಳ್ಳುವಂತೆ ಸೂಚಿಸಿದರು.

ಇ-ಸ್ವತ್ತು ಅಡಿ ಪ್ರಮಾಣ ಪತ್ರಗಳನ್ನು ತ್ವರಿತವಾಗಿ ವಿತರಿಸಲು ಕ್ರಮ ಕೈಗೊಳ್ಳಬೇಕು. ವಿದ್ಯುತ್ ಪರಿವರ್ತಕಗಳ ದುರಸ್ತಿ ಕುರಿತು ರೈತರಿಂದ ದೂರುಗಳು ಬರುತ್ತಿದ್ದು, ವಿದ್ಯುತ್ ಪರಿವರ್ತಕಗಳ ದುರಸ್ತಿಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದರು.

ಸಂಸದ ಈರಣ್ಣ ಕಡಾಡಿ ಮಾತನಾಡಿ, ವಿಬಿ-ಜಿ, ರಾಮ-ಜಿ ಯೋಜನೆಯಡಿ ಅನೇಕ ಹೊಸ ಕಾರ್ಯಕ್ರಮಗಳನ್ನು ಅಳವಡಿಸಲಾಗಿದ್ದು, ಈ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಸೂಚಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಮಾತನಾಡಿ, ಜಿಲ್ಲೆಯ ಶೈಕ್ಷಣಿಕವಾಗಿ ಉತ್ತಮಗೊಳಿಸುವ ನಿಟ್ಟಿನಲ್ಲಿ ಅನೇಕ ವಿಭಿನ್ನ ಕಾರ್ಯಕ್ರಮಗಳನ್ನು ರೂಪಿಸಲಾಗಿರುತ್ತದೆ. ಬ್ಯಾಂಕ್‌ಗಳು ಹೋಬಳಿ ಮಟ್ಟದಲ್ಲಿ ಅಭಿಯಾನವನ್ನು ಕೈಗೊಳ್ಳುವ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳಡಿ ಬ್ಯಾಂಕ್‌ಗಳಿಂದ ದೊರೆಯುವಂತಹ ಸಾಲ, ಸೌಲಭ್ಯಗಳ ಕುರಿತು ಮಾಹಿತಿ ಒದಗಿಸಲು ತಿಳಿಸಿದರು.

ಕುಡಿಯುವ ನೀರು ಸಮಸ್ಯೆಯಿರುವ ಊರುಗಳಿಗೆ ನೀರು ಪೂರೈಕೆಗೆ ಚಿಕ್ಕೋಡಿ ಭಾಗದಲ್ಲಿ 22 ಬೋರವೆಲ್ ವ್ಯವಸ್ಥೆ ಕಲ್ಪಿಸಲಾಗಿದೆ. ಎಲ್ಲಾ ಗ್ರಾಪಂಗಳಲ್ಲಿ ಕುಡಿಯುವ ನೀರು ಸರಬರಾಜಿಗೆ ಸ್ವಂತ ವಾಟರ್ ಟ್ಯಾಂಕರ್‌ಗಳು ಇವೆ. ಬಹು ಗ್ರಾಮ ಕುಡಿಯುವ ನೀರು ಯೋಜನೆಯಡಿ ನೀರು ಪೂರೈಕೆಗೆ ಕ್ರಮ ವಹಿಸಲಾಗಿದೆ. ಎಂದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಮಹಾಂತೇಶ ಮುರಗೋಡ ಮಾತನಾಡಿ, ಜಿಲ್ಲೆಯಲ್ಲಿ ಮಳೆ ಪ್ರಮಾಣ ಕುಂಠಿತವಾದ ಕಾರಣ ಸಲ್ಪ ಪ್ರಮಾಣದಲ್ಲಿ ಮಾತ್ರ ಬಿತ್ತನೆಯಾಗಿವೆ. ಈಗಾಗಲೇ ಮಳೆಗೆ ಹಾನಿಯಾಗಿರುವ ತೋಟಗಾರಿಕೆ ಬೆಳೆ ಸಮೀಕ್ಷೆ ನಡೆಸಿ ಪರಿಹಾರ ಪೋರ್ಟಲ್ ಗೆ ಅಪ್ಲೋಡ್ ಮಾಡಲಾಗಿದೆ. ಅನುದಾನ ಬಂದಕೂಡಲೇ ತಕ್ಷಣೆಗೆ ರೈತರ ಖಾತೆಗೆ ಬೆಳೆಹಾನಿ ಪರಿಹಾರ ನೀಡಲಾಗುವುದು ಎಂದು ತಿಳಿಸಿದರು.

ಚಿಕ್ಕೋಡಿಯಲ್ಲಿ ಒಟ್ಟು 40 ಪಿಎಂಶ್ರೀ ಶಾಲೆಗಳು ಪ್ರಾರಂಭವಾಗಿವೆ. 10 ಪ್ರೌಢ ಶಾಲೆ 30 ಪ್ರಾಥಮಿಕ ಶಾಲೆಗಳು ಇವೆ ಈಗಾಗಲೇ ಅಥಿತಿ ಶಿಕ್ಷಕರನ್ನು ಸಹ ನೇಮಕ ಮಾಡಲಾಗಿದೆ. ವಿಶೇಷವಾಗಿ ಸಂಗೀತ, ಕರಾಟೆ ಶಿಕ್ಷಕರನ್ನು ಸಹ ನೇಮಕ ಮಾಡಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಹ ಪಿಎಂಶ್ರೀ ಶಾಲೆಗಳ ಬೇಡಿಕೆ ಹೆಚ್ಚಾಗಿದೆ. ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಪಿಎಂಶ್ರೀ ಶಾಲೆಗಳಲ್ಲಿ 95% ಕ್ಕಿಂತ ಹೆಚ್ಚು ಎಸ್ಸೆಸ್ಸೆಲ್ಸಿ ಫಲಿತಾಂಶ ಬಂದಿರುತ್ತದೆ ಎಂದು ಚಿಕ್ಕೋಡಿ ಡಿಡಿಪಿಐ ಹೇಳಿದರು.

ಸಭೆಯಲ್ಲಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ದಿಶಾ ಸಮಿತಿ ನಾಮ ನಿರ್ದೇಶಿತ ಸದಸ್ಯರುಗಳು, ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ, ಡಿಸಿಪಿ ನಾರಾಯಣ ಭರಮಣಿ, ಪಾಲಿಕೆ ಆಯುಕ್ತ ಎಂ. ಕಾರ್ತಿಕ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಎಚ್.ಡಿ ಕೋಳೇಕರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಈಶ್ವರ ಗಡಾದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

ವಿದ್ಯಾರ್ಥಿಗಳಿಗೆ ನೂತನ ಶೈಕ್ಷಣಿಕ ವರ್ಷಕ್ಕೆ ಸ್ವಾಗತ

ಬೆಳಗಾವಿ: ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯಿಂದ ಇಂಡಾಲ್ ನಗರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2026-27ರ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು. ಪೋಷಕರು ಹಾಗೂ ವಿದ್ಯಾರ್ಥಿಗಳು ಸೇರಿ ನಮ್ಮೂರ ಶಾಲೆ 'ನಮ್ಮಯ ಕಣ್ಮಣಿ' ಎಂಬ ಬ್ಯಾನರ್ ಹಿಡಿದು ಸಂಭ್ರಮಿಸಿದರು.

ಈ ವೇಳೆ ಎಐಡಿಎಸ್‌ಓ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮಾತನಾಡಿ, ನಮ್ಮ ದೇಶದಲ್ಲಿ ಎಲ್ಲರಿಗೂ ಶಿಕ್ಷಣ ದೊರೆಯಬೇಕೆಂದು ಜ್ಯೋತಿಬಾಪುಲೆ ಸಾವಿತ್ರಿಬಾಯಿ ಪುಲೆ ಈಶ್ವರ ಚಂದ್ರ ವಿದ್ಯಾಸಾಗರ ಪಂಡಿತ್ ಮುಂತಾದವರು ಶ್ರಮಿಸಿದರು. ಅವರ ಹೋರಾಟದ ಫಲವಾಗಿ ಇಂದು ಎಲ್ಲರಿಗೂ ಶಿಕ್ಷಣ ದೊರೆಯುತ್ತಿದೆ. ಆದರೆ ಶಿಕ್ಷಣವನ್ನು ಖಾತ್ರಿ ಎಲ್ಲರಿಗೂ ಖಾತ್ರಿ ಪಡಿಸಬೇಕಿದ್ದ ಸರ್ಕಾರವೇ ಶಾಲೆಗಳನ್ನು ಮುಚ್ಚುತ್ತಿದೆ.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಸಾವಿರಾರು ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇಂಡಾಲ್ ನಗರ, ಸಿಂದೊಳ್ಳಿ, ಬಸರಿಕಟ್ಟಿ, ಶಗನಮಟ್ಟಿ ಸರ್ಕಾರಿ ಶಾಲೆಗಳನ್ನು ಮುಚ್ಚಿ ಮಾಸ್ತಮರಡಿ ಶಾಲೆಗೆ ವಿಲೀನಗೊಳಿಸುವ ಆದೇಶ ಮಾಡಲಾಗಿತ್ತು. ಆದರೆ ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ಜೂನ್ 01 ಸೋಮವಾರದಿಂದ ಶಾಲೆ ಉಳಿದು ಪ್ರಾರಂಭೋತ್ಸವ ನಡೆಸಲಾಗುತ್ತಿದೆ ಎಂದು ಹೇಳಿ ಎಲ್ಲ ಪಾಲಕರು, ವಿದ್ಯಾರ್ಥಿಗಳಿಗೆ ಅಭಿನಂದನೆ ವ್ಯಕ್ತಪಡಿಸಿದರು.

ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯು ಬೆಳಗಾವಿ ಜಿಲ್ಲಾಧ್ಯಕ್ಷ ರಾಮು ಹನಗಂಡಿ ಮಾತನಾಡಿ, ಹೋರಾಟದಿಂದಾಗಿ ಈ ಶಾಲೆ ಉಳಿದಿದೆ. ಮುಂದೆ ಈ ಶಾಲೆ ವಿಲೀನಗೊಳ್ಳದಂತೆ ರಕ್ಷಿಸಿ ಬಲಪಡಿಸುವ ನಮ್ಮ ಸಂಘಟಿತ ಪ್ರಯತ್ನ ಮುಂದು ವರಿಯುತ್ತದೆ. ಎಂದು ಕರೆ ನೀಡಿದರು.

ಪೋಷಕರಾದ ರೇಖಾ ಹಂಚಿನಮನಿ, ಮಂಜುಳಾ ಕಂಡ್ರಿ ಯಲ್ಲವ್ವ ಪಟ್ಟನ್ನವರ್, ಆರತಿ, ಶ್ರೀದೇವಿ ಬಂಡಿ ಸೇರಿದಂತೆ ಹಲವಾರು ವಿದ್ಯಾರ್ಥಿಗಳು ಗ್ರಾಮಸ್ಥರು ಇದ್ದರು.



ಬೀದಿಬದಿ ವ್ಯಾಪಾರಿಗಳಿಂದ ಪ್ರತಿಭಟನೆ

ಬೆಳಗಾವಿ: ತಾಲೂಕಿನ ಬೆನಕನಹಳ್ಳಿ ಪಟ್ಟಣ ಪಂಚಾಯತಿ, ಸಿಬ್ಬಂದಿ ಯೋಗೇಶ ಗಣೇಶಪುರದ ಪೈಪ್‌ಲೈನ್ ರಸ್ತೆಯ ಬೀದಿ ಬದಿ ವ್ಯಾಪಾರಿಗಳ ಹತ್ತಿರ ನಿಯಮಬಾಹಿರವಾಗಿ ಭೂಬಾಡಿಗೆ ವಸೂಲಿ ಮಾಡಿ ತೊಂದರೆ ನೀಡುತ್ತಿರುವುದನ್ನು ಖಂಡಿಸಿ ಬೀದಿ ಬದಿ ವ್ಯಾಪಾರಿಗಳು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ಸೋಮವಾರ ಬೀದಿ ಬದಿ ವ್ಯಾಪಾರಿಗಳು ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ನಮ್ಮಗೆ ಯಾಗುತ್ತಿರುವ ತೊಂದರೆ ಖಂಡಿಸಿ ಪ್ರತಿಭಟಿಸಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿಗೆ ಮನವಿ ಸಲ್ಲಿಸಿದರು.

ಬೀದಿ ಬದಿ ವ್ಯಾಪಾರಿಗಳಿಂದ ಮೊದಲು ಹತ್ತು ರೂ. ಭೂಬಾಡಿಗೆ ಪಡೆಯುತ್ತಿದ್ದ ಸಿಬ್ಬಂದಿ (ಯೋಗೇಶ್) ಈಗ ಪ್ರತಿದಿನ 50 ರೂ. ಕೇಳುತ್ತಿದ್ದಾರೆ. ನಾವು ಕೇವಲ ಸಂಜೆ ಮಾತ್ರ ಅಲ್ಲಿ ವ್ಯಾಪಾರಕ್ಕೆ ಬರುತ್ತೇವೆ. ಐವತ್ತು ರೂ.ಎಂದರೆ ನಮಗೆ ತೊಂದರೆ ಆಗುತ್ತದೆ, ಎಷ್ಟೋ ಸಲ ನಮ್ಮ ಸಮಸ್ಯೆ ಹೇಳಿದರೂ ಆತ ಕೇಳುವದಿಲ್ಲ ಎಂದು ಅಸಮಾಧಾನವನ್ನು ಹೋರ ಹಾಕಿದರು.

ಹಣ ಕೊಡದಿದ್ದರೆ ಪಂಚಾಯತಿಯಿಂದ ನೋಟಿಸ್ ನೀಡುತ್ತೇವೆ, ನಿಮ್ಮ ಅಂಗಡಿಗಳನ್ನು ಖಾಲಿ ಮಾಡಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದಾರೆ. ನಾವು ಹಣ ನೀಡಿದರೂ ಅದಕ್ಕೆ ಮರಳಿ ಆತ ರಶೀದಿ ನೀಡುವದಿಲ್ಲ, ಸಂಜೆ ಕೇವಲ ನಾಲ್ಕೈದು ಗಂಟೆ ಅಂಗಡಿ ಹಚ್ಚುವ ಬಡ ಬೀದಿ ಬದಿ ವ್ಯಾಪಾರಿಗಳಿಗೆ ಹೀಗೆ ತೊಂದರೆ ಕೊಟ್ಟರೆ ನಾವುಗಳು ಹೇಗೆ ವ್ಯಾಪಾರ ಮಾಡಿ ನಮ್ಮ ಜೀವನವನ್ನು ಕಟ್ಟಿಕೊಳ್ಳಬೇಕೆಂದು ನಮ್ಮ ಅಳಲೂ ತೊಡಿಕೊಂಡರು.

ವ್ಯಾಪಾರಿಗಳ ಮನವಿಗೆ ಸ್ಪಂದಿಸಿದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಲ್ಲಿಕಾರ್ಜುನ್ ಕಲಾದಗಿ ಅವರು, ರಶೀದಿ ನೀಡದಿದ್ದರೆ ಯಾವುದೇ ಕಾರಣಕ್ಕೂ ತಾವು ಭೂ ಬಾಡಿಗೆ ನೀಡಬೇಡಿ, ಇದರ ಬಗ್ಗೆ ಬೆನಕನಹಳ್ಳಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳ ಜೊತೆ ಮಾತನಾಡಿ ತಮ್ಮ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸುತ್ತೇವೆ ಎಂಬ ಭರವಸೆ ನೀಡಿದರು.

ಈ ವೇಳೆ ಬೆನಕನಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಹಲವಾರು ಬೀದಿ ಬದಿ ವ್ಯಾಪಾರಿಗಳು ಪಾಲ್ಗೊಂಡಿದ್ದರು.



ಕನ್ನಡ ಶಾಲೆಗಳಿಗೆ ಮಕ್ಕಳನ್ನು ದಾಖಲಿಸಲು ಮುಂದಾಗಿ: ಶ್ರೀಗಳು

ಯಮಕನಮರಡಿ: ಪಾಲಕರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳಿಸುವಲ್ಲಿ ಮುಂದಾಗ ಅಲ್ಲದೆ ತಮ್ಮ ಮಕ್ಕಳನ್ನು ಮೊಬೈಲದಿಂದ ದೂರ ಇಡಬೇಕು. ಸಂಸ್ಥೆ ಆನಂದಪುರ ಗ್ರಾಮದ, ಹತ್ತರಗಿ ಗ್ರಾಪಂ ಮಾಜಿ ಅಧ್ಯಕ್ಷ ಮಹಾದೇವ ಸಂಸ್ಥೆ ನೂತನ ಅಧ್ಯಕ್ಷರಾಗಿ ನೂತನ ಸದಸ್ಯರನ್ನು ನೇಮಿಸಿಕೊಂಡು ಶಾಲೆಯನ್ನು ಅಭಿವೃದ್ಧಿಪಡಿಸಿ ಮಾದರಿ ಶಾಲೆಯನ್ನಾಗಿ ಮಾಡುವದಾಗಿ ಮುಂದಾಗಿರುವುದು ಹೆಮ್ಮೆಪಡುವ ಸಂಗತಿಯಾಗಿದೆ ಎಂದು ಹತ್ತರಗಿ ಕಾರಿ ಮಠದ ಗುರುಸಿದ್ಧ ಶ್ರೀಗಳು ಹಾಗೂ ಯಮಕನಮರಡಿ ಹತ್ತರಗಿ ಹರಿ ಮಂದಿರದ ಪೂಜ್ಯರಾದ ಡಾ.ಆನಂದ ಮಹಾರಾಜ ಗೋಸಾವಿ ಹೇಳಿದರು.

ಸಮೀಪದ ಆನಂದಪುರ ಗ್ರಾಮದ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಶ್ರೀ ಸುಶೀಲಾ ಸಿದ್ದಪ್ಪ ಮಲಕಾರ ಪ್ರಾಥಮಿಕ ಶಾಲೆ 2026ನೆ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಸಮಾರಂಭದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಹತ್ತರಗಿ ಕಾರಿಮಠದ ಶ್ರೀಗಳಾದ ಗುರು ಸಿದ್ದೇಶ್ವರ ಶ್ರೀಗಳು ಮಾತಮಾತನಾಡಿ, ಸಂಸ್ಥೆಯು ಹೆಮ್ಮರವಾಗಿ ಬೆಳೆದು ಮಕ್ಕಳಿಗೆ ಉತ್ತಮ ಶಿಕ್ಷಣ ಸಂಸ್ಕಾರ ನೀಡುವುದರ ಜೊತೆಗೆ ಇಂದಿನ ಆಧುನಿಕ ಯುಗದಲ್ಲಿ ಬೆಳೆಯುವ ಮಕ್ಕಳಿಗೆ ಸಂಪೂರ್ಣ ತರಬೇತಿ ನೀಡುವುದರ ಜೊತೆಗೆ ಬಸವತತ್ವದ ಸಂಸ್ಕಾರವನ್ನು ನೀಡುವಂತಾಗಬೇಕು ಎಂದು ತಮ್ಮ ಆಶೀರ್ವಚನ ನೀಡಿದರು.



ಸಂಸ್ಥೆ ಅಧ್ಯಕ್ಷ ಮಹಾದೇವ್ ಪಟೋಳಿ ಪ್ರಸ್ತಾವಕವಾಗಿ ಮಾತನಾಡಿದರು. ನೂತನ ಶೈಕ್ಷಣಿಕ ವರ್ಷದ ಅಂಗವಾಗಿ ಹತ್ತರಗಿ ಹರಿ ಮಂದಿರದ ಪೂಜ್ಯರಾದ ಆನಂದ ಮಹಾರಾಜ್ ಗೋಸಾವಿಯವರು 100 ವಿದ್ಯಾರ್ಥಿಗಳಿಗೆ ನೋಟ್ ಬುಕ್ ಪೆನ್ನು ವಿತರಿಸಿದರು. ಪೂಜ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಜೂಮಲಿಂಗ ಪಟೋಳಿ ನಿವೃತ್ತಿ ಶಿಕ್ಷಕ ಮಠಪತಿ ಗುರುಗಳು, ಬಸವರಾಜ ಅತ್ತಿಮರದ, ಸಿದ್ದು ಕುಡಚಿ, ಶಾಂತಕುಮಾರ ಹಾಲದೇವರಮಠ ಸೇರಿದಂತೆ ಸಂಸ್ಥೆ ಆಡಳಿತ ಮಂಡಳಿ ಸರ್ವ ಸದಸ್ಯರು ಉಪಸ್ಥಿತರಿದ್ದರು. ಗುರುಮಾತೆಯರು ನಿರೂಪಿಸಿ ವಂದಿಸಿದರು.

ಸೇವೆ ಸದಾ ಪ್ರಾಮಾಣಿಕವಾಗಿರಲಿ: ವೀರೇಶ್ವರ ದೇವರು

ತೆಲಸಂಗ: ಅವರವರ ಕೆಲಸವನ್ನು ಅವರವರು ಪ್ರಾಮಾಣಿಕವಾಗಿ ನಿರ್ವಹಿಸಿದರೆ ಸಮಾಜದಲ್ಲಿ ಎಲ್ಲವೂ ಸಂತೋಷದಿಂದ ಕೂಡಿರುತ್ತದೆ ಎಂದು ಹಿರೇಮಠದ ವೀರೇಶ್ವರ ದೇವರು ನುಡಿದರು.

ಗ್ರಾಮದಲ್ಲಿ ಕೃಷಿ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ಕೃಷಿ ಅಧಿಕಾರಿ ನಾಮದೇವ ಲಮಾಣಿ ಅವರ ನಿವೃತ್ತಿ ಬೀಳ್ಕೊಡುವ ಸಮಾರಂಭದಲ್ಲಿ ದಿವ್ಯ ಸನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಇಂದಿನ ದಿನಗಳಲ್ಲಿ ಸೇವೆ ಎನ್ನುವುದು ತೋರಿಕೆಯಾಗುತ್ತಿರುವುದು ವಿಷಾದನೀಯ. ಆದರೆ ಸೇವೆ ಎನ್ನುವುದು ಪರಮಾತ್ಮನಿಗೆ ಪ್ರೀತಿಯಾಗಬೇಕು. ಅದು ಸದಾ ಪ್ರಾಮಾಣಿಕವಾಗಿರಬೇಕು. ನಾಮದೇವ ಲಮಾಣಿ ಅವರು ಇಂದು ರೈತರ ಹೃದಯದಲ್ಲಿ ಶಾಶ್ವತವಾಗಿ ಮನೆ ಮಾಡಿದ್ದಾರೆ. ಅನ್ನದಾತ ರೈತರನ್ನು ಸದಾ ಗೌರವಿಸುವ ಕೆಲಸ ನಿರಂತರವಾಗಿ ನಡೆಯಲಿ ಎಂದರು.



ನಿವೃತ್ತಿ ಹೊಂದಿದ್ದ ಕೃಷಿ ಅಧಿಕಾರಿ ನಾಮದೇವ ಲಮಾಣಿ ಮಾತನಾಡಿ, ಇಂದು ನನ್ನ ಸರ್ಕಾರಿ ಸೇವೆಗೆ ನಿವೃತ್ತಿ ದಿನ ಇರಬಹುದು. ಆದರೆ ನಿಮ್ಮೊಂದಿಗೆ ನನಗಿರುವ ಕರುಳಿನ ಸಂಬಂಧಕ್ಕೆ ಎಂದಿಗೂ ನಿವೃತ್ತಿ ಇಲ್ಲ. ಇಷ್ಟು ವರ್ಷಗಳ ಕಾಲ ನನ್ನ ಮೇಲೆ ನೀವು ತೋರಿಸಿದ ಪ್ರೀತಿ, ಗೌರವಕ್ಕೆ ನಾನು ಸದಾ ಋಣಿ ಎಂದರು.

ಕೃಷಿ ಅಧಿಕಾರಿ ಯಂಕಪ್ಪ ಉಪ್ಪಾರ, ವಿವೇಕಾನಂದ ಹಳಿಂಗಳಿ ಮಹಾರಾಜರು, ಮುರಿಗೆಪ್ಪ ಅರ್ಜುನಗಿ, ಸೇರಿದಂತೆ ರೈತರು, ಕೃಷಿ ಇಲಾಖೆಯ ಸಿಬ್ಬಂದಿಗಳು, ಸುತ್ತಮುತ್ತಲಿನ ಹಳ್ಳಿಗಳ ರೈತರು ಹಾಗೂ ಗ್ರಾಮದ ಹಿರಿಯ ಮುಖಂಡರು ಉಪಸ್ಥಿತರಿದ್ದರು.

ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಕಾರ್ಯ ಶ್ಲಾಘನೀಯ

ತೆಲಸಂಗ: ಸಹಕಾರ ಸಂಸ್ಥೆಗಳು ಕೇವಲ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗದೆ, ಸಂಕಷ್ಟದಲ್ಲಿರುವ ಸದಸ್ಯರ ಕುಟುಂಬಗಳಿಗೆ ಆಸರೆಯಾದಾಗ ಮಾತ್ರ ಸಹಕಾರ ರಂಗಕ್ಕೆ ನಿಜವಾದ ಅರ್ಥ ಸಿಗುತ್ತಿದ್ದು, ಈ ನಿಟ್ಟಿನಲ್ಲಿ ಶ್ರೀ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಸದಾ ಸಮಾಜಮುಖಿ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದೆ ಎಂದು ತೆಲಸಂಗ ಶಾಖೆ ಅಧ್ಯಕ್ಷ ಈಶ್ವರ ಉಂಡೋಡಿ ಹೇಳಿದರು.



ಗ್ರಾಮದ ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಸಂಸ್ಥೆಯ ತೆಲಸಂಗ ಶಾಖೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸದಸ್ಯರ ಅಪಘಾತ ಮರಣೋತ್ತರ ಪರಿಹಾರ ನಿಧಿ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಗ್ರಾಮೀಣ ಪ್ರದೇಶದ ರೈತರು ಮತ್ತು ಬಡ ಕೂಲಿ ಕಾರ್ಮಿಕರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಸೌಲಭ್ಯಗಳನ್ನು ಬೀರೇಶ್ವರ ಸಹಕಾರಿ ಸಂಘದ ಮೂಲಕ ತಲುಪಿಸುತ್ತಾ, ಶ್ರಮಿಕ ವರ್ಗದ ಆರ್ಥಿಕ ಶಕ್ತಿಯಾಗಿ ಮುನ್ನಡೆಯುತ್ತಿರುವ ಸಂಸ್ಥೆಯ ಸಂಸ್ಥಾಪಕರಾದ ಅಣ್ಣಾಸಾಹೇಬ ಜೊಲ್ಲೆ ಹಾಗೂ ಶಶಿಕಲಾ ಜೊಲ್ಲೆ ಅವರ ಸಮಾಜಮುಖಿ ಸೇವೆ ನಿಜಕ್ಕೂ ಶ್ಲಾಘನೀಯ. ಬೀರೇಶ್ವರ ಸೊಸೈಟಿ ತನ್ನ ಲಾಭದ ಒಂದು ಪಾಲನ್ನು ಇಂತಹ ಜನಕಲ್ಯಾಣ ಯೋಜನೆಗಳಿಗೆ ಬಳಸುತ್ತಿರುವುದು ಶ್ಲಾಘನೀಯ. ದುಡಿಯುವ ಕೈಯನ್ನು ಕಳೆದುಕೊಂಡು ಕಣ್ಣೀರಲ್ಲಿ ಕೈ ತೊಳೆಯುತ್ತಿದ್ದ ಬಡ ಕುಟುಂಬಕ್ಕೆ ಸಂಸ್ಥೆಯು ನೀಡಿರುವ ಈ ಆರ್ಥಿಕ ನೆರವು ದೊಡ್ಡ ಆಸರೆಯಾಗಿದೆ. ಇಂತಹ ಮಾನವೀಯ ಕಾರ್ಯಗಳು ಸಂಸ್ಥೆಯ ಮೇಲಿನ ಸಾರ್ವಜನಿಕರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಶಾಖಾ ಸಲಹಾ ಸಮಿತಿಯ ಸದಸ್ಯರಾದ ಗುರುನಿಂಗಪ್ಪಾ ಭೀಮಣ್ಣಾ ಕಾಮನ, ಮಕಬುಲ ಮೀರಾಸಾಬ ಮುಲ್ಲಾ, ಲಕ್ಷ್ಮಣ ಕೃಷ್ಣಾ ಕಾರಂಡೆ, ತೆಲಸಂಗ ಶಾಖೆಯ ವ್ಯವಸ್ಥಾಪಕರು, ಸಹ-ವ್ಯವಸ್ಥಾಪ ಪ್ರವೀಣ ಮಾಳಿ ಹಾಗೂ ಶಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಸೇರಿ ಅನೇಕರು ಉಪಸ್ಥಿತರಿದ್ದರು.

ಶಾಲಾ ಪ್ರಾರಂಭೋತ್ಸವ: ಅದ್ದೂರಿ ಸ್ವಾಗತ

ಬೆಳಗಾವಿ: ಶಾಲಾ ಪ್ರಾರಂಭೋತ್ಸವ ಹಿನ್ನೆಲೆಯಲ್ಲಿ ಬೈಲಹೊಂಗಲ ತಾಲೂಕಿನ ಗಣಿಕೊಪ್ಪ ಗ್ರಾಮದ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮಕ್ಕಳ ಗಮನ ಶಾಲೆಗೆ ಸೆಳೆಯಲು ಶಿಕ್ಷಣ ಕುರಿತು ಘೋಷವಾಕ್ಯಗಳು ಅದರ ಜೊತೆಗೆ ಟ್ರ್ಯಾಕ್ಟರ್‌ಗೆ ರಿಬ್ಬನ್ ಹಾಗೂ ಬಲೂನ್‌ಗಳಿಂದ ಸಿಂಗರಿಸಿಲಾಗಿತ್ತು.

ಜಂಟಿ ನಿರ್ದೇಶಕ ವೃಷಬೇಂದ್ರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎ. ಎನ್. ಪ್ಯಾಟಿ ಮಾತನಾಡಿದರು.

ಬೈಲಹೊಂಗಲ ಕ್ಷೇತ್ರ ಸಮನ್ವಯಾಧಿಕಾರಿ ರವಿ ಹಿರೇಮಠ, ಶಿಕ್ಷಣ ಸಂಯೋಜಕ ಎಸ್.ಪಿ.ಯರಗಟ್ಟಿ, ಸಿಆರ್‌ಪಿಗಳಾದ ಎಸ್. ಎನ್.ಮುಲ್ಲಾ, ದೈಹಿಕ ಶಿಕ್ಷಣ ಅಧಿಕಾರಿಗಳಾದ ಕಾಂಬಳೆ, ಶಾಲೆ ಪ್ರಧಾನ ಗುರುಗಳಾದ ಎಂ.ಎ.ನದಾಫ್, ಸಹ ಶಿಕ್ಷಕರಾದ ಟಿ.ಬಿ.ಮಧುಭರಮಣ್ಣವರ ಶಾಲಾ ಶಿಕ್ಷಕವೃಂದ, ಎಸ್‌ಡಿಎಂಸಿ ಸದಸ್ಯರು, ಹಳೆಯ ವಿದ್ಯಾರ್ಥಿ ಬಳಗ ಹಾಗೂ ಗ್ರಾಮದ ಗುರು ಹಿರಿಯರು ಇದ್ದರು. ಸುನಿತಾ ಬನಸಿ ಸ್ವಾಗತಿಸಿದರು. ಪ್ರೇಮಾ ಗಾಬಿ ನಿರೂಪಿಸಿದರು. ವೀಣಾ ಹಿರೇಮಠ ವಂದಿಸಿದರು.



ಶಿವಾನುಭವಗಳಿಂದ ಸಾಮಾಜಿಕ ಸಮೃದ್ಧಿ ಸಾಧ್ಯ: ಶ್ರೀ

ಬೆಳಗಾವಿ: ಶಿವಾನುಭವ ಸತ್ಸಂಗಗಳು ಕೇವಲ ಧಾರ್ಮಿಕ ಕಾರ್ಯಕ್ರಮಗಳಲ್ಲ, ಅವು ವ್ಯಕ್ತಿಯ ಆತ್ಮೋನ್ನತಿ, ಸಮಾಜದ ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳ ವಿಕಾಸಕ್ಕೆ ಪೂರಕವಾಗುವ ಆಧ್ಯಾತ್ಮಿಕ ಅನುಭವ ಮಂಟಪಗಳಾಗಿವೆ ಎಂದು ನಿಡಸೋಸಿ ದುರದುಂಡೀಶ್ವರ ಸಿದ್ಧ ಸಂಸ್ಥಾನ ಮಠದ ಡಾ.ಪಂಚಮ ಶಿವಲಿಂಗೇಶ್ವರ ಶ್ರೀಗಳು ಅಭಿಪ್ರಾಯಪಟ್ಟರು.

ಮಂಗಳವಾರ ನಗರದ ಐತಿಹಾಸಿಕ ಕಾರಂಜಿಮಠದಲ್ಲಿ ಅತ್ಯಂತ ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದ ವಾತಾವರಣದಲ್ಲಿ ಜರುಗಿದ ಮೂರನೂರನೇ ಶಿವಾನುಭವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಶಿವಾನುಭವ ಸತ್ಸಂಗಗಳಿಂದ ವ್ಯಕ್ತಿಯ ಆತ್ಮಕಲ್ಯಾಣದ ಜೊತೆಗೆ ಸಾಮಾಜಿಕ ಜಾಗೃತಿ, ನೈತಿಕ ಮೌಲ್ಯಗಳು ಹಾಗೂ ಪರಸ್ಪರ ಪ್ರೀತಿ ವೃದ್ಧಿಯಾಗುತ್ತದೆ ಎಂದರು.

ಖಡಕಲಾಟ ವಿರಕ್ತಮಠದ ಶಿವಬಸವ ಸ್ವಾಮಿಗಳು ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿವಾನುಭವ ಪರಂಪರೆ 12ನೇ ಶತಮಾನದ ಬಸವಾದಿ ಶರಣರ ಕಾಲದಿಂದ ಆರಂಭಗೊಂಡು ನಿಜಗುಣ ಶಿವಯೋಗಿ, ಅಥಣಿ ಶಿವಯೋಗಿ ಹಾಗೂ ಹಾನಗಲ್ ಕುಮಾರ ಶಿವಯೋಗಿಗಳ ಮೂಲಕ ನಿರಂತರವಾಗಿ ಸಾಗುತ್ತಾ ಇಂದಿಗೂ ನಾಡಿನ ಅನೇಕ ಮಠಗಳಲ್ಲಿ ಆಧ್ಯಾತ್ಮಿಕ ಬೆಳಕನ್ನು ಹರಡುತ್ತಿದೆ ಎಂದರು.

ನೀಡಿದ ತಾಳಿಕೋಟೆಯ ಸಿದ್ದಲಿಂಗ ದೇವರು ಉಪನ್ಯಾಸ ನೀಡಿದರು.



ಈ ವೇಳೆ ಇಂಡೋನೇಷ್ಯಾ ದೇಶದಲ್ಲಿ ನಡೆದ ಅಂತಾರಾಷ್ಟ್ರೀಯ ರೋಬೋಟ್ ತಂತ್ರಜ್ಞಾನ ಸ್ಪರ್ಧೆಯಲ್ಲಿ ಭಾರತಕ್ಕೆ ಕೀರ್ತಿ ತಂದು ಪ್ರಥಮ ಸ್ಥಾನ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಾದ ವಿಠ್ಠಲ ಗದಗ, ಸುಶಾಂತ ಬಂಡಿವಡ್ಡರ ಅವರನ್ನು ಸನ್ಮಾನಿಸಲಾಯಿತು. ಅವರಿಗೆ ಮಾರ್ಗದರ್ಶನ ನೀಡಿ ಸಾಧನೆಗೆ ಪ್ರೇರಣೆಯಾದ ಶಿಕ್ಷಕರಾದ ದಯಾನಂದ ಮಗದುಮ್ಮ ಅವರನ್ನೂ ಗೌರವಿಸಲಾಯಿತು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕಾರಂಜಿಮಠದ ಗುರುಸಿದ್ಧ ಶ್ರೀಗಳನ್ನು ಶ್ರೀಮಠದ ವತಿಯಿಂದ ಶಾಲು, ಫಲಪುಷ್ಪ ನೀಡಿ ಸನ್ಮಾನಿಸಿ ಅಭಿನಂದಿಸಿದರು.

ಈ ವೇಳೆ ಡಾ. ಎಫ್.ವಿ.ಮಾನ್ವಿ, ಬಸವರಾಜ ಹಳಿಂಗಳಿ, ಶ್ರೀಕಾಂತ ಶಾನವಾಡ, ಮಿಥುನ ಅಂಕಲಿ ಸೇರಿದಂತೆ ಹಲವಾರು ಗಣ್ಯರು, ಭಕ್ತರು ಹಾಗೂ ಶಿವಾನುಭವಾಸಕ್ತರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾದರು. ಪ್ರಕಾಶ ಗಿರಿಮಲ್ಲನವರ ಆತ್ಮೀಯವಾಗಿ ಸ್ವಾಗತಿಸಿದರು. ಎ.ಕೆ. ಪಾಟೀಲ ನಿರೂಪಿಸಿದರು. ವಿ.ಕೆ. ಪಾಟೀಲ ವಂದಿಸಿದರು.

ಹೊಸ ದಿಗಂತ ೦೨
ಬಾಗಲಕೋಟೆ
ಗರಿಷ್ಠ 36° ಕನಿಷ್ಠ 27°
ಬುಧವಾರ 3 ಜೂನ್ 2026
ಹುಬ್ಬಳ್ಳಿ

ಕಿರುಸುದ್ದಿ

ಸಚಿವ ತಿಮ್ಮಾಪುರಗೆ ಡಿಸಿಎಂ ಸ್ಥಾನ ಕೊಡಿ



ಬಾಗಲಕೋಟೆ: ಜಿಲ್ಲಾ ಉಸ್ತುವಾರಿ ಸಚಿವರಾಗಿ ಯಶಸ್ವಿಯಾಗಿ ನಿಭಾಯಿಸಿ ಹಲವು ಜ್ವಲಂತ ಸಮಸ್ಯೆಗೆ ಪರಿಹಾರ ಒದಗಿಸಿದ ಆರ್.ಬಿ.ತಿಮ್ಮಾಪುರ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಲೋಕಾಪೂರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶೋಕ ಕಿವಡಿ ಹೇಳಿದರು. ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿಮ್ಮಾಪುರ ಅವರು ಹಿಂದುಳಿದ ಹಾಗೂ ದಲಿತ ಸಮುದಾಯದ ಪ್ರಮುಖ ನಾಯಕರಾಗಿದ್ದಾರೆ. ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು ಅವರ ಸೇವೆ ಮತ್ತಷ್ಟು ದೊರೆಯುವ ನಿಟ್ಟಿನಲ್ಲಿ ನೂತನ ಸಚಿವ ಸಂಪುಟದಲ್ಲಿ ಉನ್ನತ ಖಾತೆ ಹಾಗೂ ಡಿಸಿಎಂ ಹುದ್ದೆ ನೀಡಬೇಕು ಎಂದು ಒತ್ತಾಯಿಸಿದರು. ಕೆಪಿಸಿಸಿ ಸದಸ್ಯ ಕಲ್ಲೇಶ ಸಾರವಾಡ, ಎಪಿಎಂಸಿ ಅಧ್ಯಕ್ಷ ಸಂಗಪ್ಪಣ್ಣ ಇಟ್ಟನ್ನವರ, ಮುರಡಣ್ಣ ಅಂಬಿಗೇರ, ಚನ್ನು ಅಂಬಿ, ಮಹಾಂತೇಶ ಮಾಚಕನೂರ ಇತರರಿದ್ದರು.

ಮಕ್ಕಳಿಗೆ ಅದ್ದೂರಿ ಸ್ವಾಗತ



ಕಲಾದಗಿ: ಗ್ರಾಮದ ವಿವಿಧ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ಪುಷ್ಪವೃಷ್ಟಿಗೈದು ಸಿಹಿ ತಿನ್ನಿಸುವ ಮೂಲಕ ಸ್ವಾಗತಿಸಲಾಯಿತು. ಸೋಮವಾರದಿಂದ ರಾಜ್ಯದ ಎಲ್ಲ ಶಾಲೆಗಳು ಪುನರಾರಂಭಗೊಂಡಿದ್ದು, ವಿದ್ಯಾರ್ಥಿಗಳನ್ನು ಸ್ವಾಗತಿಸುವ ನಿಟ್ಟಿನಲ್ಲಿ ಶಾಲೆಗಳು ಸ್ವಚ್ಛತೆ ಹಾಗೂ ಸಿದ್ಧತೆ ಮುಗಿಸಿ ಶಿಕ್ಷಕರು ಹಾಗೂ ಸಿಬ್ಬಂದಿ ಹುಮ್ಮಸ್ಸಿನಿಂದ ಹಾಜರಾದರು. ವಿಶೇಷವಾಗಿ ಸ್ವಾಗತಿಸಲು ಶಾಲಾಭಿವೃದ್ಧಿ ಸಮಿತಿ ಆಡಳಿತ ಮಂಡಳಿ ವಿದ್ಯಾರ್ಥಿಗಳನ್ನು ಬರಮಾಡಿಕೊಂಡರು. ಹಣ್ಣು ಬೆಳೆಗಾರರ ಸಂಘದ ಉಪಾಧ್ಯಕ್ಷ ಎಸ್.ಬಿ.ಅಂಗಡಿ, ಕಾರ್ಯದರ್ಶಿ ಎಸ್.ಆರ್.ವಾಘ, ಶಾಲೆಯ ಅಧ್ಯಕ್ಷ ಕೆ.ಟಿ.ಪಾಟೀಲ, ಕಾಲೇಜಿನ ಪ್ರಾಂಶುಪಾಲ ಎಸ್.ಬಿ.ಬಳವಾಟ, ಮುಖ್ಯೋಪಾಧ್ಯಾಯ ಆರ್.ವಿ.ಜಾಧವ, ಶ್ರೀಕಾಂತ ಕೆರಕಲಮಟ್ಟಿ, ಶಿಕ್ಷಕರು, ಸಿಬ್ಬಂದಿ ಇದ್ದರು.

ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ



ಮುಧೋಳ: ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ಮತ್ತು ವಂಚಿತ ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ನಿಟ್ಟಿನಲ್ಲಿ ಹಿರಿಯ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಎಂದು ಜಿಲ್ಲಾ ಕಾಂಗ್ರೆಸ್ ಅಸಂಘಟಿತ ಕಾರ್ಮಿಕ ಸಂಘಟನೆಯ ಅಧ್ಯಕ್ಷ ಪರಮಾನಂದ ಕುಟರಟ್ಟಿ ಒತ್ತಾಯಿಸಿದ್ದಾರೆ. ಮುಧೋಳ ಕ್ಷೇತ್ರ ಪ್ರತಿನಿಧಿಸುವ ತಿಮ್ಮಾಪುರ ಅವರು ಹಿರಿಯ ರಾಜಕಾರಣಿಯಾಗಿದ್ದಾರೆ. ಸಜ್ಜನ ರಾಜಕಾರಣಿಯಾದ ಅವರು ಉತ್ತರ ಕರ್ನಾಟಕದಲ್ಲಿ ಪಕ್ಷದ ಬಲವರ್ಧನೆಗೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅವರಿಗೆ ಡಿಸಿಎಂ ಸ್ಥಾನ ನೀಡಬೇಕೆಂದು ಒತ್ತಾಯಿಸಿದ್ದಾರೆ.

ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ



ಲೋಕಾಪುರ: ಉತ್ತರ ಕರ್ನಾಟಕದ ಹಿರಿಯ ಮುಖಂಡ, ದಿನದಲಿತರ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಸದಾ ಕಾಳಜಿ ಹೊಂದಿರುವ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಜಿಲ್ಲಾ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕಾರ್ಮಿಕ ವಿಭಾಗ ಮಹೇಶ ಪೂಜಾರಿ ಒತ್ತಾಯಿಸಿದ್ದಾರೆ.

ಆರ್.ಬಿ.ತಿಮ್ಮಾಪುರ ಅವರು ತಮ್ಮ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಅನುಸರಿಕೊಂಡು ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ಈ ಭಾಗದ ಎಲ್ಲ ವರ್ಗದ ಜನರ ಜೊತೆ ಒಳ್ಳೆಯ ಒಡನಾಟ ಹೊಂದಿ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಅಪಾರ ಕೊಡುಗೆ ನೀಡಿದ್ದಾರೆ. ಹಾಗೂ ಮುಧೋಳ ಮತಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ತಿಳಿಸಿದ್ದಾರೆ.



ಕಮತಗಿ: ಕರ್ನಾಟಕ ಪಬ್ಲಿಕ್ ಸ್ಕೂಲ್ ಬೊಮ್ಮಣಗಿಯಲ್ಲಿ ನೂತನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವ ಮಾಡಲಾಯಿತು. ಒಂದನೇ ತರಗತಿಗೆ ಹೊಸದಾಗಿ ದಾಖಲಾಗುವ ವಿದ್ಯಾರ್ಥಿಗಳನ್ನು ಹೂ ಗುಚ್ಛ ನೀಡಿ ಶಾಲೆಗೆ ಬರಮಾಡಿಕೊಳ್ಳಲಾಯಿತು. ಶಾಲೆಯ ಎಸ್ಡಿಎಂಸಿ ಅಧ್ಯಕ್ಷರು, ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು, ಪಾಲಕರು ಹಾಗೂ ಶಿಕ್ಷಣ ಪ್ರೇಮಿಗಳು, ಶಾಲಾ ಮುಖ್ಯ ಗುರುಗಳು, ಶಿಕ್ಷರು, ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಲಭ್ಯ

ಬೀಳಗಿ: ಪ್ರಸಕ್ತ ಸಾಲಿನಲ್ಲಿ 1ರಿಂದ 5ನೇ ತರಗತಿ ವರೆಗೆ ದ್ವಿಭಾಷಾ ಮಾಧ್ಯಮದಲ್ಲಿ ಬೋಧನೆ ಮಾಡಲಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ದೊರೆಯುವುದರ ಜೊತೆಗೆ ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ದೊರೆಯುತ್ತದೆ ಎಂದು ಮುಖ್ಯೋಪಾಧ್ಯಾಯ ಬಿ.ಎಸ್.ಭೂಷಣ್ಣವರ ಹೇಳಿದರು. ತಾಲೂಕಿನ ಅರಕೇರಿ ಗ್ರಾಮದ ಸರಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಹಾಗೂ ಪೋಷಕ ಮತ್ತು ಶಿಕ್ಷಕರ ಮಹಾಸಭೆಯಲ್ಲಿ ಮಾತನಾಡಿ, ವಿದ್ಯಾರ್ಥಿಗೆ ವಿನಯವೇ ಭೂಷಣವಾಗಿದೆ ಎಂದರು. ಶಿಬಾಪ ಜಿಲ್ಲಾಧ್ಯಕ್ಷ ಡಿ.ಎಂ.ಸಾಹುಕಾರ ಶಾಲಾ ಪ್ರಾರಂಭೋತ್ಸಕ್ಕೆ ಚಾಲನೆ ನೀಡಿ ಮಾತನಾಡಿ, ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಬಹುಮುಖ್ಯವಾಗಿದ್ದು, ಮಕ್ಕಳ ಮೇಲೆ ನಿಗಾ ಇಡಬೇಕು. ಶಾಲೆಯಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಮನೆಯಲ್ಲಿ ನೋಡಬೇಕು. ಪಾಲಕರು ಓದುವ ಮಕ್ಕಳಿಗೆ ಸಾಥ ಕೊಡಬೇಕು ಎಂದು ಹೇಳಿದರು. ಶಿಕ್ಷಕ ಬಿ.ಎಸ್.ಬೆಳಗಂಟಿ ಮಾತನಾಡಿ, ಸರ್ಕಾರ ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಸಮವಸ್ತ್ರ, ಬೂಟು, ಪಠ್ಯಪುಸ್ತಕ, ಹಾಲು, ಮೊಟ್ಟೆ, ಬಿಸಿಯೂಟ, ಬಾಳೆಹಣ್ಣು ಸೇರಿದಂತೆ ಎಲ್ಲ ಸೌಲಭ್ಯಗಳನ್ನು ನೀಡುತ್ತಿದ್ದು ಅವುಗಳನ್ನು ಬಳಸಿಕೊಂಡು ಶೈಕ್ಷಣಿಕವಾಗಿ ಮುಂದೆ ಬರಬೇಕೆಂದು ಹೇಳಿದರು. ಎಸ್‌ಡಿಎಂಸಿ ಅಧ್ಯಕ್ಷ ವಿಶ್ವಾ ಭೂಷಣ್ಣವರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಅನಿತಾ ಕಮ್ಮನ್ನವರ, ಸದಸ್ಯರಾದ ಯಮನವ್ವ ಕೋಲಕಾರ, ರೇಣುಕಾ ದಾಸರ, ನಾಗಪ್ಪ ಢವಳೇಶ್ವರ, ಹನುಮಂತ ತುಳಸಿಗೇರಿ, ಹಣಮಂತ ಬುಡ್ಡವ್ವಗೋಳ, ಹನುಮಂತ ನಾಗನಗೇರ, ಗೋಪಾಲ ಮಾಚೇರಿ, ಗಣೇಶ ಮರೆಣ್ಣವರ, ಶಿಕ್ಷಕಿಯರಾದ ಬಸಮ್ಮ ಬಿರಾದಾರ, ಪ್ರೀತಿ ಪಾಟೀಲ ಮತ್ತಿತರರಿದ್ದರು.



ತಾಲೂಕಿನ ಅರಕೇರಿ ಗ್ರಾಮದ ಸರಕಾರಿ ಬಾಲಕರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಹಾಗೂ ಪೋಷಕ ಮತ್ತು ಶಿಕ್ಷಕರ ಮಹಾಸಭೆ ನಡೆಯಿತು.

ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯಾಗಾರ | ಡಿಸಿ ಸೂಚನೆ

ಪರಿಷ್ಕರಣೆ ಕಾರ್ಯ ಪಾರದರ್ಶಕವಾಗಿರಲಿ

ಬಾಗಲಕೋಟೆ: ಜಿಲ್ಲೆಯಾದ್ಯಂತ ಜೂ.30 ರಿಂದ ಆರಂಭ ಗೊಳ್ಳಲಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯ ಪರಿಣಾಮಕಾರಿಯಾಗಿ ಹಾಗೂ ಪಾರದರ್ಶಕವಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದರು.



ಜಿಲ್ಲಾ ಪಂಚಾಯತಿ ನೂತನ ಸಭಾಭವನದಲ್ಲಿ ಮಂಗಳವಾರ ಬಿಎಲ್‌ಒ, ಸೂಪರವೈಜರ್ ಹಾಗೂ ಎಎಲ್‌ಎಂಟಿಗಳಿಗೆ ಹಮ್ಮಿಕೊಂಡ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕುರಿತ ತರಬೇತಿ ಕಾರ್ಯಾಗಾರ ಉದ್ದೇಶಿಸಿ ಅವರು ಮಾತನಾಡಿದರು. ಮತದಾರ ಪಟ್ಟಿಯು ಚುನಾವಣೆ ಪ್ರಕ್ರಿಯೆಯ ಮೂಲಾಧಾರ ಆಗಿರುವದರಿಂದ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದೇ ಕಾರ್ಯನಿರ್ವಹಿಸಬೇಕು. ನಿಗದಿತ ವೇಳಾ ಪಟ್ಟಿಯೊಳಗಾಗಿ ಪರಿಷ್ಕರಣೆ ಕಾರ್ಯ ಪೂರ್ಣಗೊಳಿಸಲು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಮಾತನಾಡಿ, ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ಇರಬೇಕೆಂಬುದೇ ಎಸ್‌ಐಆರ್‌ನ ಮೂಲ ಉದ್ದೇಶವಾಗಿದೆ. ಈ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಕಾರ್ಯ ಕೈಗೆತ್ತಿಕೊಳ್ಳಲಾಗಿದ್ದು, ಸಮರ್ಪಕ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಂಪೂರ್ಣವಾಗಿ ತರಬೇತಿ ಪಡೆದುಕೊಂಡು ಪರಿಷ್ಕರಣೆ ಕಾರ್ಯ ಯಶಸ್ವಿಗೊಳಿಸಲು ತಿಳಿಸಿದರು.

ತರಬೇತಿಯ ಸಂಪನ್ಮೂಲ ವ್ಯಕ್ತಿ ಸಂಗಮೇಶ ಸನತಂಗಿ ಅವರು ತರಬೇತಿ ನೀಡಿದರು. ತರಬೇತಿಯಲ್ಲಿ ಮತದಾರ ಪಟ್ಟಿಗೆ ಹೊಸ ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ವಿಳಾಸ ಬದಲಾವಣೆ, ಮೃತ ಹಾಗೂ ಸ್ಥಳಾಂತರಗೊಂಡ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವ ಪ್ರಕ್ರಿಯೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಮತಗಟ್ಟೆ ಮಟ್ಟದ ಅಧಿಕಾರಿಗಳು ಕ್ಷೇತ್ರದಲ್ಲಿ ಮನೆ ಮನೆಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸುವಾಗ ಅನುಸರಿಸಬೇಕಾದ ನಿಯಮಗಳು ಹಾಗೂ ಮಾರ್ಗಸೂಚಿಗಳ ಬಗ್ಗೆ ತಿಳಿಸಲಾಯಿತು. ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕು ತಹಶೀಲ್ದಾರ ಹಾಗೂ ಬಿಎಲ್‌ಒ, ಸೂಪರವೈಜರ್ ಹಾಗೂ ಎಎಲ್‌ಎಂಟಿಗಳು ಪಾಲ್ಗೊಂಡಿದ್ದರು.

ಮೋದಿ ಸರ್ಕಾರದ ಸಾಧನೆ: ವಿವಿಧ ಕಾರ್ಯಕ್ರಮ

ಬಾಗಲಕೋಟೆ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜೂ.7ಕ್ಕೆ 12 ವರ್ಷಗಳನ್ನು ಪೂರೈಸುತ್ತಿರುವ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ನಾನಾ ಕಾರ್ಯಕ್ರಮ ಆಯೋಜಿಸುವ ಕುರಿತು ನವನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಈ ವೇಳೆ ಮಾತನಾಡಿದ ಬಿಜೆಪಿ ಜಿಲ್ಲಾ ಸಂಚಾಲಕ ಶಶಿಕುಮಾರ ಗುತ್ತನ್ನವರ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಐತಿಹಾಸಿಕ ಸಾಧನೆಗಳೊಂದಿಗೆ 12 ವರ್ಷ ಪೂರೈಸುತ್ತಿರುವ ಹಿನ್ನಲೆ ಜೂ.5ರಿಂದ 21ರ ವರಗೆ ಜಿಲ್ಲೆಯ ಎಲ್ಲಾ ಮಂಡಲಗಳಲ್ಲಿ 12 ವರ್ಷಗಳ ವಿಶ್ವಾಸ ಅಭಿವೃದ್ಧಿ ಮತ್ತು ಜನಕಲ್ಯಾಣ ಸಂಭ್ರಮಾಚರಣೆಯ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಪರಿಸರ ದಿನಾಚರಣೆಯಂದು ಶಾಲಾ-ಕಾಲೇಜುಗಳ ಆವರಣದಲ್ಲಿ ತಾಯಿ ಹೆಸರಲ್ಲಿ ಒಂದು ಗಿಡ ನೆಡುವ ಅಭಿಯಾನ, ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಯೋಗ ಶಿಬಿರಗಳು, ಮಾಧ್ಯಮ ಸಂವಾದ ವಿಶೇಷ ಸಂಪರ್ಕ ಅಭಿಯಾನ, ಕಲ್ಯಾಣ ಶಿಬಿರಗಳು, ಮೋದಿ ಸರ್ಕಾರದ ಸಾಧನೆಗಳ ಪ್ರದರ್ಶನ ಹಾಗೂ ಸಾವಯುವ ಕೃಷಿ ಕಾರ್ಯಾಗಾರಗಳು ನಡೆಯಲಿವೆ ಎಂದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶಿವನಗೌಡ ಸುಂಕದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಉಪಾಧ್ಯೆ, ರಾಜು ನಾಯ್ಕರ, ಮಲ್ಲಯ್ಯ ಮುಗನೂರ, ಅಭಿಯಾನದ ಜಿಲ್ಲಾ ಸಹ ಸಂಚಾಲಕ ಮಲ್ಲಿಕಾರ್ಜುನ ಗಡಿಯನ್ನವರ, ವಿದ್ಯಾಧರ ಸವದಿ ಹಾಗೂ ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದೇಶಿ ಕ್ರೀಡೆಗಳಿಗೆ ಯುವ ಸಮೂಹ ಒತ್ತು ನೀಡಲಿ



ಬಾಗಲಕೋಟೆ: ಕ್ರೀಡಾಕೂಟವು ಕೇವಲ ದೈಹಿಕ ಚಟುವಟಿಕೆಯಲ್ಲ, ಅದು ವ್ಯಕ್ತಿತ್ವ ವಿಕಸನ, ಶಿಸ್ತು, ಮತ್ತು ಒಗ್ಗಟ್ಟಿನ ಸಂಕೇತವಾಗಿದೆ. ಯುವ ಸಮೂಹ ದೇಶಿ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ನಗರದ ಬಿವಿವಿಎಸ್ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯದಿಂದ ಮಂಗಳವಾರ ಬಸವೇಶ್ವರ ಮೈದಾನದಲ್ಲಿ ಆಯೋಜಿಸಿದ ನಾಲ್ಕು ದಿನ ಡಾ.ಹಾನಿಮನ್ ಟ್ರೋಫಿ ಅಂತರ ಕಾಲೇಜು ಕ್ರಿಕೇಟ ಟೂರ್ನಾಮೆಂಟಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಹಾಗೂ ಜೀವನದ ಕಠಿಣ ಸವಾಲುಗಳನ್ನು ಎದುರಿಸುವ ಛಲವನ್ನು ಬೆಳೆಸುತ್ತದೆ ಎಂದರು.

ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ, ಬಿವಿವಿ ಸಂಘ ಪಠ್ಯದ ಜೊತೆಗೆ ಕ್ರೀಡಾ ಚಟುವಟಿಕೆಗಳಿಗೂ ಪ್ರಮುಖ್ಯತೆ ನೀಡಿ ಕೋಟಿ ಕೋಟಿ ಹಣ ವ್ಯಯಿಸಿ ಒಳಾಂಗಣ-ಹೊರಾಂಗಣ ಕ್ರೀಡಾ ಮೈದಾನ, ಅಂತರಾಷ್ಟ್ರೀಯ ಗುಣಮಟ್ಟದ ಈಜು ಕೊಳ, ಬ್ಯಾಡಮಿಟನ್ ಕೋರ್ಟ ನಿರ್ಮಿಸಿದೆ ವಿದ್ಯಾರ್ಥಿಗಳು ಇವುಗಳ ಸದುಪಯೋಗ ಪಡೆದುಕೊಂಡು ರಾಜ್ಯ - ದೇಶಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಸಂಸ್ಥೆಗೆ ಹೆಸರು ತರಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಬಿವಿವಿ ಸಂಘದ ಆಯುಷ್ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಅಧ್ಯಕ್ಷತೆ ವಹಿಸಿದ್ದ ಮಲ್ಲಿಕಾರ್ಜುನ ಸಾಸನೂರ ಮಾತನಾಡಿ, ಕ್ರೀಡಾಕ್ಷೇತ್ರವು ಇಚ್ಛಾಶಕ್ತಿ, ಏಕಾಗ್ರತೆ ಮತ್ತು ಸ್ಪರ್ಧಾ ಮನೋಭಾವ ಬೆಳೆಸುತ್ತದೆ. ನಿರಂತರವಾದ ಕಠಿಣ ಪ್ರಯತ್ನದಿಂದ ಮಾತ್ರ ಸಾಧನೆ ಮಾಡಲು ಸಾಧ್ಯ. ಕ್ರೀಡೆಯಲ್ಲಿ ಪರಿಣಿತರಾದವರಿಗೆ ಶೈಕ್ಷಣಿಕ ಕ್ಷೇತ್ರದಲ್ಲೂ ಹಲವಾರು ಅವಕಾಶಗಳಿವೆ ಎಂದು ಹೇಳಿದರು.

ಪ್ರಾಚಾರ್ಯ ಡಾ.ಅರುಣ ಹೂಲಿ, ಪ್ರಾಧ್ಯಾಪಕ ಡಾ.ರವಿ.ಕೋಟೆಣ್ಣವರ., ಡಾ.ಸುಧೀರ ಬೆಟಗೇರಿ, ಡಾ.ಪ್ರದೀಪ ಕೆ, ಡಾ.ಶಶಿಕುಮಾರ. ಡಾ.ತೃಪ್ತಿ ಶಿಂಧೆ, ಡಾ.ಐಶ್ವರ್ಯ ಪಾಟೀಲ, ಕ್ರೀಡಾ ಸಂಯೋಜಕರಾದ ಡಾ.ಮಂಜುನಾಥ ಪಾಟೀಲ, ಡಾ.ದೀಪಕ .ಡಾ.ಲಕ್ಷ್ಮೀ ಉಪಸ್ಥಿತರಿದ್ದರು.

ಕರ್ನಾಟಕದ ವಿವಿಧ ಭಾಗಗಳಿಂದ ಬೆಂಗಳೂರು, ಬೆಳಗಾವಿ, ಧಾರವಾಡ, ಮಂಗಳೂರು, ಮೂಡುಬಿದ್ರೆ, ಕಲಬುರ್ಗಿ ಹಾಗೂ ಸಂಕೇಶ್ವರ ಹೋಮಿಯೋ ಮೆಡಿಕಲ್ ಕಾಲೇಜುಗಳ ತಂಡಗಳು ಟೂರ್ನಾಮಂಟನಲ್ಲಿ ಭಾಗವಹಿಸಿದ್ದವು. ವಿದ್ಯಾರ್ಥಿ ಕ್ರೀಡಾ ಪ್ರತಿನಿಧಿಗಳಾದ ಶ್ರೇಯಾ, ಸುಮಿತ ಸ್ವಾಗತಿಸಿ ವಂದಿಸಿದರು. ಭಾಗ್ಯ ಗಂಗಶೆಟ್ಟಿ ನಿರೂಪಿಸಿದರು.

ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಬಾದಾಮಿ: ಕಳೆದ ಒಂದು ದಶಕದಿಂದ ನೆನೆಗುದಿಗೆ ಬಿದ್ದಿದ್ದ ಚಾಲುಕ್ಯ ಉತ್ಸವಕ್ಕೆ ಚಾಲನೆ ನೀಡಿ ಜನ ಮಾನಸದಲ್ಲಿರುವ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಎಂ.ಎಂ.ಬೂದಿಹಾಳ ಮನವಿ ಮಾಡಿದರು.

ಕಾನಿಪ ಭವನದಲ್ಲಿ ಸೋಮವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಸಚಿವ ಸ್ಥಾನ ನೀಡುವ ಮೂಲಕ ಇಲ್ಲಿನ ಚಾಲುಕ್ಯರ, ಪ್ರವಾಸೋಧ್ಯಮಕ್ಕೆ ಹೆಚ್ಚಿನ ಉತ್ತೇಜನ ದೊರಕಲು ಸಾಧ್ಯವಿದೆ ಎಂದು ಸದಸ್ಯ ಶೌಕತ್ತ ವಾಚಮೇಕರ ಹೇಳಿದರು.

ಇವರೊಂದಿಗೆ ಶಿವಾನಂದ ಜಾಬನ್ನವರ, ಚಂದ್ರಕಾಂತ ಯಾವಗಲ್ಲ, ಕೋಣಪ್ಪ ಕಾಟನ್ನವರ, ಸುರೇಶ ಮದಿ, ಶಂಕ್ರಪ್ಪ ಮಾದರ, ಶಿವಲಿಂಗಪ್ಪ ಯಲಿಗಾರ, ನಿಂಗನಗೌಡ ಜನಾಲಿ, ಭೀಮಶಿ ಶೆಟ್ಟೆಪ್ಪನವರ, ಕೋಣಪ್ಪ ದೇವರಮನಿ, ಗಚ್ಚಪ್ಪ ಕಾಟನ್ನವರ ಇದ್ದರು.

ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಈ ಬಾರಿಯ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ ಹಿರೇಮಠ, ಸದಸ್ಯ ಹನಮಂತ ಅಪ್ಪನ್ನವರ ಜಂಟಿಯಾಗಿ ಆಗ್ರಹಿಸಿದರು. ಸದಸ್ಯರಾದ ಶಿವಪ್ಪ ವಡ್ಡರ, ಬಬ್ಲೂ ನಾಯಕ, ಎ.ಡಿ.ಅತ್ತಾರ ಇದ್ದರು.

ಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಯುವ ಶಾಸಕರಾಗಿದ್ದಾರೆ, ಇವರು ಸಚಿವರಾಗುವ ಮೂಲಕ ಯುವ ಸಮುದಾಯಕ್ಕೆ ಹೆಚ್ಚಿನ ನೆರವು ದೊರಕಲಿದೆ. ದೂರದೃಷ್ಟಿ ಹೊಂದಿರುವ ಇವರು ರಾಜ್ಯದ ಜೊತೆಗೆ ಜಿಲ್ಲೆ ಮತ್ತು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದು ಭೂ ನ್ಯಾಯ ಮಂಡಳಿ ಸದಸ್ಯ ಅನುರಾಧ ದೊಡಮನಿ ಹೇಳಿದರು. ಮಹಿಳಾ ಸದಸ್ಯರಾದ ಮೇನಕಾ ಲಮಾಣಿ, ಇಂದಿರಾಬಾಯಿ ಕಲಾದಗಿ, ಮಮ್ತಾಜ ಬಾವಾಖಾನ, ಸಂಗೀತಾ ಪೂಜಾರ, ರೇಣುಕಾ ಪೂಜಾರ ಇದ್ದರು.

ಯುವ ನಾಯಕತ್ವಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಬಾರಿಯ ಸಚಿವ ಸಂಪುಟದಲ್ಲಿ ಬಾದಾಮಿ ಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಯುವ ಸಬಲೀಕರಣಕ್ಕೆ ಮುನ್ನುಡಿ ಬರೆಯಬೇಕೆಂದು ಪಕ್ಷದ ಯುವ ಘಟಕದ ಅಧ್ಯಕ್ಷ ಬಸವರಾಜ ಗೌಡರ ಒತ್ತಾಯಿಸಿದ್ದಾರೆ.



ಶಾಸಕ ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಗುಳೇದಗುಡ್ಡ: ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಕೇವಲ ಮೂರು ವರ್ಷದ ಅಲ್ಪ ಸಮಯದಲ್ಲಿ ಬಾದಾಮಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಸುಮಾರು 640 ಕೋಟಿ ರೂ. ಅನುದಾನ ತಂದು ಅನುಷ್ಠಾನಗೊಳಿಸುತ್ತಿದ್ದಾರೆ. ಕ್ಷೇತ್ರದ ಒಣಜಮೀನುಗಳನ್ನು ನೀರಾರಾವರಿಗೊಳಿಸಲು ಕೆರೂರು ಏತನೀರಾವರಿ ಯೋಜನೆ ತಂದಿದ್ದಾರೆ. ಇಂತಹ ಯುವ ಶಾಸಕರಿಗೆ ಡಿ.ಕೆ.ಶಿವಕುಮಾರ ಸಂಪುಟದಲ್ಲಿ ಸಚಿವಸ್ಥಾನ ನೀಡುವಂತೆ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಸಿದ್ದು ಕೋಲಾರ ಆಗ್ರಹಿಸಿದರು.



ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2018ರಲ್ಲಿ ಬಾದಮಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿದ್ದರಾಮಯ್ಯನವರನ್ನು ಗೆಲ್ಲಿಸಲು ತಂದೆಯೊಂದಿಗೆ ಭೀಮಸೇನ ಚಿಮ್ಮನಕಟ್ಟಿ ಸಾಕಷ್ಟು ಶ್ರಮಿಸಿದ್ದಾರೆ. ಕ್ಷೇತ್ರದ ಎಲ್ಲಾ ಸಮಾಜದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸುತ್ತಿರುವ ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ಗ್ಯಾರಂಟಿ ಯೋಜನೆ ಸದಸ್ಯ ರಂಗಣ್ಣ ಮೊಖಾಶಿ ಮಾತನಾಡಿ, ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿ ಮಾಜಿಸಚಿವರಾಗಿರುವ ಬಿ.ಬಿ.ಚಿಮ್ಮನಕಟ್ಟಿ ಅವರಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಭೀಮಸೇನ ಚಿಮ್ಮನಕಟ್ಟಿ ಅವರು ಬಡ ಮಕ್ಕಳ ಶಿಕ್ಷಣಕ್ಕಾಗಿ ಕ್ಷೇತ್ರದಲ್ಲಿ ಐದು ಕೆಪಿಎಸ್ ಸಿ ಶಾಲೆ, ಸುಮಾರು ಹತ್ತು ವರ್ಷಗಳಿಂದ ನಿಂತಿದ್ದ ಚಾಲುಕ್ಯೋತ್ಸವ ಅದ್ದೂರಿಯಾಗಿ ಮಾಡಿದ್ದಲ್ಲದೇ, ಗುಳೇದಗುಡ್ಡ ಪಟ್ಟಣಕ್ಕೆ ಕ್ರೀಡಾಂಗಣ, ಪ್ರಜಾಸೌಧವನ್ನು ತಂದಿದ್ದು ಇಂತಹ ಕಾರ್ಯಶೀಲ ಯುವ ನಾಯಕನಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು. ಚಂದ್ರಶೇಖರ ಕೂಡಗಿ, ಡಿ.ಎಸ್. ಮೊಖಾಶಿ, ಶಂಕರಗೌಡ ಗೌಡ್ರ, ರಜಾಕ ಕುದರಿ, ರಾಜು ಸಂಗಮ, ಹನಮಂತಪ್ಪ ಗಂಗೂರ, ರಮೇಶ ಗೌಡರ, ಬಸವರಾಜ ದಳವಾಯಿ, ಯಲ್ಲಪ್ಪ ಪೂಜಾರಿ, ದ್ಯಾಮಣ್ಣ ಗೌಡ್ರ, ಸುರೇಶ ಕುರಿ ಇದ್ದರು.

ಆರ್.ಬಿ.ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ರನ್ನ ಬೆಳಗಲಿ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಸಭೆ ಸೇರಿ ಆರ್.ಬಿ.ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ನೂತನ ಸರ್ಕಾರಕ್ಕೆ ಒತ್ತಾಯಿಸಿದರು.

ಕಾಂಗ್ರೆಸ್ ಮುಖಂಡ ಯಮನಪ್ಪ ದೊಡಮನಿ ಮಾತನಾಡಿ, ಉತ್ತರ ಕರ್ನಾಟಕದ ಮಾದಿಗ ಸಮುದಾಯದ ಪ್ರಬಲ ಮುಖಂಡರು, ಮಾಜಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವ ಸ್ಥಾನ ನೀಡಬೇಕು. ರಾಜ್ಯದಲ್ಲಿ ಪ್ರಬಲ ಅಹಿಂದ ನಾಯಕರಾಗಿ ಗುರುತಿಸಿಕೊಂಡಿರುವ ತಿಮ್ಮಾಪೂರ ಅವರು ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಾ ಬಂದಿದ್ದಾರೆ. ನಮ್ಮೂರಿನ ರನ್ನ ವೈಭವದ ಹರಿಕಾರರಾಗಿ, ಸಮಗ್ರ ಮುಧೋಳದ ಅಭಿವೃದ್ಧಿ ಬದ್ಧರಾಗಿ, ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಅವರು ಮಾಡಿದ ಕಾರ್ಯ ಮತ್ತು ದಕ್ಷ ಆಡಳಿತವೇ ಉಮೇಶ ಮೇಟಿ ಅವರ ವಿಜಯಕ್ಕೆ ಕಾರಣವಾಗಿದೆ ಎಂದರು.



20 ವರ್ಷಗಳ ಕಾಲ ಅಧಿಕಾರದಲ್ಲಿ ಇರದಿದ್ದರೂ ಮುಧೋಳ ಮತ ಕ್ಷೇತ್ರವನ್ನು ತೊರೆಯದೆ. ನಿರಂತರ ಪಕ್ಷದ ಕಾರ್ಯಕರ್ತರ ಸಂಘಟನೆ ಮಾಡುವಲ್ಲಿ ಯಶಸ್ವಿಯಾಗಿ ಮತಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಅಜಾತಶತ್ರು ನಾಯಕರಾಗಿದ್ದಾರೆ. ಆದ್ದರಿಂದ ಡಿ ಕೆ ಶಿವಕುಮಾರ್ ಸರಕಾರದಲ್ಲಿ ಉಪಮುಖ್ಯಮಂತ್ರಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಸ್ಥಾನವನ್ನು ನೀಡಿ ಉತ್ತರ ಕರ್ನಾಟಕಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪಪಂ ಸದಸ್ಯ ಮುಬಾರಕ್ ಅತ್ತಾರ, ಪಕ್ಷದ ಕಾರ್ಯಕರ್ತರಾದ ಮುತ್ತಪ್ಪ ಸರವಿ, ಪರಮಾನಂದ ಪೂಜಾರಿ, ಲಕ್ಷ್ಮಣ ಡೊಂಕವ್ವಗೋಳ, ಭೂತಪ್ಪ ದೊಡಮನಿ, ಶೆಟ್ಟೆಪ್ಪ ಗುಡ್ಲಾರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಿವೃತ್ತರಿಗೆ ಅಭಿನಂದನಾ ಸಮಾರಂಭ



ಮುಧೋಳ: ತಮ್ಮ ಜ್ಞಾನದ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಜೀವನ ಬೆಳಗಿಸುವ ಬಹುದೊಡ್ಡ ಕಾರ್ಯ ಶಿಕ್ಷಕರದ್ದಾಗಿದೆ ಎಂದು ನಿವೃತ್ತ ಪ್ರಾಚಾರ್ಯ ಎನ್.ಎಸ್.ಪಂಚಗಾರ ಹೇಳಿದರು.

ನಗರದ ಕಸಾಪ ಭವನದಲ್ಲಿ ಜೆಎನ್‌ಎಸ್ ಸಂ.ಪ.ಪೂ.ಕಾಲೇಜು ಪ್ರೌಢ ಶಾಲಾ ವಿಭಾಗ ಯಾದವಾಡ, ಜಿ.ಎಚ್.ಕಾಂಬಳೆ ಹಾಗು ಐ.ಎಚ್.ಪಠಾಣ ಶಿಕ್ಷಕರ ನಿವೃತ್ತಿ ಅಭಿನಂದನಾ ಸಮಾರಂಭದಲ್ಲಿ ವಿಭಾಗ ಯಾದವಾಡ, ಜಿ.ಎಚ್. ಕಾಂಬಳೆ ಹಾಗು ಐ.ಎಚ್.ಪಠಾಣ ನಿವೃತ್ತ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.ಹಿರಿಯ ಸಾಹಿತಿ ಡಾ.ಶಿವಾನಂದ ಕುಬಸದ ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿ, ನಿತ್ಯ ಬದುಕಿನ ಸತ್ಯಗಳನ್ನು ಪಠಾಣ ಇವರು ತಮ್ಮ ಮನದ ಮಳೆ ಕವನ ಸಂಕಲನದಲ್ಲಿ ಚಿತ್ತಿಸಿದ್ದಾರೆ. ದುರಿತ ಸುಳಿಯದ ಹಾಗೆ ಎಚ್ಚರ ವಹಿಸಿ ದುಡ್ಡಿನ ಲಾಭಕ್ಕಿಂತ ಮನಸ್ಸಿನ ಭಾವನೆ ಜನರೊಂದಿಗೆ ಸಂಭ್ರಮಿಸಲು ಅವರು ಕವನ ಮೂಲಕ ಹಂಚಿಕೊಂಡಿದ್ದಾರೆ ಎಂದು ಹೇಳಿದರು. ಬಾಗಲಕೋಟೆ ಉಪನಿರ್ದೇಕ ಎ.ಸಿ.ಮನ್ನಿಕೇರಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಎಸ್.ಬಿ.ನ್ಯಾಮಗೌಡರ, ಕಸಾಪ ಅಧ್ಯಕ್ಷ ಆನಂದ ಪೂಜಾರಿ, ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕಿ ಸ್ವಪ್ನಾ ಅನ್ನಿಗೋಳ, ನಿ.ದೈ.ಶಿಕ್ಷಣ ಪರಿವೀಕ್ಷಕ ಎಚ್.ಎ.ನಾಡಗೌಡರ, ರಾಜೇಶ್ವರಿ ಕಂಕನೊಡಿ, ಅನಸೂಯಾ ಬಾಗಿ, ಬಿ.ಎಚ್.ಬೀಳಗಿ, ಹಣಮಂತ ವಜ್ಜರಮಟ್ಟಿ ಇದ್ದರು.

ಮಕ್ಕಳು ಮನುಕುಲದ ಬೆಳಕು

ಜಮಖಂಡಿ: ಕುಂಬಾರಹಳ್ಳದ ಪಿಎಂಶ್ರೀ ಸರಕಾರಿ ಪ್ರೌಢ ಶಾಲೆಯಲ್ಲಿ ಹಬ್ಬದ ವಾತಾವರಣ ಮನೆ ಮಾಡಿತ್ತು. ಶಾಲೆಗೆ ತಳಿರು ತೋರಣಗಳ ಹಂದರ, ಮಕ್ಕಳ ಮೇಲೆ ಪುಷ್ಪವೃಷ್ಟಿ, ಮಕ್ಕಳ ಕೈಗೆ ಹೂವು ಮತ್ತು ಪುಸ್ತಕಗಳನ್ನು ನೀಡಿ ಸ್ವಾಗತಿಸಿದರು.

ಮುಖ್ಯೋಪಾಧ್ಯಾಯ ನಾರಾಯಣ ಶಾಸ್ತ್ರಿ ಮಾತನಾಡಿ, ಮಕ್ಕಳು ಮನುಕುಲದ ಬೆಳಕಾಗಿದ್ದು, ಉತ್ತಮ ಶಿಕ್ಷಣ ನೀಡುವುದು ನಮ್ಮೆಲ್ಲರ ಕರ್ತವ್ಯ. ಮೊದಲ ದಿನದಿಂದಲೆ ಮಗು ಶಾಲೆಗೆ ಬಂದರೆ ಭವಿಷ್ಯದ ನಿರ್ಮಾಣ ಸುಲಭವಾಗುತ್ತದೆ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ನಿಂಗಪ್ಪ ತೇರದಾಳ, ಸದಸ್ಯರಾದ ಯಮನಪ್ಪ ಮಾಂಗ,ಸದಾಶಿವ ಮಾಳಿ, ಪದ್ಮವ್ವ ಹುದಲಿ, ಶೈಲಾ ಮಾಳಿ, ಶಿಕ್ಷಕರು ಹೂಗುಚ್ಚ ನೀಡಿ ಶಾಲೆಗೆ ಸ್ವಾಗತಿಸಿ ಶುಭ ಹಾರೈಸಿದರು.

ಶಿಕ್ಷಕರಾದ ಬಾಹುಬಲಿ ಮುತ್ತೂರ, ಸಂಗನಬಸವ ಉಟಗಿ, ಚಂದ್ರಕಾಂತ ಪೋಲಿಸ್, ಅಶೋಕ ಬಿರಾದಾರ ಪಾಟೀಲ, ಶಾರದಾ ಮಠ, ಸವಿತಾ ಬೆನಕಟ್ಟಿ, ಮಂಜುಳಾ ಕಡಕೋಳ, ಆಸೀಫಾಬಾನು ಮೋಮಿನ್, ಶಕುಂತಲಾ ಬಿರಾದಾರ ಉಪಸ್ಥಿತರಿದ್ದು ಮಕ್ಕಳಿಗೆ ಸ್ವಾಗತ ಕೋರಿದರು. ಶಿಕ್ಷಕಿ ಶಾರದಾ ಮಠ ಸ್ವಾಗತಿಸಿದರು. ಶಿಕ್ಷಕ ಸಂಗನಬಸವ ಉಟಗಿ ವಂದಿಸಿದರು.



ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ



ಸಾವಳಗಿ: ಗ್ರಾಮದ ಸರ್ಕಾರಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆ ಉಪ್ಪಾರ ತೋಟದಲ್ಲಿ ಮುಖ್ಯದ್ವಾರದ ಬಳಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡುವುದರ ಮೂಲಕ ಮುಗುಳ್ನಗೆಯಿಂದ ವಿದ್ಯಾರ್ಥಿಗಳನ್ನು ಶಾಲಾ ಆವರಣಕ್ಕೆ ಬರಮಾಡಿಕೊಂಡರು. ನಂತರ ಸರಸ್ವತಿ ದೇವಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಹಣಮಂತ ಶೆಟ್ಟೆನ್ನವರ ಮಾತನಾಡಿ, ಸರ್ಕಾರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದರೊಂದಿಗೆ ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ, ಬೂಟ್, ಷೂ ಸೇರಿದಂತೆ ಪಠ್ಯಪುಸ್ತಕ ಉಚಿತವಾಗಿ ವಿತರಿಸುತ್ತಿದೆ. ಆದ್ದರಿಂದ ಪಾಲಕರು ಖಾಸಗಿ ಶಾಲೆಯ ವ್ಯಾಮೋಹಕ್ಕೆ ಒಳಗಾಗದೇ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಮನವಿ ಮಾಡಿದರು. ನಂತರ ಮುಖ್ಯೋಪಾಧ್ಯಾಯರಾದ ಕಾಶಿನಾಥ್ ಜಾಧವ ಮಾತನಾಡಿ, ನಿರಂತರ ಅಧ್ಯಯನ, ಪರಿಶ್ರಮದಿಂದ ಗುರಿ ತಲುಪಲು ಸಾಧ್ಯ. ಉನ್ನತ ಶಿಕ್ಷಣದ ಜೊತೆಗೆ ಉನ್ನತ ಹುದ್ದೆಯನ್ನು ಅಲಂಕರಿಸುವತ್ತ ಪ್ರತಿಯೊಬ್ಬರು ಶ್ರಮಿಸಬೇಕು ಎಂದರು.ಹಿರಿಯರಾದ ಸದಾಶಿವ ಜಾಧವ, ಅರ್ಜುನ ಜಾಧವ, ಹಾಗೂ ಶಾಲೆಯ ಶಿಕ್ಷಕರು, ಸೇರಿದಂತೆ ಎಸ್‌ಡಿಎಮ್‌ಸಿ ಸದಸ್ಯರು ಉಪಸ್ಥಿತರಿದ್ದರು.

ಶಾಲೆಗೆ ಬಂದ ಮಕ್ಕಳಿಗೆ ಸ್ವಾಗತ

ಬೀಳಗಿ: ತಾಲೂಕಿನ ಕೊಪ್ಪ (ಎಸ್.ಕೆ) ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಶಾಲಾ ಮಕ್ಕಳಿಗೆ ಎಸ್‌ಡಿಎಂಸಿ ಸಮಿತಿ, ಶಾಲಾ ಶಿಕ್ಷಕರು ಹಾಗೂ ಪೋಷಕರು ಮಕ್ಕಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಶಿಕ್ಷಕ ಚಂದ್ರು ವೈ.ಎ ಮಾತನಾಡಿ, ಪೋಷಕರಿಗೆ ತಮ್ಮ ಗ್ರಾಮದಲ್ಲಿರುವ ಎಲ್ಲ ಮಕ್ಕಳನ್ನು ನಮ್ಮ ಸರ್ಕಾರಿ ಶಾಲೆಗೆ ದಾಖಲಾತಿ ಮಾಡುವಂತೆ ಮನವಿ ಮಾಡಿದರು.ವಿದ್ಯಾರ್ಥಿ ಪೋಷಕ ರಾಮಣ್ಣ ಹೋಳಿ ಮಾತನಾಡಿ, ನಮ್ಮ ಶಾಲೆ ಅಭಿವೃದ್ಧಿಯಾಗುತ್ತಿದೆ. ಹೀಗೆಯೂ ಮುಂದೆ ಅಭಿವೃದ್ಧಿಯಾಗುತ್ತಾ ಸಾಗಲಿ ನಮ್ಮೆಲ್ಲರ ಸಹಕಾರ ಇರುತ್ತದೆ ಎಂದು ಹೇಳಿದರು.

ಮುಖ್ಯ ಶಿಕ್ಷಕ ಜಿ.ಡಿ.ಮೇಟಿ ಮಾತನಾಡಿ, ಪಾಲಕ ಪೋಷಕರ ಸಭೆಯ ಮೂಲ ಉದ್ದೇಶವೇ ಸರ್ಕಾರಿ ಶಾಲೆಗಳ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ಸರ್ಕಾರಿ ಶಾಲೆಗಳ ಮಹತ್ವವನ್ನು ತಿಳಿಸುವುದಾಗಿದೆ ಎಂದು ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ರಾಜೇಂದ್ರ, ಕುಂಬಾರ ಹಾಗೂ ಪದಾಧಿಕಾರಿಗಳು ಉದ್ಘಾಟಿಸಿದರು. ಎಸ್‌ಡಿಎಂಸಿ ಸದಸ್ಯರಾದ ಅಶೋಕ ಜೋಗಿ, ಲಿಂಗರಾಜ ಬೂದಿಹಾಳ, ಈರಣ್ಣ ಬಡಿಗೇರ, ವಿಜಯಲಕ್ಷ್ಮಿ ಚವಡಾಪುರ, ಪಾರ್ವತಿ ಬಿರೋಜಿ, ಶಿಕ್ಷಕಿಯರಾದ ಜ್ಯೋತಿ ನರಗುಂದ, ಸಕ್ಕುಬಾಯಿ ಬೆಳ್ಳುಬ್ಬಿ, ಸವಿತಾ ಮಾಳೇದ ಪೋಷಕರು ಹಾಜರಿದ್ದರು.



ಕಿರುಸುದ್ದಿ

ಎಂ.ಬಿ.ಪಾಟೀಲಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

ದೇವರ ಹಿಪ್ಪರಗಿ: ಜಲಸಂಪನ್ಮೂಲ ಹಾಗೂ ಕೈಗಾರಿಕಾ ಇಲಾಖೆಗಳಲ್ಲಿ ತಮ್ಮ ಕ್ರಾಂತಿಕಾರಕ ಆಡಳಿತದ ಮೂಲಕ ಇಡೀ ರಾಜ್ಯದ ಅಭಿವೃದ್ಧಿಗೆ ಹೊಸ ದಿಕ್ಸೂಚಿ ನೀಡಿದ ಹಿರಿಯ ಧೀಮಂತ ನಾಯಕ ಎಂ.ಬಿ.ಪಾಟೀಲ ಅವರಿಗೆ ಮುಂಬರುವ ಡಿ.ಕೆ.ಶಿವಕುಮಾರ ನೇತೃತ್ವದ ಸಚಿವ ಸಂಪುಟದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭುಗೌಡ ಪಾಟೀಲ್ ಲಿಂಗದಳ್ಳಿ ಆಗ್ರಹಿಸಿದ್ದಾರೆ. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಂ.ಬಿ.ಪಾಟೀಲ ಅವರ ರಾಜಕೀಯ ಹಿರಿತನ, ಅಪ್ರತಿಮ ಆಡಳಿತ ದಕ್ಷತೆ ಹಾಗೂ ಎರಡು ಪ್ರಮುಖ ಇಲಾಖೆಗಳಲ್ಲಿ ಅವರು ಸೃಷ್ಟಿಸಿದ ಇತಿಹಾಸ ಮರೆಯಲಾಗದು. ಜಲಸಂಪನ್ಮೂಲ ಸಚಿವರಾಗಿದ್ದ ಐದು ವರ್ಷಗಳ ಅವಧಿ ರಾಜ್ಯದ ನೀರಾವರಿ ಇತಿಹಾಸದ ಸುವರ್ಣ ಯುಗ, ಸಾವಿರಾರು ಹೆಕ್ಟೇರ್ ಒಣಭೂಮಿಯನ್ನು ಹಸಿರಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕೈಗಾರಿಕಾ ಸಚಿವರಾಗಿಯೂ ರಾಜ್ಯದ ಯುವಕರ ಪಾಲಿಗೆ ಆಶಾಕಿರಣವಾಗಿ ಕೆಲಸ ಮಾಡಿದ್ದಾರೆ ಇಂಥ ಹತ್ತು ಹಲವು ಜನಪರ ಕಾರ್ಯಗಳನ್ನು ಮಾಡಿದ ಜನಾನುರಾಗಿ ನಾಯಕ ಎಂದು ಶ್ಲಾಘಿಸಿದರು. ಲಕ್ಷಾಂತರ ಕಾರ್ಯಕರ್ತರ, ರೈತರ ಹಾಗೂ ಸಾರ್ವಜನಿಕರ ಆಶಯದಂತೆ ಹೈಕಮಾಂಡ್ ಮತ್ತು ಮುಖ್ಯಮಂತ್ರಿಗಳು ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳಲು ಡಿಸಿಎಂ ಸ್ಥಾನ ನೀಡಲೇಬೇಕು ಎಂದು ಒತ್ತಾಯಿಸಿದರು. ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

ನಿಯಂತ್ರಣಾಧಿಕಾರಿಯಾಗಿ ಬಿರಾದಾರ ಅಧಿಕಾರ ಸ್ವೀಕಾರ

ದೇವರ ಹಿಪ್ಪರಗಿ: ತಾಲೂಕಿನ ಚಿಕ್ಕರೂಗಿ ಗ್ರಾಮದವರಾದ ಡಿ.ಎ.ಬಿರಾದಾರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವಿಜಯಪುರ ವಿಭಾಗದ ನೂತನ ವಿಭಾಗೀಯ ನಿಯಂತ್ರಣಾಧಿಕಾರಿಯಾಗಿ ಅಧಿಕಾರಿ ಸ್ವೀಕರಿಸಿದರು. ಈ ಮೊದಲು ಸಾರಿಗೆ ಇಲಾಖೆಯ ಅನೇಕ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದು, ಈ ಹಿಂದೆ ವಿಜಯಪುರ ವಿಭಾಗದ ಡಿಟಿಒ ಆಗಿದ್ದಾಗ ಗ್ರಾಮಾಂತರ ಪ್ರದೇಶದ ಹಲವಾರು ಕಡೆ ಬಸ್ ಸಂಪರ್ಕ ಕಲ್ಪಿಸುವ ಮೂಲಕ ಸಾರ್ವಜನಿಕರ ಸಾರಿಗೆ ಸಮಸ್ಯೆ ಬಗೆಹರಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ನೂತನ ವಿಭಾಗಿಯ ನಿಯಂತ್ರಣಾಧಿಕಾರಿ ಬಿರಾದಾರ ಅವರಿಗೆ ದೇವರ ಹಿಪ್ಪರಗಿ ತಾಲೂಕಿನ ಮುಖಂಡರಾದ ಅಯ್ಯಪ್ಪ ಸ್ವಾಮಿಗಳು ಹಿರೇಮಠ, ತಾಲೂಕು ಕಾನಿಪ ಅಧ್ಯಕ್ಷ ಸಂಗಮೇಶ ಉತ್ನಾಳ, ಕರ್ನಾಟಕ ರಕ್ಷಣಾ ವೇದಿಕೆ ತಾಲೂಕಾಧ್ಯಕ್ಷ ರಹಮಾನ ಕನಕಾಲ, ಸುಭಾಸ ಹೊಸಟ್ಟಿ, ಗುರುರಾಜ ಆಕಳವಾಡಿ, ಗುರುನಾಥ ಮುರಡಿ, ಸೋಮಶೇಖರ ನಾಟಿಕಾರ, ಸೋಮು ಬಾವಿಮನಿ, ಶಿವರಾಜ ತಳವಾರ, ಅಯ್ಯಪ್ಪ ಸಾತಿಹಾಳ ಸೇರಿದಂತೆ ತಾಲೂಕಿನ ಹಲವಾರು ಗಣ್ಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸಿಬ್ಬಂದಿ ಶುಭ ಕೋರಿದ್ದಾರೆ.



ಮಹಾದೇವಪ್ಪಗೆ ಉನ್ನತ ಸ್ಥಾನ ನೀಡಲು ಒತ್ತಾಯ

ಸಿಂದಗಿ: ರಾಜ್ಯದ ದಲಿತ ಸಮುದಾಯದ ಆಶೋತ್ತರಗಳಿಗೆ ಧ್ವನಿಯಾಗಿರುವ ಮಹಾದೇವಪ್ಪ ಅವರು ಹಲವು ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರ ನಾಯಕತ್ವ ಮತ್ತು ಆಡಳಿತ ಅನುಭವ ಪರಿಗಣಿಸಿ ಸರ್ಕಾರದಲ್ಲಿ ಉನ್ನತ ಸ್ಥಾನಮಾನ ನೀಡುವುದು ಸೂಕ್ತ. ಸಾಮಾಜಿಕ ನ್ಯಾಯದ ಪರವಾಗಿ ನಿರಂತರ ಹೋರಾಟ ನಡೆಸಿರುವ ಡಾ.ಎಚ್.ಸಿ.ಮಹಾದೇವಪ್ಪ ಅವರಿಗೆ ಸರ್ಕಾರದಲ್ಲಿ ಇನ್ನಷ್ಟು ಮಹತ್ವದ ಜವಾಬ್ದಾರಿ ನೀಡಬೇಕು. ಡಾ.ಎಚ್.ಸಿ.ಮಹಾದೇವಪ್ಪ ಅವರಿಗೆ ಉನ್ನತ ಸ್ಥಾನಮಾನ ನೀಡಬೇಕು ಎಂದು ವಿವಿಧ ದಲಿತ ಸಂಘಟನೆಗಳು ಹಾಗೂ ಮುಖಂಡರು ಒತ್ತಾಯಿಸಿದ್ದಾರೆ. ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಅಭಿವೃದ್ಧಿ ಹಾಗೂ ಪಕ್ಷ ಸಂಘಟನೆಯಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಇದರಿಂದ ದಲಿತ ಸಮುದಾಯದ ಆಶಯಗಳಿಗೆ ಹೆಚ್ಚಿನ ಬಲ ದೊರೆಯಲಿದೆ ಎಂದು ದಲಿತ ಮುಖಂಡ ರಾಜಶೇಖರ ಕೂಚಬಾಳ ಮನವಿ ಮಾಡಿದ್ದಾರೆ.

ಯಶವಂತರಾಯಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹ

ಝಳಕಿ: ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲಗೆ ನೂತನ ಸಚಿವ ಸಂಪುಟ ರಚನೆಯಲ್ಲಿ ಸಚಿವ ಸ್ಥಾನ ನೀಡಬೇಕೆಂದು ಪಿಕೆಪಿಎಸ್ ಉಪಾಧ್ಯಕ್ಷ ಅಣ್ಣಾರಾಯ ಬಬಲಾದ ಆಗ್ರಹಿಸಿದರು. ಸ್ಥಳೀಯ ಸೂರ್ಯ ಹೋಟೆಲ್ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲಿ ಮಾತನಾಡಿದ ಅವರು, ಇಂಡಿ ಮತ ಕ್ಷೇತ್ರದಲ್ಲಿ ಸತತವಾಗಿ ಮೂರು ಬಾರಿ ಶಾಸಕರಾಗಿ ಜನಪರ ಕಾರ್ಯನಿರ್ವಹಿಸಿ ಅಪಾರ ಅನುಭಾವ ಹೊಂದಿದ್ದಾರೆ. ಯಶವಂತರಾಯಗೌಡ ಪಾಟೀಲಗೆ ಮಂತ್ರಿ ಸ್ಥಾನ ನೀಡಿಬೇಕು ಗಡಿ ಭಾಗದ ಇಂಡಿ ತಾಲೂಕು ಮತ್ತಷ್ಟು ಅಭಿವೃದ್ಧಿ ಹೊಂದಿಬೇಕು ಎಂದು ಆಗ್ರಹಿಸಿದರು.



ನಾಲತವಾಡ: ಪಟ್ಟಣದ ಶಾಸಕರ ಮಾದರಿ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವ ಆಚರಿಸಲಾಯಿತು. ಮುಖ್ಯಗುರುಮಾತೆ ಎಸ್.ಎಲ್.ಗೊಳಸಂಗಿ, ಶಿಕ್ಷಕ ಕಳ್ಳಿಗುಡ್ಡ, ನಿವೃತ್ತಿ ಶಿಕ್ಷಕ ಈರಣ್ಣ ಗಂಗನಗೌಡರ ಅವರಿಗೆ ಸನ್ಮಾನಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ವೀರೇಶ ಆಲೂರು, ಉಪಾಧ್ಯಕ್ಷ ಮಹಾಂತಯ್ಯ ಮೆನೆದಾಳಮಠ, ಪಪಂ ಉಪಾಧ್ಯಕ್ಷ ಬಸವರಾಜ ಗಂಗನಗೌಡರ, ಶರಣಪ್ಪ ಗಂಗನಗೌಡರ, ಸಿಆರ್‌ಪಿ ಬಸವರಾಜ ಮಾದರ, ಅಜಿತ್ ಪ್ರೇಮ್ ಐ, ಮುರುಗಪ್ಪ ಹಾದಿಮನಿ, ರುದ್ರು ಇಲಕಲ್, ಗುರುಮಾತೆ ಬಸಮ್ಮ ಪಟ್ಟಣಶೆಟ್ಟಿ ಜಕಾತಿ, ಶಿಲ್ಪಾ ಗಂಗನಗೌಡ, ಜ್ಯೋತಿ ಹಂಪನಗೌಡ ಇಸ್ಲಾಂಪುರ ಇದ್ದರು.

ಶಿವಾನಂದ ಪಾಟೀಲಗೆ ಡಿಸಿಎಂ ಸ್ಥಾನ ನೀಡಿ

ವಿಜಯಪುರ: ಮಾಜಿ ಸಚಿವ, ಬಸವನಬಾಗೇವಾಡಿ ಕ್ಷೇತ್ರದ ಜನಪ್ರಿಯ ಶಾಸಕ ಶಿವಾನಂದ ಪಾಟೀಲ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿ ಸ್ಥಾನ ನೀಡಿ, ವೈದ್ಯಕೀಯ ಶಿಕ್ಷಣ ಖಾತೆ ನೀಡಬೇಕು ಎಂದು ಕನ್ನಡದ ಕಟ್ಟಾಳು ಗಂಗಾಧರ ಕೋರಳ್ಳಿ ಪ್ರತಿಷ್ಠಾನ ಸಂಚಾಲಕ ಅನಿಲ ಹೊಸಮನಿ, ಕಾರ್ಯದರ್ಶಿ ಲಾಯಪ್ಪ ಇಂಗಳೆ ಆಗ್ರಹಿಸಿದ್ದಾರೆ. ಈ ಕುರಿತು ಜಂಟಿ ಪ್ರಕಟಣೆ ನೀಡಿದ ಅವರು, ಈ ಹಿಂದೆ ಶಿವಾನಂದ ಪಾಟೀಲರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ರಾಜ್ಯದ ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ಸಲ್ಲಿಸಿದ್ದಾರೆ. ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ತಾಯಿ- ಮಕ್ಕಳ ಆಸ್ಪತ್ರೆ, ಟ್ರಾಮಾ ಸೆಂಟರ್ ಸೇರಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಜೊತೆಗೆ ಜಿಲ್ಲಾ ಆಸ್ಪತ್ರೆಗೆ ತಾಜಬಾವಡಿಯಿಂದ ನೀರಿನ ಸಂಪರ್ಕ ಒದಗಿಸಿ ರಾಜ್ಯದಲ್ಲಿ ಮಾದರಿ ಆಸ್ಪತ್ರೆಯಾಗಿ ಮೇಲದರ್ಜೆಗೆ ಏರಿಸಿದ್ದಾರೆ, ಜೊತೆಗೆ ಜಿಲ್ಲೆಯ ತಾಲೂಕು ಆಸ್ಪತ್ರೆಗಳಲ್ಲಿ ವಿವಿಧ ಮೂಲಭೂತ ಸೌಲಭ್ಯ ಒದಗಿಸಿ ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ, ಕಬ್ಬು ಸಕ್ಕರೆ ಮತ್ತು ಜವಳಿ ಸಚಿವರಾಗಿ ರಾಜ್ಯ ಮತ್ತು ಜಿಲ್ಲೆಯಲ್ಲಿ ಹಲವು ರೈತಪರ, ಜನಪರ ಕೆಲಸ ಕಾರ್ಯಗಳನ್ನು ಮಾಡಿರುವ ಶಿವಾನಂದ ಪಾಟೀಲರಿಗೆ ನೂತನ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಹೈಕಮಾಂಡ್ ಉಪ ಮುಖ್ಯಮಂತ್ರಿಯನ್ನಾಗಿ ಮಾಡಿ, ವೈದ್ಯಕೀಯ ಶಿಕ್ಷಣ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.



ಮುದ್ದೇಬಿಹಾಳ: ಕುಂಟೋಜಿ ರಸ್ತೆಯಲ್ಲಿರುವ ಬಸವ ಅಂತಾರಾಷ್ಟ್ರೀಯ ಶಾಲೆಯ ಆವರಣದಲ್ಲಿ ಕದಳಿ ವೇದಿಕೆಯ ವತಿಯಿಂದ ಶರಣ ಬೆಳಗು ಅನ್ನುವ ಹುಣ್ಣಿಮೆಯ ಕಾರ್ಯಕ್ರಮ ನೆರವೇರಿಸಲಾಯಿತು. ಕಾಶಿಬಾಯಿ ರಾಂಪುರ ಮಾಯಕ್ಕ ನಾಲತವಾಡ, ಶರಣ ಸಾಹಿತ್ಯ ಪರಿಷತ್ತು ಹಾಗೂ ಶಾಲೆಯ ಆಡಳಿತ ಮಂಡಳಿ ಹಾಗೂ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ಆಗ್ರಹಿಸಿ ಮನವಿ

ತ್ವರಿತ ಕ್ರಮಕ್ಕೆ ಹೋರಾಟ ಸಮಿತಿ ಆಗ್ರಹ



ವಿಜಯಪುರ: ನಗರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪನೆಗೆ ತ್ವರಿತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನಾ ಹೋರಾಟ ಸಮಿತಿ ಪದಾಧಿಕಾರಿಗಳು ಮಂಗಳವಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನಾಕಾರರು, ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕೆಂಬ ಐತಿಹಾಸಿಕ ಹೋರಾಟವು ಸುಮಾರು 116 ದಿನ ನಡೆಯಿತು. ಎಲ್ಲ ರಾಜಕೀಯ ಪಕ್ಷಗಳ ಭೇದಭಾವ ಮರೆತು, ಪಕ್ಷಾತೀತವಾಗಿ, ಜಾತ್ಯತೀತವಾಗಿ ನಡೆದ ಈ ಹೋರಾಟಕ್ಕೆ ಜಿಲ್ಲೆಯ ಜನತೆ, ವಿವಿಧ ಪ್ರಗತಿಪರ ಸಂಘಟನೆಗಳು, ವಿಕಲಚೇತನರ ಸಂಘಗಳು, ಮಹಿಳಾ ಸಂಘಟನೆಗಳು ಮತ್ತು ಜನಪ್ರತಿನಿಧಿಗಳು ಬೆಂಬಲ ನೀಡಿದ್ದರು ಎಂದರು.

ಜನವರಿ 1ರಂದು ಶಾಂತಿಯುತ ಹೋರಾಟ ನಡೆಸುತ್ತಿದ್ದ 27 ಹೋರಾಟಗಾರರ ಮೇಲೆ ಸುಳ್ಳು ಮೊಕದ್ದಮೆ ಹಾಕಿ, 6 ಜನರನ್ನು 14 ದಿನಗಳ ಕಾಲ ಜೈಲಿಗಟ್ಟಿದ್ದ ಘಟನೆಯ ನಂತರ ಜನಹೋರಾಟ ತೀವ್ರಗೊಂಡಿತು. ಇದರ ಹಿನ್ನೆಲೆಯಲ್ಲಿ ಜನವರಿ 9 ರಂದು ವಿಜಯಪುರಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿಗಳು ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಘೋಷಿಸಿದ್ದರು ಎಂದರು.

2026-27ನೇ ಸಾಲಿನ ಬಜೆಟ್‌ನಲ್ಲಿ ಮಾಜಿ ಮುಖ್ಯಮಂತ್ರಿ ಮತ್ತು ಆರ್ಥಿಕ ಸಚಿವ ಸಿದ್ದರಾಮಯ್ಯ ಅವರು ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವುದಾಗಿ ಘೋಷಿಸಿದ್ದರು. ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ನಮ್ಮ ಸರ್ಕಾರ ವೈದ್ಯಕೀಯ ಕಾಲೇಜು ಮಾಡಿಯೇ ತೀರುತ್ತದೆ, ಚಿಂತಿಸುವ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು. ಡಿಪಿಆರ್ ಪ್ರತಿಯನ್ನು ಸಮಿತಿಗೆ ನೀಡುವಂತೆ ಮತ್ತು ವೈದ್ಯಕೀಯ ಕಾಲೇಜು ಆರಂಭಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತ್ವರಿತಗೊಳಿಸುವಂತೆ ಒತ್ತಾಯಿಸಿದರು.

ಹೋರಾಟ ಸಮಿತಿಯ ಸದಸ್ಯ ಬಿ.ಭಗವಾನ್ ರೆಡ್ಡಿ, ಹಿರಿಯ ರೈತ ಹೋರಾಟಗಾರ, ಸಮಿತಿಯ ಸದಸ್ಯ ಅರವಿಂದ್ ಕುಲಕರ್ಣಿ ಮಾತನಾಡಿ, 116 ದಿನದ ಹೋರಾಟದ ನಂತರ ಮಾಜಿ ಮುಖ್ಯಮಂತ್ರಿಗಳು ಪಿಪಿಪಿ ರದ್ದು ಮಾಡಿ, ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡುವುದಾಗಿ ಘೋಷಿಸಿದ್ದರು. ಸದ್ಯ ಡಿಪಿಆರ್ ತಯಾರಿ ಮಾಡಿ ಕಳುಹಿಸಲಾಗಿದೆ ಎಂಬ ಮಾಹಿತಿ ಇದೆ, ಆದರೆ ಇದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ, ಆದ ಕಾರಣ ವಿಳಂಬ ಮಾಡದೆ, ಶೀಘ್ರವಾಗಿ ಡಿಪಿಆರ ತಯಾರಿಸಿ ಅದಕ್ಕೆ ಸೂಕ್ತ ಅನುದಾನವನ್ನು ಬಿಡುಗಡೆ ಮಾಡಿ ಶೀಘ್ರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜನ್ನ ಪ್ರಾರಂಭ ಮಾಡಬೇಕು ಎಂದು ಆಗ್ರಹಿಸಿದರು.

ವೈದ್ಯಕೀಯ ಹೋರಾಟ ಸಮಿತಿಯ ಸದಸ್ಯರಾದ ಅನೀಲ ಹೊಸಮನಿ, ಚಂದ್ರಶೇಖರ್ ಲೆಂಡಿ, ಅಕ್ರಮ ಮಾಶಾಳ್ಕಾರ, ಸುರೇಶ ಜೀಬಿ, ಮಲ್ಲಿಕಾರ್ಜುನ್ ಹಂದ್ರಾಳ, ಲಲಿತಾ ಬಿಜ್ಜರಗಿ, ಬಾಬುರಾವ್ ಬೀರಕಬ್ಬಿ, ಸಿದ್ದಲಿಂಗ ಬಾಗೇವಾಡಿ, ಭರತಕುಮಾರ ಎಚ್.ಟಿ., ಶಿವಬಾಳಮ್ಮ ಕೊಂಡಗೂಳಿ, ಜಗದೇವ ಸೂರ್ಯವಂಶಿ, ಲಾಯಪ್ಪ ಇಂಗಳೆ, ಡಾ.ಗುರಿಕಾರ, ಭೀಮು ಉಪ್ಪಾರ, ಸಿದ್ರಾಮ್ ಹಿರೇಮಠ, ಭೋಗೇಶ ಸೋಲಾಪುರ, ಬಾಳು ಜೇವೂರ್, ನೀಲಾಂಬಿಕಾ ಬಿರಾದಾರ, ಶ್ರೀನಾಥ ಪೂಜಾರಿ ಇದ್ದರು.

ವಿದ್ಯೆಯ ಸಾಧನೆಗೆ ತಪಸ್ಸು, ಏಕಾಗ್ರತೆ ಮುಖ್ಯ

ವಿಜಯಪುರ: ವಿದ್ಯೆ ಎನ್ನುವುದು ತಪಸ್ಸಿದ್ದಂತೆ, ಸಂತ ಮಹಾಂತ ಋಷಿಮುನಿಗಳು ಏಕಾಗ್ರತೆಯಿಂದ ತಪಸ್ಸು ಮಾಡಿ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಂತೆ, ವಿದ್ಯಾರ್ಥಿಗಳು ಸಹ ವಿದ್ಯೆ ಎನ್ನುವ ತಪಸ್ಸನ್ನು ಏಕಾಗ್ರತೆಯಿಂದ ಮಾಡಿದಲ್ಲಿ, ಸಾಧನೆ ಎನ್ನುವ ಸಾಕ್ಷಾತ್ಕಾರ ಹೊಂದಬಹುದು ಎಂದು ಚಾಣಕ್ಯ ಕರಿಯರ್ ಅಕಾಡೆಮಿ ಸಂಸ್ಥಾಪಕ ಎನ್.ಎಂ.ಬಿರಾದಾರ ಹೇಳಿದರು.

ನಗರದ ಎಕ್ಸಲೆಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ 2026-27 ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಾಧನೆಯ ಹಾದಿಯಲ್ಲಿ ಹೆಜ್ಜೆ ಹಾಕಬೇಕೆ ವಿನಃ ಏನಾದರೂ ಸಮಸ್ಯೆ ಆಯಿತು ಎಂದು ಮುಂದಿಟ್ಟ ಹೆಜ್ಜೆ ಹಿಂದೆ ಇಡಬಾರದು ಎಂದರು.

ವಾಗ್ಮಿ ಅಶೋಕ ಹಂಚಲಿ ಮಾತನಾಡಿ, ಮುಂಜಾನೆ ಬಿದ್ದ ಮಂಜಿನ ಹನಿ ಬಿಸಿಲೇರಿದಂತೆ ಮುತ್ತಂತೆ ಹೊಳೆದು ಮಾಯವಾಗುತ್ತದೆ. ಆದರೆ ಸ್ವಾತಿ ಮಳೆಯ ಹನಿ ಕಪ್ಪೆಚಿಪ್ಪಿನಲ್ಲಿ ಬಿದ್ದಾಗ ಮಾತ್ರ ಅದು ಮುತ್ತಾಗಿ ಪರಿವರ್ತನೆಯಾಗುತ್ತದೆ ಅದು ಶಾಶ್ವತ ಮೌಲ್ಯ ಪಡೆಯುತ್ತದೆ ಎಂದರು.

ಬಸವನಬಾಗೇವಾಡಿ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಹುಟ್ಟು ಅನಿಶ್ಚಿತ, ಸಾವು ಖಚಿತ. ಅದರ ಮಧ್ಯದಲ್ಲಿ ಬರುವ ಸಮಯದಲ್ಲಿ ಸಾಧನೆ ಮಾಡಿ ಶಾಶ್ವತವಾಗಿ ಉಳಿಯುವುದು ಸಾರ್ಥಕ ಬದುಕಾಗುತ್ತದೆ ಎಂದು ಹೇಳಿದರು.

ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಚೇರಮನ್ ಬಸವರಾಜ್ ಕೌಲಗಿ, ಗೌರವ ನಿರ್ದೇಶಕ ರಾಜಶೇಖರ ಕೌಲಗಿ ಮಾತನಾಡಿದರು. ಶಾಲಾ ಶಿಕ್ಷಣ ಇಲಾಖೆಯ ನೂತನ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಕೆ.ಎ.ಉಪ್ಪಾರ, ನಿಕಟಪೂರ್ವ ಉಪ ನಿರ್ದೇಶಕ ಡಾ.ಸಿ.ಕೆ.ಹೊಸಮನಿ, ನಿವೃತ್ತ ಪ್ರಾಂಶುಪಾಲ ಬಸವರಾಜ್ ಉಮರ್ಜಿ ಅವರನ್ನು ಸನ್ಮಾನಿಸಲಾಯಿತು.

ಕೂಡಿಗಿ ಸರ್ಕಾರಿ ಪಪೂ ಕಾಲೇಜಿನ ಪ್ರಾಂಶುಪಾಲ ಕೆ.ಜಿ.ಲಮಾಣಿ, ಎಕ್ಸಲೆಂಟ್ ವಿಜ್ಞಾನ ಪದವಿ ಪಪೂ ಕಾಲೇಜಿನ ಪ್ರಾಂಶುಪಾಲ ಮಂಜುನಾಥ ಜುನಗೊಂಡ, ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ, ಕನ್ನಡ ವಿಭಾಗದ ಮುಖ್ಯಸ್ಥ ಶರಣಗೌಡ ಪಾಟೀಲ, ಆಂಗ್ಲ ಉಪನ್ಯಾಸಕ ಮುಸ್ತಾಕ ಮಲಘಾಣ, ಚಿನ್ಮಯಿ ಇದ್ದರು.



ನಿವೃತ್ತಿ ಜೀವನ ಸಮಾಜಮುಖಿಯಾಗಲಿ

ಇಂಡಿ: ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡಿ ಅವರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿ ನಿವೃತ್ತಿಯಾಗುವ ಶಿಕ್ಷಕರು ತಮ್ಮ ನಿವೃತ್ತಿ ಜೀವನ ಸಮಾಜಮುಖಿ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಬದುಕು ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಜೆಡಿಎಸ್ ತಾಲೂಕಾಧ್ಯಕ್ಷ ಬಿ.ಡಿ.ಪಾಟೀಲ ಹೇಳಿದರು.

ತಾಲೂಕಿನ ಹಿರೇಬೇವನೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ನಿವೃತ್ತ ಮುಖ್ಯ ಶಿಕ್ಷಕ ಎ.ಎಲ್.ಬೇವನೂರ ಅವರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕನ ಪಾತ್ರ ಅತ್ಯಂತ ಮಹತ್ವವಾದುದು. ಒಬ್ಬ ಶಿಕ್ಷಕ ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಿ ಮಕ್ಕಳಿಗೆ ಭವಿಷ್ಯ ರೂಪಿಸಿದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಸಿಆರ್‌ಪಿ ರಮೇಶ ಬಗಲೂರ ಮಾತನಾಡಿ, ಬೇವನೂರ ಸರ್ ತಮ್ಮ ಬೋಧನಾ ಕೌಶಲ್ಯದಿಂದ ಶಿಕ್ಷಣ ರಂಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಸರ್ವರೊಂದಿಗೆ ಉತ್ತಮ ಬಾಂಧವ್ಯದೊಂದಿಗೆ ಸಾರ್ಥಕ ಸೇವೆ ಸಲ್ಲಿಸಿದ ಇವರ ಸೇವೆ ಇಲಾಖೆಗೆ ತೃಪ್ತಿ ತಂದಿದೆ. ಅವರ ಮುಂದಿನ ನಿವೃತ್ತಿ ಜೀವನವನ್ನು ಬಯಸಿ ಬಂದ ವಿದ್ಯಾರ್ಥಿಗಳಿಗೆ ಹಾಗೂ ಕಿರಿಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಮೂಲಕ ಶಿಕ್ಷಣ ರಂಗದಲ್ಲಿ ಮಾರ್ಗದರ್ಶಕರಾಗಿ ಸಮಾಜಮುಖೀ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಿ ಎಂದು ಆಶಿಸುತ್ತೇನೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿಕ್ಷಕ ಎ.ಎಲ್.ಬೇವನೂರ, ಮಕ್ಕಳೊಂದಿಗೆ ಕಳೆದ ದಿನಗಳು, ಅವರನ್ನು ಶೈಕ್ಷಣಿಕವಾಗಿ ಸಾಮಾಜಿಕವಾಗಿ ತಿದ್ದಿ ಬೆಳೆಸಿದ ಸಾರ್ಥಕ ಸೇವೆ ಸಲ್ಲಿಸಿದ ತೃಪ್ತಿ ನನಗಿದೆ ಎಂದು ತಮ್ಮ ಸೇವೆ ಸ್ಮರಿಸಿಕೊಂಡರು.

ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ವೈ.ಟಿ.ಪಾಟೀಲ, ಹಿರೇಬೇವನೂರ ಶ್ರೀಮಠದ ವೇದಮೂರ್ತಿ ದಯಾನಂದ ಹಿರೇಮಠ, ನಿವೃತ್ತಿ ಶಿಕ್ಷಕಿ ಬಿ.ಎಸ್.ಬಾಸಗಿ(ಬಿರಾದಾರ) ಮಾತನಾಡಿದರು.

ಬೇವನೂರ ದಂಪತಿಗಳಿಗೆ ಸನ್ಮಾನಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ರಾಜು ಪಾತಾಳೆ, ಶಿಕ್ಷಕ ಸಂಘದ ಅಧ್ಯಕ್ಷ ಅಲ್ತಾಪ ಬೋರಾಮಣಿ, ಶಿಕ್ಷಕರಾದ ಜಯರಾಮ ಚವ್ಹಾಣ, ಸುರೇಶ ಚವ್ಹಾಣ, ಉಮೇಶ ಬಜಂತ್ರಿ, ಮುತ್ತು ತಡಲಗಿ, ಪಾರ್ತಿ ವಾಡಿ, ವಿಜಯಪುರದ ಡಿ.ಎಚ್.ಒ ಕಾರ್ಯಲಯದ ಎಸ್.ಆರ್.ನಾಟೀಕಾರ, ಜಿ.ಎಂ.ಕೊಲೂರ, ಪಿ.ಜಿ.ಕಲ್ಮನಿ, ಎಎಸ್.ಜಿ.ಹಿರೇಮಠ, ಎಂ.ಎ.ಭಾಸಗಿ, ವಿ.ಜಿ.ಕಲ್ಮನಿ, ಆರ್.ಎಂ.ಪಾಟೀಲ, ರವಿ ಆಳೂರ, ಸಿದ್ದು ಪರಗೊಮಡ, ಮಾಳ್ಳಪ್ಪ ಗುಡ್ಲ, ಯಶವಂತ ಕಡೆಗೊಳ, ದುಂಡು ಬಿರಾದಾರ, ಶಿಕ್ಷಕ ಎ.ಕೌವಲಗಿ ಇದ್ದರು.



ಶೈಕ್ಷಣಿಕ ಸಮಸ್ಯೆ ಪರಿಹಾರಕ್ಕೆ ಜೂ.9, 10ರಂದು ಬೃಹತ್ ಪ್ರತಿಭಟನೆ

ವಿಜಯಪುರ: ಜಿಲ್ಲೆಯ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಗಮನ ಸೆಳೆಯಲು ಜೂ.9, 10 ರಂದು ವಿವಿಧ ಹಂತದ ಬೃಹತ್ ಹೋರಾಟ ನಡೆಸುವ ನಿಟ್ಟಿನಲ್ಲಿ ಒಕ್ಕೊರಲಿನ ನಿರ್ಣಯ ಸ್ವೀಕರಿಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಸಮೀಪದ ಪ್ರವಾಸಿ ಮಂದಿರದಲ್ಲಿ ದ್ರಾವಿಡ ವಿದ್ಯಾರ್ಥಿ ಪರಿಷತ್ ವತಿಯಿಂದ ಪ್ರಶಿಕ್ಷಣಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳ ಕುರಿತು ಹೋರಾಟದ ಪೂರ್ವಭಾವಿ ಕಾರ್ಯಾಗಾರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಪ್ರಶಿಕ್ಷಣಾರ್ಥಿಗಳು ಎದುರಿಸುತ್ತಿರುವ ವಿವಿಧ ಜ್ವಲಂತ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಅಗತ್ಯವಾದ ಪ್ರಾಯೋಗಿಕ ತರಬೇತಿ ದೊರೆಯುತ್ತಿಲ್ಲ. ಜೊತೆಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಸುಮಾರು ಎರಡುವರೆ ಲಕ್ಷ ರೂಪಾಯಿವರೆಗೆ ನಿಯಮಬಾಹಿರವಾಗಿ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು.

ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಎನ್‌ಇಪಿ ಪಠ್ಯಕ್ರಮ ಸಮರ್ಪಕವಾಗಿ ಅಳವಡಿಸಿಲ್ಲ. ತರಬೇತಿ ಸಂಸ್ಥೆಗಳಲ್ಲಿ ಕಂಪ್ಯೂಟರ್ ಲ್ಯಾಬ್, ಸ್ಮಾರ್ಟ್ ಬೋರ್ಡ್ ಹಾಗೂ ಸುಸಜ್ಜಿತ ಗ್ರಂಥಾಲಯಗಳಂತಹ ಮೂಲ ಸೌಲಭ್ಯ ಕೊರತೆ ಕಂಡುಬರುತ್ತಿದೆ ಎಂದರು.



ಪ್ರಶಿಕ್ಷಣಾರ್ಥಿಗಳೊಂದಿಗೆ ವಿಶೇಷವಾಗಿ ಮಹಿಳಾ ಪ್ರಶಿಕ್ಷಣಾರ್ಥಿಗಳೊಂದಿಗೆ ಏಕವಚನದಲ್ಲಿ ಹಾಗೂ ಅಸಭ್ಯ ಪದಗಳಿಂದ ವರ್ತಿಸಲಾಗುತ್ತಿರುವ ವಿಷಯ ಸಹ ಸಭೆಯಲ್ಲಿ ಚರ್ಚೆಗೆ ಬಂದಿತು.

ಜಿಲ್ಲೆಯ ಎಲ್ಲ ಪ್ರಶಿಕ್ಷಣಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ವಿವಿಧ ವಿದ್ಯಾರ್ಥಿ ಸಂಘಟನೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ದ್ರಾವಿಡ ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳು ಕೋರಿದರು. ಯುವ ಹೋರಾಟಗಾರ ಗೌಡಪ್ಪ ಗೌಡ ಬಿರಾದಾರ, ದ್ರಾವಿಡ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಅಕ್ಷಯ್ ಕುಮಾರ್ ಅಜಮನಿ, ಕಾರ್ಯದರ್ಶಿ ರಾಹುಲ್ ಕಳಸದ, ಮಂಜುನಾಥ್ ಕವಳಿ, ಆಕಾಶ ಕುರಣಿ, ಸಂದೇಶ ಕುಮುಟಗಿ, ಆದರ್ಶ್, ವಿಜಯ, ಅಜಯ, ಸಂದೀಪ್, ಅಭಿಷೇಕ ಇದ್ದರು.

ಧನಾತ್ಮಕ ಚಿಂತನೆಯಿಂದ ವೃತ್ತಿ ಜೀವನ ಪಾವನ: ನಿರ್ದೇಶಕ ನಾಲತವಾಡ

ಮುದ್ದೇಬಿಹಾಳ: ಶಿಕ್ಷಕರು ಧನಾತ್ಮಕ ಚಿಂತನೆಯನ್ನ ನಿರಂತರ ಮುಂದುವರೆಸಿದಲ್ಲಿ ಮಾತ್ರವೇ ವೃತ್ತಿ ಜೀವನ ಹಾಗೂ ವಿದ್ಯಾರ್ಥಿಗಳ ಬಾಳು ಪಾವನಗೊಳ್ಳಲು ಸಾಧ್ಯ ಎಂದು ಜ್ಞಾನ ಭಾರತಿ ವಿದ್ಯಾ ಮಂದಿರ ಪಾಠ ಶಾಲೆಯ ನಿರ್ದೇಶಕ ಬಸವರಾಜ ನಾಲತವಾಡ ಹೇಳಿದರು.

ಶಾಲೆಯಲ್ಲಿ ಆಯೋಜಿಸಿರುವ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಶಿಕ್ಷಕ ನಿರಂತರ ಅಧ್ಯಯನಶೀಲ ಪ್ರವೃತ್ತಿ ಈ ವೃತ್ತಿಯಲ್ಲಿ ಶಿಕ್ಷಕ ವೃತ್ತಿ ಪಾವನತೆ ಬೆಳೆಸಿಕೊಂಡಿರಬೇಕು. ಶಾಲಾ ಅವಧಿಯಲ್ಲಿ ಅನ್ಯ ಚಿಂತನೆಯ ಕಡೆಗೆ ಗಮನ ಹರಿಸಬಾರದು. ವಿದ್ಯಾರ್ಥಿಗಳು ನಿರಂತರವಾಗಿ ಶಾಲೆಗೆ ಬರುವುದರೊಂದಿಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ಮಾಧ್ಯಮ ವಿಭಾಗ ನೂತನ ಮುಖ್ಯಗುರು ಎಸ್.ಎಸ್.ಹರಿಜನ ಮಾತನಾಡಿ, ನಮ್ಮ ವೃತ್ತಿ ನಮಗೆ ತೃಪ್ತಿ ತರುವಂತಿರ ಬೇಕು. ಅನ್ಯರ ತೋರಿಕೆಗೆ, ಪ್ರಶಂಸೆ ಸಿಗಲಿ ಎಂದು ಮಾಡುವ ನಾಟಕೀಯ ಚಟುವಟಿಕೆ ಇರಬಾರದು. ಆನಂದ ದಾಯಕವಾಗಿ ಈ ಶೈಕ್ಷಣಿಕ ವರ್ಷದಲ್ಲಿ



ಸೇವೆಸಲ್ಲಿಸಿ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನವನ್ನು ನಾವೆಲ್ಲ ಸೇರಿ ಮಾಡುತ್ತೇವೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಬಿ.ಪಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಪ್ರೌಢ ವಿಭಾಗ ಮುಖ್ಯಗುರು ರಾಮಚಂದ್ರ ಹೆಗಡೆ, ಕಾಲೇಜಿನ ಪ್ರಾಚಾರ್ಯ ಅರುಣ ಹುನಗುಂದ, ಆಂಗ್ಲ ಮಾಧ್ಯಮ ಮುಖ್ಯ ಗುರುಮಾತೆ ರಂಜಿತಾ ಭಟ್ಟ, ಶಿಕ್ಷಕರಾದ ಮಂಜುನಾಥ ಪಡದಾಳಿ, ಕಿರಣ ಕಡಿ, ಬಿ.ಆರ್.ಬೆಳ್ಳಿಕಟ್ಟಿ, ಆರ್.ಜೆ.ಸಾಗರ, ಅನ್ನಪೂರ್ಣ ನಾಗರಾಳ, ಸರಸ್ವತಿ ಮಡಿವಾಳರ, ಭಾಗ್ಯ ಸಿದ್ದಾಪೂರ, ಮೀನಾಕ್ಷಿ ಗಣಾಚಾರಿ ಸೇರಿದಂತೆ ಇತರರು ಹಾಜರಿದ್ದರು.

ಶಾಲೆ ಪ್ರಾರಂಭೋತ್ಸವ: ಮಕ್ಕಳ ಕಲರವ



ಆಲಮೇಲ: ತಾಲೂಕಿನ ಕಡಣಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಎರಡು ತಿಂಗಳಿನಿಂದ ಬೇಸಿಗೆ ರಜೆ ಹಿನ್ನೆಲೆ ರಾಜ್ಯದ ಶಾಲೆಗಳು ಆರಂಭವಾಗಿವೆ. ಶಿಕ್ಷಣ ಇಲಾಖೆಯ ಹೊಸ ಶೈಕ್ಷಣಿಕ ವರ್ಷದ ಅಂದರೆ 2026-27ನೇ ಸಾಲಿನಲ್ಲಿ ಶಾಲೆಗಳನ್ನು ಜೂ.1ರಿಂದ ಪ್ರಾರಂಭಿಸಲು ಆದೇಶಿಸಿದ್ದು, ಮೇ 29ರಂದು ಶಾಲಾ ಶಿಕ್ಷಕರು ಪೂರ್ವ ಸಿದ್ಧತೆ ಕೈಗೊಂಡಿದ್ದಾರೆ. ಮಕ್ಕಳ ಆಗಮಿಸಲಿದ್ದು, ಪ್ರಾರಂಭೋತ್ಸವದ ಮೂಲಕ ವಿದ್ಯಾರ್ಥಿಗಳಿಗೆ ಸ್ವಾಗತ ನೀಡಲಾಗುತ್ತಿದೆ.

ಶಿಕ್ಷಕ ಜಿ.ಎಂ.ಯಲಗಾರ ಮಾತನಾಡಿ, ಸರ್ಕಾರಿ ಕನ್ನಡ ಶಾಲೆಗೆ ತಮ್ಮ ಮಕ್ಕಳನ್ನು ದಾಖಲಿಸಿದರೆ ನಿಮ್ಮ ಮಕ್ಕಳ ಭವಿಷ್ಯ ಉಜ್ವಲವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಕರ್ನಾಟಕದಲ್ಲಿ ಮಾತೃ ಭಾಷೆ ಕನ್ನಡವಾಗಿರುವುದರಿಂದ ಸ್ಪರ್ಧಾ ಜಗತ್ತಿನಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಕನ್ನಡದಲ್ಲಿ ಪರೀಕ್ಷೆ ಬರೆದು ಪಾಸ್ ಮಾಡಿದ್ದು ನಾವು ನೀವೆಲ್ಲ ಕೇಳಿದ್ದೇವೆ ನೋಡಿದ್ದೇವೆ. ಆದ್ದರಿಂದ ಕನ್ನಡ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಯಾವುದರಲ್ಲಿ ಹಿಂದೂ ಸರಿಯುವುದಿಲ್ಲ ಆದ್ದರಿಂದ ಸರಕಾರದ ಸವಲತ್ತುಗಳನ್ನು ಮಕ್ಕಳಿಗೆ ನೀಡಬೇಕು ಎಂದು ತಿಳಿಸಿದರು.

ಜಿ.ಎನ್.ಪಾಟೀಲ, ಶಿವಪ್ಪ ಐರೊಡಗಿ ಶಿಕ್ಷಕರು, ಎಸ್.ಬಿ.ವಾಗ್ಮೊರೆ, ಎಸ್.ಆರ್.ಎಂಟಮಾನ ರಸೂಲ್ ವಾಡೇದ, ಬಾಗಪ್ಪ ಬಾಗೇವಾಡಿ, ಸ್‌ಡಿಎಂಸಿ ಅಧ್ಯಕ್ಷ ಶಿವಯೋಗಿ ಬ.ಕತ್ತಿ ಉಪಾಧ್ಯಕ್ಷ ಮಲ್ಲಪ್ಪ ವಡಗೇರಿ, ಸಂಜು ತಳವಾರ ಇದ್ದರು.

ಸಂಭ್ರಮದ ಜಾತ್ರಾ ಮಹೋತ್ಸವ

ಬಸವನಬಾಗೇವಾಡಿ: ಪಟ್ಟಣದ ವಿಜಯಪುರ ರಸ್ತೆಯ ಕೇಶವ ನಗರದಲ್ಲಿರುವ ಈರಕಾರ ಮುತ್ಯಾನ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗಿತು. ಈರಕಾರ ಮುತ್ಯಾನ ಜಾತ್ರಾ ಮಹೋತ್ಸವ ನಿಮಿತ್ತ ಸೋಮವಾರ ಬೆಳಗ್ಗೆ ದೇವರ ಕತ್ರ್ಯಗದ್ದುಗೆಗೆ ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಜಡಿ ತೊಳೆಯುವ ಕಾರ್ಯಕ್ರಮ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಸೋಮವಾರ ಬೆಳಗ್ಗೆಯಿಂದ ಭಕ್ತರು ಕಾಯಿ-ಕರ್ಪೂರಗಳನ್ನು ದೇವರಿಗೆ ಅರ್ಪಿಸಿ, ಅನ್ನ-ಪ್ರಸಾದ ಸ್ವೀಕರಿಸಿ ದೇವರ ಕೃಪೆಗೆ ಪಾತ್ರರಾದರು. ಸೋಮವಾರ ಸಂಜೆ ಡೊಳ್ಳಿನ ಹಾಡು ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಜಾತ್ರಾ ಮಹೋತ್ಸವದಲ್ಲಿ ಕೆಲ ಯುವಕರು ತಮ್ಮ ತಮ್ಮ ಗೆಳೆಯರಿಗೆ ಭಂಡಾರ ಹಾಕಿ ಸಂಭ್ರಮಿಸಿದರು.

ಶಿವಾನಂದ ಈರಕಾರ ಮುತ್ಯಾನವರು ಮಾತನಾಡಿದರು. ಮುರಗೆಪ್ಪ ಪೂಜಾರಿ, ಆನಂದ ಮೇಟಿ, ನಿಂಗಪ್ಪ ಜೈನಾಪೂರ, ಅಪ್ಪಾಸಾಹೇಬ ಕಲ್ಲೂರ, ಶರಣಪ್ಪ ನಾಡಗೌಡ, ಪಾವಡೆಪ್ಪ ಕರಮಳಕರ, ಮಲ್ಲಿಕಾರ್ಜುನ ಕುಳಗೇರಿ, ಸಂಗಪ್ಪ ಡಂಬಳ, ಬಸಪ್ಪ ಹೆರಕಲ್ಲ, ಸಂಗಪ್ಪ ಕೋಣಿನ, ಸುರೇಶ ಹಾರಿವಾಳ, ಸಂತೋಷ ಕೂಡಗಿ, ಜಗು ನಿಕ್ಕಂ, ಮುತ್ತಪ್ಪ ಉಕ್ಕಲಿ, ಗಿರೀಶ ಹಾರಿವಾಳ, ಮಡಿವಾಳಪ್ಪ ವಾಲಿಕಾರ, ಮಲ್ಲಕಾಜಪ್ಪ ಉಕ್ಕಲಿ ಸೇರಿದಂತೆ ನೂರಾರು ಜನರು ಇದ್ದರು. ಶ್ರೀಶೈಲ ಮಲ್ಲಕಾರ್ಜುನ ಸೇವಾ ಸಮಿತಿ ಸದಸ್ಯರು ಇದ್ದರು.



ಸದ್ಗುರು ದೊರೆಯುವುದು ಸುಲಭವಲ್ಲ

ಸಿಂದಗಿ: ಸದ್ಗುರು ದೊರೆಯುವುದು ಸುಲಭವಲ್ಲ. ದೊರೆತ ಗುರುವನ್ನು ಆರಾಧಿಸಬೇಕು. ಗುರುವಿನ ಬಗ್ಗೆ ಸಂಶಯ ಬೇಡ. ನಾವು ಯಾರ ಸಂಗ ಮಾಡುತ್ತೇವೆಯೋ ಅವರಂತಾಗುತ್ತೇವೆ. ಅದಕ್ಕೆ ಸಂಗ ಎನ್ನುವುದು ಬಹಳ ಮುಖ್ಯ ಎಂದು ವಿಜಯಪುರದ ಕೈವಲ್ಯ ಕುಟೀರದ ಪ್ರಣವ ಪ್ರಕಾಶ ಮಹಾರಾಜರು ಹೇಳಿದರು. ನಗರದ ಸಾರಂಗಮಠದ ಲಿಂ.ಸಿದ್ದಲಿಂಗ ಸ್ವಾಮೀಜಿ ಕಾನ್ಫರೆನ್ಸ್ ಹಾಲ್‌ನಲ್ಲಿ ಹುಣ್ಣಿಮೆ ನಿಮಿತ್ತ ಹಮ್ಮಿಕೊಂಡ 355ನೇ ಸದ್ವಿಚಾರ ಗೋಷ್ಠಿಯಲ್ಲಿ ಉನಸ್ಯಾಸ ನೀಡಿಡಿದ ಅವರು, ನಾನೇ ಬ್ರಹ್ಮ ಎನ್ನುವ ಸತ್ಯವನ್ನು ತಿಳಿದು ಬದುಕಬೇಕು. ನಾನೇ ಬ್ರಹ್ಮ ಎನ್ನುವುದು ದೃಢವಾಗಬೇಕಾದರೆ ಒಳ್ಳೆಯವರ ಸಹವಾಸ ಮಾಡಬೇಕು. ಸಮಾಜದ ಓರೆ ಕೋರೆಗಳನ್ನು ತಿದ್ದುವವರು ನಿಜವಾದ ಸಮರ್ಥನೆಯ ಗುರುಗಳು. ಈ ಸಾಲಿನಲ್ಲಿ ಸಿಂದಗಿಯ ಸಾರಂಗಮಠದ ಡಾ.ಪ್ರಭುಸಾರಂಗದೇವರು ಸಮರ್ಥ ಗುರುಗಳಾಗಿದ್ದಾರೆ ಎಂದರು.



ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವಶಿವಾಚಾರ್ಯರು ಪಾವನ ಸಾನಿಧ್ಯ ವಹಿಸಿದ್ದರು. ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶ್ರೀಗಳು ಸಮ್ಮುಖ ವಹಿಸಿದ್ದರು. ಎಚ್.ಟಿ.ಕುಲಕರ್ಣಿ, ಶರಣಗೌಡ ಬಿರಾದಾರ, ವಿರೇಶ ಜೋಗುರ, ಮುಕ್ತಾಯಕ್ಕ ಕತ್ತಿ, ಬಿ.ಜಿ.ಮಠ, ಚೆನ್ನಪ್ಪ ಕತ್ತಿ, ನೀಲಾಂಬಿಕಾ ಕತ್ತಿ, ಅಶೋಕ ವಾರದ, ಜಿ.ಎಸ್.ಜಂಗಿನಮಠ. ಡಾ.ಶರಣಬಸವ ಜೋಗುರ. ಶಕುಂತಲಾ ಹಿರೇಮಠ. ಪೂಜಾ ಹಿರೇಮಠ ಸೇರಿದಂತೆ ಭಕ್ತರು ಇದ್ದರು.

ತಾಲೂಕು ಪದಾಧಿಕಾರಿಗಳ ನೇಮಕ

ಬಸವನಬಾಗೇವಾಡಿ: ವಿಜಯಪುರ ನಗರದ ಫ.ಗು.ಹಳಕಟ್ಟಿ ಸಭಾಭವನದಲ್ಲಿ ಭಾನುವಾರ ನಡೆದ ವಿಶ್ವ ಹಿಂದೂ ಪರಿಷತ್ತಿನ ವಿಜಯಪುರ ಜಿಲ್ಲೆಯ ವಿಶೇಷ ಜಿಲ್ಲಾ ಬೈಠಕ್ ನಡೆಯಿತು.

ಪ್ರಾಂತ ಉಪಾಧ್ಯಕ್ಷ ಗೋವರ್ಧನ ಜೀ ಹಾಗೂ ಕಾರ್ಯದರ್ಶಿ ಸಿದ್ದು ಹೂಗಾರ, ಧರ್ಮಚಾರ್ಯ ಜಿಲ್ಲಾ ಪ್ರಮುಖರಾದ ದಯಾನಂದ ಆದಿಗೊಂಡ ಬಸವನಬಾಗೇವಾಡಿ ಪ್ರಖಂಡದ ಅಧ್ಯಕ್ಷರಾದ ಮಹೇಶ ಸಾಲೋಡಗಿ, ಪ್ರಧಾನ ಕಾರ್ಯದರ್ಶಿ ಅಶ್ವಿನಕುಮಾರ ಪಟ್ಟಣಶೆಟ್ಟಿ ಇವರೆಲ್ಲರ ಸಮ್ಮುಖದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಕಾರ್ಯಕರ್ತರಿಗೆ ನೂತನ ಬಸವನಬಾಗೇವಾಡಿ ತಾಲೂಕಾ ಜವಾಬ್ದಾರಿಗಳನ್ನು ಘೋಷಣೆ ಮಾಡಿದರು.

ಬಸವನಬಾಗೇವಾಡಿ ತಾಲೂಕು ಧರ್ಮಚಾರ್ಯ ಪ್ರಮುಖರನ್ನಾಗಿ ಬಸವರಾಜ ಅಳ್ಳಗಿ, ಬಜರಂಗದಳ ಸಂಯೋಜಕರಾಗಿ ಶ್ರೀಶೈಲ ಗಂಗೂರಿ, ಸಹ ಸಂಯೋಜಕರಾಗಿ ಮಹಾದೇವ ತಳವಾರ, ಸತ್ಸಂಗ ಪ್ರಮುಖರಾಗಿ ದಿಗಂಬರೇಶ್ವರ ಔರಸಂಗ, ತಾಲೂಕು ಸಂಪರ್ಕ ಪ್ರಮುಖರಾಗಿ ವಿಷ್ಣುವರ್ಧನ, ಮಾರನಾಳ, ಧರ್ಮ ಪ್ರಸಾರ ಪ್ರಮುಖರಾಗಿ ಆನಂದ ಹೂಗಾರ, ಸಾಮಾಜಿಕ ಸಾಮರಸ್ಯ ಪ್ರಮುಖರಾಗಿ ನವೀನ ದೇವರಗುಡಿ ಅವರಿಗೆ ನೂತನ ಜವಾಬ್ದಾರಿ ಘೋಷಿಸಲಾಯಿತು. ವಿಶ್ವ ಹಿಂದೂ ಪರಿಷತ್ತಿನ ಜಿಲ್ಲಾ ಪ್ರಮುಖರು ವಿಭಾಗ ಪ್ರಮುಖರು ಪ್ರಾಂತ ಪ್ರಮುಖರು ಇದ್ದರು.



ಕಿರುಸುದ್ದಿ

ಗ್ರಾಮೀಣ ಕಲಾವಿದರಿಗೆ ಪ್ರೋತ್ಸಾಹ ಅಗತ್ಯ

•**ಹನುಮಸಾಗರ:** ಗ್ರಾಮೀಣ ಭಾಗಗಳಲ್ಲಿ ಪ್ರತಿಭಾವಂತ ಕಲಾವಿದರು ಎಲೆಮರೆ ಕಾಯಿಯಂತೆ ಉಳಿದಿದ್ದು ಇಂತಹ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹ ನೀಡುವುದು ಅಗತ್ಯವಾಗಿದೆ ಎಂದು ಸಿರಿಗನ್ನಡ ಪಾಠ ಶಾಲೆಯ ಅಧ್ಯಕ್ಷ ಗ್ಯಾನಪ್ಪ ತಳವಾರ ಹೇಳಿದರು. ಪಟ್ಟಣದ ಕನ್ನಡ ಸಾಹಿತ್ಯ ಭವನದಲ್ಲಿ ನುಲಿಯ ಚಂದಯ್ಯ ಕೊರಮ ಕಲಾವಿದರ ಸಂಘ ಹಾಗೂ ಕೊಪ್ಪಳ, ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ನಡೆದ ಪರಿಶಿಷ್ಟ ಜಾತಿ ಉಪಯೋಜನೆ ಸಂಸ್ಕೃತಿಕ ಧನಸಹಾಯ ಯೋಜನೆಯಡಿ ನಡೆದ ಸಾಂಸ್ಕೃತಿಕ ಸಂಭ್ರಮದಲ್ಲಿ ಮಾತನಾಡಿದರು. 'ಸರಕಾರ ಇನ್ನೂ ಹೆಚ್ಚಿನ ಅನುದಾನ ಒದಗಿಸಬೇಕು. ನಿರಂತರ ವೇದಿಕೆ ಕಲ್ಪಿಸಿ, ಗ್ರಾಮೀಣ ಕಲಾವಿದರ ಕಲೆಯನ್ನು ಪ್ರೋತ್ಸಾಹಿಸಬೇಕು' ಎಂದರು. ಸುಕುಮುನಿಯಪ್ಪ ಗುಮಗೇರಿ, ದೇವಪ್ಪ ಟೆಂಗುಂಟಿ ತಂಡದಿಂದ ಸುಗಮ ಸಂಗೀತ, ವೆಂಕಟೇಶ ಹೊಸಮನಿ ತಂಡದಿಂದ ಜನಪದ ಸಂಗೀತ, ತತ್ವಪದವನ್ನು ಗ್ಯಾನಪ್ಪ ತಳವಾರ ತಂಡ ಹಾಗೂ ಪ್ರಾರ್ಥನಾ ಗೀತೆಯನ್ನು ಸುಖಮುನಿ ಭಜಂತ್ರಿ ಪ್ರಸ್ತುತಪಡಿಸಿದರು. ಕಸಾಪ ಹೋಬಳಿ ಘಟಕದ ಅಧ್ಯಕ್ಷ ಮಂಜುನಾಥ ಗುಳೇದಗುಡ್ಡ, ಮುಖಂಡ ಚಂದಪ್ಪ ಸಂದಿಮನಿ, ಯಮನೂರಪ್ಪ ಚಿಮ್ಮಲಿಗಿ, ಮಂಗಳೇಶ ಹಿರೇಮನಿ, ಹೊನ್ನಪ್ಪ ಮತ್ತಿಕೊಪ್ಪ, ನುಲಿಯ ಚಂದಯ್ಯ ಕೊರಮ ಕಲಾವಿದರ ಸಂಘದ ಪ್ರಧಾನ ಕಾರ್ಯದರ್ಶಿ ದುರುಗಪ್ಪ ಭಜಂತ್ರಿ, ಪ್ರಕಾಶ ಭಜಂತ್ರಿ, ಮೇಘರಾಜ ಭಜಂತ್ರಿ, ಬಸವರಾಜ ಭಜಂತ್ರಿ, ಮರಿಸ್ವಾಮಿ ಗುಡುಗಲದಿನ್ನಿ ಇದ್ದರು.

ಋತುಚಕ್ರ ಸ್ನೇಹಿ ಗ್ರಾಮ ಜಾಗೃತಿ ಕಾರ್ಯಕ್ರಮ



•**ಮುನಿರಾಬಾದ್:** ಮಹಿಳೆಯ ಮುಟ್ಟಿನ ಆರೋಗ್ಯದ ಕುರಿತು ಕುಟುಂಬದಲ್ಲಿ ನಡೆಯುವ ಕೆಲ ತಪ್ಪು ಕಲ್ಪನೆಗಳು ಹಾಗೂ ಮೂಢನಂಬಿಕೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ರಕ್ತವಲ್ಲ ಜೀವನ ಚಕ್ರ ಎಂದು ಕೆಎಚ್‌ಪಿಟಿ ಕ್ಷೇತ್ರ ಸಂಯೋಜಕಿ ಲತಾ ಕಲ್ಲೇಶ ಹೇಳಿದರು. ಬಂಡಿಹರ್ಲಾಪುರ ಗ್ರಾಮ ಪಂಚಾಯಿತಿಯಲ್ಲಿ ಸೋಮವಾರ ಕರ್ನಾಟಕ ಆರೋಗ್ಯ ಸಂವರ್ಧನ ಸಂಸ್ಥೆಯ ಸ್ಫೂರ್ತಿ ಯೋಜನೆಯಡಿ ಹದಿಹರೆಯದ ಹೆಣ್ಣು ಮಕ್ಕಳಿಗಾಗಿ ಆಯೋಜಿಸಿದ್ದ ಋತುಚಕ್ರ ಸ್ನೇಹಿ ಗ್ರಾಮ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹೆಣ್ಣು ಮಕ್ಕಳಿಗೆ ಋತುಚಕ್ರದ ಚಲನವಿರುತ್ತದೆ. ಹೀಗಾಗಿ ಎಲ್ಲರೂ ಮುಜುಗುರವಿಲ್ಲದೇ ತಮ್ಮ ನೈಸರ್ಗಿಕ ಪ್ರಕ್ರಿಯೆ ಮುಟ್ಟಿನಿಂದಲೇ ಹುಟ್ಟು ಹೀಗಾಗಿ ಎಲ್ಲಾ ಮಹಿಳೆಯರು ಮುಟ್ಟು ಸಂದರ್ಭದಲ್ಲಿ ಬಹಳ ಸ್ವಚ್ಛತೆಯಿಂದ ಇರಬೇಕು. ನಿಮ್ಮ ಆರೋಗ್ಯದ ಸುರಕ್ಷತೆಗಾಗಿ ಮನೆಯಲ್ಲಿ ಮಹಿಳೆಯರು ಸಮತೋಲನದ ಪೌಷ್ಟಿಕ ಆಹಾರವನ್ನು ಸೇವಿಸಬೇಕು ಮುಟ್ಟು ಕಾಣಿಸಿಕೊಂಡ ಮಹಿಳೆಯರು ಸ್ವಚ್ಛತೆಯಿಂದ ಕಾಪಾಡಿಕೊಳ್ಳಬೇಕು. ಹಾಗೂ ನಿಮ್ಮ ಮುಟ್ಟಿನ ಬಗ್ಗೆ ಏನೇ ಸಮಸ್ಯೆ ಇದ್ದರೂ ಸಹ ಹತ್ತಿರ ಆರೋಗ್ಯ ಇಲಾಖೆಗೆ ಭೇಟಿ ನೀಡಬೇಕು' ಮುಜುಗುರ ಪಡಬಾರದು ಎಂದರು. ಪಿಡಿಒ ಅಶೋಕ್ ರಾಂಪುರ್ ಕಾರ್ಯದರ್ಶಿ ನಾಗಪ್ಪ ಕುರುಬರ, ಜಿಲ್ಲಾ ಸಮಾಲೋಚಕಿ ಬಸಮ್ಮ ಹುಡೆದ್ ಅಧ್ಯ ಸಮಾಲೋಚಕರಾದ ಕಲ್ಲಾನ ಕೆ., ಎಚ್‌ಪಿಟಿ ತಮ್ಮಣ್ಣ ಕ್ಷೇತ್ರ ಸಂಯೋಜಕಿ ಲತಾ ಕಲ್ಲೇಶ್ ಆರೋಗ್ಯ ಸಿಬ್ಬಂದಿ ಶ್ರೀದೇವಿ ಸಮುದಾಯ ಸಂಘಟಕಿ ಪುಷ್ಪ ತಾರಾಪತಿ ನಾಯಕ ಶಿಕ್ಷಕರಾದ ಪದ್ಮಾವತಿ, ಶರಣಪ್ಪ ಸುಂಕದ ಉಪನ್ಯಾಸಕಿ ವೇಲ್ಲಯಮ್ಮ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತರು, ಗ್ರಾಪಂ ಸಿಬ್ಬಂದಿ ಪ್ರಾಥಮಿಕ ಆರೋಗ್ಯ ಕೇಂದ್ರದ ದಾದಿಯರು ಮತ್ತು ಹದಿ ಹರೆಯದ ಹೆಣ್ಣು ಮಕ್ಕಳು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

•**ವಿಜಯನಗರ:** ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಸತಿ ರಹಿತ ಕಚ್ಚಾ ಮನೆ ಅಥವಾ ಖಾಲಿ ನಿವೇಶನ ಹೊಂದಿರುವ ಮತ್ತು ನಿವೇಶನ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯಕ್ಕಾಗಿ ಯೂನಿಫೈಡ್ ವೆಬ್ ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿದ್ದು, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಪಾನವಾದ ವಸತಿ ರಹಿತ, ನಿವೇಶನ ರಹಿತ ಅರ್ಹ ಫಲಾನುಭವಿಗಳು http://pmay-urbun.gov.in ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ಮನೋಹರ್ ತಿಳಿಸಿದ್ದಾರೆ.



ಕಲಬುರಗಿ: ನಗರಕ್ಕೆ ಆಗಮಿಸಿದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾದ ರಾಮದಾಸ್ ಅಠಾವಳೆ ಅವರನ್ನು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷರು ಹಾಗೂ ಕಲಬುರಗಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಅಂಬಾರಾಯ ಅಷ್ಟಗಿ ಭೇಟಿ ಮಾಡಿ ಸನ್ಮಾನಿಸಿ ಅಭಿನಂದಿಸಿದರು. ಭೀಮ್ ಆರ್ಮಿ ರಾಜ್ಯಾಧ್ಯಕ್ಷ ಎಸ್.ಎಸ್. ತವಡೆ, ಬಿಜೆಪಿ ಯುವ ಮೋರ್ಚಾ ಮುಖಂಡ ಶಿವ ಅಷ್ಟಗಿ, ದಲಿತ ಮುಖಂಡ ಪ್ರಕಾಶ್ ಅಷ್ಟಗಿ ಹಾಗೂ ನಿಜಗುಣಗೌಡ ಯಲಗೋಡ ಉಪಸ್ಥಿತರಿದ್ದರು.

ಪುಸ್ತಕ ವಿತರಿಸಿ ವಿದ್ಯಾರ್ಥಿಗಳಿಗೆ ಸ್ವಾಗತ

•**ಹನುಮಸಾಗರ:** ಹೊಸ ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ಹನುಮಸಾಗರ ಪಟ್ಟಣದ ಕೆಪಿಎಸ್‌ಸಿ ಶಾಲಾ ಆವರಣದಲ್ಲಿರುವ ಸರ್ಕಾರಿ ಬಾಲಕರ, ಬಾಲಕಿಯರ ಹಾಗೂ ಉರ್ದು ಪ್ರೌಢಶಾಲೆಗಳಲ್ಲಿ 'ಉತ್ತಮ ಶಿಕ್ಷಣ–ಉತ್ತಮ ಭವಿಷ್ಯ' ಎಂಬ ಧ್ಯೇಯವಾಕ್ಯದಡಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿ ಆತ್ಮೀಯ ಸ್ವಾಗತ ಕೋರಲಾಯಿತು.

ಪಟ್ಟಣದ ಮುಖಂಡ ವಿಶ್ವನಾಥ್ ನಾಗೂರು ಮಾತನಾಡಿ, ಶಿಕ್ಷಣವು ವ್ಯಕ್ತಿಯ ಬದುಕಿಗೆ ದಿಕ್ಕು ತೋರಿಸುವ ಶಕ್ತಿಯಾಗಿದ್ದು, ವಿದ್ಯಾರ್ಥಿಗಳು ಉತ್ತಮ ಶಿಕ್ಷಣದೊಂದಿಗೆ ನೈತಿಕ ಮೌಲ್ಯಗಳನ್ನೂ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಶ್ರದ್ಧೆ, ಪರಿಶ್ರಮ ಮತ್ತು ನಿರಂತರ ಅಧ್ಯಯನದ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವೆಂದರು.

ಕೆಪಿಎಸ್ ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಬಸವರಾಜ ದ್ಯಾವಣ್ಣವರ್ ಮಾತನಾಡಿ, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ಅತ್ಯಗತ್ಯವಾಗಿದೆ. ಪಾಲಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಅವರನ್ನು ನಿಯಮಿತವಾಗಿ ಶಾಲೆಗೆ ಕಳುಹಿಸಬೇಕು. ವಿದ್ಯಾರ್ಥಿಗಳು ಲಭಿಸಿರುವ ಶೈಕ್ಷಣಿಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ರುದ್ರಗೌಡ ಗೌಡಪ್ಪನವರ, ಎಸ್‌ಡಿಎಂಸಿ ಸದಸ್ಯರಾದ ಶರಣಪ್ಪ ಬೋದೂರ, ನಾಗರಾಜ ಹಕ್ಕಿ, ಮುಖ್ಯ ಶಿಕ್ಷಕ ಶರಣಪ್ಪ ಗುಳೇದ, ಎಚ್.ಎಚ್. ಇಳಕಲ್, ವಸಂತ ರಾಠೋರ, ಶಾಲೆಯ ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹನುಮಸಾಗರ: ಹೊಸ ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ಹನುಮಸಾಗರ ಪಟ್ಟಣದ ಕೆಪಿಎಸ್ ಶಾಲಾ ಆವರಣದಲ್ಲಿರುವ ಸರ್ಕಾರಿ ಬಾಲಕರ, ಬಾಲಕಿಯರ ಹಾಗೂ ಉರ್ದು ಪ್ರೌಢಶಾಲೆಗಳಲ್ಲಿ 'ಉತ್ತಮ ಶಿಕ್ಷಣ–ಉತ್ತಮ ಭವಿಷ್ಯ' ಎಂಬ ಧ್ಯೇಯವಾಕ್ಯದಡಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಿ ಆತ್ಮೀಯ ಸ್ವಾಗತ ಕೋರಲಾಯಿತು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ | ಡಿಸಿ ಸೂಚನೆ

ಬಿತ್ತನೆಗೆ ಸಿದ್ಧತೆ ಮಾಡಿಕೊಳ್ಳಿ

•**ಕಲಬುರಗಿ:** ಮುಂಗಾರು ಮಳೆ ಆರಂಭವಾಗುತ್ತಿದ್ದಂತೆಯೇ ಬಿತ್ತನೆ ಚಟುವಟಿಕೆಗಳು ಗರಿಗೆದರಲಿದ್ದು ಕೃಷಿ ಸಂಬಂಧಿತ ಇಲಾಖೆಗಳು ಎಲ್ಲಾ ರೀತಿಯ ಪೂರ್ವ ಸರ್ವ ಸಿದ್ಧತೆ ಮಾಡಿಟ್ಟುಕೊಳ್ಳಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಡಿಸಿ ಇಕ್ರಮ್ ಶರೀಫ್ ಸೂಚಿಸಿದರು.

ಮುಂಗಾರು ಮಳೆ ಅವಧಿಪೂರ್ವ ಸಿದ್ಧತೆ ಹಾಗೂ ಮುಂಜಾಗ್ರತಾ ಕ್ರಮಗಳ ಕುರಿತು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೂನ್ ಮಾಹೆಯಲ್ಲಿ ಸುರಿದ ಮಳೆಯಿಂದ ತೋಟಗಾರಿಕೆ ಇಲಾಖೆಯಿಂದ ಮಾತ್ರ 45 ಹೆಕ್ಟೇರ್ ಬೆಳೆ ಹಾನಿ ವರದಿ ಸಲ್ಲಿಸಿದ್ದು, ಕೃಷಿ ಇಲಾಖೆಯಿಂದ ಇನ್ನು ಸಲ್ಲಿಸಿಲ್ಲ, ಸಂಬಂಧಿಸಿದ ಅಧಿಕಾರಿಗಳು ಸರ್ವೆ ಮಾಡಿ ವರದಿ ಸಲ್ಲಿಸಬೇಕೆಂದರು.

ಜಿಲ್ಲೆಯಲ್ಲಿ 11,634 ಮೆಟ್ರಿಕ್ ಟನ್ ಯೂರಿಯಾ, 9,583 ಮೆಟ್ರಿಕ್ ಟನ್ ಡಿ.ಎ.ಪಿ, ಕಾಂಪ್ಲೆಕ್ಸ್ -13,990 ಮೆ.ಟನ್ ಸೇರಿದಂತೆ 38,351 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದ್ದು, ಈಗಾಗಲೆ ಇದರಲ್ಲಿ ಒಟ್ಟಾರೆ 5-6 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದೆ.



ಕಾಳಜಿ ಕೇಂದ್ರ ತೆರೆಯಿರಿ

ಪ್ರವಾಹ ಹೆಚ್ಚಾದಲ್ಲಿ ತಗ್ಗು ಪ್ರದೇಶದಲ್ಲಿರುವ ಜನವಸತಿ ಪ್ರದೇಶಗಳನ್ನು ಸ್ಥಳಾಂತರಿಸಬೇಕಾಗುತ್ತದೆ. ಹೀಗಾಗಿ ಕಾಳಜಿ ಕೇಂದ್ರ ಸಹ ಗುರುತಿಸಬೇಕು. ಮಳೆಯ ನಡುವೆಯೂ ಶುದ್ಧ ಕುಡಿಯುವ ನೀರು ಪೂರೈಕೆಯು ನಮ್ಮ ಆದ್ಯತೆಯಾಗಬೇಕು ಎಂದು ಜಿಪಂ ಸಿಇಒ ರಾಹುಲ್ ಸಂಕನೂರ್ ಹೇಳಿದರು.

ಇನ್ನು ಮಳೆಯಾಗಿಲ್ಲ, ಈಗಲೆ ಬಿತ್ತನೆ ಮಾಡುವುದು ಸರಿಯಲ್ಲ. ರೈತರಿಗೆ ಮಾಹಿತಿ ನೀಡಬೇಕು. ಜಿಲ್ಲೆಯಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಯಾವುದೇ ಕೊರತೆ ಇಲ್ಲ, ತಹಶೀಲ್ದಾರರು ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ರೈತಾಪಿ ಜನರಿಗೆ ಅರಿವು ಮೂಡಿಸಬೇಕು ಎಂದರು.

ಜಿಲ್ಲಾದ್ಯಂತ ಪ್ರವಾಹಕ್ಕೆ ತುತ್ತಾಗುವ ಸುಮಾರು 153 ಗ್ರಾಮಗಳನ್ನು ಗುರುತಿಸಲಾಗಿದೆ. ನೆರೆಯ ಮಹಾರಾಷ್ಟ್ರದ ಅಧಿಕಾರಿಗಳೊಂದಿಗೆ ಸತತ ಸಂಪರ್ಕ ಸಾಧಿಸಿ ಡ್ಯಾಂನಿಂದ ಕೆಳ ಹಂತದ ಪ್ರದೇಶಕ್ಕೆ ನೀರು ಬಿಡುಗಡೆ ಮುನ್ನವೆ ಮಾಹಿತಿ ಪಡೆದು ನದಿ ದಂಡೆಯ ಗ್ರಾಮಸ್ಥರಿಗೆ ಪ್ರಚುರಪಡಿಸಬೇಕು. ಡಂಗೂರ ಸಾರಬೇಕು. ಸಿಡಿಲಿನಿಂದ ಸಾವು ತಪ್ಪಿಸಲು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಯಾವುದೇ ಕಾರಣಕ್ಕೂ ಪ್ರವಾಹ, ಮಳೆಯಿಂದ ಮಾನವ ಮತ್ತು ಪ್ರಾಣಿ ಹಾನಿಯಾಗದಂತೆ ಎಚ್ಚರ ವಹಿಸಬೇಕೆಂದರು.

ಶಿಥಿಲಾವಸ್ಥೆಯಲ್ಲಿರುವ ಶಾಲಾ, ಅಂಗನವಾಡಿ, ಹಾಸ್ಟೆಲ್ ಕಟ್ಟಡಗಳನ್ನು ಕೂಡಲೆ ಗುರುತಿಸಿ ಸ್ಥಳಾಂತರಿಸಬೇಕು. ಮಳೆಯಿಂದ ಬೆಳೆ, ಆಸ್ತಿ-ಪಾಸ್ತಿ, ರಸ್ತೆ-ಸೇತುವೆ ಹಾನಿಯಾದಲ್ಲಿ 24 ಗಂಟೆ ಒಳಗೆ ಮಾಹಿತಿ ಸಲ್ಲಿಸಬೇಕು. ವಿಳಂಬಕ್ಕೆ ಇಲ್ಲಿ ಅವಕಾಶ ಇಲ್ಲ. ಮಳೆ ಹೆಚ್ಚಾದಲ್ಲಿ ಪ್ರವಾಹದಿಂದ ರಸ್ತೆ, ಸೇತುವೆ ಸಂಪರ್ಕ ಕಡಿತವಾಗುವ ಸಾಧ್ಯತೆ ಇರುತ್ತದೆ. ಈಗಲೆ ಪರ್ಯಾಯ ಸಾರಿಗೆ ಸಂಪರ್ಕ ಗುರುತಿಸಬೇಕು ಎಂದು ತಿಳಿಸಿದರು.

ಮಳೆಗಾಲದಲ್ಲಿ ಸಹಜವಾಗಿ ಹಾವು ಕಚ್ಚಿ ಸಾವನಪ್ಪುವವರ ಸಂಖ್ಯೆ ನೋಡುತ್ತೇವೆ. ಇದನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಪಿ.ಎಚ್.ಸಿ. ಸಿ.ಎಚ್.ಸಿ. ಆಸ್ಪತ್ರೆಗಳಲ್ಲಿ ಎಂಟಿವೇನೋಮ್ ಡೋಸ್ ದಾಸ್ತಾನು ಇರುವಂತೆ ಡಿ.ಎಚ್.ಓ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಡಿ.ಸಿ. ಇಕ್ರಮ್ ಶರೀಫ್ ನಿರ್ದೇಶನ ನೀಡಿದರು.

ಡಿಸಿಪಿ ಶಾಲೂ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತ ಸಾಹಿತ್ಯ ಆಲದಕಟ್ಟಿ ಸೇರಿದಂತೆ ಜಿಲ್ಲಾ ಮಟ್ಟದ ಇತರರಿದ್ದರು.

ಪ್ರತಿ ಮನೆಯಲ್ಲೂ ಇರಲಿ ಪುಸ್ತಕ ಕೋಣೆ

•**ಕೊಪ್ಪಳ:** ನಮ್ಮೆಲ್ಲರ ಮನೆಯಲ್ಲಿ ಭಕ್ತಿಗಾಗಿ ದೇವರ ಕೋಣೆ ಇರುವಂತೆ, ಪುಸ್ತಕಕ್ಕೂ ಮೀಸಲು ಜಾಗ ಇರಲಿ, ಪುಸ್ತಕ ಕೋಣೆ ಇರಲಿ ಎಂದು ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಡಾ.ಮಾನಸ ಅವರು ಸಲಹೆ ಮಾಡಿದರು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕನ್ನಡ ಪುಸ್ತಕ ಪ್ರಾಧಿಕಾರದಿಂದ ನಗರದ ಎನ್.ಜಿ.ಒ ಕಾಲೋನಿಯಲ್ಲಿನ ಲೇಖಕರು ಹಾಗೂ ರಂಗಕರ್ಮಿಗಳಾದ ನಾಗರಾಜನಾಯಕ ಡಿ. ಡೊಳ್ಳಿನ ಅವರ ಅಪ್ಪಾಜಿ ನಿಲಯದ ಮನೆಯಲ್ಲಿ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮವನ್ನು ಜೂನ್ 2ರಂದು ವಿಧ್ಯುಕ್ತವಾಗಿ ಉದ್ಘಾಟಿಸಿ ಪುಸ್ತಕ ಪ್ರದರ್ಶನಕ್ಕೆ ದೀಪ ಬೆಳಗಿಸಿ ಬಳಿಕ ಅವರು ಮಾತನಾಡಿದರು.

ಪ್ರತಿಯೊಬ್ಬರ ಮನೆಯಲ್ಲೂ ಪುಸ್ತಕಗಳಿರಬೇಕು ಎಂಬುದು ಭಾರತ ಭಾಗ್ಯವಿಧಾತ ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸು. ಓದು ಮನುಷ್ಯನನ್ನು ಪ್ರಜ್ಞಾವಂತನನ್ನಾಗಿಸುತ್ತದೆ. ಸಮಾಜದಲ್ಲಿ ಉತ್ತಮ ನಾಗರಿಕರಾಗಲು ಓದು ತುಂಬಾ ಸಹಕಾರಿಯಾಗಲಿದೆ. ಇಂದಿನ ಒತ್ತಡದ ಬದುಕಿನಲ್ಲಿ ಓದು ಮಾತ್ರ ನಮ್ಮನ್ನು ಶಾಂತವಾಗಿರುವಂತೆ ಮಾಡುತ್ತದೆ. ಪುಸ್ತಕಗಳು ಉತ್ತಮ ಸ್ನೇಹಿತರಿದ್ದಂತೆ. ಓದು ಮತ್ತು ಲೇಖಕ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ವರೆಗೂ ಲೇಖಕನಿಗೆ ಸಿಕ್ಕ ಗೌರವ ಓದುಗನಿಗೆ ಸಿಗುತ್ತಿರಲಿಲ್ಲ, ಇದನ್ನರಿತು ಕನ್ನಡ ಪುಸ್ತಕ ಪ್ರಾಧಿಕಾರವು ಓದುಗ ಪ್ರತಿ ಮನೆಯಲ್ಲೂ ಇರಲಿ ಎನ್ನುವ ಆಶಯದೊಂದಿಗೆ ಈ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಶಿಕ್ಷಕರಾದ ಶಿವಪ್ಪ, ಉಪನ್ಯಾಸಕರಾದ ನಿಂಗಪ್ಪ ಕಂಬಳಿ, ಮುಖ್ಯೋಪಾಧ್ಯಾಪಕರು ವಿಠಲಕೃಷ್ಣ?ಮೇ, ಮಾರುತಿ ಕಟ್ಟಿಮನಿ ಗೆಳೆಯರ ಬಳಗ ಗುಡಿ ಗ್ರಂಥಾಲಯ ನಿರ್ಮಾಣ ಮಾಡಿದ್ದಕ್ಕಾಗಿ ಈ ಬಾರಿ ಮನೆಗೆ ತೆರಳಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಗೌರವಿಸಿ ಸನ್ಮಾನಿಸಲಾಯಿತು.

ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಸಂಚಾಲಕ ಜಿ.ಎಸ್.ಗೋನಾಳ, ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಸದಸ್ಯರಾದ ಸಾವಿತ್ರಿ ಮುಜುಂದಾರ, ಫಕೀರಪ್ಪ ವಜ್ರಬಂಡಿ, ನಿವೃತ್ತ ಉಪನ್ಯಾಸಕರಾದ ಎಸ್.ಎ.ರಜಪೂತ, ಉಪಪ್ರಾಂಶುಪಾಲರಾದ ಮಂಜುನಾಥ ಚಿತ್ರಗಾರ ಮತ್ತಿತರರಿದ್ದರು.



ಶಿಕ್ಷಣ ಮಕ್ಕಳ ಜೀವನದ ಯಶಸ್ಸಿನ ಮೆಟ್ಟಿಲು

•**ಕುಷ್ಟಗಿ:** ಸರ್ಕಾರಿ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುತ್ತಿದ್ದು, ಪ್ರತಿಯೊಬ್ಬ ವಿದ್ಯಾರ್ಥಿ ಶಿಸ್ತು, ಪರಿಶ್ರಮ ಮತ್ತು ಗುರಿಯೊಂದಿಗೆ ವಿದ್ಯಾಭ್ಯಾಸ ಮಾಡಬೇಕು ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ತಾಲೂಕಿನ ಟೆಂಗುಂಟಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣವು ಮಕ್ಕಳ ಜೀವನದ ಯಶಸ್ಸಿನ ಮೆಟ್ಟಿಲಾಗಿದ್ದು ಶ್ರದ್ಧೆಯಿಂದ ಕಲಿಯಬೇಕು ಎಂದರು.

ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಿ ಶಾಲೆಗೆ ಬೇಕಾಗಿರುವ ಕೊಠಡಿಗಳು, ಪೀಠೋಪಕರಣಗಳು ಕೊಡುತ್ತಿದ್ದು ಶಿಕ್ಷಕರ ನೇಮಕಾತಿ ಮಾತ್ರ ಮಾಡುತ್ತಿಲ್ಲ ಈ ನೇಮಕಾತಿ ವಿಳಂಬದ ಸಲುವಾಗಿ ಕಲ್ಯಾಣ ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿಯಲು ಕಾರಣವಾಗಿದ್ದು ನಾವು ಸಹಿತ ಶಿಕ್ಷಕರ ನೇಮಕಾತಿಗಾಗಿ ಬಹಳಷ್ಟು ಒತ್ತಾಯ ಮಾಡಿದ್ದೇವೆ ಎಂದರು.

ಬಿಇಒ ಉಮಾದೇವಿ ಬಸಾಪುರು ಮಾತನಾಡಿ, ಶಾಲಾ ಆರಂಭೋತ್ಸವವು ಮಕ್ಕಳಲ್ಲಿ ಹೊಸ ಉತ್ಸಾಹ ಮೂಡಿಸುವ ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳು ನಿಯಮಿತವಾಗಿ ಶಾಲೆಗೆ ಹಾಜರಾಗುವ ಮೂಲಕ ಉತ್ತಮ ಶಿಕ್ಷಣ ಪಡೆಯಬೇಕು. ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಶಂಕ್ರಮ್ಮ ಭಾಗಪ್ಪ ತಳವಾರ ದೈಹಿಕ ಪರಿವೀಕ್ಷಕ ನಾಗಪ್ಪ ಬಿಳಿಯಪ್ಪನವರ, ಸಂಪನ್ಮೂಲ ಶಿಕ್ಷಕ ಸೋಮಲಿಂಗಪ್ಪ ಗುರಿಕಾರ, ಸಂಗನಗೌಡ ಜೈನರ ಹಾಗೂ ಭೀಮಪ್ಪಯ್ಯ ತಾಳವರ, ಗ್ಯಾನಪ್ಪಯ್ಯ ತಾಳವರ, ಶರಣಗೌಡ ಪಾಟೀಲ, ಹೊಳೆಯಪ್ಪ ಆಡೀನ, ಬಸವರಾಜ ಕೌದಿ, ಶರಣಪ್ಪ ಕೌದಿ, ಹನಮಂತಪ್ಪ ಮಾದರ ಸೇರಿದಂತೆ ಶಾಲಾ ಸುಧಾರಣ ಸಮಿತಿಯ ಸದಸ್ಯರು, ಗ್ರಾಮಸ್ಥರು ಶಾಲಾ ಶಿಕ್ಷಕ ಶಿಕ್ಷಕಿಯರು, ವಿದ್ಯಾರ್ಥಿಗಳು ಇದ್ದರು. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತಿ ಶಿಕ್ಷಕ ಮಹಾಲಿಂಗಯ್ಯ ಹಿರೇಮಠ ಅವರ ಬೀಳ್ಕೊಡುಗೆ ಸಮಾರಂಭ ನಡೆಸಲಾಯಿತು. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಶಾಲಾ ಸಿಬ್ಬಂದಿ, ಶಿಕ್ಷಕರು, ಪಾಲಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಡಿ.ಟಿ.ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲು ಯಾದವ್ ಸಮಾಜ ಒತ್ತಾಯ

•**ಕುಷ್ಟಗಿ:** ವಿಧಾನ ಪರಿಷತ್ ಸದಸ್ಯರೂ ಹಾಗೂ ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಡಿ.ಟಿ.ಶ್ರೀನಿವಾಸ್ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಯಾದವ ಸಮಾಜದ ಮುಖಂಡರು ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯದಲ್ಲಿ ಯಾದವ (ಗೊಲ್ಲ) ಸಮುದಾಯವು ಸುಮಾರು 19.00 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದ್ದು, ರಾಜಕೀಯವಾಗಿ ಪ್ರಾತಿನಿಧ್ಯ ಇಲ್ಲದಂತಾಗಿದೆ. ಕರ್ನಾಟಕದ ಯಾದವ ಸಮುದಾಯದ ಧೀಮಂತ ನಾಯಕರಾದ ದಿ. ಎ.ಕೃಷ್ಣಪ್ಪ ರವರ ನಂತರ ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘದ ನೇತೃತ್ವವನ್ನು ಡಿ.ಟಿ.ಶ್ರೀನಿವಾಸ್ ಅವರು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಮೂಲಕ ಆಯ್ಕೆಯಾಗಿ ಮುನ್ನಡೆಸುತ್ತಿದ್ದಾರೆ.

ಡಿ.ಟಿ.ಶ್ರೀನಿವಾಸರವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅವರ ನೇತೃತ್ವದಲ್ಲಿ ತುಮಕೂರು, ಚಿತ್ರದುರ್ಗ, ಚಿಕ್ಕೋಡಿಗಳಲ್ಲಿ ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಮಾವೇಶಗಳನ್ನು ಮಾಡಿ ಸಮಾಜವನ್ನು ಸಂಘಟನೆ ಮಾಡಿರುತ್ತಾರೆ. 2024 ರಲ್ಲಿ ನಡೆದ ಕರ್ನಾಟಕ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಇರುವರೆವಿಗೂ ಕಾಂಗ್ರೆಸ್ ಪಕ್ಷವು ಜಯಸಾಧಿಸದೇ ಇದ್ದು, ಇವರು ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಡಿ.ಟಿ.ಶ್ರೀನಿವಾಸ ಅವರು ಅನೇಕ ಪದವಿಗಳನ್ನು ಪಡೆದು ಶಿಕ್ಷಣ ತಜ್ಞರಾಗಿದ್ದಾರೆ. ಅನೇಕ ಚುನಾವಣೆಗಳಲ್ಲಿ ತಮ್ಮ ಚಾಣಾಕ್ಷ ತಂತ್ರಗಳಿಂದ ಯಶಸ್ಸು ಸಾಧಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಹಿಂದುಳಿದ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿ ಸುಮಾರು 95ಕ್ಕೂ ಹೆಚ್ಚು ಅತಿ ಹಿಂದುಳಿದ ಸಮಾಜಗಳನ್ನು ಸಂಘಟಿಸಿ ಅವರನ್ನು ಮುನ್ನೆಲೆಗೆ ತರಲು ಶ್ರಮಿಸುತ್ತಿದ್ದಾರೆ. ಆದ್ದರಿಂದ ಡಿ.ಟಿ.ಶ್ರೀನಿವಾಸ ರವರನ್ನು ಕರ್ನಾಟಕ ರಾಜ್ಯದ ಸಚಿವ ಸಂಪುಟ ವಿಸ್ತರಣೆಯಲ್ಲಿ ಹಿಂದುಳಿದ ಸಮಾಜಗಳ ಪ್ರತಿನಿಧಿಯಾಗಿ ಸಚಿವ ಸ್ಥಾನ ನೀಡುವಂತೆ ಯಾದವ ಸಮಾಜದಿಂದ ಒತ್ತಾಯಿಸಿದರು.

ಸಮಾಜದ ಪ್ರಮುಖರಾದ ಯಮನೂರಪ್ಪ, ಶಿವಪ್ಪ ಮಿರ್ಜಿ, ಶರಣಪ್ಪ ಗೊಲ್ಲರ, ದುರ್ಗಪ್ಪ ಗೊಲ್ಲರ, ನಾಗರಾಜ ಯಾದವ್, ಉಮೇಶ, ಹನುಮಗೌಡ ಕಟ್ಟಿ ಗಿಡ್ಡಪ್ಪ ಚಂದ್ರು ಅಡವಿಬಾವಿ, ದುರುಗೇಶ ಬಣ್ಣದ ಇತರರಿದ್ದರು.

ದೇವರಾಜ ಗಡಾದಗೆ ಬೀಳ್ಕೊಡುಗೆ

•**ಮುನಿರಾಬಾದ್:** ಶಿವಪುರ ಸಮೀಪದ ಬೋರುಕಾ ವಿದ್ಯುತ್ ನಿಗಮ ಕಂಪನಿಯಲ್ಲಿ ಮೆಕಾನಿಕಲ್ ಹೆಲ್ಪರ್ ಆಗಿ ಸತತ 36 ವರ್ಷಗಳಿಂದ ಸೇವೆ ಸಲ್ಲಿಸಿ ನಿವೃತ್ತರಾದ ಅಗಳಕೇರಾ ಗ್ರಾಮದ ದೇವರಾಜ ಗಡಾದ ರವರಿಗೆ ಭಾನುವಾರ ಬೋರುಕ ವಿದ್ಯುತ್ ನಿಗಮದಲ್ಲಿ ವಯೋ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.

ಕುಟುಂಬಸ್ಥರು, ಗೆಳೆಯರು, ಸಹಪಾಠಿಗಳು ಪದಾಧಿಕಾರಿಗಳು ಪ್ರತ್ಯೇಕವಾಗಿ ಸನ್ಮಾನಿಸಿ ನೆನಪಿನ ಕಾಣಿಕೆ ನೀಡುವ ಮೂಲಕ ಗೌರವಿಸಿದರು.

ಇವರು ಮೂಲತಃ ಕೊಪ್ಪಳ ತಾಲೂಕಿನ ಅಗಳಕೇರಾ ಗ್ರಾಮದವರಾಗಿದ್ದು ಬೋರುಕಾ ವಿದ್ಯುತ್ ನಿಗಮದಲ್ಲಿ 1990 ಜೂನ್ ತಿಂಗಳಲ್ಲಿ ಸೆಕ್ಯೂರಿಟಿ ಗಾರ್ಡಾಗಿ ಸೇವೆ ಸೇರಿಕೊಂಡು 1996ರಲ್ಲಿ ಸ್ಟೋರ್ ಹೆಲ್ಪರ್ ಆಗಿ ,2000 ಇಸ್ವಿಯಲ್ಲಿ ಮೆಕಾನಿಕಲ್ ಹೆಲ್ಪರ್ ಆಗಿ ಸತತವಾಗಿ ಒಂದೇ ಕಂಪನಿಯಲ್ಲಿ 36 ವರ್ಷ ಸೇವೆ ಸಲ್ಲಿಸಿ ಜೂ.1ರಂದು ನಿವೃತ್ತಿ ಜೀವನಕ್ಕೆ ಕಾಲಿಟ್ಟರು. ಇವರು ಅವ್ವಾಸಿ ನಿರೂಪಕರಾಗಿ, ರಂಗಭೂಮಿ ಕಲಾವಿದರಾಗಿ ಯುವಕ ಮಂಡಳಿ ಸದಸ್ಯರಾಗಿ ಗ್ರಾಮದ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಕ್ಕೆ ತಮ್ಮದೇ ಆದಂತಹ ಛಾಪನ್ನು ಮೂಡಿಸಿದ್ದಾರೆ ಎಂದು ಗೆಳೆಯ ಮೋಹನ್ ಹೇಳುತ್ತಾರೆ.



ಬೋರುಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿ ವ್ಯವಸ್ಥಾಪಕ ರಾಜಶೇಖರ್, ಘಟಕ ವ್ಯವಸ್ಥಾಪಕ, ಶಿವಮೂರ್ತಪ್ಪ, ಎಚ್.ಆರ್.ಶ್ರೀನಿವಾಸಪ್ಪ, ವಿಜಯ್ ಜೋಶಿ, ವಾಸುದೇಂದ್ರ ಮಂಜುನಾಥ್, ಎಚ್.ಎಂ.ಪಾಲಗರ್ ಮಲ್ಲಿಕಾರ್ಜುನ್ ಸೇರಿದಂತೆ ಗೆಳೆಯರು ಕುಟುಂಬಸ್ಥರು ಸನ್ಮಾನಿಸಿ ಬೀಳ್ಕೊಡಲಾಯಿತು.

ಸರ್ಕಾರಿ ಶಾಲೆಗಳು ನಮ್ಮ ಅಸ್ಮಿತೆ: ಅನಿಲ್‌ಕುಮಾರ್

•**ಕುಕನೂರ:** ಸರ್ಕಾರಿ ಶಾಲೆ ಎಂದರೆ ನಿರ್ಲಕ್ಷ್ಯ ಮತ್ತು ಕೀಳರಿಮೆ ಭಾವನೆ ಪಾಲಕ ಹಾಗೂ ಪೋಷಕರಲ್ಲಿ ಮೂಡುತ್ತಿದ್ದು, ಅವುಗಳ ಅಸ್ತಿತ್ವ ಕಡಿಮೆ ಆಗುತ್ತಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಇರುವ ಮೂಲ ಸೌಕರ್ಯ, ಗುಣಮಟ್ಟದ ಶಿಕ್ಷಣ, ಬೇರೆ ಯಾವ ಶಾಲೆಯಲ್ಲಿ ದೊರಕುವುದಿಲ್ಲ ಅವುಗಳ ಉಳಿವು ನಮ್ಮ ದೊಡ್ಡ ಜವಾಬ್ದಾರಿಯಾಗಿದೆ. ಸರ್ಕಾರಿ ಶಾಲೆಗಳು ನಮ್ಮ ಅಸ್ಮಿತೆಯಾಗಿವೆ ಎಂದು ಕರ್ನಾಟಕ ಪಬ್ಲಿಕ್ ಶಾಲೆಯ ಅಧ್ಯಕ್ಷ ಅನಿಲ್‌ಕುಮಾರ್ ಎಂ.ಕಲ್ಲಾಪಿ ಹೇಳಿದರು.

ತಾಲೂಕಿನ ಮಂಗಳೂರ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ವಿದ್ಯಾಪ್ರವೇಶ ಶಾಲಾ ಪ್ರಾರಂಭೋತ್ಸವ ಹಾಗೂ ವಿದ್ಯಾರ್ಥಿ ಪಾಲಕರ ಮಹಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ನುರಿತ ಬೋಧಕ ಸಿಬ್ಬಂದಿ, ಕಂಪ್ಯೂಟರ್ ಶಿಕ್ಷಣ, ಹಾಲು ಮೊಟ್ಟೆ ಇತರೆ ಪೌಷ್ಟಿಕ ಆಹಾರಗಳ ಸೌಲಭ್ಯಗಳಿದ್ದು ಶಿಕ್ಷಣದ ಜೊತೆಗೆ ಮಕ್ಕಳ ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದೆ. ಹೆಚ್ಚು ಸಂಖ್ಯೆಯಲ್ಲಿ ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಎಂದು ಹೇಳಿದರು. ಪಿಡಿಒ ನೀಲಂ ಚಳಗೇರಿ, ಕೆಪಿಎಸ್ ಪ್ರಾಂಶು ಪಾಲರಾದ ಗೋಪಾಲಯ್ಯ ಟಿ., ಪ್ರೌಢ ಶಾಲೆಯ ಉಪಪ್ರಾಂಶುಪಾಲ ಹನಮಂತಪ್ಪ ಅವಾರದಮನಿ, ವ್ಯಂಖ್ಯೋಪಾಧ್ಯಯರಾದ ಶಕುಂತಲಾ ಪಾಟೀಲ, ಶಿಕ್ಷಕ ಹಾವೇರ ಕಲ್ಲಾಪಿ ಮಾತನಾಡಿದರು.

ನಂತರ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಹಾಗೂ ಪಾಲಕ ಪೋಷಕರಿಗೆ ಸಿಹಿಯೂಟದ ವ್ಯವಸ್ಥೆ ಮಾಡಲಾಗಿತ್ತು. ಎಸ್‌ಡಿಎಂಸಿ ನ್ಯಾಯ ಸಮಿತಿ ಅಧ್ಯಕ್ಷ ಸಿದ್ದಪ್ಪ ಬಳಗಾರ, ನಾಮ ನಿರ್ದೇಶಿತ ಸದಸ್ಯ ಮೈಲಾರಗೌಡ ಕಂದಗಲ್, ಸದಸ್ಯರಾದ ಪಾಲಾಕ್ಷಗೌಡ ಕೀರ್ತಿಗೌಡ್ರ, ಶರಣಪ್ಪ ಹ್ಯಾಟಿ, ನೀಲಮ್ಮ ನಿಂಗಾಪುರ, ಶ್ರೀದೇವಿ ನಿಂಗಾಪುರ, ಶಿಕ್ಷಕರಾದ ಸೋಮಪ್ಪ ನಾಯಕ್, ಆನಂದ ಚನ್ನೂರ್, ಬಾಬುಸಾಬ ಗುಡಿಹಿಂದಲ್, ಲಕ್ಷ್ಮೀದೇವಿ, ಶಾಂತಾಮಣಿ, ಶ್ರೀದೇವಿ, ಜಯಶ್ರೀ ಬಂಡಿಹಾಳ್, ಪೋಷಕರಾದ ಸಿದ್ದಪ್ಪ ಕೀರ್ತಿಗೌಡ್ರ, ಶಂಕ್ರಪ್ಪ ಉಳ್ಳಾಗಡ್ಡಿ, ಈರಣ್ಣ ಉಮಚಗಿ ಇತರರಿದ್ದರು.



ಪತ್ರಿಕಾ ಭವನ ನಿರ್ಮಾಣಕ್ಕೆ ಸಿಎ ಸೈಟ್ ಮಂಜೂರಾತಿಗೆ ಮನವಿ

ಮಾನ್ವಿ: ಪಟ್ಟಣದ ನಗರಯೋಜನಾ ಪ್ರಾಧಿಕಾರದ ಕಚೇರಿಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮಾನ್ವಿ ತಾಲೂಕು ಘಟಕದಿಂದ ನಗರಯೋಜನಾ ಪ್ರಾಧಿಕಾರದ ಅಧ್ಯಕ್ಷರಿಗೆ ಕಚೇರಿಯ ಸಿಬ್ಬಂದಿ ಗುಲಾಂ ಗೌಸ್ ರವರ ಮೂಲಕ ಕಸಿಪ ಸಂಘದ ತಾಲೂಕು ಅಧ್ಯಕ್ಷರಾದ ಅಶೋಕ ತಡಕಲ್ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಪಟ್ಟಣದಲ್ಲಿ ಪತ್ರಕರ್ತರಿಗೆ ಸಾರ್ವಜನಿಕ ಕೆಲಸಗಳಿಗಾಗಿ ಹಾಗೂ ಸುದ್ದಿಗೋಷ್ಠಿ ಸೇರಿದಂತೆ ಅಗತ್ಯ ಕೆಲಸಗಳನ್ನು ನಿರ್ವಹಿಸುವುದಕ್ಕೆ ಪತ್ರಿಕಾ ಭವನ ಅವಶ್ಯಕವಿರುವುದರಿಂದ ಪಟ್ಟಣದ ವಿವಿಧ ಅನುಮೋದಿತ ಬಡಾವಣೆಗಳಲ್ಲಿ ಲಭ್ಯವಿರುವ ಸಿ.ಎ.ಸೈಟ್ ಅನ್ನು ಪತ್ರಿಕಾ ಭವನ ನಿರ್ಮಾಣಕ್ಕೆ ಮಂಜೂರು ಮಾಡುವಂತೆ ಒತ್ತಾಯಿಸಿದರು.

ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ತಾಯಪ್ಪ ಬಿ.ಹೊಸೂರು, ಪ್ರಧಾನ ಕಾರ್ಯದರ್ಶಿ ರವಿಕಿಲ್ಲಾಳ್ ಸೇರಿದಂತೆ ವಿಜಯಕುಮಾರ,ಗಯಾಸ್, ನವೀನ್‌ಕುಮಾರ, ರಾಜಶೇಖರ, ಶ್ರೀನಿವಾಸರೆಡ್ಡಿ, ಸಿದ್ಧಾರಾಮಯ್ಯಸ್ವಾಮಿ, ದೇವರಾಜ, ಹುಸೇನಪ್ಪ ನಂದಿಹಾಳ್,ಗಿರಿಯಪ್ಪ, ರಾಜಶೇಖರಸ್ವಾಮಿ, ರಾಜಶೇಖರ್,ನಾಗರಾಜ ತಡಕಲ್,ಬಸವರಾಜ ತಡಕಲ್, ಮೈನುದಿನ್ನ್, ಚಂದ್ರಶೇಖರ್, ಶಿವುಸಜ್ಜನ್, ಜಿತೇಂದ್ರಸ್ವಾಮಿ ಇದ್ದರು.



ಸಂಗೀತದಲ್ಲಿ ಅಗಾಧ ಶಕ್ತಿ ಅಡಕ: ಕರ್ಣಕುಮಾರ

•**ಯಲಬುರ್ಗಾ:** ಸಂಗೀತಕ್ಕೆ ಇರುವ ಶಕ್ತಿ ಅಗಾಧ ಸಂಗೀತ ಕೇವಲ ಕೇಳುಗರ ಮನಸ್ಸಿಗೆ ಮುದ ನೀಡುವುದಷ್ಟೇ ಅಲ್ಲ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ದೈಹಿಕ ಹಾಗೂ ಭಾವನಾತ್ಮಕ ನೋವುಗಳನ್ನು ಉಪಶಮನ ಮಾಡುವ ಅದ್ಭುತ ಶಕ್ತಿಯನ್ನು ಹೊಂದಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಹೇಳಿದರು.

ತಾಲೂಕಿನ ಬೇವೂರು ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಕಾಲೋನಿಯಲ್ಲಿ ಮಂಗಳವಾರ ಕುಷ್ಟಗಿಯ ಸ್ವರಸಾಮ್ರಾಟ ಸಂಗೀತ ಹಾಗೂ ಸಾಂಸ್ಕೃತಿಕ ಕಲಾ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 2025-26ನೇ ಸಾಲಿನ ಸಂಘ ಸಂಸ್ಥೆಗಳ ಧನಸಹಾಯ ಸಾಮಾನ್ಯ ವರ್ಗದ ಯೋಜನೆಯಡಿ ಆಯೋಜಿಸಿದ್ದ ಸಪ್ತಸ್ವರಗಳ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರವು ಸಂಗೀತ ಕಲೆಗಳ ಉಳಿವಿಗೆ ಮತ್ತು ಕಲಾವಿದರ ಪ್ರೋತ್ಸಾಹಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಿದೆ ಎಂದರು.

ಭಾರತದ ಸಂಸ್ಕೃತಿ ಪ್ರಪಂಚದ ಪ್ರತಿಯೊಂದು ದೇಶದ ಸಂಸ್ಕೃತಿ ಗಿಂತ ಶ್ರೇಷ್ಠತೆ ಹೊಂದಿದೆ.ಸಂಗೀತ ಗಾಯನ ಮೂಲಕ ಮನುಷ್ಯನಿಗೆ ಬರುವ ಬಂದಿರುವ ಮಾರಣಾಂತಿಕ ಕಾಯಿಲೆಗಳನ್ನು ದೂರ ಮಾಡುವ ಮತ್ತು ನಿವಾರಿಸಲಾಗಿದೆ.ಸಂಗೀತವನ್ನು ಆಲಿಸುವುದರಿಂದ ಹಾಗೂ ಹಾಡುವುದರಿಂದ ದೇಹದ ಚೈತನ್ಯ ಶಕ್ತಿ ವೃದ್ಧಿಸುತ್ತದೆ. ಆಸಕ್ತಿಯಿಂದ ಸಂಗೀತ ಹೇಮಾರಿರುವವರು ಯಾವಾಗಲೂ ಸುಖಿಗಳಾಗುತ್ತಾರೆ ಎಂದು ಹೇಳಿದರು.



ವಾಲ್ಮೀಕಿ ಸಮುದಾಯದ ಮುಖಂಡ ದ್ಯಾಮಣ್ಣ ಪೂಜಾರ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಮಾತನಾಡಿದರು. ಬಿಜೆಪಿ ಯುವ ಮುಖಂಡ ಸಿದ್ದು ಕೆ.ಮಣ್ಣನವರ ಅಧ್ಯಕ್ಷತೆ ವಹಿಸಿ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕಲೆ, ಜನಪದ ಸಾಹಿತ್ಯ ಮತ್ತು ರಂಗಭೂಮಿ ಕಲೆ ಉಳಿಸಿ ಬೆಳೆಸುವಲ್ಲಿ ಅನೇಕ ಸಂಘ ಸಂಸ್ಥೆಗಳ ಪಾತ್ರ ಎಂದೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಜನಪದ ಸಂಗೀತ ದೇವೇಂದ್ರಗೌಡ ಪೂಜಾರ, ತತ್ವಪದ ಶೇಖರಗೌಡ ಪೂಜಾರ, ವಚನ ಸಂಗೀತ ಬಸವರಾಜ ಮಹಾಂತ, ಸುಗಮ ಸಂಗೀತ ವೀರೇಶ ಬೇವೂರ, ತಬಲಾ ಶಿವಮೂರ್ತಿ ದೊಡ್ಡನಿ, ಹಾರ್ಮೋನಿಯಂ ಮೌನೇಶ ಚನ್ನದಾಸರ ಸಂಗೀತ ಪ್ರಸ್ತುತಪಡಿಸಿದರು.

ಕಿರುಸುದ್ದಿ

ಆರೋಗ್ಯ ಅರಿವು ಕಾರ್ಯಕ್ರಮ



ಹೂವಿನಹಡಗಲಿ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಶಿಷ್ಟಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ತಾಪಂ ಸಭಾಂಗಣದಲ್ಲಿ ತಾಪಂ ಅಧಿಕಾರಿಗಳು, ಸಿಬ್ಬಂದಿ, ಎಂ,ವಿ,ಯುಆರ್ ಡಬ್ಲ್ಯೂ, ನರೇಗಾ ಯೋಜನೆ ಹಾಗೂ ಎನ್‌ಆರ್‌ಎಲ್ ಎಂನ ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಯಿತು.

ತಾಪಂ ಇಒ ಜಿ.ಪರಮೇಶ್ವರ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಯೋಜನಾಧಿಕಾರಿ ಬಿ.ಯಾಸಿನ್, ತಾಲೂಕು ವೈದ್ಯಾಧಿಕಾರಿ ಅಶೋಕ, ವೈದ್ಯಾಧಿಕಾರಿ ಡಾ.ನಾಗರಾಜ ನಾಯ್ಕ, ಡಾ.ಕೋಮಲಾ, ತಾಪಂ ವ್ಯವಸ್ಥಾಪಕಿ ಶ್ವೇತಾ ಬಿ.ಎಂ., ತಾಪಂ ಸಿಬ್ಬಂದಿ, ಎಂಆರ್‌ಡಬ್ಲ್ಯೂ ಮಂಜುನಾಥ ಬಿ.ಎಂ., ಆರೋಗ್ಯ ಇಲಾಖೆಯ ಎನ್‌ಸಿಡಿಪಿಒ ಶಿವರಾಜ್, ನಾಗರಾಜ್, ತಾಪಂ ಎನ್‌ಆರ್‌ಎಲ್‌ಎಂ ಯೋಜನೆಯ ಸಿಬ್ಬಂದಿ, ಪ್ರಯೋಗಾಲಯ ತಜ್ಞರು, ಆಶಾ ಕಾರ್ಯಕರ್ತೆಯರು, ತಾಲೂಕಿನ ಎಲ್ಲಾ ಗ್ರಾಪಂ ವಿಆರ್‌ಡಬ್ಲ್ಯೂ, ಪುರಸಭೆ ಯುಆರ್‌ಡಬ್ಲ್ಯೂ, ಎಂಬಿಕೆ, ಎಲ್‌ಸಿಆರ್‌ಪಿ, ಕೃಷಿ ಹಾಕಿ, ಪಶುಸಖಿ ಇತರೆ 200ಕ್ಕೂ ಹೆಚ್ಚು ಸಿಬ್ಬಂದಿ ಇದ್ದರು.

ನಿವೃತ್ತ ನೌಕರರಿಗೆ ಸನ್ಮಾನ ಕಾರ್ಯಕ್ರಮ



ಹಗರಿಬೊಮ್ಮನಹಳ್ಳಿ: ತಾಲೂಕಿನ ಮೋರಗೇರಿ ಗ್ರಾಮ ಪಂಚಾಯಿತಿ ಪಿಡಿಒ ಶಾಂತನಗೌಡ ಹಾಗೂ ತಾಪಂ ಸಹಾಯಕ ಅಧಿಕಾರಿ ಮಲ್ಲಿಕಾರ್ಜುನ ಅವರು ಸೇವಾ ನಿವೃತ್ತಿಯಾದ ಹಿನ್ನೆಲೆಯಲ್ಲಿ ತಾಲೂಕ ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಇಬ್ಬರು ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ತಾಪಂ ಇಒ ವಿಶ್ವನಾಥ ಪಲ್ಲಯ್ಯನ ಕೋಟೆ ಮಾತನಾಡಿ, ಮೋರಗೇರಿ ಗ್ರಾಪಂ ಪಿಡಿಒ ಆಗಿದ್ದ ಶಾಂತನಗೌಡ ಮತ್ತು ತಾಪಂನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಲ್ಲಿಕಾರ್ಜುನ ಅವರು ದೀರ್ಘಾವಧಿ ಉತ್ತಮ ಸೇವೆ ಸಲ್ಲಿಸಿ ಇಂದು ನಿವೃತ್ತಿಯಾಗಿದ್ದು, ಇವರ ಮುಂದಿನ ಜೀವನ ಸುಖಕರವಾಗಿರಲಿ ಆರೋಗ್ಯವಾಗಿರಲಿ ಎಂದು ಶುಭ ಕೋರಿದರು. ಉದ್ಯೋಗ ಖಾತ್ರಿಯಾ ಸಹಾಯಕ ನಿರ್ದೇಶಕ ರಮೇಶ್ ಮಹಾಲಿಂಗಪುರ, ತಾಪಂ ಸಿಬ್ಬಂದಿ, ಗ್ರಾಪಂ ಪಿಡಿಒಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

ಹೆಲ್ಮೆಟ್ ಕಡ್ಡಾಯವಾಗಿ ಧರಿಸಿ

ಸಿರುಗುಪ್ಪ: ಸಂಚಾರಿ ನಿಯಮಗಳನ್ನು ಪ್ರತಿಯೊಬ್ಬರು ಕಡ್ಡಾಯವಾಗಿ ಪಾಲಿಸಬೇಕು. ನಿಮ್ಮೆಲ್ಲರ ಸುರಕ್ಷತೆಗಾಗಿ ಪ್ರತಿಯೊಬ್ಬರೂ ಹೆಲ್ಮೆಟ್ ಧರಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರದೀಪ್ ಕುಮಾರ್ ಹೇಳಿದರು. ನಗರದ ತಾಪಂ ಆವರಣದಲ್ಲಿ ಮಂಗಳವಾರ ಆಯೋಜಿಸಿದ 'ಹೆಲ್ಮೆಟ್ ಜಾಗೃತಿ ಕಾರ್ಯಕ್ರಮ'ದಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ವಿತರಿಸಿ ಮಾತನಾಡಿದರು. ರಸ್ತೆ ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ಜೀವಗಳನ್ನು ಉಳಿಸಲು ಪ್ರತಿಯೊಬ್ಬರು ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು ಎಂದು ತಿಳಿಸಿದರು. ಇಲಾಖೆಯ ಮೇಲ್ವಿಚಾರಕರು, ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರಿದ್ದರು.

ನಿಧನ ಸುದ್ದಿ

ಉಪ್ಪಾರು ಹನುಮೇಶ

ಸಿರುಗುಪ್ಪ: ನಗರದ ಕುವೆಂಪು ಕಾಲೋನಿಯ ನಿವಾಸಿ ಉಪ್ಪಾರ ಹನುಮೇಶ(49) ಅವರು ಮಂಗಳವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಕುರುಗೋಡು ತಾಲೂಕಿನ ನಗರಸಭೆ ಕಾರ್ಯಾಲಯದಲ್ಲಿ ಪರಿಸರ ಇಂಜಿನಿಯರ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಪುತ್ರಿ ಇದ್ದಾರೆ. ತಾಲೂಕಿನ ಹೆರಕಲ್ಲು ಗ್ರಾಮದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ಬಳ್ಳಾರಿ: ಜೂ.1ರಿಂದ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಹೆಲ್ಮೆಟ್ ಕಡ್ಡಾಯಗೊಳಿಸಿದ ಹಿನ್ನೆಲೆಯಲ್ಲಿ ಸೋಮವಾರ ನಗರದ ಪ್ರಮುಖ ಎಲ್ಲವೃತ್ತಗಳಲ್ಲಿ ಪೊಲೀಸರು ವಾಹನ ಸವಾರರನ್ನು ತಡೆದು ಜಾಗೃತಿ ಮೂಡಿಸಿದರು. ಕೆಲವರಿಗೆ ದಂಡ ವಿಧಿಸಿ, ಹೆಲ್ಮೆಟ್ ನಮಗಾಗಿ ಅಲ್ಲ, ನಿಮ್ಮ ರಕ್ಷಣೆಗಾಗಿ, ನಿಮ್ಮ ಸುರಕ್ಷತೆಗಾಗಿ ಎಂದು ಸವಾರರಿಗೆ ಅರಿವು ಮೂಡಿಸಿದರು.

ಉತ್ತಮ ಶಿಕ್ಷಣ ಸಂಸ್ಥೆಯಾಗಿ ಹೊರ ಹೊಮ್ಮಲಿ

ಹೂವಿನಹಡಗಲಿ: ಪಟ್ಟಣದ ಹರಪನಹಳ್ಳಿ ರಸ್ತೆಯಲ್ಲಿರುವ ಬೇತೆಲ್ ಚರ್ಚ್ ಹತ್ತಿರ ಇರುವ ಯುರೋಕಿಡ್ಸ್ ಇಂಟರ್ ನ್ಯಾಷನಲ್ ಸ್ಕೂಲ್ ಮಂಗಳವಾರ ಉದ್ಘಾಟನೆಗೊಂಡಿತು. ನೂತನ ಶಾಲೆಯನ್ನು ಉದ್ಘಾಟಿದ ಶಾಸಕ ಕೃಷ್ಣನಾಯಕ್ ಮಾತನಾಡಿ, ಒಂದು ಉತ್ತಮ ಸಂಸ್ಥೆಯನ್ನು ಇಲ್ಲಿ ಪ್ರಾರಂಭಿಸಿರುವುದು ಒಳ್ಳೆಯದಾಗಿದೆ ಎಂದರು ಫಾಸ್ಟರ್ ಪ್ರಕಾಶ್ ಅವರು ಮಾತನಾಡಿ ಒಂದು ಒಳ್ಳೆಯ ಉದ್ದೇಶವನ್ನ ಇಟ್ಟುಕೊಂಡು ಶಾಲೆಯನ್ನು ಪ್ರಾರಂಭಿಸಿದ್ದಾರೆ. ಈ ಭಾಗದ ಜನತೆಗೆ ಒಳ್ಳೆಯ ಶಿಕ್ಷಣವನ್ನು ಜೊತೆಗೆ ಶಿಸ್ತನ್ನು ಕೊಡುವಲ್ಲಿ ಅವರು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಶಾಲೆಯ ಮುಖ್ಯಸ್ಥರಾದ ಫಾಸ್ಟರ್ ಪ್ರಕಾಶ್ ಮಾತನಾಡಿ, ಒಂದು ಉತ್ತಮ ಸಂಸ್ಥೆಯನ್ನು ಕಟ್ಟಿ ಶಿಕ್ಷಣವನ್ನು ಕೊಡುವ ಉದ್ದೇಶ ದಿಂದ ಶಾಲೆಯನ್ನುದ ಪ್ರಾರಂಭಿಸಿದ್ದೇವೆ. ಯುರೋ ಕಿಡ್ಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ಶಾಲೆಯನ್ನು ಪ್ರಾರಂಭಿಸಲಾಗಿದೆ ಅತ್ಯಾಧುನಿಕ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡಂತೆ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎಂದರು. ವರ್ತಕರಾದ ಎಸ್‌ಎಂಎನ್ ರವೀಂದ್ರ ಶೆಟ್ಟಿ, ನಿವೃತ್ತ ಪ್ರಾಧ್ಯಾಪಕ ರೇವಣಸಿದ್ದಪ್ಪ, ಪತ್ರಕರ್ತರ ಸಂಘದ ಅಧ್ಯಕ್ಷ ಎಂಪಿಎಂ ಶಿವಪ್ರಕಾಶ್, ಮಡ್ಡಿ ಜಗದೀಶ್, ಪ್ರೇಮಲತಾ ಪ್ರಕಾಶ್, ಡಾ.ಪ್ರೀತಿ ಉಪಸ್ಥಿತರಿದ್ದರು. ಹೇಮಂತ್ ಪ್ರಾರ್ಥನೆ ಹಾಡಿದರು. ಹರ್ಷಿತ ಕುಶಾಲ್ ನಿರ್ವಹಿಸಿದ್ದರು.



ಹೂವಿನಹಡಗಲಿ: ಪಟ್ಟಣದ ಹರಪನಹಳ್ಳಿ ರಸ್ತೆಯಲ್ಲಿರುವ ಬೇತೆಲ್ ಚರ್ಚ್ ಹತ್ತಿರ ಇರುವ ಯುರೋಕಿಡ್ಸ್ ಇಂಟರ್ ನ್ಯಾಷನಲ್ ಸ್ಕೂಲ್ ಮಂಗಳವಾರ ಉದ್ಘಾಟನೆಗೊಂಡಿತು.

ಮುಂಗಾರು ಪೂರ್ವ ಕೆಲವೆಡೆ ಉತ್ತಮ ಮಳೆ

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಚುರುಕು

ವೆಂಕಟೇಶ ದೇಸಾಯಿ

ದಿಗಂತ ವಿಶೇಷ

ಬಳ್ಳಾರಿ: ಗಣಿನಾಡು ಬಳ್ಳಾರಿ ಜಿಲ್ಲೆಯಲ್ಲಿ ಮುಂಗಾರು ಪೂರ್ವದಲ್ಲಿ ಹಲವೆಡೆ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಅನೇಕ ಕಡೆಗಳಲ್ಲಿ ಉತ್ತಮ ಮಳೆ ಹಿನ್ನೆಲೆಯಲ್ಲಿ ಜಿಲ್ಲೆಯ ರೈತರು ತಮ್ಮ ಕೃಷಿ ಭೂಮಿಯನ್ನು ಹದಗೊಳಿಸುವ ಕಾರ್ಯಗಳಲ್ಲಿ ಬಿಡುವಿಲ್ಲದೆ ತೊಡಗಿಕೊಂಡಿದ್ದಾರೆ. ರಂಟೆ-ಕುಂಟೆ ಹೊಡೆಯುವುದು, ರೋಟವೇಟರ್ ಹಾಗೂ ಎತ್ತುಗಳ ನೇಗಿಲು ಬಳಸಿ ಭೂಮಿಯನ್ನು ಹದಗೊಳಿಸುವ ದೃಶ್ಯಗಳು ಜಿಲ್ಲಾದ್ಯಂತ ಕಣ್ಣಿಗೆ ರಾರಾಜಿಸುತ್ತಿವೆ. ಜಿಲ್ಲೆಯಲ್ಲಿ ವಾರ್ಷಿಕ ವಾಡಿಕೆ ಮಳೆಯು 599.0 ಮಿ.ಮೀ ಆಗಿದ್ದು, ಮೇ. 31ರ ಅಂತ್ಯಕ್ಕೆ ಸರಾಸರಿ ವಾಡಿಕೆ 74.4 ಮಿ.ಮೀ ಮಳೆಯಾಗಬೇಕಾಗಿತ್ತು. ಆದರೆ, ಪ್ರಸ್ತುತ 72.4 ಮಿ.ಮೀ ನಷ್ಟು ಉತ್ತಮ ಮಳೆಯಾದ ಬಗ್ಗೆ ವರದಿಯಾಗಿದೆ.

1.59 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ: ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಯಲ್ಲಿ ಒಟ್ಟು 1,59,546 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡುವ ಗುರಿ ಹೊಂದಿದೆ. ಭತ್ತ- 87,741 ಹೆಕ್ಟೇರ್, ಮೆಕ್ಕೆಜೋಳ-26 ಸಾವಿರ ಹೆಕ್ಟೇರ್, ಹತ್ತಿ- 20 ಸಾವಿರ ಹೆಕ್ಟೇರ್, ಸಜ್ಜೆ- 10 ಸಾವಿರ ಹೆಕ್ಟೇರ್, ತೊಗರಿ- 7,224 ಹೆಕ್ಟೇರ್, ತೃಣಧಾನ್ಯಗಳು- 2,508 ಹೆಕ್ಟೇರ್, ಶೇಂಗಾ (ನೆಲಕಡಲೆ)- 1,500 ಹೆಕ್ಟೇರ್, ಸೂರ್ಯಕಾಂತಿ- 1,200 ಹೆಕ್ಟೇರ್, ಕಬ್ಬು- 800 ಹೆಕ್ಟೇರ್ ಗುರಿಯಿದೆ.

15 ಕೇಂದ್ರಗಳಲ್ಲಿ ರಿಯಾಯಿತಿ ದರದಲ್ಲಿ ಬೀಜ: ದೇಶಕ್ಕೆ ಅನ್ನ ನೀಡುವ ರೈತರಿಗೆ ಕೃಷಿ ಇಲಾಖೆಯು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪೂರೈಸಲು ಸಜ್ಜಾಗಿದೆ. ಜಿಲ್ಲೆಯ 13 ರೈತ ಸಂಪರ್ಕ ಕೇಂದ್ರಗಳು ಮತ್ತು 02 ಹೆಚ್ಚುವರಿ ಕೇಂದ್ರಗಳು ಸೇರಿದಂತೆ ಒಟ್ಟು 15 ಕೇಂದ್ರಗಳ ಮೂಲಕ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ವಿತರಿಸಲು ಕೃಷಿ ಇಲಾಖೆ ಸನ್ನದ್ಧವಾಗಿದೆ. ಜಿಲ್ಲೆಗೆ ಮುಂಗಾರು ಹಂಗಾಮಿನಲ್ಲಿ ಒಟ್ಟು 7,115 ಕ್ವಿಂಟಾಲ್ ಬಿತ್ತನೆ ಬೀಜದ ಬೇಡಿಕೆ ಇದ್ದು, ಸದ್ಯ 10,415 ಕ್ವಿಂಟಾಲ್‌ನಷ್ಟು ದಾಸ್ತಾನು ಲಭ್ಯವಿದೆ, ಯಾವುದೇ ಕೊರತೆ ಎದುರಾಗುವ ಸಾಧ್ಯತೆ ಇಲ್ಲ.



ಕೃಷಿ ಇಲಾಖೆ ಹದ್ದಿನ ಕಣ್ಣು

ಜಿಲ್ಲೆಯಲ್ಲಿ ಕೃಷಿ ಪರಿಕರಗಳ ಪರಿವೀಕ್ಷಕರ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಹದ್ದಿನ ಕಣ್ಣಿಟ್ಟಿದೆ. ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳ ಗುಣಮಟ್ಟ ಮತ್ತು ಬೆಲೆ ನಿಯಂತ್ರಣದ ಮೇಲೆ ಕಟ್ಟುನಿಟ್ಟಿನ ನಿಗಾವಹಿಸಿದೆ.

ಬಿತ್ತನೆ ಬೀಜಗಳ ಬೇಡಿಕೆ ಮತ್ತು ದಾಸ್ತಾನು: ಜಿಲ್ಲೆಯಲ್ಲಿ ಬಿತ್ತನೆ ಬೀಜಗಳ ಬೇಡಿಕೆ, ದಾಸ್ತಾನು ಕುರಿತು ಕೃಷಿ ಇಲಾಖೆ ಮಾಹಿತಿಯಂತೆ,

ಭತ್ತ: 2,003 ಕ್ವಿಂ(ಬೇಡಿಕೆ), 3,000 ಕ್ವಿಂ(ದಾಸ್ತಾನು).
ಮೆಕ್ಕಜೋಳ: 2,493 ಕ್ವಿಂ(ಬೇಡಿಕೆ), 3 ಸಾವಿರ ಕ್ವಿಂ(ದಾಸ್ತಾನು).
ತೊಗರಿ: 477 ಕ್ವಿಂ(ಬೇಡಿಕೆ), 1 ಸಾವಿರ ಕ್ವಿಂ(ದಾಸ್ತಾನು).
ನೆಲಕಡಲೆ: 1,770 ಕ್ವಿಂ(ಬೇಡಿಕೆ), 2,900 ಕ್ವಿಂ(ದಾಸ್ತಾನು).
ಜೋಳ: 96 ಕ್ವಿಂ(ಬೇಡಿಕೆ), 150 ಕ್ವಿಂ(ದಾಸ್ತಾನು).
ಇತರೆ: 276 ಕ್ವಿಂ(ಬೇಡಿಕೆ), 365 ಕ್ವಿಂ(ದಾಸ್ತಾನು).
ಒಟ್ಟು: 7,115 ಕ್ವಿಂ ಬೇಡಿಕೆ ಇದ್ದು, 10,415 ಕ್ವಿಂ ದಾಸ್ತಾನಿದೆ.

> ರೈತರು ಯಾವುದೇ ಅನಧಿಕೃತ ಮೂಲಗಳಿಂದ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕ, ಪರಿಕರಗಳನ್ನು ಖರೀದಿಸಕೂಡದು. ಅಧಿಕೃತ ಮಾರಾಟಗಾರರಿಂದಲೇ ಖರೀದಿಸಬೇಕು. ಅನಧಿಕೃತ ಮಾರಾಟ ಮಾಡುವುದು ಕಂಡುಬಂದಲ್ಲಿ ಗಮನಕ್ಕೆ ತಂದರೆ ಕೂಡಲೇ ಮುಲಾಜಿಲ್ಲದೇ ಕ್ರಮ ಕೈಗೊಳ್ಳಲಾಗುವುದು.
> ■ ಟಿ.ಸೋಮಸುಂದರ್, ಜಂಟಿ ಕೃಷಿ ನಿರ್ದೇಶಕ

ರೈತರು ಕೇವಲ ಮಣ್ಣಿನಲ್ಲಿ ಅವಶ್ಯಕ ತೇವಾಂಶ ಲಭ್ಯವಿದ್ದಾಗ ಹಾಗೂ ಮುಂದಿನ 3-4 ದಿನಗಳಲ್ಲಿ ಮಳೆ ಬರುವ ಮುನ್ಸೂಚನೆ ಇದ್ದಲ್ಲಿ ಮಾತ್ರ ಬಿತ್ತನೆಗೆ ಮುಂದಾಗಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ರಸಗೊಬ್ಬರ ಬೇಡಿಕೆ: ಡಿ.ಎ.ಪಿ: 13,915(ಬೇಡಿಕೆ), 6,093.72(ದಾಸ್ತಾನು). ಎಂ.ಒ.ಪಿ: 3,567(ಬೇಡಿಕೆ), 2,156.10(ದಾಸ್ತಾನು). ಕಾಂಪ್ಲೆಕ್ಸ್: 50,554(ಬೇಡಿಕೆ), 25,029.54(ದಾಸ್ತಾನು). ಯೂರಿಯಾ: 34,641(ಬೇಡಿಕೆ), 13,633.40(ದಾಸ್ತಾನು) ಎಸ್.ಎಸ್.ಪಿ/ಇತರೆ: 1,101 ಬೇಡಿಕೆ ಇದ್ದು, 599.52ದಾಸ್ತಾನಿದೆ. ಒಟ್ಟು 1,03,778 ಮೆಟ್ರಿಕ್ ಟನ್ ಬೇಡಿಕೆ ಇದ್ದು, 47,533.23 ದಾಸ್ತಾನಿದೆ.

ಬೇಡಿಕೆ ಈಡೇರಿಕೆಗೆ ಕಾರಂಜ ಮುಳುಗಡೆ ಸಂತ್ರಸ್ತರ ಆಗ್ರಹ

ಬೀದರ: ಬೀದರ ಜಿಲ್ಲೆಯಲ್ಲಿ ಖಾಲಿ ಇರುವ ವಿಶೇಷ ಭೂಸ್ವಾಧೀನ ಅಧಿಕಾರಿ (ಎಸ್‌ಎಲ್‌ಎಒ) ಹುದ್ದೆಗೆ ತಕ್ಷಣ ಹಿರಿಯ ಹಾಗೂ ಸಮರ್ಥ ಅಧಿಕಾರಿಯನ್ನು ನೇಮಕ ಮಾಡಬೇಕು. ಅಗತ್ಯ ಸಿಬ್ಬಂದಿಯನ್ನು ನಿಯೋಜಿಸಬೇಕು ಹಾಗೂ ಎಸ್‌ಎಲ್‌ಎಒ ಕಚೇರಿಯನ್ನು ಬೀದರ ನಗರದಲ್ಲೇ ಸ್ಥಾಪಿಸಬೇಕು ಎಂದು ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಜಿಲ್ಲಾಡಳಿತವನ್ನು ಒತ್ತಾಯಿಸಿದೆ.

ಈ ಕುರಿತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ, ಕಳೆದ ಹಲವು ತಿಂಗಳುಗಳಿಂದ ಎಸ್‌ಎಲ್‌ಎಒ ಹುದ್ದೆ ಖಾಲಿ ಇರುವುದರಿಂದ ಜಿಲ್ಲೆಯ ನೂರಾರು ರೈತರು ಮತ್ತು ಭೂಸ್ವಾಧೀನ ಸಂತ್ರಸ್ತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ತಿಳಿಸಲಾಗಿದೆ. ಭೂಸ್ವಾಧೀನ ಪರಿಹಾರ, ಪ್ರಕರಣಗಳ ವಿಚಾರಣೆ, ದಾಖಲೆಗಳ ಪರಿಶೀಲನೆ ಹಾಗೂ ಪರಿಹಾರ ವಿತರಣೆಯಂತಹ ಹಲವು ಕಾರ್ಯಗಳು ಸ್ಥಗಿತಗೊಂಡು ರೈತರು ಕಚೇರಿಯಿಂದ ಕಚೇರಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ದೂರಲಾಗಿದೆ.

ಕಾರಂಜ ಜಲಾಶಯಕ್ಕಾಗಿ ಭೂಮಿ ನೀಡಿರುವ ರೈತರಿಗೆ ಬಾಕಿ ಇರುವ ಪರಿಹಾರ ಹಾಗೂ ಇತರ ನ್ಯಾಯಸಮ್ಮತ ಬೇಡಿಕೆಗಳ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಸಮಸ್ಯೆಗಳನ್ನು ಪರಿಹರಿಸುವಂತೆ ರೈತರು ಆಗ್ರಹಿಸಿದ್ದಾರೆ.



ಮನವಿಗೆ ಐದು ದಿನಗಳೊಳಗೆ ಸ್ಪಂದಿಸಿ ಅಗತ್ಯ ಕ್ರಮ ಕೈಗೊಳ್ಳದಿದ್ದಲ್ಲಿ, ಕಾರಂಜ ಮುಳುಗಡೆ ಸಂತ್ರಸ್ತ ರೈತರು ಹಾಗೂ ಹಿತ ರಕ್ಷಣಾ ಸಮಿತಿಯ ಸದಸ್ಯರು ಜಿಲ್ಲಾಧಿಕಾರಿಗಳ ಕಚೇರಿ ಎದುರು ನಿರಂತರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಚಂದ್ರಶೇಖರ ಪಾಟೀಲ್ ಹೊಚಕನಳ್ಳಿ, ರಾಜಪ್ಪ ಕೋಸಂ, ರಮೇಶ್ ಕುಲಕರ್ಣಿ, ಅಶೋಕ್ ಕುಲಕರ್ಣಿ,ಕೃಷ್ಣಾ ಕುಲಕರ್ಣಿ ಬಾವಗಿ,ರಾಜಶೇಖರ ಕೇಣಿ (ರಂಜೋಳ), ವಿನಯ್ ಕುಮಾರ್ ಮಾಳಗೆ, ಮಹೇಶ ನೆಲವಾಲ, ಮಾದಪ್ಪ ಸಂಗೋಳಗಿ, ಲಕ್ಷ್ಮಿ ಮಾದಪ್ಪ, ನಾಗಶೆಟ್ಟಿ ಹಚ್ಚೆ ಸೇರಿದಂತೆ ನೂರಾರು ಸಂತ್ರಸ್ತ ರೈತರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಸಿಗಲಿ: ಶಾಸಕ

ಹಗರಿಬೊಮ್ಮನಹಳ್ಳಿ: ರಾಷ್ಟ್ರದ ಭವಿಷ್ಯ ತರಗತಿ ಕೊಠಡಿಯಲ್ಲಿ ಅಡಗಿದೆ ಎಂದು ವಿದ್ವಾಂಸರು ಹೇಳುವಂತೆ ಸರ್ಕಾರಿ ಶಾಲೆಗಳಿಗೆ ಬಡವರ ಮಕ್ಕಳು ಹೆಚ್ಚಾಗಿ ಬರುತ್ತಾರೆ. ಸರ್ಕಾರಿ ಶಾಲೆಗಳಿಗೆ ಬರುವ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಮಕ್ಕಳ ಬದುಕನ್ನು ಉಜ್ವಲಗೊಳಿಸಿ ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ತಾಲೂಕಿನ ತಂಬ್ರಹಳ್ಳಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ 2026-27ನೇ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಬೇಸಿಗೆ ರಜೆ ಮುಗಿಸಿಕೊಂಡು ಪುನಃ ಶಾಲೆಗೆ ಮರಳುತ್ತಿರುವ ಮಕ್ಕಳಿಗೆ ಸಿಹಿ ಹಂಚಿ ಸ್ವಾಗತಿಸಿ ಮಾತನಾಡಿದರು.

ಹಿಂದಿನ ಕಾಲದಲ್ಲಿ ಶಿಕ್ಷಣ ಕಲಿಯುವ ಮಕ್ಕಳಿಗೆ ಸರ್ಕಾರಿ ಸೌಲಭ್ಯಗಳು ಹೆಚ್ಚಾಗಿ ಸಿಗುತ್ತಿರಲಿಲ್ಲ. ಇಂದಿನ ಮಕ್ಕಳಿಗೆ ಶಾಲೆಗಳಲ್ಲಿ ಉಚಿತ ಪುಸ್ತಕ, ಉಚಿತ ಸಮವಸ್ತ್ರ ಮಧ್ಯಾಹ್ನದ ಬಿಸಿ ಊಟ, ಶೂಸ್ ಮುಂತಾದ ಸೌಲಭ್ಯಗಳು ವಿದ್ಯಾರ್ಥಿಗಳ ವಸತಿ ನಿಲಯಗಳಿದ್ದು ಶಿಕ್ಷಣ ಪ್ರಗತಿಗೆ ಪೂರಕವಾದ ಸೌಲಭ್ಯಗಳು ದೊರಕುತ್ತಿದ್ದು ವಿದ್ಯಾರ್ಥಿಗಳು ಕಲಿಕಾ ಸಮಯದಲ್ಲಿ ಸಮಯ ವ್ಯರ್ಥ ಮಾಡದೆ ದುಶ್ಚಟಕ್ಕೆ ದಾಸರಾಗದೆ ಮೊಬೈಲ್ ಗೀಳು ಬಿಟ್ಟು ಆಸಕ್ತಿಯಿಂದ ಶಿಕ್ಷಣ ಕಲಿತು ಜೀವನದ ಗುರಿ ಮುಟ್ಟಬೇಕು. ತಂದೆ ತಾಯಿಗಳಿಗೆ ಶಾಲೆಗೆ ಊರಿಗೆ ಕೀರ್ತಿ ತರುವಂತಾಗಬೇಕು.ಶಿಕ್ಷಕರು ಮಕ್ಕಳಲ್ಲಿ ಕಲಿಕಾ ಸಕ್ತಿಯನ್ನು ಹೆಚ್ಚಿಸುವ ಮೂಲಕ ಗುಣಮಟ್ಟದ ಫಲಿತಾಂಶಕ್ಕೆ ಶ್ರಮಿಸಬೇಕಿದೆ ಎಂದರು.

ತಹಶೀಲ್ದಾರ್ ಆರ್.ಕವಿತಾ, ತಾಪಂ ಇಒ ಪಾಲಯ್ಯನ ಕೋಟೆ ವಿಶ್ವನಾಥ, ಕ್ಷೇತ್ರ ಶಿಕ್ಷಣಾಧಿಕಾರಿ ಜಗದೀಶ್, ಅಕ್ಷರ ದಾಸೋಹದ ಅಧಿಕಾರಿ ರಾಜಕುಮಾರನಾಯ್ಕ್, ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಮುಖಂಡರಾದ ಬಣಕಾರ ಕೊಟ್ರೇಶಪ್ಪ, ಮಾಬು ಸಾಬ್, ಸೊಬಟಿಯ ಹರೀಶ್, ಇಲಾಖೆಯ ಅಧಿಕಾರಿಗಳು, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಗ್ರಾಮದ ಹಿರಿಯರು ಶಾಲೆಯ ಮುಖ್ಯ ಶಿಕ್ಷಕರು ಸಹ ಶಿಕ್ಷಕರು ಸಿಬ್ಬಂದಿ ಶಾಲೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಕ ಇಟಗಿ ಪ್ರಭಾಕರ ನಿರ್ವಹಿಸಿದರು.



ಮುನಿಯಪ್ಪ, ಲಾಡ್, ನಾಗೇಂದ್ರಗೆ ಸಚಿವ ಸ್ಥಾನ ನೀಡಿ

ಬಳ್ಳಾರಿ: ಮಾಜಿ ಸಚಿವರಾದ, ಹಿರಿಯರಾದ ಕೆ.ಎಚ್.ಮುನಿಯಪ್ಪ, ಸಂತೋಷ್ ಲಾಡ್ ಹಾಗೂ ಬಿ.ನಾಗೇಂದ್ರ ಅವರಿಗೆ ಟ್ರಬಲ್ ಶೂಟರ್, ಯುವ ನಾಯಕ, ಡಿ.ಕೆ.ಶಿವಕುಮಾರ ಅವರ ನೂತನ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ್ ಒತ್ತಾಯಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ರಾಜ್ಯ ಸರ್ಕಾರದ ನೂತನ ಮುಖ್ಯಮಂತ್ರಿಗಳಾಗಿ ಡಿ.ಕೆ.ಶಿವಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸುತ್ತಿದ್ದು ಅತ್ಯಂತ ಸಂತಸ ಮೂಡಿಸಿದೆ. ಮಾಜಿ ಸಚಿವರು, ದಲಿತ ಸಮಾಜದ ಪ್ರಭಾವಿ ನಾಯಕ ಹಾಗೂ ಕರ್ನಾಟಕ ಮಾದರ ಮಹಾ ಸಭಾದ ರಾಜ್ಯಾಧ್ಯಕ್ಷ ಕೆ.ಎಚ್. ಮುನಿಯಪ್ಪ ಅವರಿಗೆ, ಕಾರ್ಮಿಕ ಇಲಾಖೆಯನ್ನು ಯಶಸ್ವಿಯಾಗಿ ಮುನ್ನಡೆಸಿ, ಸಾಕಷ್ಟು ಯೋಜನೆಗಳನ್ನು ರೂಪಿಸಿದ ಮಾದರಿ ಸಚಿವ ಸಂತೋಷ್ ಎಸ್.ಲಾಡ್ ಹಾಗೂ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ನೂತನ ಸರ್ಕಾರದ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಡಿ.ಕೆ ಶಿವಕುಮಾರ್ ಅವರಲ್ಲಿ ಮನವಿ ಮಾಡಿದ್ದಾರೆ.

ಕಾರ್ಮಿಕ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸಿದ ವೇಳೆ ಹಲವು ಜನಪರ ಯೋಜನೆಗಳನ್ನು ರೂಪಿಸಿ ಯಶಸ್ವಿಯಾಗಿ ಜಾರಿಗೊಳಿಸಿದ್ದ ಸಂತೋಷ್ ಎಸ್.ಲಾಡ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಮಾಜಿ ಸಚಿವ ಹಾಗೂ ಬಳ್ಳಾರಿ ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡ ಬಿ. ನಾಗೇಂದ್ರ ಅವರಿಗೂ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಗೆ ಪ್ರಾತಿನಿಧ್ಯ ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ. ಈ ಮೂವರು ನಾಯಕರ ಅನುಭವ ಮತ್ತು ಸೇವೆಯನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ಹಾಗೂ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ಮನವಿ ಮಾಡಿದ್ದಾರೆ.

ಶಾಸಕ ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡಲು ಒತ್ತಾಯ

ಕುರುಗೋಡು: ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳೊಂದಿಗೆ ಅಚ್ಚುಮೆಚ್ಚಿನ ನಾಯಕರಾಗಿರುವ ಶಾಸಕ ಜೆ.ಎನ್.ಗಣೇಶ ಅವರಿಗೆ ಕಾಂಗ್ರೆಸ್ ಹೈಕಮಾಂಡ್, ವರಿಷ್ಠರು ಮಂತ್ರಿ ಸ್ಥಾನ ನೀಡುವ ಮೂಲಕ ರಾಜ್ಯದ ಜನರ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕಾಂಗ್ರೆಸ್ ಯುವ ಮುಖಂಡ ಕನಕಪ್ಪ ಸುಣಗಾರ ಒತ್ತಾಯಿಸಿದರು.

ಅವರು ಮಂಗಳವಾರ ಸಮೀಪದ ಎಮ್ಮಿಗನೂರು ಗ್ರಾಮದ ಶ್ರೀಪ್ಯಾಟೇ ಬಸವೇಶ್ವರ ತೇರಿನ ಮನೆ ಆವರಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಂಪ್ಲಿಕ್ಷೇತ್ರದಲ್ಲಿ ಶಾಸಕರಾಗಿ ಗೆಲುವು ಸಾಧಿಸಿದಾಗಿನಿಂದಲೂ ಇಲ್ಲಿತನಕ ಸಾಕಷ್ಟು ಅಭಿವೃದ್ಧಿ ಕಾರ್ಯದ ಜೊತೆಗೆ ಜನಪರ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಏಳಿಗೆ ಜೊತೆಗೆ ಪ್ರತಿಯೊಂದು ಹಂತದಲ್ಲಿ ಅಭಿವೃದ್ಧಿಯೇ ಮೊದಲ ಧ್ಯೇಯ ಎಂಬಂತೆ ಶ್ರಮಿಸಿದ್ದಾರೆ. ಕ್ಷೇತ್ರದ ಜನರ ಸಂಕಷ್ಟದಲ್ಲಿ ಭಾಗಿಯಾಗಿ ಸರ್ಕಾರದ ಸಾಕಷ್ಟು ಯೋಜನೆಗಳನ್ನು ಮನೆ ಬಾಗಿಲಿಗೆ ಮುಟ್ಟಿಸುವ ಕೆಲಸ ಮಾಡಿದ್ದಾರೆ. ಅಭಿವೃದ್ಧಿ ವಿಚಾರದಲ್ಲಿ ಶಾಸಕರು ಪ್ರತಿ ಹೆಜ್ಜೆಯಲ್ಲಿಯೂ ಮಾಡಿದ ಜನಪರ ಕಾರ್ಯಗಳು ರಾಜ್ಯಕ್ಕೆ ಮಾದರಿಯಾಗಿದ್ದು, ಸಣ್ಣವರಿಂದ ದೊಡ್ಡವರತನಕ ಮನೆ ಮಗನಾಗಿದ್ದಾರೆ. ಆದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಮತ್ತು ವರಿಷ್ಠರು ಸಚಿವ ಸ್ಥಾನ ನೀಡಬೇಕು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.



ಮುಖಂಡ ವಿ.ವಿರೇಶ ಮಾತನಾಡಿ, ರೈತರ ಮತ್ತು ಕ್ಷೇತ್ರದ ಜನರ ಮಹದಾಸೆಯೊಂದಿಗೆ ಶಾಸಕ ಗಣೇಶಗೆ ಸಚಿವ ಸ್ಥಾನ ನೀಡಬೇಕೆಂದರು.

ಮುಖಂಡರಾದ ಕಾಗೆ ಈರಣ್ಣ, ಡಿ.ಮುದಿಯಪ್ಪ, ಎಮ್ಮೆ ತಿಪ್ಪಯ್ಯ, ಹೊಸಮನೆ ರಾಜಸಾಬ್, ಜಯರಾಮ್ ರೆಡ್ಡಿ ಯಳ್ಳಾರ್ತಿ, ಕುರುಬರ ಶರಣಪ್ಪ, ಹೊಸಳ್ಳಿ ಜಡೇಶ, ಎಂ.ಜಡೆಪ್ಪ, ಬಾರಿಕರ್ ರಾಜ, ಅಲ್ಲಾಸ್, ಆಗಲೂರು ರಾಮ, ಎಂ.ಲಕ್ಷ್ಮೀಕಾಂತ, ಬಾರಿಕರ್ ನಾಗರೆಡ್ಡಿ ಸೇರಿದಂತೆ ಇತರರು ಇದ್ದರು.

ರೈಲ್ವೆ ಮೇಲ್ಸೇತುವೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ

ವಿಜಯನಗರ: ಹೊಸಪೇಟೆ ನಗರದ ಹಂಪಿ ರಸ್ತೆಯಲ್ಲಿರುವ ಅನಂತಶಯನಗುಡಿ ರೈಲ್ವೆ ಕ್ರಾಸಿಂಗ್ ಬಳಿ ನಿರ್ಮಾಣವಾಗುತ್ತಿರುವ ಬಹುನಿರೀಕ್ಷಿತ ರೈಲ್ವೆ ಮೇಲ್ಸೇತುವೆ ಕಾಮಗಾರಿಯ ಎಲ್ಲಾ ಲೋಪದೋಷಗಳನ್ನು ತಕ್ಷಣವೇ ಸರಿಪಡಿಸಿಕೊಂಡು, ಆಗಸ್ಟ್ ಅಂತ್ಯದ ವೇಳೆಗೆ ಕಾಮಗಾರಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಗಡುವು ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಹಂಪಿ ರಸ್ತೆ ಮೇಲ್ಸೇತುವೆ ಕಾಮಗಾರಿ ಪ್ರಗತಿ ಪರಿಶೀಲನೆಯ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಮಾತನಾಡಿದರು.

ಮೇಲ್ಸೇತುವೆ ಕಾಮಗಾರಿ ಆರಂಭಕ್ಕೆ ಇದ್ದ ಭೂಸ್ವಾಧೀನ ಪ್ರಕ್ರಿಯೆ, ಅನುದಾನ ಬಿಡುಗಡೆ ಹಾಗೂ ತಾಂತ್ರಿಕ ಅಡಚಣೆಗಳು ಸೇರಿದಂತೆ ಎಲ್ಲಾ ರೀತಿಯ ತೊಡಕುಗಳನ್ನು ಜಿಲ್ಲಾಡಳಿತ ಈಗಾಗಲೇ ಸಂಪೂರ್ಣವಾಗಿ ನಿವಾರಿಸಿ, ಸುಗಮ ಕಾಮಗಾರಿ ಕೆಲಸಕ್ಕೆ ದಾರಿ ಮಾಡಿಕೊಟ್ಟಿದೆ. ಹೀಗಿದ್ದರೂ ಸಹ ಕಾಮಗಾರಿ ಮಾತ್ರ ಆಮೆಗತಿಯಲ್ಲಿ ಸಾಗುತ್ತಿರುವುದಕ್ಕೆ ಜಿಲ್ಲಾಧಿಕಾರಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಅಧಿಕಾರಿಗಳು ಮತ್ತು ಗುತ್ತಿಗೆದಾರರ ಇಂತಹ ನಿಧಾನಗತಿಯ ಧೋರಣೆ ಸಾರ್ವಜನಿಕರ ಮತ್ತು ಸ್ಥಳೀಯ ಜನಪ್ರತಿನಿಧಿಗಳ ತೀವ್ರ ಕೆಂಗಣ್ಣಿಗೆ ಗುರಿಯಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳ ತರಾಟೆಗೆ ತೆಗೆದುಕೊಂಡರು.



ಹಂಪಿ ರಸ್ತೆಯು ಹೊಸಪೇಟೆಯ ಪ್ರಮುಖ ಸಂಪರ್ಕ ರಸ್ತೆಯಾಗಿದ್ದು, ಇಲ್ಲಿನ ರೈಲ್ವೆ ಗೇಟ್ ಬಳಿ ಮೇಲ್ಸೇತುವೆ ಕೆಲಸ ಅರ್ಧಕ್ಕೆ ನಿಂತಿರುವುದರಿಂದ ನಿತ್ಯ ಸಾವಿರಾರು ವಾಹನ ಸವಾರರು ಹಾಗೂ ಸಾರ್ವಜನಿಕರು ಸಂಚಾರ ದಟ್ಟಣೆಯಲ್ಲಿ ಸಿಲುಕಿ ನರಕಯಾತನೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ಯಾವುದೇ ರೀತಿಯ ಕುಂಟು ನೆಪ ಹೇಳಿದರೂ ಕೇಳುವುದಿಲ್ಲ. ಕಾಮಗಾರಿಯಲ್ಲಿ ಕಂಡುಬರುತ್ತಿರುವ ಸಣ್ಣಪುಟ್ಟ ಲೋಪದೋಷಗಳನ್ನು ತಕ್ಷಣವೇ ಸರಿಪಡಿಸಿಕೊಂಡು ತ್ವರಿತಗತಿಯಲ್ಲಿ ಕೆಲಸ ನಿರ್ವಹಿಸಬೇಕು.

ಜಿಲ್ಲಾ ಪೊಲೀಸ್ ಅಧೀಕ್ಷಕಿ ಎಸ್.ಜಾಹ್ನವಿ, ಉಪವಿಭಾಗಾಧಿಕಾರಿ ವಿವೇಕಾನಂದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ, ತಹಶೀಲ್ದಾರ್ ಶ್ರುತಿ.ಎಂ, ಲೋಕೋಪಯೋಗಿ ಇಲಾಖೆಯ ಮುಖ್ಯ ಕಾರ್ಯನಿರ್ವಾಹಕ ಇಂಜಿನಿಯರ್, ರೈಲ್ವೆ ಇಲಾಖೆಯ ಪರವಾಗಿ ನೈಋತ್ಯ ರೈಲ್ವೆ (ಹುಬ್ಬಳ್ಳಿ) ವಿಭಾಗದ ಮುಖ್ಯ ಇಂಜಿನಿಯರ್ ಹಾಗೂ ಕಾಮಗಾರಿಯ ಗುತ್ತಿಗೆದಾರರು ಇದ್ದರು.

ಸರ್ಕಾರಿ ಶಾಲೆ ಪ್ರಾರಂಭೋತ್ಸವ

ವಿಜಯನಗರ: ಹೊಸಪೇಟೆ ತಾಲೂಕಿನ ಮುದ್ಲಾಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (88)ಯಲ್ಲಿ ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನ ನಡೆಯಿತು.

ಶಾಲೆಗೆ ಬಂದ ಮಕ್ಕಳಿಗೆ ಗುಲಾಬಿ ಹೂವು ಹಾಗೂ ಸಿಹಿ ನೀಡಿ, ತಳಿರು ತೋರಣಗಳಿಂದ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಇದೇ ವೇಳೆ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ನಂತರ ನಡೆದ ಪೋಷಕರ ಸಭೆಯಲ್ಲಿ ಮುಖ್ಯಗುರು ಬಸವರಾಜ ಕೆ. ಮಾತನಾಡಿ, ನಮ್ಮ ಶಾಲೆಯಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮದಲ್ಲೂ (ದ್ವಿಭಾಷೆ) ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದ್ದು, ಸರ್ಕಾರದ ಉಚಿತ ಸಮವಸ್ತ್ರ ಶೂ, ಬಿಸಿಯೂಟದ ಸೌಲಭ್ಯಗಳ ಸದ್ಬಳಕೆ ಮಾಡಿಕೊಂಡು ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಮನವಿ ಮಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಪರಶುರಾಮ್ ಮಾತನಾಡಿ, ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹ ಬಿಟ್ಟು ಸರ್ಕಾರಿ ಶಾಲೆಗಳನ್ನು ಉಳಿಸಬೇಕು ಎಂದರು. ಶಿಕ್ಷಕರಾದ ಎಸ್.ರಮೇಶ್, ಪಾರ್ವತಿ, ವಿ.ಭಜಂತ್ರಿ ಹಾಗೂ ಪೋಷಕರು ಉಪಸ್ಥಿತರಿದ್ದರು.



ಪಿಎಂಎಸ್‌ವೈಎಂ ಯೋಜನೆ ಸದುಪಯೋಗಕ್ಕೆ ಸಲಹೆ

ಯಲಬುರ್ಗಾ: ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್-ಧನ್ ಎನ್ನುವುದು ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಸ್ವಯಂಪ್ರೇರಿತ ಮತ್ತು ಕೊಡುಗೆ ಆಧಾರಿತ ಪಿಂಚಣಿ ಯೋಜನೆಯಾಗಿದ್ದು, ಈ ಯೋಜನೆಯಡಿ 60 ವರ್ಷ ವಯಸ್ಸಿನ ನಂತರ ಪ್ರತಿ ತಿಂಗಳು 3,000 ಖಚಿತವಾದ ಪಿಂಚಣಿ ದೊರೆಯುತ್ತದೆ. ಇದು ಕೂಲಿಕಾರರಿಗೆ ಸಿಕ್ಕ ಸುವರ್ಣಾವಕಾಶವಾಗಿದೆ ಎಂದು ಪಿಡಿಒ ಮಂಗಳಪ್ಪ ನಾಯಕ ಹೇಳಿದರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಹಿರೇಮ್ಯಾಗೇರಿ ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಮಾಡುತ್ತಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರಿಗೆ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ನೊಂದಣಿ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಅಸಂಘಟಿತ ವಲಯದ ಕಾರ್ಮಿಕರು ಎಂದರೆ ಬೀದಿ ಬದಿ ವ್ಯಾಪಾರಿಗಳು, ರಿಕ್ಷಾ ಚಾಲಕರು, ಕಟ್ಟಡ ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರು, ಮನೆ ಕೆಲಸದವರು ಹಾಗೂ ನರೇಗಾ ಕೂಲಿಕಾರರು ಸೇರಿದಂತೆ ವಿವಿಧ ರೀತಿಯ ಕಾರ್ಮಿಕರು 18 ರಿಂದ 40 ವರ್ಷಗಳ ಒಳಗಿರಬೇಕು. ಮಾಸಿಕ ಆದಾಯ 15,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಅರ್ಜಿದಾರರು ಆದಾಯ ತೆರಿಗೆ ಪಾವತಿದಾರರಾಗಿರಬಾರದು ಮತ್ತು CPDL, CTMA ಅಥವಾ KPT ಸದಸ್ಯರಾಗಿರಬಾರದು ಎಂದು ತಿಳಿಸಿದರು.

ತಾಲೂಕು ಐಇಸಿ ಸಂಯೋಜಕರಾದ ಶರಣಪ್ಪ ಹಾಳಕೇರಿ ಮಾತನಾಡಿ, ಯೋಜನೆಯಡಿ 60 ವರ್ಷ ತುಂಬಿದ ನಂತರ ಪ್ರತಿ ತಿಂಗಳು 3,000 ರೂ. ಪಿಂಚಣಿ ಸಿಗುತ್ತದೆ. ಫಲಾನುಭವಿಯ ಮರಣದ ನಂತರ, ಅವರ ಸಂಗಾತಿಗೆ (ಪತಿ ಅಥವಾ ಪತ್ನಿ) ಪಿಂಚಣಿಯ 50% ಮೊತ್ತವನ್ನು ಕುಟುಂಬ ಪಿಂಚಣಿಯಾಗಿ ನೀಡಲಾಗುತ್ತದೆ. ನಿಮ್ಮ ವಯಸ್ಸಿಗೆ ಅನುಗುಣವಾಗಿ ತಿಂಗಳಿಗೆ 55 ರಿಂದ 200 ರೂ. ವರೆಗೆ ಇರುತ್ತದೆ ಎಂದು ತಿಳಿಸಿದರು.

ಗ್ರಾಮ ಕಾಯಕ ಮಿತ್ರರಾದ ಶ್ರುತಿ ಗಾಣಗೇರ, ಕಾಯಕ ಬಂಧುಗಳು, ಕೂಲಿಕಾರರು ಇದ್ದರು.